MYSORE LEGISLATIVE ASSEMBLY

Thursday, 27th July 1967

The House met in the Assembly Chamber, Vidhana Soudha, Bangalore, at Nine of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

BUDGET ESTIMATES FOR 1967-68—DEMANDS FOR GRANTS

Demand Nos. 21, 23, 25 and 39.

Sri P. M. NAD GOUDA (Minister for Development and Co-operation).—Sir, on the recommendation of the Governor, I beg to move :

"That a sum not exceeding Rs. 1,12,48,000 be granted to the Government to defray the charges which will come in course of payment during the financial year for the period ending 31st day of March 1968, in respect of 'Rural Development.'

"That a sum not exceeding Rs. 2,00,46,000 be granted to the Government to defray the charges which will come in course of payment during the financial year for the period ending 31st day of March 1968, in respect of 'Co-operation.'

"That a sum not exceeding Rs. 4,73,96,000 be granted to the Government to defray the charges which will come in course of payment during the financial year for the period ending 31st day of March 1968, in respect 'Community Development Projects, National Extension Service and Local Development Works'."

Mr. SPEAKER.—Motion moved :

"That a sum not exceeding Rs. 1,12,48,000 be granted to the Government to defray the charges which will come in course of payment during the financial year for the period ending 31st day of March 1968, in respect of 'Rural Development'.

"That a sum not exceeding Rs. 2,00,46,000 be granted to the Government to defray the charges which will come in course of payment during the financial year for the period ending 31st day of March 1968, in respect of 'Co-operation.'

(MR. SPEAKER)

"That a sum not exceeding Rs. 4,37,96,000 be granted to the Government to defray the charges which will come in course of payment during the financial year for the period ending 31st day of March 1968, in respect of 'Community Development Project, National Extension Service and Local Development Works'."

DEMAND NO. 39. MISCELLANEOUS

Sri R. M. PATIL (Minister for Municipal Administration).—Sir, on the recommendation of the Governor, I beg to move :

"That a sum not exceeding Rs. 4,63,56,200 be granted to the Government to defray the charges which will come in course of payment during the financial year for the period ending 31st day of March 1968, in respect of 'Miscellaneous'."

Mr. SPEAKER.—Motion moved :

"That a sum not exceeding Rs. 4,63,56,200 be granted to the Government to defray the charges which will come in course of payment during the financial year for the period ending 31st day of March 1968, in respect of 'Miscellaneous'."

All the Demands are before the House for discussion.

I would like to mention to the House that we are now sitting from 9 a.m. to 1 p.m. that is for three hours in the morning and for four hours in the afternoon from 3 O'clock totalling seven hours which will be the normal time available for two days. Today is the last day and I suppose the Debate will be so co-ordinated with the co-operation of other Members that I will not be called upon to apply the guillotine which so far I have endeavoured my very best—far beyond normal measure, so that we may not come to that stage. I request Members and I appeal to the Members to help me in that respect. Sri Sivappa will begin the debate.

Sri S. D. KOTHAWALE (Sankeshwar).—If we sit till 7 p.m. in the afternoon, we will have eight hours, Sir.

Mr. SPEAKER.—Shall we sit till seven today also ?

Sri D. M. SIDDAIYA (Beligere).—We can sit till seven today.

Mr. SPEAKER.—That is all right. Mr. Sivappa will begin.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ಎನ್.ಇ.ಎಸ್. ವಿಚಾರದಲ್ಲಿ ಒಂದು ಇನ್‌ಫರ್ಮೇಶನ್ ಬೇಕಾಗಿತ್ತು. ತಾವು ಎನ್.ಇ.ಎಸ್. ಇಲಾಖೆಯಲ್ಲಿ ಬದಲಾವಣೆ ಮಾಡುತ್ತೀರಿ ಎಂಬ ವಿಚಾರ ಬಂದಿದೆ. ಆ ವಿಚಾರದಲ್ಲಿ ಏನಾದರೂ ದೊಡ್ಡದು ಇದ್ದರೆ ಹೇಳಿದರೆ ನಮಗೂ ಮಾತನಾಡಲು ಅನುಕೂಲವಾಗುತ್ತದೆ.

ಶ್ರೀ ಪಿ. ಎಂ. ನಾಡಗೌಡ.—ಈಗ ಈ ಡೆಪ್ಯೂಟಿ ಬಿ.ಡಿ.ಒ. ಅವರ ಬದಲಾವಣೆ ಮಾಡಿದ್ದೇವೆ ಆ ವಿಚಾರದಲ್ಲಿ ಒಂದು ಆರ್ಡರ್ ಕಳಿಸಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅವರು ಹೇಳುವುದು—ಈ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್, ಗ್ರಾಮಸೇವಕರಲ್ಲಿ ಎಲ್ಲಾ ಯಾವ ತರದ ಮಾರ್ಪಾಡು ಮಾಡಿದ್ದೀರಿ ಎಂದು.

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರಿ ಹುಕುಂ ಬಂದಿದೆ. ಅದೆಲ್ಲಾ ವಿಚಾರವೂ ಉತ್ತರ ದೊಳಗೆ ಬರುತ್ತದೆ. ಮಾನ್ಯ ಸದಸ್ಯರು ಈಗಲೇ ಉತ್ತರ ಹೇಳಬೇಕೆಂದಿದ್ದರೆ ಹೇಳುತ್ತೇನೆ.

Mr. SPEAKER.—If the Hon'ble Minister has a copy of that Government Order he may give it to me.

Sri S. SHARAN GOWDA INAMDAR (Jewargi).—If any order is passed by the Government during the course of the Session, it should be the practice to place a copy of that order on the Table of the House for the information of the Members.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಇವತ್ತಿನ ದಿವಸ ಸಭೆಯ ಮುಂದೆ ಮಂಡಿಸಿರ ತಕ್ಕಂತಹ ಈ ಸಹಕಾರ ಶಾಖೆಯ ಮತ್ತು ಸಾಮುದಾಯಿಕ ಯೋಜನೆಗಳಿಗೆ ಸಂಬಂಧಪಟ್ಟಂತಹ ವಿಚಾರವನ್ನು ಒಳಗೊಂಡ ಡಿಮ್ಯಾಂಡನ್ನು ಸಹಕಾರ ಸಚಿವರು ಮತ್ತು ನಗರಾಡಳಿತ ಶಾಖೆಯ ಮಂತ್ರಿಗಳು ಮಂಡನೆ ಮಾಡಿದ್ದಾರೆ. ನಾನು ಇವತ್ತಿನ ದಿವಸ ಸಹಕಾರ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಡಿಮ್ಯಾಂಡನ್ನು ವಿರೋಧ ಮಾಡುವುದಕ್ಕೆ ನಿಂತಿದ್ದೇನೆ.

ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ ಕೆಲವು ಇಲಾಖೆಗಳಿಗೆ ಒಳ್ಳೆ ಒಳ್ಳೆಯ ಹೆಸರುಗಳನ್ನು ಕೊಡುವ ಒಂದು ಕೆಲಸವನ್ನು ಚೆನ್ನಾಗಿ ಮಾಡಿದ್ದಾರೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮತ್ತು ಲೋಕೋಪಯೋಗಿ ಇಲಾಖೆ ಇತ್ಯಾದಿ ಇತ್ಯಾದಿ ಒಳ್ಳೆಯ ಹೆಸರುಗಳನ್ನು ಕೊಟ್ಟು ಕೆಟ್ಟ ಆಡಳಿತವನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿರತಕ್ಕಂಥ ಕೆಲಸವನ್ನು ಈ ಕಾಂಗ್ರೆಸ್ ಸರ್ಕಾರ ಬಹಳ ಯಶಸ್ವಿಯಾಗಿ ಮಾಡಿದೆ. ಯಾವಾಗಲೂ ಒಂದು ಕೆಟ್ಟ ಹೆಸರನ್ನು ಮುಚ್ಚುವುದಕ್ಕೆ ಒಂದು ಒಳ್ಳೆಯ ಹೆಸರನ್ನು ಕೊಡುವುದು ಮೊದಲಿನಿಂದಲೂ ಬಂದಿದೆ. ಕೇಫ್ ಆಫ್ ಗುಡ್ ಹೋಪ್ ಹತ್ತಿರ ಹೋದರೆ ಹೋಪೇ ಇಲ್ಲವೆಂದು ಹೇಳುತ್ತಾರೆ. ಅದರಂತೆ ಇವರು ಮಾಡುವ ಕೆಟ್ಟ ಕೆಲಸಗಳನ್ನು ಮುಚ್ಚುವುದಕ್ಕೆ ಒಳ್ಳೆಯ ಹೆಸರುಗಳನ್ನು ಕೊಟ್ಟಿದ್ದಾರೆಯೇ ವಿನಾ ಈ ಇಲಾಖೆಗಳಲ್ಲಿ ಕೆಲಸಮಾಡುವ ರೀತಿನೀತಿಗಳನ್ನೂ ನೋಡುವುದಾದರೆ ಅಲ್ಲಿ ಎಷ್ಟು ಕಸ ತುಂಬಿದೆ, ಎಷ್ಟು ಹೊಲಸು ತುಂಬಿದೆ ಎನ್ನುವುದನ್ನು ನೋಡಬಹುದಾಗಿದೆ. ಈ ಸಹಕಾರ ಮತ್ತು ಸಾಮೂದಾಯಿಕ ಅಭಿವೃದ್ಧಿ ಯೋಜನೆಗಳು ಒಂದಕ್ಕೊಂದು ಸೇರಿಕೊಂಡು ನಮ್ಮ ಯೋಜನೆಗಳನ್ನು ಸಿದ್ಧ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಮ್ಮ ಪ್ರವೀಣರ ಮುಖ್ಯ ಉದ್ದೇಶವಾಗಿತ್ತು. ಇವತ್ತು ನಮ್ಮ ದೇಶ ಮುಂದುವರೆಯ ಬೇಕಾದರೆ, ನಮ್ಮ ಉದ್ದೇಶ ಸಾಧನೆಯಾಗಬೇಕಾದರೆ ಈ ಎರಡು ಇಲಾಖೆಗಳ ಮುಖಾಂತರವೇ ಆಗಬೇಕಾಗಿದೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಸಮಾಜವಾದ ಮುಂದುವರೆಯ ಬೇಕಾದರೆ ಸಹಕಾರ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡಬೇಕು. ಈ ದೇಶದಲ್ಲಿ ಸಮಾಜವಾದದ ಕಾರ್ಯಾಚರಣೆ ಮತ್ತು ಸಮಾಜವಾದದ ತತ್ವದ ಕಾರ್ಯರಂಗದಲ್ಲ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅವುಗಳ ಮೇಲೆ ಸರ್ಕಾರದ ಮೇಲ್ವಿಚಾರಣೆ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ನೋಡಿದರೆ, ಇವತ್ತು ನಮ್ಮ ದೇಶದ ಸಹಕಾರ ಸಂಘಗಳಲ್ಲಿ ಹೊಲಸು ಮತ್ತು ಅನ್ಯಾಯಗಳು ತುಂಬಿಹೋಗಿದೆ. ಮೂಲ ಉದ್ದೇಶದ ಅವಲಂಬನೆಯೇ ಇಲ್ಲವಾಗಿದೆ. ಈ ಇಲಾಖೆಗಳಲ್ಲಿ ನಡೆಯುತ್ತಿರುವ ಒಂದು ಮೋಸ, ಅನ್ಯಾಯ ಮತ್ತು ದರೋಡೆ ಮತ್ತಾವ ಇಲಾಖೆಗಳಲ್ಲೂ ನಡೆಯುತ್ತಿಲ್ಲ. ಅದರಲ್ಲೂ ಈ ದೇಶದಲ್ಲಿ ನಡೆಯುತ್ತಿರುವಷ್ಟು ಅನ್ಯಾಯಗಳು ಬೇರೆ ದೇಶಗಳಲ್ಲಿ ನಡೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಜಾಸ್ತಿಯಾಗುತ್ತಿವೆ. ಈಗ ಒಟ್ಟು 18 ಸಾವಿರ ಚಿಲ್ಲರೆ ಸಹಕಾರ ಸಂಘಗಳು ಇವೆ. ಇವತ್ತು ಎಲ್ಲಾ ವ್ಯವಹಾರಗಳು, ವಹಿವಾಟುಗಳು ಸಹ ಸಹಕಾರ ಸಂಘಗಳ ಮುಖಾಂತರವೇ ನಡೆಯಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಎಲ್ಲಾ ಜನರು ವ್ಯಾಪಾರ ಮಾಡಲು ಸಹಕಾರ ಸಂಘಗಳತ್ತ ನುಗ್ಗುತ್ತಿದ್ದಾರೆ. ಉತ್ಪಾದನೆ ಮಾಡುವವರ ಮತ್ತು ಕೊಂಡುಕೊಳ್ಳುವವರ ಮಧ್ಯೆ ವ್ಯಾಪಾರಗಾರರು ಇದ್ದರೆ, ಕೊಂಡು ಉಪಯೋಗಿಸುವವರಿಗೆ ಹೆಚ್ಚಿನ ಅನ್ಯಾಯವಾಗುತ್ತಿದೆಯೆಂದು ಸರ್ಕಾರದವರು ತಿಳಿದು ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿದರು. ಆ ರೀತಿ ಮಾಡಿದ್ದು ಸರಿ. ಆದರೆ ಇವತ್ತು ಈ ಸಹಕಾರ ಸಂಘಗಳೇ ವ್ಯಾಪಾರಗಾರರಾಗಿ, ಅವನಿಗಿಂತ ಹೇಯವಾದ ಕೆಲಸ ಮಾಡುತ್ತಿವೆ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರು ಸಹಕಾರ ಸಂಘಗಳ ತತ್ವಕ್ಕೆ ಇವತ್ತು ತಿಲಾಂಜಲ

---

†Indicates that the remarks or speeches have not been revised by the member concerne

(ಶ್ರೀ ಎಸ್. ಶಿವಪ್ಪ)

ಇತ್ತಿದ್ದಾರೆ. ಸಹಕಾರ ಸಂಘಗಳಲ್ಲಿರುವವರು ಸಹಕಾರ ಸಂಘಗಳ ತತ್ವವನ್ನು ಮರೆತು ವ್ಯಾಪಾರಗಾರರಂತೆ ವ್ಯಾಪಾರಮಾಡಿ ಜನರಿಗೆ ಮೋಸಮಾಡಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಕೆಲಸ ಮಾಡುತ್ತಿರುವುದರಿಂದ ಈ ಸಹಕಾರ ಸಂಘಗಳು ನಮ್ಮ ದೇಶಕ್ಕೆ ದೊಡ್ಡ ಅನ್ಯಾಯ ಮಾಡಿ ಇವತ್ತು ದೇಶದಲ್ಲಿ, ಸಮಾಜದಲ್ಲಿ ಕೂಡ ಸಹಕಾರ ಸಂಘಗಳ ಮೇಲೆ ನಂಬಿಕೆ ಹೋಗುವಂತಾಗಿದೆ. ಬಹಳಷ್ಟು ಮಟ್ಟಿಗೆ ಈ ಸಂಘಗಳು ಅನ್ಯಾಯ ಮಾಡುತ್ತಿವೆ. ಈ ಸಹಕಾರ ಸಂಘಗಳು ಎಲ್ಲಿಯವರೆಗೆ ಹೋಗಿವೆ ಯೆಂದರೆ, ಇವುಗಳ ವ್ಯಾಪ್ತಿ ಬಹಳ ದೊಡ್ಡದಾಗಿದೆ. ಈ ಸಹಕಾರ ಸಂಘಗಳು ಖಾದಿ ಭಂಡಾರ ದಿಂದ ಹಿಡಿದು ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವವರೆಗೂ ಹೋಗಿವೆ. ಈ ರಾಜ್ಯದಲ್ಲಿ ಪಾನ ನಿರೋಧ ಜಾರಿಗೆ ಬಂದರೆ, ಆ ಭಾಗದಲ್ಲಿ ಕೆಲಸ ಮಾಡುವವರಿಗೆ ಕೆಲಸ ಹೋಗುತ್ತದೆಂದು ತಿಳಿದು ನೀರಾ ಕೇಂದ್ರಗಳನ್ನು ಸ್ಥಾಪನೆ ಮಾಡುವುದು ಒಳ್ಳೆಯದೆಂದು ತಿಳಿದುಕೊಂಡು ಪಾಮ್‌ಗರ್ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿದರು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಪಾಮುಗರ್ ಅಲ್ಲ, ಪಾಮುಗುರ್.

ಶ್ರೀ ಎಸ್. ಶಿವಪ್ಪ.—ಈ ಪಾಮುಗುರ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಿದಮೇಲೆ, ಅದರ ರುಚಿಯನ್ನು ನೋಡಿ, ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಮಾಡಿದರೆ ಇನ್ನೂ ಹೆಚ್ಚಿನ ಲಾಭವನ್ನು ಸಂಪಾದನೆ ಮಾಡಬಹುದೆಂದು ತಿಳಿದು ಅವುಗಳನ್ನು ಸಹ ಪ್ರಾರಂಭ ಮಾಡುತ್ತಿದ್ದಾರೆ. ಇದೇರೀತಿ ನಾನಾ ರೀತಿ ಸಹಕಾರ ಸಂಘಗಳನ್ನು ಬೆಳೆಸುವ ಒಂದು ರುಚಿ ಬೆಳೆಯುತ್ತಾ ಹೋಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಪ್ರೈಮರಿ ಸೊಸೈಟಿಗಳಿಂದ ಹಿಡಿದು ಜನತಾ ಬಜಾರ್‌ವರೆಗೂ ಬಂದಿದೆ. ಈ ಜನತಾ ಬಜಾರ್ ಮಾಯಾಬಜಾರ್ ಆಗಬಹುದು. ಗೊಬ್ಬರವನ್ನು ಸರ್ಕಾರದವರು ಸಹಕಾರ ಸಂಘಗಳಿಗೆ ರೈತರಿಗೆ ಹಂಚಲು ಕೊಟ್ಟರೆ, ಅವರು ಮದ್ಯ ತಯಾರು ಮಾಡಲಿಕ್ಕೆ ಆ ಗೊಬ್ಬರವನ್ನು ಕೊಡುವುದಕ್ಕೆ ಆರಂಭ ಮಾಡಿದರು. ಅಲ್ಲಿಯವರೆಗೆ ಈ ಸೊಸೈಟಿಗಳು ಬಂದಿವೆ. ಈ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅನ್ಯಾಯ ಎಷ್ಟರ ಮಟ್ಟಿಗೆ ಇದೆ ಎಂಬುದಕ್ಕೆ ಒಂದು ವಿಚಾರ ಹೇಳುತ್ತೇನೆ. ಮೊದಲು ಖಾದಿ ಮಂಡಲಿಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇವತ್ತು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ ಮೇಲೆ ಕಾನೂನು ರೀತ್ಯ ಪ್ರತಿವರ್ಷ ಆಯಾಯ ಸೊಸೈಟಿ ಗಳ ಜನರಲ್‌ಬಾಡಿ ಮೀಟಿಂಗ್ ಮಾಡಿ, ಹೊಸ ಸದಸ್ಯರನ್ನು ಚುನಾವಣೆ ಮಾಡಿ, ಹೊಸಬರಿಗೆ ಮುಂದಿನ ವರ್ಷದ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಡುವ ಒಂದು ನಿಯಮವಿದೆ. ಇದು ಕಾನೂನಿನ ಮೂಲ ಉದ್ದೇಶ. ಇವತ್ತಿನ ದಿವಸ ಸರ್ಕಾರದವರೇ 5–6 ಸಾವಿರ ಸೊಸೈಟಿಗಳ ಜನರಲ್ ಬಾಡಿ ಮೀಟಿಂಗ್ ನಡೆದಿಲ್ಲವೆಂದು, ನಾಲ್ಕಾರು ಸಾವಿರ ಸೊಸೈಟಿಗಳ ಆಡಿಟ್ ಆಗಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಆಡಿಟ್ ಕೂಡ ಆಗದೆ, ಸೊಸೈಟಿಗಳು ನಡೆಯುತ್ತಿವೆ ಯೆಂದರೆ, ಎಷ್ಟರ ಮಟ್ಟಿಗೆ ಸಹಕಾರ ಸಂಘಗಳ ತತ್ತ್ವವನ್ನು ಜಾರಿಗೆ ತರುವುದಕ್ಕೆ ಸಾಧ್ಯ ವಾಗುತ್ತದೆ? ವಾಹನಗಳಿಗೆ ಬ್ರೇಕ್ ಯಾವ ರೀತಿ ಮುಖ್ಯವೋ, ಅದೇ ರೀತಿ ಸಹಕಾರ ಸಂಘ ಗಳಿಗೆ ಆಡಿಟ್‌ಲೆಕ್ಕ ಪ್ರತಿವರ್ಷವಾಗಬೇಕು. ಕೆಲವು ಸೊಸೈಟಿಗಳು ಬ್ರೇಕ್ ಇಲ್ಲದೆ ನಡೆಯುತ್ತಿವೆ. ಆಡಿಟ್ ಮಾಡಿಸುವುದಕ್ಕೆ ಸಾಕಷ್ಟು ಸಿಬ್ಬಂದಿಗಳು ಇಲ್ಲವೆಂದು ತಾವು ಹೇಳುತ್ತೀರಿ. ಆಡಿಟ್ ಮಾಡುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲದೆ ಹೋದರೆ, ಸಹಕಾರ ಸಂಘಗಳಿಂದ ಏನು ಪ್ರಯೋಜನ? ಇವತ್ತಿನ ದಿವಸ ಸಹಕಾರ ಸಂಘಗಳಲ್ಲಿ ಸಿಕ್ಕಾಪಟ್ಟೆ ಲೂಟಿ ಅಪವ್ಯಯವಾಗುತ್ತಿದೆ. ಈ ಸೊಸೈಟಿ ಗಳ ಬಗ್ಗೆ ಪ್ರತಿದಿನ ಈ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಒಂದಾದರೂ ಪ್ರಶ್ನೆ ಇರುತ್ತದೆ. ಈ ಸೊಸೈಟಿಗಳಿಗೆಲ್ಲಾ ಮಾದರಿಯಾಗಿರುವ ಖಾದಿ ಮಂಡಲಿಯನ್ನು ತೆಗೆದುಕೊಂಡರೆ ಅಲ್ಲಿ ನಡೆಯುತ್ತಿ ರುವ ಅನ್ಯಾಯ ಅತ್ಯಾಚಾರಗಳನ್ನು ನಾವು ನೋಡಿದ್ದೇವೆ, ಮತ್ತು ಕೇಳಿದ್ದೇವೆ. 1962ನೇ ಇಸವಿ ಯಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಮೊದಲಸಾರಿ ತಂದಾಗ, ಈ ಖಾದಿ ಮಂಡಲಿಯ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಆಗ ಸರ್ಕಾರ ಕಣ್ಣು ತೆರೆಯಿತು. ಆ ಬಗ್ಗೆ ಖಾದಿಮಂಡಲಿಯ ಸಚಿವರಾಗಿದ್ದ ದಿವಂಗತ ಮಲ್ಲಪ್ಪನವರು ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟರು. ಈ ಖಾದಿ ಮಂಡಲಿಯಲ್ಲಾಗಿರುವ ಅನ್ಯಾಯ ಗಳು ಯಾರಿಂದಲೇ ಆಗಿರಲಿ, ಅವರು ಎಷ್ಟೇ ದೊಡ್ಡವರಾಗಿರಲಿ, ಅವರ ಮೇಲೆ ತಕ್ಕ ಕಾರ್ಯಕ್ರಮ ವನ್ನು ಕೈಕೊಳ್ಳುತ್ತೇವೆಂದು ಒಂದು ಹೇಳಿಕೆ ಕೊಟ್ಟರು. ಖಾದಿ ಮಂಡಲಿಯಲ್ಲಿ ಕಳೆದ 4—5 ವರ್ಷಗಳಿಂದ ಲೆಕ್ಕವನ್ನು ಬರೆದು ಇಟ್ಟಿಲ್ಲವೆಂದು, ಅದನ್ನು ಪೂರೈಸಬೇಕಾಗಿದೆಯೆಂದು, ಮುಂದೆ ಅದರ ವಿಚಾರವನ್ನು ಶಾಸನಸಭೆಗೆ ತಿಳಿಸುತ್ತೇನೆಂದು ದಿವಂಗತ ಮಲ್ಲಪ್ಪನವರು ಹೇಳಿದ್ದರು. ಆ ಬಗ್ಗೆ ಒಂದು ಆಶ್ವಾಸನೆಯನ್ನು ಸಹ ಕೊಟ್ಟಿದ್ದರು. ಈ ದಿನ ಅವರನ್ನು ನೆನಸಿಕೊಳ್ಳಬೇಕಾಗಿದೆ.

ಲೆಕ್ಕ ಪತ್ರಗಳ ಪರಿಶೀಲನೆಯಾದ ಮೇಲೆ, ಅಲ್ಲಿ ನಡೆದಿರುವ ಅನ್ಯಾಯಗಳ ಬಗ್ಗೆ ಆಗಿಂದಾಗ್ಯೆ ಈ ಶಾಸನಸಭೆಗೆ ಸಂಬಂಧಪಟ್ಟ ಸಚಿವರುಗಳು ತಿಳಿಸುತ್ತಾ ಬಂದಿದ್ದಾರೆ. ನೆನ್ನೆ ದಿವಸ ಈ ಖಾದಿ ಮಂಡಲಿಯ ಬಗ್ಗೆ ಇಬ್ಬರು ಸಚಿವರುಗಳು ಮಾತನಾಡಿದರು. ಶ್ರೀಮಾನ್ ಅಪ್ಪಣ್ಣನವರು ನೆನ್ನೆ ಮಾತನಾಡುತ್ತಾ ಖಾದಿ ಮಂಡಲಿಯಲ್ಲಿ, ಎಷ್ಟು ಸೊಸೈಟಿಗಳು ಡಿಫಂಕ್ಟ್ ಆಗಿವೆ, ಎಷ್ಟು ಸೊಸೈಟಿಗಳಲ್ಲಿ ಆಡಿಟ್ ಆಗಬೇಕಾಗಿದೆ, ಎಷ್ಟು ಸೊಸೈಟಿಗಳ ಮೇಲೆ ಮೊಕದ್ದಮೆ ಹೂಡಿದ್ದಾರೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ತಿಳಿಸಿದರು. ಖಾದಿ ಮಂಡಲಿಯಲ್ಲಿ ಒಟ್ಟು 1287 ಸೊಸೈಟಿಗಳಿವೆಯೆಂದೂ, ಅವುಗಳಲ್ಲಿ 253 ಸೊಸೈಟಿಗಳು ಡೀಫಂಕ್ಟ್ ಆಗಿವೆಯೆಂದೂ 730 ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿವೆಯೆಂದು, ಸುಮಾರು 21—23 ಸೊಸೈಟಿಗಳ ಮೇಲೆ ಕ್ರಿಮಿನಲ್ ಕೇಸು ಹಾಕಲಾಗಿದೆಯೆಂಬ ಒಂದು ಅಂಕಿ ಅಂಶಗಳನ್ನು ಈ ಸಭೆಗೆ ತಿಳಿಸಿದರು. ಖಾದಿಬೋರ್ಡಿನಲ್ಲಿ ಎಷ್ಟು ಅನ್ಯಾಯವಾಗುತ್ತಿದೆ ಎಂಬುದನ್ನು ಅಂಕಿ ಅಂಶಗಳಿಂದ ತಿಳಿಯಬಹುದು, ಸೇಕಡ 25ರಷ್ಟು ಸೊಸೈಟಿಗಳು ಡೀಫಂಕ್ಟ್ ಆಗಿವೆ ಎಂದರೆ ಎಷ್ಟು ಅನ್ಯಾಯವಾಗಿದೆಯೆಂಬುದು ಅರ್ಥವಾಗುತ್ತದೆ. ಸುಮಾರು 20 ಸೊಸೈಟಿಗಳಿಗಿಂತ ಹೆಚ್ಚು ಸೊಸೈಟಿಗಳು ಗ್ರಾಮಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸುಮಾರು ಒಂದು ತಿಂಗಳ ಹಿಂದೆ ಈ ಸಭೆಯಲ್ಲಿ ಖಾದಿ ಮಂಡಲಿಯಲ್ಲಿ ಬಹಳ ಅನ್ಯಾಯವಾಗಿದೆ ಎಂಬುದು ನನಗೆ ಗೊತ್ತಿದೆ, ಅದನ್ನು ವಿಚಾರೆ ಮಾಡುತ್ತೇನೆ ಎಂದು ಹೇಳಿದ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಖಾದಿ ಮಂಡಲಿ ಮಾಡಿರುವ ಅನ್ಯಾಯಗಳನ್ನು ಮುಚ್ಚಿ, ಸಾರಿಸಿ ಅದರ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯ ರೂಪಿಸುವ ಪ್ರಯತ್ನ ಮಾಡಿದರು, ಇದು ಅಕ್ಷಮ್ಯ ಅಪರಾಧ, ಇದಕ್ಕಿಂತಲೂ ದೊಡ್ಡ ಅಪರಾಧ ಬೇರೆ ಇಲ್ಲ. ಖಾದಿ ಮಂಡಲಿಯ ವಿಷಯದಲ್ಲಿ ದೇಶದಲ್ಲಿ ಜನತೆಯ ಅಭಿಪ್ರಾಯವೇನಿದೆ ಅದನ್ನು ಹೋಗಲಾಡಿಸಲು ನಿನ್ನೆ ಪ್ರಯತ್ನಿಸಿದರು. ಈ ಮಂಡಲಿಯಲ್ಲಿ 4 ವರ್ಷಗಳಿಂದ ಲೆಕ್ಕವಿಲ್ಲ ಎಂದು ಅವರೇ ಹೇಳಿ ಅದನ್ನು ಈಚೆಗೆ ಬರೆಸಿ ಒಂದು ಹೇಳಿಕೆ ಕೊಡುವುದು ಅಥನ್ನು ಬದಲಾಯಿಸಿ ಮತ್ತೊಂದು ಹೇಳಿಕೆ ನೀಡುವುದು ನ್ಯಾಯವಲ್ಲ. ದೇಶದ ಜನರ ನಂಬಿಕೆಗೆ ಪಾತ್ರರಾಗಬೇಕಾದರೆ ಇದರ ಬಗ್ಗೆ ನ್ಯಾಯವಾದ ಪರಿಶೀಲನೆಮಾಡಿ ಖಾದಿ ಮಂಡಲಿಯ ಆಡಳಿತವನ್ನು ತನಿಖೆ ಮಾಡಿ ಯಾರು ಅನ್ಯಾಯ ಮಾಡಿದ್ದಾರೋ ಅವರಿಗೆ ಶಿಕ್ಷೆಮಾಡಿ ಜನರಿಗೆ ಅದರಮೇಲೆ ನಂಬಿಕೆ ಬರುವ ಹಾಗೆ ಮಾಡಬೇಕು. ಇದನ್ನು ಮಾಡಬೇಕೆಂದು ಸರಕಾರವನ್ನು ಒತ್ತಾಯಮಾಡುತ್ತೇನೆ.

ಇತರ ಸಹಕಾರ ಸಂಘಗಳಲ್ಲೂ ಕೂಡ ಖಾದಿಬೋರ್ಡಿನಲ್ಲಿರುವಂತೆ ಅನೇಕ ಲೋಪದೋಷಗಳಿವೆ, ಲೆಕ್ಕವಿಲ್ಲ, ಮನಸ್ವೇಚ್ಛೆ ಅವು ಕೆಲಸ ಮಾಡುತ್ತಿವೆ, ಸಹಕಾರ ಸಂಘಗಳು ತಮ್ಮ ಸ್ವಂತ ಆಸ್ತಿ ಎಂದು ಭಾವಿಸಿ ಅಲ್ಲಿನ ಕಾರ್ಯದರ್ಶಿಗಳು, ಅಧ್ಯಕ್ಷರು ತಮಗೆ ಮನಬಂದಹಾಗೆ ಕೆಲಸಮಾಡುತ್ತಿರುವುದು ಅನೇಕವಾಗಿ ಬೆಳಕಿಗೆ ಬಂದಿದೆ. ಆಹಾರ ಮತ್ತು ಗೊಬ್ಬರದ ಹಂಚಿಕೆಯನ್ನು ಸೊಸೈಟಿಗಳಿಗೆ ವಹಿಸಿದ್ದಾರೆ, ಇವೆರಡು ಪದಾರ್ಥಗಳೂಕೂಡ ಜನಸಾಮಾನ್ಯರಿಗೆ ರೈತರಿಗೆ ಬೇಕಾದ ವಸ್ತುಗಳಾಗಿವೆ. ಈ ಸಾಮಾನುಗಳು ಸೊಸೈಟಿಯಲ್ಲಿ ಕೊಡುವ ದರಕ್ಕೆ ಮಾರುಕಟ್ಟೆಯಲ್ಲಿ ದೊರೆಯದಿರುವುದರಿಂದ, ಸೊಸೈಟಿಯ ದರಕ್ಕೂ ಮತ್ತು ಮಾರುಕಟ್ಟೆ ದರಕ್ಕೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಸರಕಾರ ಕೊಡುವ ಧಾನ್ಯ ಅಥವಾ ಗೊಬ್ಬರ ಸೊಸೈಟಿ ಮೂಲಕ ಕಾಳಸಂತೆಗೆ ಹೋಗುತ್ತಿದೆ. ಇಂದು ಒಂದು ಮೂಟೆ ಸಕ್ಕರೆ ಪೇಟೆಯಲ್ಲಿ 150 ರೂಪಾಯಿಗಳಿಗೆ ಮಾರಾಟವಾಗುವ ಸನ್ನಿವೇಶವಿದೆ. ಇತರ ಆಹಾರ ಪದಾರ್ಥಗಳನ್ನು ಹೊರಗೆ ಮಾರಿದರೆ ಮೂಟೆಗೆ 50 ರೂಪಾಯಿ ಲಾಭ ಪಡೆಯುವುದಕ್ಕೆ ಅವಕಾಶವಿರುವುದರಿಂದ ಸಣ್ಣ ಕಳ್ಳತನ ಮಾಡುವ ಪ್ರವೃತ್ತಿ ಬೆಳೆದಿದೆ. ಈಗ ಗೊಬ್ಬರದ ಅಭಾವವಿದೆ. ಗೊಬ್ಬರ ಉಪಯೋಗಿಸುವುದನ್ನು ರೈತರು ಕಲಿತಿದ್ದಾರೆಂದು ನಿನ್ನೆ ಮುಖ್ಯಮಂತ್ರಿಗಳು ಹೇಳಿದರು. ಹೆಚ್ಚಾಗಿ ಬೇಕೆಂದು ಕೇಳುತ್ತಿದ್ದಾರೆ. ಆದರೆ ಸಹಕಾರ ಸಂಘಗಳು ಮೋಸ ಮಾಡುತ್ತಿವೆ. ಗೊಬ್ಬರ ತರಿಸಿ ಬೇರೆ ಕಡೆಗೆ ಲಾರಿಗಳಲ್ಲಿ ಸಾಗಿಸಿ ಅದರಿಂದ ಸಂಪಾದನೆ ಮಾಡಿಕೊಂಡಿರುವ ಸಹಕಾರ ಸಂಘಗಳ ಮೇಲೇನು ಕ್ರಮ ತೆಗೆದುಕೊಳ್ಳಲಾಗಿದೆ ? ಇಂದು ಹಂಚಿಕೆ ಜವಾಬ್ದಾರಿ ಮುಖ್ಯವಾಗಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಿದ್ದರೂ ದುರುಪಯೋಗವಾಗಿದೆ, ಸೊಸೈಟಿಗಳಲ್ಲಿ ನಷ್ಟವಾಗಿದೆ ಎಂದು ಲೆಕ್ಕ ಕೊಡುತ್ತಿದ್ದಾರೆ. ಹೀಗೆ ಮಾಡಿ ಕೆಲವರು ಸಂಪಾದನೆ ಮಾಡಲು ತೊಡಗಿದ್ದಾರೆ. ಇದನ್ನು ಪರಿಶೀಲಿಸಬೇಕೆಂದು ಶಾಸನಸಭೆ ಮುಂದೆ ಹೇಳುತ್ತಿದ್ದೇವೆ. ಲಕ್ಷಾಂತರ ರೂಪಾಯಿಗಳಿಗೆ ಲೆಕ್ಕವಿಲ್ಲ, ಸ್ಟಾಕಿಲ್ಲ ಎಂದು ಹೋದವರ್ಷ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳಿದರು ಇದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳದಿದ್ದರೆ ಸರಿಹೋಗುವುದಿಲ್ಲ. ನನ್ನ ತಾಲ್ಲೂಕಿನ ತಾಲ್ಲೂಕು ಬೋರ್ಡ್ ಮೀಟಿಂಗಿನಲ್ಲಿ ನಮ್ಮ ಕಡೆಯಿಂದ ಖಾನಾಪುರದ ಕಡೆಗೆ ಗೊಬ್ಬರವು ಹೋಗುತ್ತಿದೆ ಎಂದು ಸಚಿವರು ಹೇಳಿದರು. ಚನ್ನರಾಯಪಟ್ಟಣದಲ್ಲಿ ಎರಡು ವರ್ಷಗಳಿಂದ ಮಳೆಯಿಲ್ಲದಿರುವುದು ಅವರಿಗೆ ಗೊತ್ತಿದೆ. ಅಲ್ಲಿ ಕ್ಷಾಮವಿರುವಾಗ ಲಕ್ಷಾಂತರ ರೂಪಾಯಿಗಳ ಗೊಬ್ಬರ ಅಲ್ಲಿಗೇಕೆ ? ಅಲ್ಲಿನ ಸೊಸೈಟಿಯವರು ಜಾಸ್ತಿ ತರಿಸಿದ್ದೇಕೆ ? ಅದನ್ನೇನು ಮಾಡಿದರು ಎಂಬುದನ್ನು ಯೋಚನೆ ಮಾಡಬೇಕು. ಮಳೆಯಿಲ್ಲ, ನೀರಿಲ್ಲ, ಹಾಗೆ ಪರಿಸ್ಥಿತಿ ಇರುವಾಗ

(ಶ್ರೀ ಎಸ್. ಶಿವಪ್ಪ)

ಮಳೆ ಬಂದ ವರ್ಷ ತರಿಸಿದ್ದಕ್ಕಿಂತ ಹೆಚ್ಚು ಗೊಬ್ಬರವನ್ನು ಕ್ಷಾಮ ಬಂದ ವರ್ಷ ತರಿಸಿರುವಾಗ ಸಹಕಾರ ಸಂಘದ ಮನೋವೃತ್ತಿಯೇನಿತ್ತು ಎಂಬುದನ್ನು ಯೋಚನೆ ಮಾಡ ಬೇಕು. ಮಳೆಯಿಲ್ಲದಿರುವಾಗ ಜಾಸ್ತಿ ತಂದು ಬೇರೆ ಕಡೆಗೆ ಸಾಗಿಸಿ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲಿನ ಸೊಸೈಟಿಯ ಅಧ್ಯಕ್ಷರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಬ್ಬ ಡೈರಕ್ಟರಾಗಿದ್ದಾರೆ. ಈ ಕಳ್ಳ ವ್ಯಾಪಾರದಲ್ಲಿ ಎಲ್ಲರಿಗೂ ಹಂಚಿಕೆ ಆಗಿದೆ. ಹೇಳಿದರೂ ಕೂಡ ವಿಚಾರವಮಾಡಲಿಲ್ಲ. ಪರಿಶೀಲಿಸಿ ತಪ್ಪು ಮಾಡಿದ್ದರೆ ಶಿಕ್ಷೆ ಮಾಡದಿದ್ದರೆ ಪ್ರಯೋಜನವೇನು ? ಸಚಿವರು ಚನ್ನರಾಯಪಟ್ಟಣಕ್ಕೆ ಬಂದಾಗ ಹೇಳಿದರೂ ಕೂಡ ವಿಚಾರವಮಾಡಲಿಲ್ಲ. ಹೀಗೆ ಮಾಡಿದರೆ ಪ್ರಯೋಜನವೇನು ? ನಮ್ಮ ತಾಲ್ಲೂಕು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ಡೀಫಂಕ್ಟ್ ಆಗಿ ಕೆಲವು ತಿಂಗಳಾಗಿದೆ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಜನರಲ್ ಬಾಡಿ ಮೀಟಿಂಗ್ ಮಾಡಿ 2-3 ವರ್ಷಗಳಾಗಿವೆ. ಹಣ ವಸೂಲು ಮಾಡಲಿಲ್ಲ. ಸೊಸೈಟಿ ಅಲ್ಲಿಲ್ಲದಿರುವಾಗ ರೈತರಿಗೆ ಸಾಲ ಬೇಕಾದರೆ ಯಾವ ರೀತಿ ತೆಗೆದುಕೊಳ್ಳಬೇಕು ? ಅಲ್ಲಿ ಮಾಡಿರುವ ಅನ್ಯಾಯ ಹೇಳಿದರೆ ಸರಕಾರ ವಿಚಾರ ಮಾಡುವುದಿಲ್ಲ. ಅನ್ಯಾಯ ಮಾಡಿರುವವರು ಕಾಂಗ್ರೆಸ್ ಭಕ್ತರಿರಬೇಕು. ತತ್ವ ದೊಡ್ಡದು ಎಂಬುದನ್ನು ಗಮನಿಸಬೇಕು, ವ್ಯಕ್ತಿ ಯಾರಾದರೂ ತಪ್ಪುಮಾಡಿದರೆ ಅವನನ್ನು ಕಾಪಾಡಲು ಹೋಗಬಾರದು. ಹಾಗೆ ಕಾಪಾಡಿದರೆ ಸಹಕಾರ ಸಂಘಕ್ಕೆ ಕಲ್ಲು ಹಾಕಿದಂತಾಗುತ್ತದೆ. ಯಾರೇ ತಪ್ಪು ಮಾಡಿರಲಿ ವಿಚಾರಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿ ನಿಮ್ಮ ಕಾಲದಲ್ಲಿ ಒಳ್ಳೆಯ ಆಡಳಿತ ನಡೆಯುವಂತೆ ಮಾಡಿ. ಹಾಗೆ ಮಾಡದಿದ್ದರೆ ಸಹಕಾರ ಸಂಘಗಳಿಗೆ ಕೊಟ್ಟ ಹಣ ದುರುಪಯೋಗವಾಗುತ್ತದೆ. ಇಂದು ಸೊಸೈಟಿ ವ್ಯವಹಾರ ಒಂದು ದೊಡ್ಡ ಸಮಸ್ಯೆಯಾಗಿದೆ. ನಮ್ಮ ಸೊಸೈಟಿಯಲ್ಲಿ ಹಣ ಕೊಟ್ಟಿಲ್ಲ ಯುಟಿಲೈಜೇಷನ್ ಸರ್ಟಿಫಿಕೇಟ್ ಕೊಟ್ಟಿಲ್ಲ. ಆಡಿಟ್ ವರದಿ ನೋಡಿದರೆ ಅದರ ಪ್ರಕಾರ 64–65ಕ್ಕೆ ಮುಂಚೆ ಸುಮಾರು 13, 622 ಯುಟಿಲೈಜೇಷನ್ ಸರ್ಟಿಫಿಕೇಟುಗಳು ಬಂದಿಲ್ಲ ಎಂದು ತಿಳಿಸಿದ್ದಾರೆ. ಇದರ ಮೊತ್ತ 86. 57 ಲಕ್ಷ ರೂಪಾಯಿ. 65—66 ರಲ್ಲಿ 6, 505 ಯುಟಿಲೈಜೇಷನ್ ಸರ್ಟಿಫೀಕೇಟುಗಳನ್ನು ಕೊಟ್ಟಿಲ್ಲ, ಇದರ ಮೊತ್ತ ಸುಮಾರು 36 ಲಕ್ಷ ರೂಪಾಯಿಗಳು. ಹೀಗೆ ಹಣ ವೆಚ್ಚಮಾಡಿದ್ದಕ್ಕೆ ಯಾವುದನ್ನು ಉಪಯೋಗಮಾಡಿದೆ ಎಂದು ಸರ್ಟಿಫಿಕೇಟ್ ಕೊಡದೆಹೋದರೆ ದುರುಪಯೋಗವಾಗುತ್ತದೆ. ಆಡಿಟ್ಟಿಲ್ಲ, ಜನರಲ್ ಬಾಡಿ ಮೀಟಿಂಗಿಲ್ಲ. ಹೀಗೆಲ್ಲಾ ಇರುವಾಗ ನಮ್ಮ ಮುಂದಿರುವ ಬೇಡಿಕೆಗಳಿಗೆ ಹೇಗೆ ಒಪ್ಪಿಗೆ ಕೊಡುವುದು ?

ಆಮೇಲೆ ಸಮುದಾಯ ಯೋಜನೆ ಮತ್ತು ಪಂಚಾಯಿತಿ ರಾಜ್ಯದ ಬಗ್ಗೆ ಬೇಡಿಕೆ ಇದೆ. ಈ ದಿವಸ ಈ ಯೋಜನೆ ಅನರ್ಥಕಾರಕವಾಗಿದೆ, ವಿಫಲವಾಗಿದೆ ಎಂದು ಅನೇಕ ತಜ್ಞರು ಹೇಳಿದ್ದಾರೆ. ಸಾಮುದಾಯಿಕ ಯೋಜನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಯೋಜನೆ ಹಿಂದಿನಿಂದ ಬಂದಿರುವುದಲ್ಲ, ಅಮೇರಿಕಾದೇಶದ ಮಾದರಿಯನ್ನು ನಾವು ಅನುಸರಿಸುತ್ತಿದ್ದೇವೆ. ಇದು ಭಾರತದೇಶ, ಬಡದೇಶ. ಅಮೇರಿಕ ದೇಶವಾದರೆ ಯಾವುದಕ್ಕೆ ಎಷ್ಟು ಹೆಚ್ಚು ಹಣ ಬೇಕಾದರೂ ಅದಕ್ಕೆ ಖರ್ಚುಮಾಡಲು ಶಕ್ತಿ ಇದೆ, ಅದೇ ನಮ್ಮ ದೇಶದಲ್ಲಿ ಹಣವಿಲ್ಲ, ಜನ ಸಹಾಯವಿದೆ. ಆದುದರಿಂದ ಈ ಯೋಜನೆ ಕಾರ್ಯಗತಮಾಡಿದರೆ ಬರೀ ಅಧಿಕಾರವರ್ಗ ಸ್ಥಾಪನೆಯಾಗುವುದೇ ಹೊರತು ಇನ್ನೇನೂ ಕಾರ್ಯವಾಗುವುದಿಲ್ಲ. ಆದುದರಿಂದ ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಈಗ ಇದಕ್ಕಾಗಿ ನೂರಾರು ಕೋಟಿ ಖರ್ಚಾಗಿದೆಯೇ ಹೊರತು ಪ್ರಯೋಜನವಾಗಿಲ್ಲ.

9–30 A.M.

ಎನ್. ಇ. ಎಸ್. ಸ್ಕೀಂ ನಲ್ಲಿ ಸಿಬ್ಬಂದಿಗಾಗಿ ಸುಮಾರು ಎರಡುವರೆ ಕೋಟಿ ರೂಪಾಯಿ ಖರ್ಚಾಗುತ್ತದೆ, ಪ್ರಯೋಜನ ಏನಾಗಿದೆ ? ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬ ಅಮಲ್ದಾರರು ಮಾಡುತ್ತಾ ಇದ್ದ ಕೆಲಸವನ್ನು ಮೂರು ಜನ ಮಾಡುತ್ತಾ ಇದ್ದಾರೆ. ಒಬ್ಬರು ಅಮಲ್ದಾರರು, ಒಬ್ಬರು ಬಿ. ಡಿ. ಓ. ಒಬ್ಬರು ಅಸಿಸ್ಟೆಂಟ್ ಬಿ, ಡಿ, ಓ. ಗೊಬ್ಬರ ಹಂಚಬೇಕು, ಬೀಜ ಹಂಚಬೇಕು ರೈತನಿಗೆ ಬೇಕಾದ ಕೆಲಸ ಮಾಡಿಸಿಕೊಳ್ಳಬೇಕಾದರೆ ಮೂರು ಜನರ ಹತ್ತಿರ ಹೋಗಬೇಕು, ಈ ರೀತಿ ಡ್ಯೂಯಲ್ ಅಥಾರಿಟೀಸ್ ಮಾಡಿ ಗೊಂದಲ ತಂದು ಇಟ್ಟಿದ್ದೀರಿ. ಯಾರಲ್ಲಿ ಅಧಿಕಾರ ಇದೆ ಎಂದು ಜನತೆಗೆ ಗೊತ್ತಾಗಿಲ್ಲ, ಈ ಇಲಾಖೆಯಿಂದ ಒಳ್ಳೆಯದಾಗುವುದಕ್ಕಿಂತ ಹೆಚ್ಚು ತೊಂದರೆ ಯಾಗತಕ್ಕ ಪರಿಸ್ಥಿತಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆದ್ದರಿಂದ ಈ ಇಲಾಖೆಯನ್ನು ಆದಷ್ಟು ಜಾಗ್ರತೆ ವಜಾ ಮಾಡಿಬಿಡಿ. ಈ ಇಲಾಖೆಯ ಕೆಲಸ ಚೆನ್ನಾಗಿಲ್ಲ ಎಂದು ಒಂದು ಕಡೆ ನೀವೇ ಹೇಳುತ್ತೀರಿ ಅಸಿಸ್ಟೆಂಟ್ ಬಿ. ಡಿ. ಓ. ಗಳನ್ನು ತೆಗೆದುಹಾಕುತ್ತೇವೆ ಅದೇ ರೀತಿ ಇತರರನ್ನೂ

ಕ್ರಮೇಣ ತೆಗೆದು ಹಾಕುತ್ತೇವೆ ಅದು ಸರಿಯಾಗಿಲ್ಲ ಎಂದು ಹೇಳುತ್ತೀರಿ. ಅದು ತಪ್ಪು ಅಂತ ಒಪ್ಪಿ ಕೂಡ ಮತ್ತೊಂದು ಕಡೆ ಅದನ್ನು ಮುಂದುವರಿಸಿಕೊಂಡು ಹೋಗಿ ಹಣವನ್ನು ಹಾಳು ಮಾಡುತ್ತಾ ಇದ್ದೀರಿ. ಪಾನನಿರೋಧದ ನೀತಿಯೂ ಕೂಡ ಅದೇ ರೀತಿಯಾಗಿದೆ ನಂಬಿಕೆ ಇಲ್ಲ, ಸಾಮುದಾಯಿಕ ಯೋಜನೆಯಲ್ಲೂ ಕೂಡ ನಿಮಗೆ ನಂಬಿಕೆ ಇಲ್ಲ ಎಂದು ಹೇಳುತ್ತೀರೇ ವಿನಾ ಅದನ್ನು ಖೋತಾ ಮಾಡುವುದಕ್ಕೆ ಹೋಗುವುದಿಲ್ಲ ಅದಕ್ಕೆ ಹಣ ಖರ್ಚು ಮಾಡುತ್ತಾ ಅದನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೀರಿ. ನಮ್ಮ ದೇಶದ ಆರ್ಥಿಕ ಭದ್ರತೆಯನ್ನು ಕುಂಠಿತವಾಡತಕ್ಕ ರೀತಿಯಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ದುರ್ವ್ಯಯ ಮಾಡಿ ಅದನ್ನು ಮುಂದುವರಿಸಿಕೊಂಡು ಹೋಗಲು ಪುನಃ ಯೋಚನೆ ಮಾಡುತ್ತಾ ಇದ್ದೀರಿ. ನಿಮಗೆ ಈ ಇಲಾಖೆಯಲ್ಲಿ ನಂಬಿಕೆ ಇಲ್ಲದಿದ್ದರೆ ರಾಜಿನಾಮೆ ಕೊಡಿ. ಇಂಗ್ಲೆಂಡಿನಲ್ಲಿ ಒಬ್ಬ ಹೆಣ್ಣು ಹೆಂಗಸು ತನ್ನ ಖಾತೆಯಲ್ಲಿ ಬೇಕಾದ ಹಣ ಕೊಡಲಿಲ್ಲ ಎಂದು ಹೇಳಿ ತಾನಿದ್ದು ಏನು ಪ್ರಯೋಜನ ಎಂದು ರಾಜಿನಾಮೆ ಕೊಟ್ಟಳು. ಒಬ್ಬ ಹೆಂಗಸು ಆ ರೀತಿ ರಾಜಿನಾಮೆ ಕೊಟ್ಟಿರಬೇಕಾದರೆ, ಮೀಸೆ ಹೊತ್ತಿರತಕ್ಕ ತಮಗೆ ಅಂತಹ ಒಂದು ಧೈರ್ಯ ಇಲ್ಲದೆ ಇದ್ದರೆ ಏನು ಪ್ರಯೋಜನ ?

ಶ್ರೀ ಡಿ. ಎಂ. ಸಿದ್ಧಯ್ಯ.—ಹೆಂಗಸರು ಮಾಡುವ ಕೆಲಸ ಗಂಡಸರು ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಶಿವಪ್ಪ.—ಶ್ರೀಮಾನ್ ಸಿದ್ದಯ್ಯನವರು ಬಹಳ ಚೆನ್ನಾಗಿ ಹೇಳಿದರು : ಹೆಂಗಸರು ಮಾಡುವ ಕೆಲಸ ಗಂಡಸರು ಮಾಡುವುದಕ್ಕಾಗುವುದಿಲ್ಲ ಎಂದು ಅದು ಏನೇ ಇರಲಿ, ಅಂತಹ ಒಂದು ಎದೆಗಾರಿಕೆ ಇಲ್ಲದೇ ಇರುವುದರಿಂದ, ತಮ್ಮ ಅಂತರಂಗದಲ್ಲಿರುವುದನ್ನು ಬಹಿರಂಗವಾಗಿ ವ್ಯಕ್ತಮಾಡಿ ಕಾರ್ಯಾಚರಣೆ ಮಾಡತಕ್ಕ ಧೈರ್ಯ ನಿಮ್ಮಲ್ಲಿ ಇಲ್ಲದೇ ಇರುವುದರಿಂದ ನೀವು ಮಾಡತಕ್ಕ ಎಲ್ಲ ಕಾರ್ಯಗಳೂ ನೀರು ಪಾಲಾಗುತ್ತಾ ಇದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಪಂಚಾಯಿತ್ತಿ ರಾಜ್ಯದ ಮೂಲ ತತ್ವ ಮಹಾತ್ಮ ಗಾಂಧಿಜಿಯವರು ಹೇಳಿದಂತೆ "Every Village Panchayat must be a Parliament of that village." ಅಷ್ಟೊಂದು ಅಧಿಕಾರ ಇರಬೇಕು. ಪ್ರಜಾಪ್ರಭುತ್ವದಲ್ಲಿ ಪಂಚಾಯಿತ್ತಿ ಒಂದು ಬೇರು ಅಲ್ಲಿಂದ ಪ್ರಜಾಪ್ರಭುತ್ವ ಪ್ರಾರಂಭವಾಗಬೇಕೆಂಬ ಮಹದಾಶಯವೇ ಈ ಪಂಚಾಯಿತ್ತಿ ರಾಜ್ಯದ ಮೂಲ ಗುಟ್ಟು. ಇವತ್ತಿನ ದಿವಸ ಈ ಪಂಚಾಯಿತ್ತಿ ರಾಜ್ಯದ ಚುನಾವಣೆ ಮಾಡಿ ಎಷ್ಟು ವರ್ಷವಾಯಿತು ? ತಾಲ್ಲೂಕು ಬೋರ್ಡುಗಳಿಗೆ ಚುನಾವಣೆ ಮಾಡಿ ಎಷ್ಟು ವರ್ಷವಾಯಿತು ? ನಾಲ್ಕು ವರ್ಷಕ್ಕೆ ಚುನಾಯಿತರಾಗಿ ಬಂದವರು 8 ವರ್ಷವಾದರೂ ಕೂಡ ಇನ್ನೂ ಚುನಾವಣೆ ಮಾಡದಿದ್ದರೆ ಅವರು ಏನು ಮಾಡಬೇಕು ಎಂದು ಅವರೇ ಕೇಳುತ್ತಾ ಇದ್ದಾರೆ. ಈ ರೀತಿ ಡೋಲಾಯಮಾನವಾಗಿ ಪ್ರಜಾಪ್ರಭುತ್ವದ ಒಂದು ಬೇರಿನ ರೂಪದಲ್ಲಿರತಕ್ಕ ಪಂಚಾಯಿತ್ತಿ ರಾಜ್ಯಕ್ಕೆ ಅವಮಾನ ಮಾಡಿದರೆ ನಮ್ಮ ರಾಜ್ಯದಲ್ಲಿ ಈ ಪ್ರಜಾಪ್ರಭುತ್ವವನ್ನು ಎಷ್ಟು ಮಟ್ಟಿಗೆ ಸಾಧಿಸುತ್ತೀರಿ ಎಂಬುದಕ್ಕೆ ಇದು ಒಂದು ನಿದರ್ಶನವಾಗಿದೆ. ನಾಲ್ಕು ವರ್ಷಕ್ಕೆ ಒಮ್ಮೆ ಬದಲಾವಣೆ ಮಾಡುವುದರಿಂದ ಅವರು ಮಾಡಿದಂತಹ ತಪ್ಪು ನೆಪ್ಪುಗಳನ್ನು ಜನತೆಯ ಮುಂದೆ ಇಟ್ಟು ಅದನ್ನು ಸರಿಪಡಿಸಿಕೊಳ್ಳತಕ್ಕ ಒಂದು ಅಧಿಕಾರವೇನಿತ್ತೋ ಅದನ್ನು ತಮ್ಮ ಹತ್ತಿರ ಅಧಿಕಾರವಿದೆ ಎಂದು ಹೇಳಿ ಎಮರ್ಜೆನ್ಸಿ ಇದೆ ಎಂಬ ನೆಪದಿಂದ ಕಾನೂನನ್ನೂ ತಿದ್ದುಪಡಿ ಮಾಡಿದಿರಿ, ಎಮರ್ಜೆನ್ಸಿ ಇರುವ ತನಕ ಚುನಾವಣೆ ಮಾಡುವುದು ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದೀರಿ. ಕಾನೂನಿಗೆ ತಿದ್ದುಪಡಿ ಮಾಡಿದ್ದೇವೆ, ಆದ್ದರಿಂದ ಇದು ಕಾನೂನು ಬದ್ಧವಾಗಿದೆ ಎಂದು ಮಾನ್ಯ ನಾಡಗೌಡರು ಹೇಳುತ್ತಾ ಇದ್ದಾರೆ. ಕಾನೂನು ಮಾಡಿದವರು ಯಾರು ? ನಾವೇ. ಇವತ್ತು ಎಮರ್ಜೆನ್ಸಿ ಇದೆ, ಗಂಡಾಂತರ ಇದೆ ಆದ್ದರಿಂದ ಚುನಾವಣೆ ಮಾಡಬೇಡಿ ಎಂದು ಕೇಂದ್ರದಿಂದ ಸೂಚನೆ ಏನೂ ಬಂದಿಲ್ಲ ನಿಮಗೆ. ನೀವೇ ಈ ಚುನಾವಣೆಗಳು ನಡೆಯುವುದು ಬೇಡ ಎಂದು ತಿದ್ದುಪಡಿ ಮಾಡಿರತಕ್ಕವರು, ಅದನ್ನು ನಾವು ವಿರೋಧ ಮಾಡಿದ್ದೇವೆ, ಆದರೆ ನಿಮ್ಮ ಕಡೆ ಕೈ ಎತ್ತುವವರು ಜಾಸ್ತಿ ಇದ್ದಾರೆ, ಆದ್ದರಿಂದ ಅದು ಪಾಸ್ ಆಗಿದೆ. ಅದಕ್ಕೆ ನಾವು ಭಾಗಿಗಳಾಗಿದ್ದೇವೆ ಎಂದು ಹೇಳಬೇಡಿ. ಅದಕ್ಕೆ ನಾವು ಬೆಂಬಲ ಕೊಟ್ಟಿಲ್ಲ. ತೀವ್ರವಾಗಿ ವಿರೋಧ ಮಾಡಿದ್ದೇವೆ. ಇವತ್ತೂ ಕೂಡ ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಕಾಲದಲ್ಲಾದರೂ ಈ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಿ, ಮುಂದಕ್ಕೆ ಹಾಕಬೇಡಿ, ಆ ರೀತಿ ಮುಂದಕ್ಕೆ ಹಾಕಿದರೆ ದೊಡ್ಡ ಅನರ್ಥವಾಗುತ್ತದೆ. ದೇಶದಲ್ಲಿ ಇವತ್ತು ಜನ ಬೇಜಾರಾಗಿದ್ದಾರೆ, ಬೇಸತ್ತುಕೊಂಡಿದ್ದಾರೆ. ತಾಲ್ಲೂಕು ಬೋರ್ಡಿನವರಿಗೇ ಬೇಜಾರಾಗಿದೆ, 8 ವರ್ಷ ಆಯಿತು, ಇದೇ ಹಳೆ ಕಥೆ ಅಂತ ಹೇಳಿ ಅವರಿಗೇ ಉತ್ಸಾಹವಿಲ್ಲದಂತಾಗಿದೆ. ಅಂದಿನ ದಿನ ಚುನಾವಣೆ ನಡೆಸಿ ಇವತ್ತಿಗೂ ಇರತಕ್ಕ ಈ ಪಂಚಾಯಿತ್ತಿ ರಾಜ್ಯಗಳು ಸತ್ತ ಹೆಣವಾಗಿವೆ, ಅವಕ್ಕೆ ಜೀವ ತುಂಬಿ ಇದೇ ಪಂಚಾಯಿತ್ತಿ ರಾಜ್ಯ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಕಾನೂನಿಗೆ ತಿದ್ದು

(ಶ್ರೀ ಎಸ್. ಶಿವಪ್ಪ)

ಪಡಿ ಮಾಡಿ ಇನ್ನು ನಾಲ್ಕು ವರ್ಷಗಳ ಜೀವ ಅವಕ್ಕೆ ಕೊಟ್ಟಿದ್ದೀರಿ. ಈ ರೀತಿ ಜೀವವನ್ನು ತುಂಬತಕ್ಕ ಹವ್ಯಾಸಕ್ಕೆ ದಯವಿಟ್ಟು ಹೋಗಬೇಡಿ. ಅವುಗಳನ್ನು ರದ್ದು ಮಾಡಿ, ಈಗಾಗಲೇ ಕೆಲವು ಕಡೆ ಮಾಡಿದ್ದೀರಿ, ಸ್ಪೆಷಲ್ ಆಫೀಸರನ್ನು ಹಾಕಿದ್ದೀರಿ. ಉಳಿದ ಕಡೆಗಳಲ್ಲೂ ಅದೇ ರೀತಿ ರದ್ದು ಮಾಡಿ ಇನ್ನು 3–4 ತಿಂಗಳಿನಲ್ಲಿ ಚುನಾವಣೆ ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇಬೇಕು ಎಂದು ಆಗ್ರಹ ಪೂರ್ವಕವಾಗಿ ನಾನು ತಮಗೆ ಈ ಮೂಲಕ ಹೇಳಬಯಸುತ್ತೇನೆ. ಇಲ್ಲದೇ ಹೋದರೆ ಪಂಚಾಯ್ತಿ ರಾಜ್ಯದ ಬಗ್ಗೆ ಜನರಲ್ಲಿ ಏನೇನೂ ನಂಬಿಕೆ ಉಳಿಯುವುದಿಲ್ಲ, ಯಾವ ತತ್ವ ಅನುಷ್ಠಾನಕ್ಕೆ ಬರಬೇಕೋ ಆ ತತ್ವಕ್ಕೆ ತಿಲಾಂಜಲಿಯನ್ನು ಕೊಟ್ಟಂತಾಗುತ್ತದೆ, ಆ ರೀತಿ ಕೊಡಲಿ ಪೆಟ್ಟು ಹಾಕತಕ್ಕ ಕಾರ್ಯವನ್ನು ಮಾಡಬೇಡಿ, ದಯವಿಟ್ಟು ಶೀಘ್ರವಾಗಿ ಚುನಾವಣೆಗಳನ್ನು ಮಾಡಿ ಒಳ್ಳೆಯ ಹೆಸರನ್ನು ಸಂಪಾದನೆ ಮಾಡತಕ್ಕ ವಿಚಾರಕ್ಕೆ ಕೈಹಾಕಿ ಎಂದು ಹೇಳುತ್ತೇನೆ. ಇಲ್ಲವಾದರೆ ತಾಲ್ಲೂಕು ಬೋರ್ಡಿನಲ್ಲಿ ಪಂಚಾಯ್ತಿಗಳಲ್ಲಿ ಇರತಕ್ಕ ಜನ ರೊಚ್ಚಿಗೆ ಎದ್ದು ಮುಂದೆ ಏನು ಮಾಡುತ್ತಾರೆ ಎಂದು ಹೇಳುವ ಹಾಗಿಲ್ಲ. ಏನೇ ಆಗಲಿ ಮುಂದೆ ನಿಮ್ಮ ತಪ್ಪಿಗೆ ನೀವು ಪ್ರಾಯಶ್ಚಿತ್ತ ಮಾಡಿಕೊಳ್ಳಲೇ ಬೇಕಾಗುತ್ತದೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ಅಧ್ಯಕ್ಷರೇ, ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಇವತ್ತು ನಿಮ್ಮ ಈ ಪಂಚಾಯ್ತಿ ರಾಜ್ಯ ಎಷ್ಟುಮಟ್ಟಿಗೆ ಕೆಲಸ ಮಾಡಿದೆ ಎಂದರೆ, ಗುಲ್ಬರ್ಗಾದ ಡೆಪ್ಯೂಟಿ ಕಮೀಷನರು 4 ವರ್ಷ ಮುಗಿದು ಹೋಗುತ್ತದೆ, ಎಲೆಕ್ಷನ್ ಆಗಬೇಕು ಎಂದು ಪಾಪ ಅವರು 64ರಲ್ಲಿ ಎಲೆಕ್ಟೋರಲ್ ರೋಲ್ ಪ್ರಿಂಟ್ ಮಾಡಿಸಿದರು. ಅದಕ್ಕೆ 50 ಸಾವಿರ 770 ರೂಪಾಯಿ ಖರ್ಚಾಗಿದೆ. ಈಗ ಚುನಾವಣೆ ನಡೆಯುವ ಹಾಗಿಲ್ಲ ಎಂದಮೇಲೆ ಅದೆಲ್ಲಾ ಹೋಯಿತು, ಅಷ್ಟು ಹಣ ನಷ್ಟ ವಾಗಿದೆ. ಇದಕ್ಕೆ ಯಾರು ಜವಾಬ್ದಾರರು ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಇನ್ನು ಪಂಚಾಯ್ತಿ ರಾಜ್ಯ ಅಂತ ಹೇಳಿ ವಾರ ಪತ್ರಿಕೆ ಹೊರಡಿಸಿದರು, ಮೊದಲು ಒಂದು ವರ್ಷ ಮಾರಾಟ ಮಾಡಿದರು ಆಮೇಲೆ ಎನ್.ಇ.ಎಸ್. ತಾಲ್ಲೂಕು ಬೋರ್ಡ್, ಪಂಚಾಯ್ತಿಗಳಿಗೆ ಕಳುಹಿಸಿದ್ದಾರೆ. ಇವತ್ತಿನವರೆಗೂ ಅವರಿಂದ ಅದಕ್ಕೆ ಬರಬೇಕಾದ ದುಡ್ಡು ಬಂದಿಲ್ಲ, ಸುಮಾರು 54 ಸಾವಿರ ರೂಪಾಯಿ ಬಾಕಿ ಬರಬೇಕಾಗಿದೆ. ಅವರಿಗೆ ನೋಟೀಸ್ ಕಳುಹಿಸುತ್ತಾ ಇದ್ದೀರಿ. ಇಂತಹ ಒಂದೆರಡು ವಿಚಾರಗಳನ್ನು ಎಷ್ಟುಮಟ್ಟಿಗೆ ನಿಮ್ಮ ಇಲಾಖೆ ಕೆಲಸ ಮಾಡುತ್ತಾ ಇದೆ ಎನ್ನುವುದಕ್ಕೆ ಹೇಳುತ್ತಾ ಇದ್ದೇನೆ. ಇವತ್ತು ನಮ್ಮ ರಾಜ್ಯದ ರೈತರ ಸಾಲದ ಹೊರೆ ಕಡಿಮೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವೇ ಎಂದು ಕೇಳುತ್ತಾ ಇದ್ದೇನೆ. ಹೌಸಿಂಗ್ ಡೆಟ್ ನಮ್ಮ ದೇಶದಲ್ಲಿ 871 ರೂಪಾಯಿ ಇದೆ, ಇತರ ಕಡೆಗಳಲ್ಲಿ 654 ರೂಪಾಯಿ ಇದೆ. ಆಲ್ ಇಂಡಿಯಾ ಅವರೇಜ್‌ಗಿಂತ ನಮ್ಮ ದೇಶದ ಸಾಲದ ಹೊರೆ ರೈತನ ಮೇಲೆ ಬಹಳ ಹೇರಳವಾಗಿದೆ, ಇಷ್ಟೆಲ್ಲಾ ಇದ್ದೂ ಕೂಡ ಅದನ್ನು ನಿವಾರಣೆ ಮಾಡಬೇಕಾದರೆ ಚೆನ್ನಾಗಿ ಕೆಲಸ ಮಾಡತಕ್ಕ ಸಂಸ್ಥೆಗಳು ಇಲ್ಲದೇ ಹೋದರೆ, ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ವ್ಯಕ್ತಿಗಳ ಮೇಲೆ ಅದು ಕೆಲಸ ಮಾಡುವುದಾದರೆ ಖಂಡಿತ ವಾಗಿಯೂ ಯಾವ ಪ್ರಯೋಜನವೂ ಆಗುವುದಿಲ್ಲ. ಲಕ್ಷಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಲಾರ್ಜ್‌ಸ್ಕೇಲ್ ಸೊಸೈಟಿಗಳು ಇವೆ. ಅಲ್ಲಿಗೆ ನಿಮ್ಮ ಇಲಾಖೆಯಿಂದ ಒಬ್ಬ ಇನ್‌ಸ್ಪೆಕ್ಟರನ್ನಾದರೂ ಸೆಕ್ರೆಟರಿಯನ್ನಾಗಿ ಹಾಕಿ. ಅದೇ ರೀತಿ ಮಲ್ಟಿಪರ್‌ಪಸ್ ಸೊಸೈಟಿಗಳು ಇವೆ, ಅವಕ್ಕೂ ಕೂಡ ನಿಮ್ಮ ಒಬ್ಬ ಸೆಕ್ರೆಟರಿಯನ್ನು ಹಾಕಬೇಕು. ಈ ಕೆಲಸವನ್ನು ತುರ್ತಾಗಿ ಮಾಡಬೇಕೆಂದು ಹೇಳಿ, ಕಾರ್ಯಭಾರವನ್ನು ಹೊತ್ತಿರತಕ್ಕ ಸಚಿವರು ಇವತ್ತು ಕಟ್ಟುನಿಟ್ಟಾಗಿ, ನಿರ್ದಾಕ್ಷಿಣ್ಯವಾಗಿ ಸೊಸೈಟಿ ಗಳ ಇಲಾಖೆ, ಸಮಾಜ ಅಭ್ಯುದಯ ಮತ್ತು ಪಂಚಾಯ್ತಿ ರಾಜ್ಯಗಳ ವರ್ತನೆ ಮಾಡತಕ್ಕ ಸಮಯ ಬರಲಿ ಎಂದು ಹೇಳುತ್ತೇನೆ. ಆ ಬಿಜಾಪುರದಲ್ಲಿ ಬಹಳ ಕೆಲಸಗಳನ್ನು ಮಾಡಿದ್ದೀರಿ. ಮೇಲಾಗಿ ತುಲಾಭಾರವನ್ನೂ ಮಾಡಿದ್ದೀರಿ. ಆದರೆ ತಾವು ಇನ್ನು ಮುಂದೆ ಇಂಥಾ ಹವ್ಯಾಸಕ್ಕೆ ಮಾತ್ರ ಹೋಗಬೇಡಿ. ಮುಖ್ಯ ಮಂತ್ರಿಗಳನ್ನು ಮೆಚ್ಚಿಸುವ ಕೆಲಸಕ್ಕೆ ಹೋಗದೆ, ಜನತೆಯನ್ನು ಮೆಚ್ಚಿ ಸುವ ಕೆಲಸಮಾಡಿ. ಹಾಗೆ ಮಾಡಿದರೆ ತಾವು ಕೈಗೊಳ್ಳತಕ್ಕ ಕೆಲಸಗಳು ಸಫಲವಾಗುತ್ತವೆ. ತಾವು ತಮ್ಮ ಪಕ್ಷದ ಯಾರ ಹೊಗಳಿಕೆಗೆ ಮೋಸಹೋಗಬಾರದು. ಆ ಅಪಾಯದಿಂದ ತಾವು ಪಾರಾಗಿ ಕೆಲಸಮಾಡಬೇಕಾಗಿದ್ದರೆ ತಮ್ಮ ಆಡಳಿತದಲ್ಲಿ ತಾವು ಒಂದು ಬಿಗಿಯನ್ನು ಇಟ್ಟು ಕೊಳ್ಳಬೇಕು ; ಇಷ್ಟು ಮಾತುಗಳನ್ನು ಹೇಳಿ ನಾನು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಮನವಿಗಳನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಅಧ್ಯಕ್ಷರೇ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ಪ್ರಾಮುಖ್ಯವಾದ ವಿಚಾರವನ್ನು ತರಲಿಚ್ಛಿಸುತ್ತೇನೆ ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಆ ವಿಚಾರ ಏನೆಂದರೆ, ಆಂಧ್ರ ಅಸೆಂಬ್ಲಿಯಲ್ಲಿ ಅಲ್ಲಿನ ಆಡಳಿತಪಕ್ಷದವರೂ ಮತ್ತು ವಿರೋಧ ಪಕ್ಷದವರೂ ಒಟ್ಟಾಗಿ ಸೇರಿ ಅಲ್ಲಿ ನಡೆಯುತ್ತಿರುವ ನಾಗಾರ್ಜುನಸಾಗರದ ಕೆಲಸವನ್ನು ಏನೇ ಬರಲಿ ಅದನ್ನು ನಾವು ಮುಂದುವರಿಸಲೇಬೇಕು, ಅದರಿಂದ ಏನು ಬರುತ್ತದೆ ಅದಕ್ಕೆ ನಾವೆಲ್ಲರೂ ಸಿದ್ಧರಾಗಿರಬೇಕು ಎಂಬ ಒಂದು ಬೆದರಿಕೆ ಹಾಕಿ ಅಲ್ಲಿ ಮಾತನಾಡಿದ್ದಾರೆ ದೇಶಾದ್ಯಂತವೂ ಅದಕ್ಕಾಗಿ ಒಂದು ಚಳವಳಿಯನ್ನಾದರೂ ನಡೆಸುವುದಕ್ಕೆ ಆಂಧ್ರದವರು ಸಿದ್ಧರಾಗಿರಬೇಕು ಎಂಬುದಾಗಿ ಅಲ್ಲಿ ತೀರ್ಮಾನಮಾಡಿದ್ದಾರೆಂದು ವರ್ತಮಾನ ಕೇಳುತ್ತಿದ್ದೇವೆ. ಅದಕ್ಕೆ ತಕ್ಕ ಪ್ರತಿಕಾರ್ಯಕ್ರಮಗಳನ್ನು ನಾವೂ ಕೂಡ ಇಲ್ಲಿ ಕೈಗೊಳ್ಳಲು ಆಲೋಚನೆ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಶ್ರೀ ಎಸ್. ಶಿವಪ್ಪ.—ಆಂಧ್ರದವರ ಹೆದರಿಕೆ, ಬೆದರಿಕೆಗಳಿಗೆ ನಾವು ಬಗ್ಗಬಾರದು. ಈ ವಿಚಾರದಲ್ಲಿ ಮೈಸೂರಿನ ಇಡೀ ಜನತೆ ಒಗ್ಗೊರಲಿನಿಂದ ಅದನ್ನು ಪ್ರತಿಭಟಿಸುವುದಕ್ಕೆ ಸಿದ್ಧವಾಗಿದೆ ಎಂಬುದನ್ನು ಅವರಿಗೆ ಮನಗಾಣುವಂತೆ ಮಾಡಬೇಕು. ಕೇಂದ್ರ ಸರ್ಕಾರದ ಶ್ರೀ ಕೆ. ಎಲ್. ರಾವ್ ಅವರು ಅದನ್ನು ವಿಚಾರಮಾಡುತ್ತೇನೆ ಎಂದು ಹೇಳಿದ್ದರೂ ಅದಕ್ಕೆ ಬೆಲೆ ಕೊಡದೆ ಮೈಸೂರಿನವರನ್ನು ಹೆದರಿಸಿ ಬೆದರಿಸಿ ಅವರ ಕೆಲಸಮಾಡಿಕೊಳ್ಳಲು ಅವರು ಹವಣಿಸುತ್ತಿದ್ದಾರೆ; ಅದಕ್ಕೆ ಅವಕಾಶ ಕೊಡಬಾರದು. ಅವರು ಹೀಗೆ ಒಂದು ಬೆದರಿಕೆಹಾಕಿ ಕೇಂದ್ರದಿಂದ ಒಪ್ಪಿಗೆ ಪಡೆಯಬಹುದು ಎಂದು ಆಲೋಚಿಸಿದಂತಿದೆ. ಅದಕ್ಕೆ ನಾವು ಇಲ್ಲಿಯೂ ಒಂದೆರಡು ದಿವಸ ಈ ವಿಷಯವನ್ನು ಇಲ್ಲಿ ಚರ್ಚೆಮಾಡಿ ನಾವು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಚರ್ಚೆಮಾಡಬೇಕಾದ್ದು ಅತ್ಯಗತ್ಯ ಎಂದು ಸೂಚಿಸಲಿಚ್ಛಿಸುತ್ತೇನೆ.

Sri S. NIJALINGAPPA.—I am myself thinking of the desirability of moving a motion on this subject.

†Sri M. SRINIVAS NAYAK (Mangalore-I).—Mr. Speaker, Sir, I rise, to support Demands Nos. 21, 23, 25 and 39 placed before this House by the respective Hon'ble Ministers. Co-operation has come to stay in this country. It is a way of life. Hundred years ago co-operative societies came into vogue in foreign countries like France, America and England and they are doing very well today with a chain of stores spread all over the country. Fifty years ago co-operation was unknown in India, but today Government has accepted it as a policy to cater to the needs of rural India and the population of this country. It may be that the co-operative societies are working under some duress for want of trained staff, sufficient finance and adequate storage facillites. With the meagre finances at their disposal they cannot be expected to trade in a very large manner as they are unable to store whatever they want to store for want of storage space and they cannot also have efficient management for want of trained personnel. With the efflux of time we are sure that these difficulties will be overcome by the Department and we will have a co-operative system working in this country on a very scientific basis.

I do not want to deal with any other subject except municipal administration. The Municipal Administration Ministry is an important Ministry in this State as well as elsewhere because it deals with the destinies and lives of nearly 20 to 25% of the population of the State, but, Sir, it is an admitted fact that it has no indepndent existence and it has to take cover under demand No. 71, Miscellaneous. Today even at the level of the Planning Commission leave alone the State, no mention is made as to the development of urban area. Municipal administration or the development of urban area has no place at all in our plans. We are trying to improve the villages and

(SRI M. SRINIVAS NAYAK)

we are trying to give them all facilities. It would be just like improving the back portion of the house leaving the face unimproved. Today towns are known as the faces of rural India. Today what are we doing to improve the status of the municipalities? That is a matter to be deeply considered by this House. The municipalities are unable to maintain good roads, widen the roads, give facilities for sanitation and other things with the finances at their disposal. We have to look to financial position of the municipalities. They are expected to collect house tax, market fees, entertainment tax and there their income ends. The problem before them is of adequate water supply, underground drainage, children's parks, libraries and other things for which money is the prime 'factor which has to be looked into. The municipalities today are debtors to Government. They have not been able to pay back the moneys advanced to them by the State Government because they are unable to meet their commitments on hand by the meagre income at their disposal. Today if we look round the State in the several municipalities we find old roads which were formed for bullock cart traffic, but now they are expected to take and cater to heavy lorry traffic, Unfortunately, the roads are not quite good to catch up with this heavy traffic with the result today we find that road accidents are taking place. If too many of our people are the victims of road accidents caused by heavy vehicles it is not because of the fault of the police or the drivers, but it is because we have not been able to provide better roads capable of taking heavy vehicular traffic. Today there are not even footpaths for pedestrians to walk and people have to walk through narrow roads and if any lorry passes through the pedestrians get crushed. It is the responsibility undoubtedly of the municipalities to provide good roads. Unfortunately, there is a lacuna. Even if the municipalities want to broaden the roads, they have to deposit the money for the same along with the proposal, with Government and the proposal will have to be worked up. The Government takes its own time to work up the proposal. It takes a pretty long time before the proppsal takes a concrete shape and the land acquisition proceedings are finalised by the Revenue Department. I may refer to the Mangalore Municipality which had deposited with the Government more than Rs. 10 lakhs 5 or 7 years ago. Today they have lost by way of interest alone nearly Rs. 3 lakhs. Even then the roads have not been widened so far. Some municipalities do not get any financial assistance from the Government. If we look to the Demand under 71-Miscellaneous we find that the Belgaum Division is getting a portion of the share of land revenue collected from the area and also a share of the non-agricultural assessment collected from that area. That facility has to be extended to all the other municipalities also.'

Coming down under the same demand Miscellaneous, we find that in the Gulbarga Division and in the Belgaum

Division some money is set apart for roads and school buildings It is very unfair that these provisions are made and kept separately only for two Divsions leaving other Divisions to take care of themselves. The Mangalore Municipality has been pressing the Government to provide a share of the land revenue collected from the Municipal area but it has been turned down. I urge that this policy may be extended to all the Municipalities so that they may at least have a share of the income from the non-agricultural asssessment that is collected from their areas.

Towns are the major factors which contribute not only to the exchequer of the Mysore State but to the exchequers of all States. 90% of the revenue is collected from the towns and towns do deserve a share to be given back to them for development purposes. The Government gets more than Rs.10 crores from the Mangalore Municipal Area by way of income-tax, sales tax, excise duty, motor vehicles, etc. If in 1937 there were only 100 vehicles plying on the roads of Mangalore, today the number is more than 10,000 and the Government gets an income of more than Rs.70 lakhs. The share of the motor vehicles tax made over to the Municipality is only Rs.21,000. We have to take into consideration all these factors and see that the Municipalities are provided with an adequate share of the revenues that are collected from their areas for development purposes. If Rs.10 crores are collected from the District of South Kanara, we have a claim for at least 50% of it because the roads there are ploughed into fields by heavy vehicles carrying heavy iron ore. Today the Municipality has no money to repair these roads or to give the amenities required by the people.

Water supply and drainage is not a luxury; it is a necessity. We must see that underground drainage and water supply is given to all cities in the State of Mysore. It is quite necessary therefore that the Government should consider the formation of a Water Supply and Sewerage Board for the whole State. Then only Government can formulate a programme and complete it within 10 or 15 years and see that the major necessities required for development are made available. Towns do not develop simply because they are municipalities; the development is based on many other factors such as industries, the educational institutions they possess, the trade and commerce they handle and the hinterland they possess. The Municipalities are expected to take care of the amenities that are to be provided to the people and without adequate funds it will not be possible to give such facilities to the people who are looking forward to the Municipalities to provide them. Even if the urban water supply is taken into consideration, the present state of affairs is that the Municipality has to borrow money and pay interest thereon even at the stage when the water works are under progress. That means, they have to pay interest for the unproductive period of 4 to 5 years which runs into several lakhs of rupees. Even for the Rural Water Supply Scheme, there is a certain grant given by the Central Government, certain grant given by the State Government and the share of the local body is very

(SRI M. SRINIVAS NAYAK)

negligible. Even if they are unable to pay their share of money, Government is given money to the local bodies as a loan. As far as urban water supply scheme is concerned, they have to go to the Government for financial assistance or take loan from the open market and pay interest thereon. Thus they have to work under great financial strain and they are unable to complete the works on hand. My suggestion is that a Water Supply and Sewerage Board for the whole State has to be formed and a plan must be prepared for providing every town in the State with underground drainage and water supply in the course of two or three years. With increase in population and unhygienic conditions prevailing in towns, it is quite necessary that we should have protected water supply and to ward off diseases like Elephantiasis; drainage should also be provided in the cities and towns. Today, the Municipality has to depend upon the Government for the Municipal Commissioner, upon the Public Health Department for the Health Officer and upon the Public Works Department for the Engineer. These officers are posted to the respective Municipalities against their wishes and the moment they come they think of retransfer to their parent Departments. This anomaly can be got over by creating a Municipal Cadre. In the present set up this is quite necessary and the people who are recruited to the cadre must be given training for 6 to 12 months. They must be told what their duties are and on what lines they have to work in the Municipalities with regard to development, with regard to town planning and with regard to providing parks, playgrounds, libraries and other things. One other factor which I wish to bring to the notice of the Hon'ble Minister for Municipal Administration is that there are no parking spaces in any city either at the market place or other places. Lorries and cars pass through narrow roads prohibiting other vehicular traffic and also putting a great strain on pedestrian traffic. Today, this Legislature is a body composed of elected representatives ; this Government is also an elected body. Myself and many Members who are elected from Municipal constituencies speak with a voice which reflects the minds and thoughts of the respective Municipalities. I for one would say that such of the Municipalities which do not give a fair deal to their population, which are unable to provide the required necessities of life to those people and which do not give them adequate facilities to have a decent life should be superseded. Somebody may say that this is a murder of democracy, but I for one would always say that it is a survival of democracy. I congratulate the Hon'ble Minister for Municipal Administration for superseding the Bangalore Municipality and appointing an Administrator. When I was going round the city I found that roads are being widened and when I just questioned the officer on duty, he told me that 652 such roads are being widened in the city and electric poles which are found in the middle of the roads are being shifted to the edge of the roads so as to give more space for vehicular traffic and for pedestrians to walk on. It is quite necessary

that this should be done. When I questioned him further, he told me that after the supersession of the Bangalore Municipality there is an increase of Rs. 26 lakhs in the income of the Corporation, and that too nearly Rs. 18 lakhs have been collected by way of extra octroi duty. That only shows that when an Administrator is appointed he is able to discharge his duties in a better way and he is able to give the people the amenities that they require. The City of Bangalore has been divided into six zones thereby bringing to the door of every ratepayer the municipal amenities that are legitimately expected of it. I would say that the Hon'ble Minister for Municipal Administration should pay a vist to London and see how the county and boroughs are functioning there. We are told they are independent institutions which are able to provide the people with the amenities which they require such as parks, gardens, playgrounds, libraries, wide roads, parking places, etc. It is necessary in the interest of the State that we go to advanced countries, observe the developments in this behalf and try to implement them here so that we can also have beautiful roads with colourful flowers and trees planted on either side of the roads with islands of parks here and there. With these observations I conclude my speech.

10-00 A.M.

†ಶ್ರೀ ಎಸ್.ಶರಣಗೌಡ ಇನಾಂದಾರ್.—ಅಧ್ಯಕ್ಷರೇ, ಈ ದಿವಸ ಸಹಕಾರ ಶಾಖೆಯ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳ ಮೇಲೆ ನಾನು ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮೊಟ್ಟ ಮೊದಲನೆಯದಾಗಿ ಕೋ-ಆಪರೇಟಿವ್ ಸೊಸೈಟಿಗಳ ಆಡಳಿತದ ಬಗ್ಗೆ ನಾನು ಹೇಳುವುದಾದರೆ, ಈ ವಿಚಾರವಲ್ಲಿ ಮಂತ್ರಿಗಳು ಸ್ವಲ್ಪಮಟ್ಟಿಗೆ ಹೆಚ್ಚಿನ ಗಮನವನ್ನು ಕೊಡಬೇಕು. ಏಕೆಂದರೆ ಸೊಸೈಟಿಗಳಲ್ಲಿ ಸರಿಯಾದ ಲೆಕ್ಕ ಪತ್ರಗಳ ಬಗ್ಗೆ ಅನೇಕ ಆರೋಪಣೆಗಳು ಬರುತ್ತಾ ಇವೆ. ಅವನ್ನು ಸರಿಪಡಿಸುವುದಕ್ಕೆ ಏಕರೂಪವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಇದರಿಂದ ಸಾಮಾನ್ಯ ಜನತೆಗೆ ಹಿತವಾಗುವುದಕ್ಕೆ ಬದಲು ಅನಿಷ್ಟವಾಗುತ್ತಾ ಇದೆ. ಸರ್ಕಾರದವರು ಅನೇಕ ಸಹಕಾರ ಸಂಘಗಳಿಗೆ ಈಗ ಸಬ್ಸಿಡಿ ಕೊಡುತ್ತಿದ್ದಾರೆ. ಆದರೆ ಅವರು ಅಲ್ಲಿನ ಲೆಕ್ಕ ಪತ್ರಗಳನ್ನು ಸರಿಯಾಗಿ ಮೇಂಟೇನ್ ಮಾಡುತ್ತಾ ಇಲ್ಲ. ಅದಕ್ಕಾಗಿ ಅವುಗಳಿಗೆ ಶಿಕ್ಷಿತರಾದ ಹಾಗೂ ತರಪೇತಾದ ಕಾರ್ಯ ದರ್ಶಿಗಳನ್ನು ನೇಮಕ ಮಾಡಬೇಕು. ಆ ರೀತಿ ಸರ್ಕಾರದವರು ಮಾಡುತ್ತಾ ಇಲ್ಲ. ಇದರಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಸಹಕಾರ ಸಂಘಗಳಿಗೆ ಆ ಪ್ರಕಾರ ಅನುಕೂಲಗಳನ್ನು ಒದಗಿಸುತ್ತಾ ಇಲ್ಲ. ಅನೇಕ ತೊಂದರೆಗಳು ಆಗುತ್ತಾ ಇವೆ. ಇನ್ನು ಮುಂದೆ ಸಹಕಾರ ಸಂಘಗಳಿಗೆ ಕಡ್ಡಾಯವಾಗಿ ತರಪೇತಾದ ಕಾರ್ಯದರ್ಶಿಗಳನ್ನು ನೇಮಿಸಬೇಕು ಎನ್ನುವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ನಾನು ಸೂಚಿಸ ಬಯಸುತ್ತೇನೆ.

ಇನ್ನೊಂದು ವಿಷಯ. ಒಕ್ಕಲಗರಿಗೆ ತಾವು ಹಣವನ್ನು ಸಾಲವಾಗಿ ಕೊಡುತ್ತಿದ್ದೀರಿ. ಫರ್ಟಿಲೈಜರ್ಸ್‌ಗಾಗಿ ಸಾಲ ಕೊಡುತ್ತೀರಿ. ಅದನ್ನು ವಸೂಲಿ ಮಾಡುವುದನ್ನು ಏಕೆ ದವಸ ರೂಪದಲ್ಲಿ ಮಾಡಬಾರದು ? ಈಗ ಹೇಗಾದರೂ ಲೆವಿ ಇದೆ. why not recovery be made in kind ಎಂದು ನಾನು ಕೇಳಬೇಕಾಗಿದೆ. ಪ್ರೊಕ್ಯೂರ್‌ಮೆಂಟನ್ನು ಬೇರೆ ರೀತಿಯಲ್ಲಿ ಮಾಡು ವುದಕ್ಕೆ ಬದಲು ಸೊಸೈಟಿಗಳ ಮುಖಾಂತರ ಯಾವ ಒಕ್ಕಲಗರಿಗೆ ಹಣ ಕೊಟ್ಟಿರುತ್ತೀರೋ ಅವರ ಕಡೆಯಿಂದ ಜೋಳ, ಬತ್ತ, ರಾಗಿ, ಮುಂತಾದುವನ್ನು ವಸೂಲು ಮಾಡಬಹುದು. ಈ ರೀತಿಯಾಗಿ ಸರ್ಕಾರದವರು ಕೊಟ್ಟ ಸಾಲವನ್ನು ಧಾನ್ಯ ರೂಪದಲ್ಲಿ ವಸೂಲು ಮಾಡಬಹುದು. ಲೆವಿ ವಸೂಲು ಮಾಡುವುದು ಮಾರ್ಚ್ ತಿಂಗಳಲ್ಲಿ. ಇಲ್ಲಿ ಅದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದಕ್ಕೆ ಅವಕಾಶ ವಾಗುತ್ತದೆ. ಸೊಸೈಟಿಗಳವರು ಏನು ಮಾಡುತ್ತಾರೆಂದರೆ, ಅದನ್ನು ಹೊರಗಡೆ ಹೋಗುವುದಕ್ಕೆ ಬಿಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವನ್ನು ಮಾರುವುದಕ್ಕೆ ಪರವಾನೆ ಇಲ್ಲವೆಂತಲೂ ಹೇಳುತ್ತಾರೆ. ಮಾರ್ಕೆಟ್ಟಿಗೆ ತೆಗೆದುಕೊಂಡು ಹೋಗಿ ಮಾರುವುದಕ್ಕೂ ಅವಕಾಶ ಕೊಡುವುದಿಲ್ಲ. ಇದರಿಂದ ಸೊಸೈಟಿಗಳಲ್ಲಿ ಸರಿಯಾಗಿ ದುಡ್ಡು ವಸೂಲಾಗುವುದಿಲ್ಲ. ಬೇರೆ ಕಡೆ ಹೋಗುತ್ತದೆಂದು ನನ್ನ ಭಾವನೆ.

(ಶ್ರೀ ಎಸ್. ಶರಣಗೌಡ ಇನಾಂದಾರ್)

ಆದ್ದರಿಂದ ನೀವು ಸಾಲದ ರಿಕವರಿಯನ್ನು ಜೋಳ ಅಥವಾ ಬತ್ತ ಮುಂತಾದ ಧಾನ್ಯ ರೂಪದಲ್ಲಿ ಏಕೆ ತೆಗೆದುಕೊಳ್ಳಬಾರದೆಂದು ನಾನು ಕೇಳುತ್ತೇನೆ. ಅದರಿಂದ ನಮಗೆ ಡಬ್ಬಲ್ ಪರ್ಪಸ್ ಸರ್ವ್ ಆಗುತ್ತದೆ. ಒಂದು, ನಮ್ಮಲ್ಲಿ ಹೆಚ್ಚಿಗೆ ಧಾನ್ಯ ಸಂಗ್ರಹವಾಗುತ್ತದೆ ಪ್ರೊಕ್ಯೂರ್‌ಮೆಂಟ್ ಜೊತೆಗೆ ಇದೂ ಬರುತ್ತದೆ. ಈ ಒಂದು ದೃಷ್ಟಿಯಿಂದ ಮಂತ್ರಿಗಳು ಇದನ್ನು ಚೆನ್ನಾಗಿ ವಿಚಾರ ಮಾಡಿದರೆ ಒಕ್ಕಲಿಗರಿಗೆ ಹೆಚ್ಚು ಸೌಕರ್ಯವಾಗುತ್ತದೆ.

ಇನ್ನು ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಅನೇಕ ಸೌಕರ್ಯಗಳನ್ನು ಒದಗಿಸಿದ್ದೇವೆಂದು ಹೇಳುತ್ತೀರಿ. ಸಾಲ ತೆಗೆದುಕೊಳ್ಳುವುದು, ಧಾನ್ಯಗಳನ್ನು ಹಂಚುವುದು, ಪ್ರೊಕ್ಯೂರ್‌ಮೆಂಟ್ ಮಾಡುವುದು, ಡಿಸ್ಟ್ರಿಬ್ಯೂಷನ್ ಮಾಡುವುದು–ಹೀಗೆ ಅನೇಕ ಸೌಲಭ್ಯಗಳನ್ನು ಒದಗಿಸಿದ್ದೀರಿ. ಆದರೆ ಈ ಕೆಲಸಗಳನ್ನು ಯಾರೂ ಸರಿಯಾಗಿ ನಡೆಸುತ್ತಾ ಇಲ್ಲ. ರೇಷನಿಂಗ್ ಪದ್ಧತಿಯ ಮೇರೆಗೆ ಜೋಳ, ಸಕ್ಕರೆ, ಗೋಧಿ, ಅಕ್ಕಿ–ಈ ಪದಾರ್ಥಗಳನ್ನು ಸೊಸೈಟಿ ಮುಖಾಂತರ ಹಂಚುತ್ತಿದ್ದೀರಿ. ಆದರೆ ಈ ಒಂದು ವ್ಯವಸ್ಥೆಯಲ್ಲಿ more than 50 per cent is going to blackmarket. I can prove it, Sir. ಈ ವಿಚಾರವನ್ನು ತೆರೆದ ಮನಸ್ಸಿನಿಂದ ಪರಿಶೀಲಿಸಿ ನೋಡುವುದಾದರೆ, ತಾಲ್ಲೂಕ್ ಲೆವಲ್ಲಿನಲ್ಲಿ ಹೋಲ್‌ಸೇಲ್ ಕೋಟಾ ಗೋಧಿ, ಸಕ್ಕರೆ, ಅಕ್ಕಿ ಯಾವರೀತಿ ವಿತರಣೆಯಾಗುತ್ತಿದೆ ಎಂಬುದನ್ನು ಅನಿರೀಕ್ಷಿತ ಭೇಟಿ ಮಾಡಿ ನೋಡಿದರೆ most of the allotment will be sold only in the open market at the district headquarters, not in taluk headquarters.

ಒಬ್ಬ ಮಾನ್ಯ ಸದಸ್ಯರು.—ತಾಲ್ಲೂಕ್ ಹೆಡ್-ಕ್ವಾರ್ಟರ್ಸ್‌ನಲ್ಲಿಯೂ ಇದೆ.

ಶ್ರೀ ಎಸ್. ಶರಣಗೌಡ ಇನಾಂದಾರ್.—ಒಂದು ವಿಷಯ. ಈಗ ಸಕ್ಕರೆಗೆ ನಿಮ್ಮ ಕಂಟ್ರೋಲ್ ಇದೆ. ಸಿಕ್ಕಿದರೆ ಹೋಲ್‌ಸೇಲಾಗಿ ಸಿಗಬೇಕು. ಕನ್ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ನಾರ್ಮಲ್ ರೇಷನಿಂಗ್ ಪ್ರಕಾರ ಸಕ್ಕರೆ ಸಿಗಬೇಕು. ಅದನ್ನು ಬಿಟ್ಟು ಹೊರಗಡೆ ಏಕೆ ಬೇಕಾದಷ್ಟು ಸಕ್ಕರೆ ಸಿಗುತ್ತಾ ಇದೆ. ಹೀಗಾದರೆ ಯಾವ ಪ್ರಕಾರ ತಾಲ್ಲೂಕುಗಳಿಗೂ, ಗ್ರಾಮಗಳಿಗೂ ಸೊಸೈಟಿಯವರು ಕೊಡಬೇಕು ? ಅದು ಬ್ಲಾಕ್‌ಮಾರ್ಕೆಟ್ಟಿನೊಳಗೆ ವಿತರಣೆಯಾಗುತ್ತಿದೆ. ಕೆಲವು ಕಡೆಗಳಲ್ಲಿ ಮಾತ್ರ ರೇಷನಿಂಗ್ ಅಂಗಡಿಗಳಿಗೆ ಹೋಗುತ್ತಿವೆ. ಬಾಕಿ ಕಡೆಗಳಲ್ಲಿ ಬ್ಲಾಕ್‌ಮಾರ್ಕೆಟ್ ಪ್ರಾರಂಭವಾಗಿ ಸಕ್ಕರೆಯೇ ಸಿಗದೆ ಹೋಗತಕ್ಕ ಪರಿಸ್ಥಿತಿ ಬಂದಿದೆ.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಒಂದು ವಿಷಯವನ್ನು ಮರೆತಿದ್ದಾರೆ. ಯಾರು ತಮಗೆ ಬೇಕಾದಷ್ಟು ಕೋಟಾವನ್ನು ತೆಗೆದುಕೊಳುತ್ತಾರೋ ಅವರು ಹೆಚ್ಚಿಗೆ ಕೂಡಿಹಾಕಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಿದ್ದಾರೆ. ಕಾರ್ಡು ಹೋಲ್ಡರ್ಸ್‌ಗೆ ಆ ರೀತಿ ಅವಕಾಶವಾಗುವುದಿಲ್ಲ.

ಶ್ರೀ ಎಸ್. ಶರಣಗೌಡ ಇನಾಂದಾರ್.—ಆಹಾರ ಮಂತ್ರಿಗಳು ಒಂದು ವಿಷಯವನ್ನು ಹೇಳಿದರು. ರೇಷನಿಂಗ್ ಪ್ರಮಾಣದಷ್ಟು ಕೊಡುತ್ತೇವೆಯೇ ಹೊರ್ತು ನೂರಾರು ಚೀಲಗಳನ್ನು ಕೊಟ್ಟಿಲ್ಲವೆಂದು. ನಾನು ಹೇಳುವುದೇನಂದರೆ, ಗ್ರಾಮಗಳಲ್ಲಿ ಅಂತಹ ಬ್ಲ್ಯಾಕ್ ಮಾರ್ಕೆಟ್ ಯಾರು ಮಾಡುವುದಿಲ್ಲ. ಏಕೆಂದರೆ, ಅಲ್ಲಿ more than the required quantity ಕೊಡುವುದಿಲ್ಲ. ಅದೂ ಅಲ್ಲದೆ ಈಗ ಸಕ್ಕರೆಗಿಂತಲೂ 2–3 ಪಟ್ಟು ಬೆಲ್ಲದ ಬೆಲೆ ಜಾಸ್ತಿಯಾಗಿದೆ. ಪ್ರತಿಯೊಂದು ಕುಟುಂಬದಲ್ಲಿಯೂ ಬೆಲ್ಲವನ್ನೇ ಹೆಚ್ಚಿಗೆ ಉಪಯೋಗ ಮಾಡುತ್ತಿದ್ದಾರೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ಬೆಲ್ಲ 1 ಕ್ವಿಂಟಾಲಿಗೆ 200 ರೂಪಾಯಿಗಳಂತೆಯೂ ಸಕ್ಕರೆ 143 ರೂಪಾಯಿಗಳಂತೆಯೂ ಸಿಗುತ್ತಿದೆ. ಆದರೆ ಸಕ್ಕರೆಯನ್ನು ಆ ರೀತಿ ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ವಿಶೇಷವಾಗಿ ಮಾರದಿದ್ದರೂ ಬೆಲ್ಲ ಉಪಯೋಗಿಸುವುದಕ್ಕೆ ಬದಲು ಸಕ್ಕರೆಯನ್ನು ಅನೇಕರು ಬಳಸುತ್ತಾರೆ. ಆದ್ದರಿಂದ ಮಾನ್ಯ ಆಹಾರ ಮಂತ್ರಿಗಳು ಹೇಳಿದ ಮಾತು ಪೂರ್ತಿ ಸುಳ್ಳು ಎಂದು ನಾನು ಹೇಳುವುದಿಲ್ಲ. ಬಹಳ ಮೇಲ್ಮಟ್ಟದಲ್ಲಿ ಹೇಳಿದ್ದಾರೆ. There may be some cases, but generally I cannot agree. ಈ ದೃಷ್ಟಿಯಿಂದ ಕೆಲವರು ಇನ್ಸ್‌ಪೆಕ್ಟರ್ಸ್ ಸಹ ಉಂಟು ಎಂದು ಹೇಳುತ್ತಾರೆ. If that is the case, it is the mistake of the Government, because they have not checked the bogus cards which were distributed by the taluk office. It is not the mistake of the people, because the Taluk officer or any other officer, who is vested with the distribution of the cards, had to check up.

ಒಂದು ದೃಷ್ಟಿಯಿಂದ ಮಾನ್ಯ ಆಹಾರ ಮಂತ್ರಿಗಳು ನಮ್ಮಲ್ಲಿಗೆ ಬಂದಾಗ ಒಂದು ಮಾತನ್ನು ಹೇಳಿದೆ. ಗುಲ್ಬರ್ಗಾ ಜನಸಂಖ್ಯೆ ಸಾಮಾನ್ಯವಾಗಿ ಸುಮಾರು 1 ಲಕ್ಷ 20 ಸಾವಿರ ಇರಬೇಕು. ಅಂದ ಮೇಲೆ 1 ಲಕ್ಷ 75 ಸಾವಿರ ರೇಷನ್ ಕಾರ್ಡ್ಸ್ ಹೇಗೆ ನಮ್ಮಲ್ಲಿವೆ ಎಂದು ಕೇಳಿದ್ದೇನೆ. ಇದು ಹೇಗೆ ಬಂತು ಎಂಬುದನ್ನು ಕೂಡಲೆ ಚೆಕ್ ಮಾಡಬೇಕು. ಏಕೆಂದರೆ, ಕೆಲವರು ತಮ್ಮಲ್ಲಿರುವ ಹೆಚ್ಚು ಕಾರ್ಡುಗಳ ಮೂಲಕ ಆಹಾರ ಪದಾರ್ಥಗಳನ್ನು ಕೊಂಡು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರು ತ್ತಿದ್ದಾರೆ. ಅಂತಹವರಿಗೆ ನಿಜವಾಗಿ ಶಿಕ್ಷೆ ಮಾಡಬೇಕು. ಒಟ್ಟಿನಲ್ಲಿ ಈ ಅವ್ಯವಸ್ಥೆಯನ್ನು ತಪ್ಪಿಸ ಬೇಕು. ಸುಮ್ಮನೆ ನಾವು ನೀವು ಬಾಯಲ್ಲಿ ಹೇಳುವುದರಿಂದ ಈ ಪ್ರಶ್ನೆ ಬಗೆಹರಿಯುವುದಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ ಅನೇಕ ಜನರಿಗೆ ಆಹಾರ ಪದಾರ್ಥ ಗಳನ್ನು ಒದಗಿಸುತ್ತಿದ್ದರೂ ಅವು ಸರಿಯಾಗಿ ಮುಟ್ಟುತ್ತಾ ಇಲ್ಲ. ಅನೇಕ ಮಂದಿ ಈ ವಿಚಾರದಲ್ಲಿ ನನಗೆ ಮನವಿಗಳನ್ನು ಮಾಡುತ್ತಾ ಇದ್ದಾರೆ. ಇದರ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದು ಕೊಳ್ಳಬೇಕು ಕೆಲವು ಕಡೆಗಳಲ್ಲಿ ಇನ್‌ಸ್ಪೆಕ್ಟರುಗಳ ಮೇಲೆಯೂ ಆರೋಪಣೆ, ಅಪಾದನೆ ದೂರು ಗಳನ್ನು ಮಾಡಿದ್ದಾರೆ. ಕೋ-ಆಪರೇಟಿವ್ ಸೊಸೈಟಿಯವರು ಈ ವಿಚಾರದಲ್ಲಿ ಹೆಚ್ಚು ಪ್ರಯತ್ನ ಮಾಡಬೇಕು. ತಮ್ಮ ಮುಖಾಂತರ ಹಾಗೂ ಮಂತ್ರಿಗಳ ಮುಖಾಂತರ ಸಂಬಂಧಪಟ್ಟ ಇಲಾಖೆಗೆ ಕೇಳಿಕೊಳ್ಳುತ್ತೇನೆ. I appal through you to the department.

ಈ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಈ ಪಂಚಾಯಿತಿ ಬಗ್ಗೆ ಹೇಳುವುದಾದರೆ, ಅವುಗಳು ಅಭಿವೃದ್ಧಿಯಾಗುವುದಕ್ಕೆ ಸರಿಯಾದ ಧನಸಹಾಯ ಸಿಗುತ್ತಾ ಇಲ್ಲ. ಆ ದೃಷ್ಟಿಯಿಂದ ಒಂದೊಂದು ಗ್ರಾಮದಲ್ಲಿರತಕ್ಕಂತಹ ಸ್ಲಮ್ ಏರಿಯಾ ಸರಿಯಾಗಿ ಅಭಿವೃದ್ಧಿಯಾಗಿಲ್ಲ. ಆದರಿಂದ ಅದಕ್ಕಾಗಿ ಹೆಚ್ಚಿನ ಫಂಡನ್ನು ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ತಾಲ್ಲೂಕು ಬೋರ್ಡಿನ ಹೊಸ ಆಕ್ಟಿನ ಪ್ರಕಾರ ಈಗ 6—7 ವರ್ಷವಾದರೂ ಚುನಾವಣೆ ಆಗುತ್ತಾ ಇಲ್ಲ. ಅದನ್ನು ಕೂಡ ತೀವ್ರವಾಗಿ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಡಿ. ಕೊತಾವಲೆ.—ರೂರಲ್ ವಾಟರ್ ಸಪ್ಲೈಗೆ ಹೆಚ್ಚು ಕೊಡಬೇಕೆಂದು ಹೇಳುತ್ತೀರಿ. ಹೇಗೆ ಕೊಡುವುದು ?

ಶ್ರೀ ಎಸ್. ಶರಣಗೌಡ ಇನಾಮ್‌ದಾರ್.—ಲಾಂಡ್ ರೆವೆನ್ಯೂ ರದ್ದು ಮಾಡಬೇಕೆಂದು ನಾವು ಹೇಳಲಿಲ್ಲ. ಅದನ್ನು ನೀವು ಹೇಳಿದ್ದೀರಿ. ಆದಕ್ಕೆ ಆಲ್ಟರ್‌ನೇಟಿವ್ ನೀವು ಕಂಡುಹಿಡಿಯಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಅವರೊಡನೆ ಚರ್ಚೆಮಾಡಿದರೆ ಅವರದು 10 ನಿಮಿಷ ಹೋಗು ತ್ತದೆ. ಅವರ ಹತ್ತಿರ ಚರ್ಚೆ ಮಾಡಬಾರದು.

ಶ್ರೀ ಎಸ್. ಶರಣಗೌಡ ಇನಾಮ್‌ದಾರ್.—ಈ ದೃಷ್ಟಿಯಿಂದ ರೂರಲ್ ವಾಟರ್ ಸಪ್ಲೈ ಸ್ಕೀಮಿನ ಬಗ್ಗೆ ಅನೇಕ ಹಳ್ಳಿಗಳಿಗೆ ನೀರಿನ ಸೌಕರ್ಯವಿಲ್ಲ. ಆದ್ದರಿಂದ ಅದಕ್ಕೆ ಹೆಚ್ಚಿನ ಹಣ ಕೊಡ ಬೇಕು, ಮತ್ತು ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಏನೋ ಫಾರಿನ್

[MR. DEPUTY SPEAKER in the Chair]

ಏಯಿಡ್ ಬರುತ್ತದೆಂದು ಏನೋ ಹೇಳುತ್ತಿದ್ದಾರೆ. ಇವತ್ತಿನ ದಿವಸ ಇದರಲ್ಲಿ ಅಭಿವೃದ್ಧಿಯಾಗಿದ್ದು ಎಂದರೆ, ಮಂತ್ರಿಗಳ ಕ್ಷೇತ್ರದಲ್ಲಿಯೇ ಇದು ಕಾನ್‌ಸೆಂಟ್ರೇಟ್ ಆಗಿದೆ. ಇದು ಕೇವಲ ಮಂತ್ರಿಗಳ ಕ್ಷೇತ್ರವಲ್ಲದೆ, ಬೇರೆ ಯಾವ ಕ್ಷೇತ್ರಗಳಲ್ಲೂ ಆಗಿಲ್ಲವೆಂದೆನಿಸುತ್ತದೆ. ಅದು ಮುಖ್ಯವಲ್ಲ. ಎಲ್ಲಿ ಅಭಿವೃದ್ಧಿಯಾಗಿಲ್ಲವೊ ಎಲ್ಲಿ, ಯಾವ ಭಾಗದಲ್ಲಿ 14 ಇಂಚು ಮಳೆ, 20 ಇಂಚು ಮಳೆಯಾಗಿದೆ, ಎಲ್ಲಿ ಜನರು ಒಂದು ಮೈಲಿ, ಎರಡು ಮೈಲಿಯಿಂದ ನೀರು ತರಬೇಕಾಗಿದೆಯೋ, ಇಂಥ ಕಡೆಗಳಲ್ಲಿ ಹಣ ಒದಗಿಸಿ, ಅನುಕೂಲತೆಗಳನ್ನು ಕಲ್ಪಿಸಿದರೆ, ಎಲ್ಲ ಜನರಿಗೂ ಅನುಕೂಲವಾಗುತ್ತದೆ. ಮತ್ತು ಕೋಆಪರೇಟಿವ್ ಶಾಖೆಯವರು ವೀಕರ್ ಸೆಕ್ಷನ್ ಬಗ್ಗೆ ಹೌಸಿಂಗ್ ವಿಚಾರದಲ್ಲಿ ಅನೇಕ ಕಾರ್ಯ ಕ್ರಮಗಳನ್ನು ಇಟ್ಟುಕೊಂಡಿದ್ದಾರೆ. ನಮ್ಮ ಮೈಸೂರು ಸ್ಟೇಟಿನಲ್ಲಿ ಕಳೆದ 10 ವರ್ಷಗಳಿಂದ ಎಷ್ಟು ಹಣ ಖರ್ಚ ಮಾಡಿದ್ದಾರೆಂದು ನೋಡಿ, ಲೆಕ್ಕ ಹಾಕಿದರೆ, ಬೇರೆ ರಾಜ್ಯಗಳಲ್ಲಿ ಖರ್ಚ ಮಾಡಿರು ವುದರೊಡನೆ ಹೋಲಿಸಿದರೆ ಸೇಕಡ 20 ರಷ್ಟು ಕೂಡ ಮಾಡಿಲ್ಲವೆಂದು ಹೇಳಬೇಕಾಗಿದೆ. ಮೂರ ನೆಯ ಯೋಜನೆಯ ಕಾಲದಲ್ಲಿ ಅಲಾಟ್ ಮಾಡಿದಂತಹ ಹಣವನ್ನು ಮಹಾರಾಷ್ಟ್ರ, ಮದ್ರಾಸ್, ಗುಜ ರಾಥ್ ದವರೆಲ್ಲಾ 50 ಪರ್‌ಸೆಂಟಿಗೂ ಮೇಲಾಗಿ ಖರ್ಚು ಮಾಡಿಕೊಂಡಿದ್ದಾರೆ. ಇದು ನಿಮ್ಮ ಸರ್ಕಾರಿ

(ಶ್ರೀ ಎಸ್. ಶರಣಗೌಡ ಇನಾಮ್‌ದಾರ್)

ರಿಪೋರ್ಟಿನಲ್ಲಿದೆ. ಅಂದ ಬಳಿಕ 14 ಪ್ರಾಂತ್ಯಗಳಲ್ಲಿ ನಾಲ್ಕು ಪ್ರಾಂತ್ಯಗಳು ಮಾತ್ರ 50 ಪರ್ ಸೆಂಟಿಗಿಂತಲೂ ಹೆಚ್ಚಿನ ಹಣವನ್ನು ಉಪಯೋಗಮಾಡಿಕೊಂಡಿದ್ದಾರೆ ಎಂದರೆ, ಬೇರೆ ಪ್ರಾಂತ್ಯಗಳಲ್ಲಿ ಇಂಟ್ರೆಸ್ಟ್ ಇಲ್ಲವೆ, ಅಥವಾ ಸರ್ಕಾರ ಗಮನಕೊಟ್ಟಿಲ್ಲವೇ ಎಂದು ಗೊತ್ತಾಗುವುದಿಲ್ಲ. ಕೇವಲ ನಾಲ್ಕು ಪ್ರಾಂತ್ಯಗಳು ಕೇಂದ್ರದಲ್ಲಿ ಹೆಚ್ಚಿನ ಇನ್‌ಫ್ಲುಯೆನ್ಸ್ ಉಪಯೋಗ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಮಾಡಿಲ್ಲ. This is the weakness of the Government and they have not put forth their case properly before the Governmsnt of India. Only 4 States have used more than 50 per cent of the total allotment of the third plan. ಆ ದೃಷ್ಟಿಯಿಂದ ಒತ್ತಾಯ ಮಾಡಿ, ಇನ್‌ಫ್ಲುಯೆನ್ಸ್ ಮಾಡಿ ಇವರು ತೆಗೆದುಕೊಳ್ಳಬೇಕಾದ ಹಣ ತೆಗೆದುಕೊಂಡಿಲ್ಲ. We must get our due share so far as the co-operative movement is concerned. ಇವು ಕೇವಲ ನಾಲ್ಕು ರಾಜ್ಯಗಳಿಗೆ ಏಕೆ ಹೋಯಿತು ? ಉಳಿದ ಕಡೆ ಏಕೆ ಮಾಡಿಲ ಎನ್ನುವುದನ್ನು ಯೋಚನೆ ಮಾಡಬೇಕು. ಆದರ ಸಲುವಾಗಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಸಂಬಂಧಪಟ್ಟ ಮಂತ್ರಿಯವರು ಡೆಲ್ಲಿಯಲ್ಲಿ ಕಾನ್‌ಫರೆನ್ಸ್ ಕರೆದಾಗ ನಮ್ಮ ರಾಜ್ಯಕ್ಕೆ ಬರಬೇಕಾದ ಪಾಲು ಸಿಗುವಂತೆ ಪ್ರಯತ್ನ ಮಾಡಬೇಕು. ಈ ರೀತಿ ಮಾಡದಿದ್ದರೆ, ನಮ್ಮ ವೀಕರ್ ಸೆಕ್ಷನ್ ಬಗ್ಗೆ ಇರುವಂತಹ ಹೌಸಿಂಗ್ ಸೌಲಭ್ಯವಾಗಲಿ, ಕೊಆಪರೇಟಿವ್ ಸೊಸೈಟಿಗಳಾಗಲಿ, ಪೂರ್ತಿಯಾಗುತ್ತದೆ, ಇಲ್ಲದಿದ್ದರೆ, ಆಗುವುದಿಲ್ಲ.

ಇನ್ನು ಈ ಕೋಆಪರೇಟಿವ್ ಫಾರಂ ಬಗ್ಗೆ ಸರ್ಕಾರದವರು ಅನೇಕ ರೊಕ್ಕಗಳನ್ನು ಹಾಳುಮಾಡಿದ್ದಾರೆಂದು ನನಗನ್ನಿಸುತ್ತದೆ. ಕನಸನ್ನು ನನಸು ಮಾಡುವುದಕ್ಕೆ ಜನರಿಂದ ಬಂದಂತಹ ಹಣವನ್ನು ದುರುಪಯೋಗ ಮಾಡಬಾರದು. ಈಗಾಗಲೇ ಪ್ರೊಹಿಬಿಷನ್‌ನಲ್ಲಿ ಎಷ್ಟೋ ಹಣವನು ಹಾಳು ಮಾಡಿಕೊಂಡಿದ್ದಾರೆ. ಈಗ ಬರತಕ್ಕ ಹಣ ಸಾಲದು ಎಂದೂ, ಎಲ್ಲರೂ ವಿಫಲ ಆಗಿದೆ ಎಂದೂ ಪ್ರೊಹಿಬಿಷನ್ನ ಸ್ಕ್ರೇಪ್ ಮಾಡುದವುಕ್ಕೆ ತೊರಟಿದ್ದಾರೆ. ಸ್ವಾತಂತ್ರ್ಯ ಬಂದ ನಂತರ ಹರಿಜನರಿಗೆ ಭೂಮಿಯನ್ನು ಕೊಡುವುದಕ್ಕೆ ಅಪ್ಪಣೆ ಮಾಡಿದರು. ಆದರೆ ಅದನ್ನು ಊರೊಳಗೆ ಇದ್ದವರೆಲ್ಲಾ ಹೊಡೆದುಕೊಂಡಿದ್ದಾರೆ. ಅಂಥವರನ್ನು ಎವಿಕ್ಟ್ ಮಾಡುವುದಕ್ಕೆ ಇವರ ಕೈಯಿಂದ ಆಗಿಲ್ಲ. ನೀವು ಲ್ಯಾಂಡ್ ರಿಫಾರ್ಮ್ಸ್ ಪ್ರಕಾರ ಆಕ್ವಾಯರ್ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಸರ್ಕಾರಿ ಭೂಮಿ ಇದ್ದರೆ ಕೋ-ಆಪರೇಟಿವ್ ಫಾರ್ಮ್ಸ್ ಮಾಡುವುದಕ್ಕೆ ಆಗುತ್ತದೆ, ಮತ್ತು ಅದು ಯಶಸ್ವಿ ಆಗುತ್ತದೆಂದು ಹೇಳುತ್ತೇನೆ. ಆದರೆ ನಿಮ್ಮಲ್ಲಿ ಭೂಮಿ ಇಲ್ಲ. ಹರಿಜನರಿಗೆ ಕೊಡಕೇಕೆಂದಿದ್ದ ಭೂಮಿ ಅದು ನಮ್ಮಂಥವರ ಕೈಯಲ್ಲಿದೆ. ಇದರಿಂದ ಕೋಆಪರೇಟಿವ್ ಫಾರ್ಮ್ಸ್ ಮಾಡುವುದಕ್ಕೆ ಏನು ಮಾಡುತ್ತೀರಿ ? ಅದರ ಬದಲು ಎಲ್ಲೆಲ್ಲಿ ಅವಕಾಶವಿದೆ, ಅಲ್ಲಿ ಲ್ಯಾಂಡ್‌ಲೆಸ್ ಜನರಿಗೆ 10 ಎಕರೆಗಿಂತ ಹೆಚ್ಚು ಕೊಡಬಾರದು ಎಂಬ ಒಂದು ಲಿಮಿಟ್ ಇಟ್ಟುಕೊಂಡರೆ, ಕೋಆಪರೇಟಿವ್ ಸರ್ವಿಸಸ್ ಮೂಲಕ ಅವರಿಗೆ ಏನೇನು ಕೊಡಬೇಕು, ಅದನ್ನು ಯೋಗ್ಯ ರೀತಿಯಿಂದ ಕೊಟ್ಟು ಉತ್ಪತ್ತಿ ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಸಭಾಪತಿಯವರೇ, ನಮ್ಮ ಮುಂದಿಟ್ಟಿರುವ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಸಹಕಾರ ಇಲಾಖೆ ಮತ್ತು ಸಾಮುದಾಯಿಕ ಅಭಿವೃದ್ಧಿ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಆಡಬಯಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ರೈತರ ಉದ್ಧಾರವಾಗಬೇಕಾದರೆ, ರಾಜ್ಯದ ಕಲ್ಯಾಣವಾಗಬೇಕಾದರೆ, ಅದು ಸಹಕಾರ ಸಂಘಗಳ ಮೂಲಕ ಮಾತ್ರ ಸಾಧ್ಯ. ಯಾವುದಾದರೂ ಕಾರಣದಿಂದ ಸಹಕಾರ ಸಂಸ್ಥೆಗಳು ನಿರ್ಮಾಣ ಆಗುವುದಾಗಿದ್ದರೆ ಜೀವನದ ಭವಿಷ್ಯದಲ್ಲಿ ಜನತೆಯ ಉದ್ಧಾರ ಕಾಣಿಸುವಂತೆ ಆದೀತು. ಇದನ್ನು ನಾವು ಗಮನದಲ್ಲಿಟ್ಟು ಸಹಕಾರೀ ಸಂಸ್ಥೆಗಳನ್ನು ಕೊಡುವ ಬಗ್ಗೆ ಪ್ರಯತ್ನ ಮಾಡಬೇಕಾಗಿದೆ.

ವೋಟ್ ಆನ್ ಅಕೌಂಟ್ ಆಗುವ ಸಂದರ್ಭದಲ್ಲಿ ಈ ಸಹಕಾರೀ ಸಂಸ್ಥೆಗಳಲ್ಲಿ ಅಧಿಕಾರಿ ವರ್ಗದವರು ಜಾಸ್ತಿ ಆಗಿದ್ದಾರೆ, ಆದುದರಿಂದ ಆಡಳಿತ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಅಪಾದನೆ ಇತ್ತು. ಈ ಸಂದರ್ಭದಲ್ಲಿ ಸಭೆಯ ಮುಂದೆ ಕೆಲವು ಅಂಕಿ ಅಂಶಗಳನ್ನು ಇಡಬಯಸುತ್ತೇನೆ. ಎರಡನೇ ಪಂಚವಾರ್ಷಿಕ ಯೋಜನೆಯ ತುದಿಯಲ್ಲಿ ಈ ಅಗ್ರಿಕಲ್ಚರ್ ಆಪರೇಷನ್‌ಗೋಸ್ಕರ ಎಷ್ಟು ಸಾಲ ಕೊಟ್ಟಿತ್ತು ಎಂದರೆ 69.47 ಲಕ್ಷ ರೂಪಾಯಿ ಮಾತ್ರ. ಮೂರನೇ ಪಂಚವಾರ್ಷಿಕ ಯೋಜನೆಯ ತುದಿಯಲ್ಲಿ ಅಗ್ರಿಕಲ್ಚರ್ ಆಪರೇಷನ್‌ಗೋಸ್ಕರ ಎಷ್ಟು ಸಾಲ ಕೊಟ್ಟಿತ್ತು ಎಂದರೆ 18.39

ಕೋಟಿ ರೂಪಾಯಿ ಸಾಲ ಕೊಟ್ಟಿತ್ತು. ಸೊಸೈಟಿಯ ಅಂಕಿ ಅಂಶ ನೋಡಿದರೆ ಎರಡನೇ ಪಂಚ ವಾರ್ಷಿಕ ಯೋಜನೆಯ ತುದಿಯಲ್ಲಿ 3,693 ಅಗ್ರಿಕಲ್ಚರ್ ಕ್ರೆಡಿಟ್ ಸೊಸೈಟಿಗಳಿದ್ದವು. 3ನೇ ಪಂಚ ವಾರ್ಷಿಕ ಯೋಜನೆಯ ತುದಿಯಲ್ಲಿ 8,934 ಸೊಸೈಟಿಗಳು ಇದ್ದವು; ಎಂದರೆ ಲೋನ್ ಆಪರೇಷನ್ 20ರಷ್ಟು ಜಾಸ್ತಿ ಆಗಿದೆ, ಸಂಘ ಸಂಸ್ಥೆಗಳು 2 ಪಟ್ಟು ಜಾಸ್ತಿ ಆಗಿದೆ. ದೀರ್ಘಾವಧಿ ಸಾಲದ ಬಗ್ಗೆ ಹೇಳುವುದಾದರೆ, 3 ಕೋಟಿ 50 ಲಕ್ಷ ರೂಪಾಯಿ ಖರ್ಚು ಮಾಡಿದ್ದುದು, ಈಗ 10 ಕೋಟಿ 59 ಲಕ್ಷ ರೂಪಾಯಿ ಸರ್ಕಾರ ಖರ್ಚು ಮಾಡಿದೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಧ್ಯಮ ಮತ್ತು ಅಲ್ಪಾವಧಿ ಸಾಲ 50 ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆ ಸರ್ಕಾರದ ಮುಂದೆ ಇದೆ. ದೀರ್ಘಾವಧಿ ಸಾಲದ ಬಗ್ಗೆ ಸುಮಾರು 37 ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆ ಇದೆ. ಇದಲ್ಲದೆ ಕೆಲವು ಸ್ಪೆಷಲ್ ಸ್ಕೀಮ್ಸ್ ಕೂಡ ಸರ್ಕಾರದ ಮುಂದೆ ಇದೆ. ಭದ್ರಾ ಡೆವಲಪ್ ಮೆಂಟ್ ಸ್ಕೀಮ್ ಮತ್ತು ತುಂಗಭದ್ರಾ ಡೆವಲಪ್‌ಮೆಂಟ್ ಸ್ಕೀಮ್ ಅರೆಕಾ ಡೆವಲಪ್‌ಮೆಂಟ್ ಸ್ಕೀಮ್, ಹೀಗೆಯೇ 77 ಸ್ಕೀಮುಗಳು ಸರ್ಕಾರದ ಮುಂದೆ ಇದೆ. ಅಗ್ರಿಕಲ್‌ಚರ್ ಫೈನಾನ್ಸ್ ಕಾರ್ಪೊರೇಷನ್ನಿನವರು ದಕ್ಷಿಣ ಕನ್ನಡ ಜಿಲ್ಲೆಗೆ 89-35 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ; ಉತ್ತರ ಕನ್ನಡ ಜಿಲ್ಲೆಗೆ 50 ಲಕ್ಷ ರೂಪಾಯಿ ಯೋಜನೆ ಇದೆ. ಇಂತಹ ಯೋಜನೆಗಳು ಈಪೊತ್ತ, ಕಾರ್ಯಗತ ಆಗಬೇಕಾದರೆ ನಮಗೆ ಅಧಿಕಾರೀ ವರ್ಗದವರು ಬೇಕೇ ಬೇಕು. ಇಷ್ಟೊಂದು ಹಣ ಪೋಲಾಗದೆ ಜನತೆಯ ಕಲ್ಯಾಣ ಆಗಬೇಕಾಗಿದೆ. ಅದಕ್ಕೆ ಹೆಚ್ಚು ಹೆಚ್ಚು ಅಧಿಕಾರಿಗಳು ಬೇಕೇ ಬೇಕು. ನಮ್ಮ ಜಿಲ್ಲೆಯಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್ ತಾಲ್ಲೂಕು ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದಾರೆ. ಅವರು ಸಾಲದೆ ಇರುವ ಸಂದರ್ಭ ಬರಬಹುದು. ಆದುದರಿಂದ ಇಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರನ್ನು ಒಂದು ತಾಲ್ಲೂಕಿಗೆ ಇಡುವ ಸಂದರ್ಭ ಬರಬಹುದು ಎಂದು ಕಾಣುತ್ತದೆ. ಸರ್ಕಾರದವರು ಅಧಿ ಕಾರಿಗಳ ಮೇಲೆ ಖರ್ಚು ಮಾಡಿರತಕ್ಕ ಹಣ ಸಾಲದು ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇದೇ ಮಹಾಸಭೆಯಲ್ಲಿ ಇನ್ನೊಂದು ಕಟುವಾದ ಟೀಕೆ ಬಂತು. ಆ ಬಗ್ಗೆ ಕೆಲವು ಮಾತು ಗಳನ್ನು ಆಡಬಯಸುತ್ತೇನೆ. ಸರ್ಕಾರದವರು ಸಣ್ಣ ಸಂಸ್ಥೆಗಳಲ್ಲಿ ಕೈವಾಡ ಮಾಡುತ್ತಾರೆ, ಹಸ್ತ ಕ್ಷೇಪ ಮಾಡುತ್ತಾರೆ ಎಂಬ ಆಕ್ಷೇಪಣೆ ಬಂದಿದೆ. ಈ ಸಂದರ್ಭದಲ್ಲಿ ಒಂದೆರಡು ಉದಾಹರಣೆ ಕೊಡುತ್ತೇನೆ. 3—4 ವರ್ಷದ ಹಿಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಈ ಬ್ಯಾಂಕುಗಳ ಅಧ್ಯಕ್ಷರನ್ನು ನೇಮಕ ಮಾಡುವ ಹಕ್ಕು ಸರ್ಕಾರಕ್ಕೆ ಇತ್ತು. ಸರ್ಕಾರ ಪ್ರಜಾ ಪ್ರಭುತ್ವ ತಳಹದಿ ಮೇಲೆ ಆ ಹಕ್ಕನ್ನು ಬಿಟ್ಟುಕೊಟ್ಟಿದೆ. ಈಗ ಈ ಎರಡು ಬ್ಯಾಂಕ್‌ಗಳಲ್ಲೂ ಜನತೆ ಯಿಂದ ಚುನಾಯಿತರಾಗಿ ಬಂದಿರತಕ್ಕ ವ್ಯಕ್ತಿಗಳು ಇದ್ದಾರೆ. ಇನ್ನೊಂದು ವಿಷಯ. ಜಿಲ್ಲಾ ಕೇಂದ್ರದ ಸಹಕಾರ ಸಂಘದ ಬೈಲಾ ಪ್ರಕಾರ 3 ಜನ ಡೈರೆಕ್ಟರುಗಳನ್ನು ನೇಮಕ ಮಾಡುವ ಅವಕಾಶ ಸರ್ಕಾರಕ್ಕೆ ಇತ್ತು. ಸರ್ಕಾರದವರು ಒತ್ತಾಯ ಮಾಡಿಬಿಟ್ಟು ಬೈಲಾ ಬದಲಾವಣೆ ಮಾಡಬೇಕೆಂದು, ಸರ್ಕಾರದ ಕೈವಾಡ ಇರಕೂಡದು, ಜನತೆಯ ಪ್ರತಿನಿಧಿಗಳು ಜಿಲ್ಲಾ ಕೇಂದ್ರ ಸಹಕಾರ ಸಂಘಗಳಲ್ಲಿ ಇರಬೇಕು ಎಂಬ ಉದ್ದೇಶದಿಂದ ಕೇವಲ ಸರ್ಕಾರದಿಂದ ನೇಮಿತವಾದ ಒಬ್ಬ ನಾಮಿನಿ ಇರಬಹುದು, ಒಬ್ಬ ಡೈರೆಕ್ಟರ್ ಇರಬಹುದು ಎಂದು ಆದೇಶ ಕೊಟ್ಟು ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಸಂಘಗಳಲ್ಲೂ ಬದಲಾವಣೆ ಮಾಡಿ ಈಗ ನಾಮಿನಿ ಮಾತ್ರ ಅಲ್ಲಿ ಇದ್ದಾರೆ. ಯಾವ ಜಿಲ್ಲೆಯ ಸಂಘದಲ್ಲೂ ಸರ್ಕಾರದ ಕೈವಾಡ ಇರಕೂಡದು, ಈಗ ಸಹಕಾರ ಸಂಘದಲ್ಲಿ ಇಲ್ಲ ಎಂದು ಹೇಳಬಯಸುತ್ತೇನೆ. ಈಗ ಸಾಕಾದಷ್ಟು ಟೀಕೆ ಟಿಪ್ಪಣಿಗಳು ಬರುತ್ತಿದೆ. ಇವೊತ್ತಿನ ದಿವಸ ಕಳ್ಳ ವ್ಯಾಪಾರ ನಡೆಯುತ್ತಿದೆ, ಯೂರಿಯಾವನ್ನು ಕಳ್ಳಭಟ್ಟಿ ಸಾರಾಯಿ ಮಾಡುವುದಕ್ಕೆ ಉಪ ಯೋಗಿಸುತ್ತಿದ್ದಾರೆ, ಆಂಧ್ರ ಪ್ರದೇಶಕ್ಕೆ ಲಾರಿಗಟ್ಟಲೆ ಹೋಗುತ್ತಿದೆ, ಸಕ್ಕರೆಯೂ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ ಎಂದು ಟೀಕೆ ಟಿಪ್ಪಣಿಗಳು ಬಂದಿವೆ. ಅದನ್ನು ಒಪ್ಪುತ್ತೇನೆ. ಇದಕ್ಕೆ ಯಾರು ಹೊಣೆ? ಸರ್ಕಾರ ಹೊಣೆಯೇ? ಪ್ರತಿಯೊಂದು ಗ್ರಾಮದಲ್ಲೂ, ಜಿಲ್ಲಾ ಮಟ್ಟದಲ್ಲೂ, ಪ್ರತಿಯೊಂದು ತಾಲ್ಲೂಕಿನಲ್ಲೂ ಸಹಕಾರ ಸಂಘಗಳು ಇವೆ. ಸಂಘ ಸಂಸ್ಥೆಗಳಲ್ಲಿ ಚುನಾಯಿತರಾದ ಸದಸ್ಯರುಗಳು ಇದ್ದಾರೆ. ಅವರು ಬ್ಲ್ಯಾಕ್ ಮಾರ್ಕೆಟ್ ಆಗದ ರೀತಿಯಲ್ಲಿ ಪ್ರಯತ್ನ ಮಾಡಬೇಕು; ಅಂದ ಮಾತ್ರಕ್ಕೇ ಸರ್ಕಾರ ಹೊಣೆ ಅಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಸರ್ಕಾರದವರು ಓವರ್ ಆಲ್ ಸೂಪರ್‌ವಿಷನ್ ಮಾಡಬೇಕಾಗಿದೆ. ಈ ಒಂದು ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆ ಕೊಡಬಯಸುತ್ತೇನೆ. ಅನೇಕ ಸಂದರ್ಭದಲ್ಲಿ ಸಹಕಾರ ಸಂಘಗಳಲ್ಲಿ ದುರುಪಯೋಗ ಆದಾಗ ಪೋಲೀಸ್ ಇಲಾಖೆಯ ಅಧಿಕಾರಿಗಳ ಸಹಕಾರ ಅಲ್ಲಿ ಹೆಚ್ಚಿನ ರೀತಿಯಲ್ಲಿ ಬೇಕಾಗುತ್ತದೆ. ಅನೇಕ ಕೇಸುಗಳು ಪೋಲೀಸ್ ಇಲಾಖೆಗೆ ರೆಫರ್ ಆಗಿವೆ. 2—3 ವರ್ಷದಿಂದ ಛಾರ್ಜ್ ಷೀಟ್ ಹಾಕಿಲ್ಲ. ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಇದಕ್ಕೆ ತೀವ್ರ ಕ್ರಮ ತೆಗೆದುಕೊಳ್ಳಬೇಕು.

[Mr. CHAIRMAN (Dr. R. NAGAN GOUDA) in the Chair]

Sri M. MALLIKARJUNA SWAMY (Malavalli).—That is because of the non-official interference.

ಶ್ರೀ ಐ. ಸೋಮಶೇಖರಪ್ಪ.—ರಾಜ್ಯದ ಮಟ್ಟದಲ್ಲಿ ಕೋಆರ್ಡಿನೇಷನ್ ಕಮಿಟಿ ಇದೆ, ಎಂದು ಗೊತ್ತಿದೆ. ಈ ಒಂದು ಕಮಿಟಿಯಲ್ಲಿ ರಾಜ್ಯದ ರಿಜಿಸ್ಟ್ರಾರ್ ಇದ್ದಾರೆ, ಐ.ಜಿ.ಪಿ. ಇದ್ದಾರೆ. ಇದೇ ರೀತಿ ಜಿಲ್ಲಾ ಮಟ್ಟದಲ್ಲಿ ಕೋಆರ್ಡಿನೇಷನ್ ಕಮಿಟಿಯನ್ನು ಸರ್ಕಾರದವರು ನೇಮಕ ಮಾಡಬೇಕು. ಕೋಆರ್ಡಿನೇಷನ್ ಕಮಿಟಿಯಲ್ಲಿ ಜಿಲ್ಲೆಯಲ್ಲಿ ಇರತಕ್ಕ ಡಿ.ಎಸ್.ಪಿ., ಇಲಾಖೆಯ ಡೆಪ್ಯೂಟಿ ರಿಜಿಸ್ಟ್ರಾರ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರತಿನಿಧಿಗಳು ಕಾರ್ಯದರ್ಶಿ ಆಗಿ ಇರಬೇಕು. ಜಿಲ್ಲೆಯಲ್ಲಿ ಯಾವ ಸಂಘಸಂಸ್ಥೆಯಲ್ಲಿ ದುರುಪಯೋಗ ನಡೆಯುತ್ತಾ ಇದೆಯೋ ಅಂಥ ಸಂಘಸಂಸ್ಥೆಯ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಕಾರ್ಯಕ್ರಮದ ಬಗ್ಗೆ ಅನುಕೂಲವಾಗುವ ರಾಜ್ಯದಲ್ಲಿ ಡಿಸ್ಟ್ರಿಕ್ ಕೋಆರ್ಡಿನೇಷನ್ ಕಮಿಟಿ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಬಗ್ಗೆ ಮಾತನಾಡಬೇಕು ಎಂದು ಇಚ್ಛೆಪಡುತ್ತೇನೆ. ಕೆಲವು ಸಂದರ್ಭಗಳಲ್ಲಿ ಕೇವಲ 200, 300 ರೂಪಾಯಿಗಳ ಷೇರ್ ಕ್ಯಾಪಿಟಲ್ ಇರುವ ಸಹಕಾರ ಸಂಘಗಳು ಇವೆ. ಇದು ನಿಜವಾಗಿ ಹೋಗಬೇಕು. ಮಧ್ಯ ಪ್ರದೇಶ, ಉತ್ತರ ಪ್ರದೇಶದಲ್ಲಿ ಸಹಕಾರ ಸಂಘಗಳು ಯಾವರೀತಿ ನಡೆಯುತ್ತವೆ ಎಂದು ನನಗೆ ನೋಡುವ ಸಂದರ್ಭ ಬಂತು. ಉತ್ತರ ಪ್ರದೇಶದಲ್ಲಿ ಸಹಕಾರ ಸಂಘಗಳು ಒಂದು ವಯಬಲ್ ಯೂನಿಟ್ ಆಗಿ ಇರಬೇಕು, ಅವು ತನ್ನ ಕಾಲ ಮೇಲೆ ನಿಂತುಕೊಳ್ಳುವ ಅವಕಾಶ ಇರತಕ್ಕ ಸಹಕಾರ ಸಂಘಗಳಾಗಿರಬೇಕು, ಅದಕ್ಕಾಗಿ 5000 ರೂಪಾಯಿ ಷೇರ್ ಬಂಡವಾಳ ಇರಬೇಕು, ಅವು ರಿಜಿಸ್ಟರ್ ಆಗುವುದಕ್ಕೆ ಮುಂಚೆ ಸೊಸೈಟಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಸುಮಾರು 100ಕ್ಕೆ 75 ಜನ ರೈತರು ಇರಬೇಕು, ಎಂದು ನಿಗದಿ ಮಾಡಿದ್ದಾರೆ. ನನ್ನ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಒಂದು ಸೊಸೈಟಿ ಇದೆ. ಅಲ್ಲಿ ಇರತಕ್ಕ ಕೆಲವು ತಪ್ಪುಗಳನ್ನು ತರಬಯಸುತ್ತೇನೆ. ಸಂಘದ ಅಧ್ಯಕ್ಷರು ತಂದೆ, ಸೆಕ್ರೆಟರಿ ಮಗ, ಸದಸ್ಯರು ಇವೊತ್ತು ಅಣ್ಣನ ಮಗ, ತಮ್ಮನ ಮಗ ಹೀಗಾಗಿಬಿಟ್ಟು ಒಂದೇ ಒಂದು ಸಂಸಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಆಗುತ್ತದೆ. ಒಂದು ಸೊಸೈಟಿ ರಿಜಿಸ್ಟರ್ ಆಗಬೇಕಾದರೆ ಕನಿಷ್ಠ ಪಕ್ಷ 5 ಸಾವಿರ ರೂಪಾಯಿ ಬಂಡವಾಳ ಆಗಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ ಪಕ್ಷ ವ್ಯವಸಾಯಗಾರರು 100ರಲ್ಲಿ 75 ಜನ ಇರಬೇಕು. ಅಂತಹ ಸೊಸೈಟಿಗಳನ್ನು ರಿಜಿಸ್ಟರ್ ಮಾಡಬೇಕಾಗಿದೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬಗ್ಗೆ ಮಾತನಾಡಬೇಕಾದರೆ ನಮ್ಮ ಪಿರಿಯಾಪಟ್ಟಣದ ಸದಸ್ಯರು ಚೆನ್ನಾಗಿ ಮಾತನಾಡುತ್ತಾ ಇದ್ದರು ಎಂದು ಕಾಣುತ್ತದೆ. ಅವರಿಗೆ ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬಗ್ಗೆ ಅನುಭವ ಇದೆ. ಅವರು ಮಾತನಾಡಿದರೆ ಚೆನ್ನಾಗಿತ್ತು ಎಂದು ಕಾಣುತ್ತದೆ.

ಇನ್ನು ಆಡಿಟ್ ಬಗ್ಗೆ ಹೇಳುವುದಾದರೆ, ಕೆಲವು ಸೊಸೈಟಿಗಳ ಆಡಿಟ್ಟು ಮೂರು ನಾಲ್ಕು ವರ್ಷಗಳಾದರೂ ಆಗಿಲ್ಲ ಇದರಿಂದ ಬಹಳ ತೊಂದರೆಯಾಗಿದೆ. ಸೊಸೈಟಿಯ ಜನರಲ್ ಬಾಡಿ ಮೀಟಿಂಗ್ ಕೂಡ ಆಗುತ್ತಾ ಇಲ್ಲ. ಜೂನ್ ತಿಂಗಳ ನಂತರ ಮೂರು ತಿಂಗಳುಗಳಲ್ಲಿ ಆಡಿಟ್ ಆಗುವ ಏರ್ಪಾಡು ಮಾಡಬೇಕು ಎಂದು ಸಲಹೆ ಕೊಡುತ್ತೇನೆ. ಇದಲ್ಲದೆ ಆಡಿಟ್ ಡಿಪಾರ್ಟಮೆಂಟು ಫೈನಾನ್ಸ್ ಡಿಪಾರ್ಟಮೆಂಟಿನ ಆಡಳಿತದಲ್ಲಿ ಇರಬೇಕು ಎಂದು ಸಹ ಸಲಹೆ ಕೊಡುತ್ತೇನೆ. ಯಾಕೆಂದರೆ ಕೋಆಪರೇಟಿವ್ ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಕೆಲವು ಸಲ ಸ್ಪೆಷಲ್ ಆಡಿಟರ್ ಆಗಬಹುದು ಇಲ್ಲವೆ ಕೋಆಪರೇಟೀವ್ ಡಿಪಾರ್ಟಮೆಂಟಿನ ಅಡ್ಮಿನಿಸ್ಟ್ರೇಟಿವ್ ಆಫೀಸರ್‌ಗಳನ್ನು ಆಡಿಟ್ ಸೆಕ್ಷನ್ನಿಗೆ ಹಾಕಬಹುದು. ಅಲ್ಲಿ ಅವರ ಸ್ನೇಹಿತರು ಇರಬಹುದಾದ್ದರಿಂದ ಅವರು ಮುಲಾಜಿಗೆ ಬಿದ್ದು ಆಡಳಿತ ಸುಗಮವಾಗಿ ಆಗುತ್ತಾ ಇರಲಾರದು. ಆದುದರಿಂದ ಆಡಿಟ್ ಇಲಾಖೆಯು ಫೈನಾನ್ಸ್ ಇಲಾಖೆಯ ಆಡಳಿತದಲ್ಲಿ ಇರುವ ಹಾಗೆ ಆ ರೀತಿ ಮಾಡಬೇಕು ಅಂದರೆ ಅನುಕೂಲವಾಗುತ್ತದೆ

10-30 A.M.

ಕೊನೆಯದಾಗಿ ಒಂದು ಹೇಳುತ್ತೇನೆ. ಇವತ್ತಿನ ದಿವಸ ರೈತರಿಗೆ ದೊರೆಯುವ ಅಲ್ಪಾವಧಿ ಸಾಲದ ಮೇಲೆ 10—11 ಪರ್ಸೆಂಟ್ ಬಡ್ಡಿಯಾಗುತ್ತದೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ರಿಜರ್ವ್ ಬ್ಯಾಂಕಿನವರು ಐದೂವರೆ ಪರ್ಸೆಂಟ್ ಬಡ್ಡಿ ದರದಿಂದ ಸಾಲ ಕೊಡುತ್ತಾರೆ. ರೈತರಿಗೆ

ಬಹಳ ಅನ್ಯಾಯವಾಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ರಿಜರ್ವ್ ಬ್ಯಾಂಕ್ ಮತ್ತು ಕೇಂದ್ರ ಮಂತ್ರಿಮಂಡಳದೊಡನೆ ವಿಚಾರ ವಿನಿಮಯ ಮಾಡಿ ರೈತರಿಗೆ ಐದಾರು ಪರ್ಸೆಂಟ್ ಬಡ್ಡಿಗಿಂತ ಹೆಚ್ಚಾಗಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕಮ್ಯುನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಬಗ್ಗೆ ಮಾತನಾಡುವುದಾದರೆ ನಾನೂ ಒಬ್ಬ ತಾಲ್ಲೂಕ ಬೋರ್ಡಿನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಾಗೂ ಸತತವಾಗಿ ಐದು ತಾಲ್ಲೂಕ ಬೋರ್ಡುಗಳ ಸದಸ್ಯನಾಗಿದ್ದೇನೆ. ಕಮ್ಯುನಿಟಿ ಡೆವಲಪ್‌ಮೆಂಟಿಗಾಗಿ 47,000 ರೂಪಾಯಿ ಖರ್ಚು ಮಾಡುತ್ತಾರೆ. ಕೇವಲ ಒಂದು ಲಕ್ಷ ರೂಪಾಯಿ ಬಡ್ಜೆಟ್ಟು ಇರತಕ್ಕಂಥ ತಾಲ್ಲೂಕ ಬೋರ್ಡಿಗೆ 47,000 ರೂಪಾಯಿ ಖರ್ಚಾಗುವ ಅಧಿಕಾರಿ ವರ್ಗ ಬೇಕೇ? ಇದರ ಅವಶ್ಯಕತೆಯಿಲ್ಲ. ತಹಶೀಲದಾರರನ್ನು ಡೆವಲಪ್‌ಮೆಂಟ್ ಆಫೀಸರ್ ಆಗಿ ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಹಿಂದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ್ಗೆ ಒಂದು ಕಡೆ ಹೇಳಿದ್ದಾರೆ. ಆ ರಿಪೋರ್ಟ ನಾನು ನೋಡಿದ್ದೇನೆ. ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಪೋಸ್ಟ್‌ಸ್ಟೇಜ್ ಟು ಬ್ಲಾಕ್ ಬಗ್ಗೆ ಹೇಳುವುದಾದರೆ, "The staff in the post-stage II Blocks will have to be continued in order to maintain the tempo of the Block." ಟೆಂಪೋ ಎಷ್ಟು ಕಾಲ ಇಡುತ್ತೀರಿ? ಒಂದು ವರ್ಷ ಎರಡು ವರ್ಷ ಇಡಬಹುದು. Would you like to continue till doom's day? There should be a limit so long as staff pattern is concerned. ಒಂದು ವರ್ಷ ಎರಡು ವರ್ಷ ಇಡಬೇಕು ಎಂದು ಒಂದು ನಿರ್ದಿಷ್ಟ ಪಾಲಿಸಿ ಸರಕಾರ ಹಾಕಿಕೊಳ್ಳಬೇಕು. ಇರತಕ್ಕಂಥ 79 ಬ್ಲಾಕುಗಳಲ್ಲಿ 40 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಇದು ವ್ಯರ್ಥ ಆಗುತ್ತಿದೆ ಎಂದು ನನ್ನ ಅಭಿಪ್ರಾಯ. ಒಂದೆರಡು ಅಧಿಕಾರಿಗಳನ್ನು ಅಲ್ಲಿ ಇಟ್ಟು ಬಿಟ್ಟು ತಹಶೀಲದಾರರನ್ನು ಡೆವಲಪ್‌ಮೆಂಟ್ ಆಫಿಸರ್ ಆಗಿ ಮಾಡಬೇಕು ಎಂದು ಹೇಳುತ್ತೇನೆ. ಹಣ ಖರ್ಚುಮಾಡುವುದನ್ನು ಕಡಿಮೆ ಮಾಡಬೇಕು ಎಂದು ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

Sri P. F. D'MELLOW (Nominated).—Mr. Chairman Sir, while supporting the Demands before the House, I speak particularly on Demand No. 39, major Head 71, Miscellaneous.

Sir, when we examine the Budget provision on account of establishments on the machinery for the care and rehabilitation of ex-Servicemen, I fear that we have done very little to prove ourselves serious. Sir, in most of the countries, in the world, today, it has come to be recognised that ex-servicemen represents a force for good and orderly development of the country, and that it plays an important role in maintaining civilian morale during periods of national emergency. But Sir, I feel that we in this State have not yet realised this so far.

Sir, when we look at the Budget provision on account of machinery, I mention for instance the State Level Solders' and Sailors' and Airmen's Board, when we realise that not so long ago this Board constituted by the Government made recommendation that its work suffers because it has not yet been allowed a whole-time Secretary, and then when we examine the budget provision to find that a sum of Rs. 4,200 has been earmarked for the payment of the officer a sum of Rs. 8,000 has been earmarked as representing the cost of establishment, I feel with due respect, that the recommendations of this Board have not been treated very seriously by the Government and I would request that this be corrected.

Sir, when we look at the allocation made on account of the special fund which has been created for the reconstruction and rehabilitation of the ex-servicemen in the State, we find that about Rs. 1,94,000 has

(SRI P. F. D'MELLOW)

been provided. Those of us who have some conception of what this fund is supposed to finance feel that here again there is another instance of the Government showing very little seriousness in attending to a very important work of rehabilitation of ex-servicemen. Sir, as I have explained previously, the official machinery such as the Soldiers' Sailors' and Airmen's State Level Board, District Level Board, has not yet been successful in enthusing the ex-servicemen to come forward to receive help as they should and this is largely because, possibly being starved for necessary finances, these boards have not yet been set up in the manner they ought to be set up for the work they are required to undertake. In consequence of the delay, we find that a whole mass—I would call 'plague' of ex-servicemen's Associations have sprung up in the State of Mysore and particularly in Bangalore organised and conducted by people who have not got the slightest interest or have no means of really delivering the goods but who exploit the needs of ex-servicemen. It should not be necessary for me to tell the Government as to how official machinery should be re-organised to meet the requirements if they are to bring about sufficient awareness in the ex-servicemen. And I ask the Government to be pleased to take a second look at many of these bogus ex-service associations that are now flourishing in the State of Mysore to the detriment of ex-servicemen and be pleased again to look to the official machinery and see how it can be made more meaningful.

Sir, I now turn to Grants-in-Aid to institutions and organisations. When we look at that, particularly the List that has been appended to the publication, I believe that there is real reason. Here I congratulate the Government on its outlook in spreading its grants as widely as possible. I consider it very correct on the part of the Government to provide more Grants-in-Aid for Societies which promote kindness to animals. But I ask in all seriousness: Does it really mean the small sums that have been allotted can possibly produce any results? Again I would like Government to be informed that there is large volume of public opinion in Bangalore and in the State that some of these Societies have not shown very much by way of service actually in respect of their objectives. On the 29th July last year, in this Hon'ble House, in reply to a supplementary question of mine, Government were pleassed to give an assurance at least that it would very shortly constitute a State Level Board for Animal Welfare, much on the lines of the Board set up under the Central Act. And today I request the hon'ble Minister concerned to be pleased to implement that assurance and bring into being such a Board.

Sir, I next turn to the Grants-in-Aid made by the Government in respect of those organisations which provide welfare for the aged and infirm in Bangalore. I am grateful for it and I thank the Government on behalf of the many institutions which I have the honour to associate myself with. There again I suggest that Government may be pleased to

look again at the amounts that have been granted and see whether there is any possibility of taking into consideration the present day conditions and the cost of living with a view to enhancing some of the grants, particularly in view of the fact that there happens to be a very difficult situation that faces most of these institutions, particularly those which have to depend entirely on voluntary contributions for their day-to-day expenses. Up to a few years ago, possibly a year ago, some of these institutions were favoured by the Bangalore Municipality by having a free allowance of water. With the new law, that concession has been withdrawn. I ask in all seriousness how it is possible for these Societies to meet the charges on account of water that they have necessarily to expend and use. I am sure that it is never the intention of Government to grant with one hand and take it away in another. I am sure the hon'ble Minister in charge of Municipal Administration has no such intention and that he will be pleased to allow exemption by bringing an amendment within the shortest possible time, to provide for this concession to continue in the case of approved Societies.

Sir, no thinking person would possibly suggest that Government should provide all the money that these charitable institutions required. But then that by itself should not provide Government with the excuse to do nothing. There are in several other countries ways and means found out already to provide funds successfully to these institutions. I suggest to Government that it requires very little imagination but large amount of sympathy on the part of the Government to provide sufficient funds for these charitable institutions and for charitable programmes in the City if only they will shed policies and inhibitions which come in the way of authorising public lotteries as conducted in other countries. I suggest to the Government the creation of a Central Committee, on which could serve the representatives of all these institutions and which could be charged with the responsibility of organising and conducting public lotteries as they do in other countries, which will bring in all the money that Government need to provide themselves with.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಸಹಕಾರ ಮತ್ತು ಪಂಚಾಯಿತಿ ರಾಜ್ಯ ಸಚಿವರು ತಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತ ನಾಲ್ಕು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಇವತ್ತು ನಮ್ಮ ದೇಶದ ಉದ್ಧಾರಕ್ಕೆ ಬುನಾದಿಯಾಗಿರತಕ್ಕುದು ಪಂಚಾಯಿತಿ ರಾಜ್ಯ ಎಂದು ನಾವೆಲ್ಲ ಒಪ್ಪಿಕೊಂಡಿರುತ್ತೇವೆ. ಮಹಾತ್ಮ ಗಾಂಧೀಜಿಯವರು ರೂಪಿಸಿರತಕ್ಕ ಪಂಚಾಯಿತಿ ರಾಜ್ಯ, ಪಂಚಾಯಿತಿಗಳಿಂದಲೇ ಬುನಾದಿಯಾಗಿ ಬಂದು ಪ್ರಜಾಪ್ರಭುತ್ವ ಬೆಳೆದರೆ ಮಾತ್ರ ಈ ಬಹಳ ದೊಡ್ಡ ದೇಶ ಬಲಿಷ್ಠವಾಗಲಿಕ್ಕೆ, ಶಕ್ತಿಯುತವಾಗಲಿಕ್ಕೆ ಸಾಧ್ಯ ಎಂದು ಹೇಳಿದ್ದರು. ಅದೇ ರೀತಿಯಲ್ಲಿ ಈ ಪಂಚಾಯಿತಿ ರಾಜ್ಯವನ್ನು ರೂಪಿಸುವಂಥದ್ದು ನಮ್ಮ ಕರ್ತವ್ಯವಾಗಿದೆ. ಪಂಚಾಂಗ ಬಲಿಷ್ಠವಾದರೆ ಅದರಿಂದ ಕಟ್ಟಿದ ಕಟ್ಟಡ ಬಲಿಷ್ಠವಾಗುತ್ತದೆ. ಎಂದು ಯಾವುದನ್ನು ಹೇಳುತ್ತೇವೆ, ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಪಂಚಾಯಿತಿಗಳು ಬಲಿಷ್ಠವಾದರೆ, ಅವು ಶಕ್ತಿಯುತವಾದರೆ, ಅವು ಒಳ್ಳೆಯ ರೀತಿಯಿಂದ ರೂಪಿತವಾದರೆ ನಮ್ಮ ದೇಶದ ಎಲ್ಲ ಕಾರ್ಯಕ್ರಮಗಳೂ ಸುಸೂತ್ರವಾಗಿ ನಡೆಯಲಿಕ್ಕೆ ಸಾಧ್ಯವಾಗುತ್ತದೆ, ಜನತೆಯ ಹಿತವನ್ನು, ಜನತೆಯ ಆಸೆ ಆಕಾಂಕ್ಷೆಯನ್ನು ತೀರಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಅನೇಕ ಕಡೆಗಳಲ್ಲಿ ಪಂಚಾಯಿತಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದನ್ನು ನೋಡುತ್ತಿದ್ದೇವೆ. ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ನಾವು ನೋಡುವುದಾದರೆ

(ಶ್ರೀ ಬಿ. ಎಂ. ಇದಿನಬ್ಬ)

ಮಲೆನಾಡು ಪ್ರದೇಶದಲ್ಲಿ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುವಂಥದ್ದು ಕಷ್ಟ. ಕಾರಣ ಅದಕ್ಕೆ ಮೂರನೇ ಎರಡು ಭಾಗ ಕೋರಂ ಇರಬೇಕು ಎಂದು ಹಾಕಿರುವ ಒಂದು ನಿಬಂಧನೆ. ಬಹಳ ದೂರ ದೂರ ಇರತಕ್ಕ ಸದಸ್ಯರು ಸೇರುವುದೇ ಕಷ್ಟವಾಗಿ ಅನೇಕ ಕಡೆಗಳಲ್ಲಿ ಪಂಚಾಯಿತಿ ಸಭೆಗಳು ನಡೆಯದೆ ಒಂದೆರಡು, ನಾಲ್ಕೈದು ಬಾರಿ ಕೂಡದೆ ಇರತಕ್ಕ ಸಂದರ್ಭಗಳೂ ಇವೆ. ಈ ವಿಚಾರಗಳು ಬೇರೆ ಎಲ್ಲ ಕಡೆಗೂ ಇರಬಹುದು. ಆದ್ದರಿಂದ ಈ ನಿಬಂಧನೆಯನ್ನು ಸಡಿಲಿಸಿ ಮೂರನೇ ಒಂದು ಭಾಗ ಕೋರಂ ಮಾಡಿದರೆ ಹೆಚ್ಚು ಜನರಿಗೆ ಬಂದು ಆಗಾಗ ಸಭೆಗಳು ಸುಸೂತ್ರವಾಗಿ ನಡೆಯಲಿಕ್ಕೆ ಸಾಧ್ಯವಾಗಬಹುದು ಎಂದು ಕಾಣುತ್ತದೆ.

ಒಳ್ಳೆಯ ರೀತಿಯಲ್ಲಿ ಕೇರಳ ಸರ್ಕಾರವು ಪಂಚಾಯಿತಿ ಸದಸ್ಯರಿಗೆ ಸಿಟಿಂಗ್ ಫೀ ಕೊಡುತ್ತದೆ ಅದೇ ರೀತಿಯಲ್ಲಿ ತನ್ನ ದಿನನಿತ್ಯದ ಕೆಲಸವನ್ನು ಬಿಟ್ಟು ಪಂಚಾಯಿತಿ ಕೆಲಸಕ್ಕೆ ಬರುವುದಕ್ಕೆ ಅವಕಾಶ ವಾಗುವಂಥ ರೀತಿಯಲ್ಲಿ ಇಲ್ಲಿ ಕೂಡ ಸಿಟಿಂಗ್ ಫೀ ಇರಬೇಕು, ಹಾಗೆ ಮಾಡಿದರೆ ಒಳ್ಳೆಯದೆನಿಸುತ್ತದೆ ಎಂದು ಕಾಣುತ್ತದೆ.

ಪಂಚಾಯಿತಿಗಳಿಗೆ ಇರತಕ್ಕ ಕೆಲಸ 250 ರೂಪಾಯಿಗೆ ಹೆಚ್ಚು ಕೆಲಸ ಮಾಡಿಸಬೇಕಾದರೆ ಮೇಲಿನವರ ಉತ್ತರಕ್ಕೆ ಕಾಯಬೇಕು ಎನ್ನುವ ಪರಿಸ್ಥಿತಿ ಇದೆ. ಭೂ ಕಂದಾಯದಲ್ಲಿ ಇರತಕ್ಕ ಹೆಚ್ಚಿನ ಅಂಶವನ್ನು ಪಂಚಾಯಿತಿಗಳಿಗೆ ಕೊಟ್ಟು ಹೆಚ್ಚು ಹೆಚ್ಚಾಗಿ ಪಂಚಾಯಿತಿಗಳಲ್ಲಿಯೇ ಮಾಡತಕ್ಕ ಬಹಳ ಬಹಳ ಕೆಲಸಗಳನ್ನು ಪಂಚಾಯಿತಿಯೇ ಮಾಡುವ ಹಾಗೆ ಅವರಿಗೆ ಅವಕಾಶಗಳನ್ನು ಕಲ್ಪಿಸಿ ಕೊಟ್ಟರೆ ಪಂಚಾಯಿತಿಗಳು ಹೆಚ್ಚು ಬಲಿಷ್ಠವಾಗಿ ರೂಪಿತವಾಗಲು, ಕೆಲಸ ಮಾಡಲು ಸಾಧ್ಯವಾದೀತು ಎಂದು ಕಾಣುತ್ತದೆ.

ಪಂಚಾಯಿತಿ ಸೆಕ್ರೆಟರಿಗಳ ವಿಷಯ ಹೇಳುವುದಾದರೆ ಪಂಚಾಯಿತಿ ಸೆಕ್ರೆಟರಿಗಳಾಗಿ ಎಸ್. ಎಸ್. ಎಲ್. ಸಿ. ಆದವರನ್ನು ನೇಮಿಸಿದ್ದೇವೆ. ಮೂರು, ನಾಲ್ಕು ಐದು ವರ್ಷವಾದರೂ ಕೂಡ 65 ಪ್ಲಸ್ 1 ರೀತಿಯ ಸಂಬಳವಿದೆ ಮತ್ತು ಇವರಿಗೆ ತುಟ್ಟಿಭತ್ಯ ಸಿಕ್ಕುತ್ತಿಲ್ಲ, ಪ್ರಯಾಣ ಭತ್ಯ ಸರಿಯಾಗಿ ಸಿಕ್ಕುತ್ತಿಲ್ಲ ಎನ್ನುವ ದೂರು ಅನೇಕ ಸಲ ನಮ್ಮ ಸಚಿವರಿಗೆ ಬಂದಿರಬಹುದು. ಈ ಪಂಚಾಯಿತಿ ಸೆಕ್ರೆಟರಿಗಳ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಅವರಿಗೆ ಒಳ್ಳೆಯ ವೇತನ ಮಟ್ಟವನ್ನು ಕೊಟ್ಟರೆ ಅವರು ನಿಜವಾಗಿಯೂ ಒಳ್ಳೆಯ ರೀತಿಯಲ್ಲಿ ಕೆಲಸಮಾಡಿ ಪಂಚಾಯಿತಿಗಳನ್ನು ಬಲಿಷ್ಠವಾದ ಪಂಚಾಯಿತಿಗಳನ್ನಾಗಿ ಮಾಡುತ್ತಾರೆ ಎನ್ನುವ ಆಸೆ ಆಕಾಂಕ್ಷೆ ಇದೆ, ಆಯಾ ಗ್ರಾಮಗಳೂ ಉದ್ಧಾರವಾಗಬೇಕೆಂದೂ ಅಪೇಕ್ಷೆ ಪಡುತ್ತೇನೆ. ಪಂಚಾಯಿತಿಗಳು ರೂಪಿತವಾಗಲಿಕ್ಕೆ ಹೆಚ್ಚಿನ ಅವಕಾಶವಾಗತಕ್ಕ ವಿಷಯವಾದ್ದರಿಂದ ಸಹಾಯ ಮಾಡಬೇಕು ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ

ತಾಲ್ಲೂಕು ಬೋರ್ಡುಗಳ ವಿಷಯ. ಸಮುದಾಯ ಅಭಿವೃದ್ಧಿ ಶಾಖೆ ಎಂದು ಇದೆ. ಅದರ ಅಗತ್ಯ ಈಗ ಇದೆಯೋ ಇಲ್ಲವೋ ಎಂದು ಯೋಚನೆ ಮಾಡಬೇಕಾಗುತ್ತದೆ. ನಾನು ಹೇಳುವುದಾದರೆ ಅದನ್ನು ತಾಲ್ಲೂಕು ಬೋರ್ಡಿನಲ್ಲಿ ಸಂಪೂರ್ಣವಾಗಿ ಮರ್ಜ್ ಮಾಡಿ ತಾಲ್ಲೂಕು ಬೋರ್ಡುಗಳು ಆ ಕೆಲಸ ಮಾಡುವ ಹಾಗೆ ಮಾಡಿದರೆ ಹೆಚ್ಚು ಉಪಕಾರವಾಗುತ್ತದೆ ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ತಾಲ್ಲೂಕು ಬೋರ್ಡ್‌ಗಳಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಗೆ ಪೆನ್‌ಷನ್ ವಗೈರೆ ಯಾವುದೂ ಬೇರೆ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಇರತಕ್ಕದು ಯಾವುದೂ ಇಲ್ಲ ಎಂದು ಹೇಳತಕ್ಕ ಕೂಗು ಇದೆ. ಇದನ್ನು ಕೂಡ ಸರ್ಕಾರದವರು ಆಲೋಚನೆ ಮಾಡಿ ಅವರಿಗೆ ಕೂಡ ಸಂಬಳಸಾರಿಗೆ ಮತ್ತು ಪೆನ್‌ಷನ್ ಕೊಡುವುದು, ಇನ್ನಿತರ ನಾನ್ ಗೆಜೆಟೆಡ್ ಆಫೀಸರುಗಳಿಗೆ ಇರತಕ್ಕ ಸೌಕರ್ಯಗಳನ್ನೂ ಒದಗಿಸಲಿಕ್ಕೆ ಅನುಕೂಲವಾಗುವ ಹಾಗೆ ಮಾಡಿದರೆ ಒಳ್ಳೆಯದು ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಸಹಕಾರದ ಬಗ್ಗೆ ಎರಡು ಮಾತು ಹೇಳಿ ನನ್ನ ಮಾತನ್ನು ಮುಗಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ. ಸಹಕಾರ ಎಂದರೆ ನಮ್ಮ ದೇಶದ ಬಹಳ ದೊಡ್ಡ ವಿಚಾರ. ಬಹಳ ಹಿಂದಿನಿಂದ ಈ ಸಹಕಾರ ನಮ್ಮ ಹಿಂದೂಸ್ಥಾನದಲ್ಲಿ, ನಮ್ಮ ರಾಜ್ಯದಲ್ಲಿ, ಬಳಕೆಗೆ ಬಂದಿರುತ್ತದೆ. ಇವತ್ತು ಸಹಕಾರವಿಲ್ಲದಿದ್ದರೆ ಈ ದೇಶ ಉಳಿಯಲಿಕ್ಕಿಲ್ಲ, ಸಹಕಾರದಿಂದ ಮಾತ್ರ ಈ ದೇಶ ಉಳಿಯಲಿಕ್ಕೆ ಸಾಧ್ಯ ಎಂದು ಹೇಳುವಂಥದ್ದು ಇವತ್ತು ಬಂದಿದೆ. ಅದೇ ರೀತಿಯಲ್ಲಿ ಒಂದನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಗೋರ್‌ವಾಲಾ ಸಮಿತಿ ಮಾಡಿದ ರಿಪೋರ್ಟು ಏನೆಂದು ತಿಳಿದಿದ್ದೇವೆ. ಆ ಕಾಲದಲ್ಲಿ ಈ ಸಹಕಾರ ತತ್ವ ಹೆಚ್ಚಾಗಿ ಬೆಳೆದಿರಲಿಲ್ಲ. ಆ ಬಳಿಕ ಸರ್ಕಾರದ ಮುಖಂಡರು, ಅದಕ್ಕೆ ಬೇಕಾದಂತಹ ಕ್ರಮಗಳನ್ನು ರೂಪಿಸಿಕೊಂಡು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ, ಮೂರನೆಯ ಪಂಚವಾರ್ಷಿಕ

ಯೋಜನೆಯಲ್ಲಿ ಈ ಸಹಕಾರಕ್ಕಾಗಿ, ತುಂಬಾ ಹಣವನ್ನು ವಿನಿಯೋಗ ಮಾಡಿಕೊಂಡು ಕಾರ್ಯಕ್ರಮವನ್ನು ಮಾಡಿದರು, ಮಾತ್ರವಲ್ಲದೆ, ಸಹಕಾರಿ ಸಂಸ್ಥೆಗಳು ಬೇಕಾದಷ್ಟು ಬೆಳೆದು ಪ್ರಗತಿಯನ್ನು ಸಾಧಿಸಿದೆ. ಮುಖ್ಯವಾಗಿ ಎರಡು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ತತ್ತ್ವ ಬಹಳ ಮುಂದೆ ಬಂದಿದೆ; ಮತ್ತು ಅದರಿಂದ ನಮ್ಮ ಜನರಿಗೆ ಬಹಳವಾಗಿ ಉಪಕಾರವಾಗಿದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ; ಅದು 20-25 ವರ್ಷಗಳ ಹಿಂದೆ ಬಹಳ ಹಿಂದುಳಿದಿದ್ದ ಪ್ರದೇಶವಾಗಿತ್ತು. ಆದರೆ ಇವತ್ತಿನ ದಿವಸ ಸಹಕಾರಿ ತತ್ವದಲ್ಲಿ, ಸಹಕಾರಿ ಕ್ಷೇತ್ರಗಳು, ಸಂಘ ಸಂಸ್ಥೆಗಳ ರೂಪದಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದೆ. ಶ್ರೀಯುತ ಮೊಳಹಳ್ಳಿ ಶಿವರಾಯರು ಇದನ್ನು ರೂಪಿಸಿಕೊಂಡು, ಅದಕ್ಕೆ ಬೇಕಾದ ಅನುಕೂಲವನ್ನು ಸರ್ಕಾರದವರು ಏರ್ಪಾಡು ಮಾಡಿಕೊಟ್ಟರು; ಮತ್ತು ಅಲ್ಲಿಯ ಜನರು ಎಲ್ಲಾ ಮುಂದೆ ಒಂದು ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿದ್ದರು.

ಅದೇ ವೇಳೆಯಲ್ಲಿ ಸಹಕಾರ ಸಂಘಗಳಲ್ಲಿ ಕೆಲಸಮಾಡತಕ್ಕ ನೌಕರರ ವಿಚಾರದಲ್ಲಿ ಹೆಚ್ಚಿನ ಒಂದು ಗಮನವನ್ನು ಮಾನ್ಯ ಸಹಕಾರ ಸಚಿವರು ತೆಗೆದುಕೊಂಡು ಬೇಕಾದ ಅನುಕೂಲತೆಗಳನ್ನು ಕಲ್ಪಿಸಬೇಕು. ಮಾನ್ಯ ಸಚಿವರು ಬಹಳ ಹುರುಪಿನವರು, ಇದನ್ನು ಪರಿಶೀಲಿಸುತ್ತಾರೆಂದು ತಿಳಿದಿದ್ದೇನೆ. ಇವತ್ತಿನ ದಿವಸ ಸಹಕಾರಿ ಕ್ಷೇತ್ರದಲ್ಲಿ ತುಂಬಾ ನೌಕರರು ಇದ್ದಾರೆ. ಅವರಿಗೂ ನಾನ್ ಗೆಜೆಟೆಡ್ ನೌಕರರ ರೀತಿಯಲ್ಲಿ ಪೆನ್ಷನ್, ಹೆಲ್ತ್ ಸೌಲಭ್ಯ, ವಿದ್ಯಾ ಸವಲತ್ತುಗಳು ಎಲ್ಲಾ ಕೊಡಬೇಕು. ಈ ರೀತಿ ಮಾಡುವುದರಿಂದ ಅವರಿಗೂ ಸಹ ಹೆಚ್ಚು ಶಕ್ತಿಯಿಂದ ಕೆಲಸಮಾಡತಕ್ಕ ಹುಮ್ಮಸ್ಸು ಬರುತ್ತದೆ. ಇದಕ್ಕೆ ಒಂದು ಪಂಡಿತ ಸಮಿತಿ ಮಾಡಿದ್ದಾರೆ. ಅವರೂ ವರದಿ ಕೊಟ್ಟಿದ್ದಾರೆ. ಆ ರೀತಿಯಲ್ಲಿ ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಮಾನ್ಯ ಸಚಿವರು ಒಳ್ಳೆಯ ಮನಸ್ಸು ಮಾಡಿ ಎಲ್ಲಾ ಸೌಲಭ್ಯಗಳನ್ನು ಕೊಡುವಂತೆ ಮಾಡಬೇಕೆಂದು ಹೇಳಲು ಅಪೇಕ್ಷೆಪಡುತ್ತೇನೆ.

ಇನ್ನು ಸಹಕಾರಿ ತತ್ವ ಹೇಳಬೇಕಾದರೆ, ಇವತ್ತಿನ ದಿವಸ ಆಹಾರದ ಸೌಲತ್ತುಗಳು ವ್ಯಾಪಾರಸ್ಥರಿಗಿಂತಲೂ ಈ ಸಹಕಾರೀ ಸಂಘಗಳ ಮೂಲಕ ಸಿಗುತ್ತದೆ. ಇದು ಒಂದು ಒಳ್ಳೆಯ ಚಿಹ್ನೆ. ಇದು ಅನೇಕ ವಿಧಗಳಲ್ಲಿ ಶಕ್ತಿಯುತವಾಗಿ ಬೆಳೆಯುವಂತೆ ಮಾಡಿದರೆ, ಅದರಿಂದ ರಾಜ್ಯಕ್ಕೂ, ಜನರಿಗೂ ಹೆಚ್ಚಿನ ಉಪಕಾರವಾಗುತ್ತದೆ. ಇವತ್ತು ವ್ಯಾಪಾರಸ್ಥರು ತಮ್ಮದೇ ಆದ ನಿಯಮವನ್ನು ಇಟ್ಟುಕೊಂಡು ಕೆಲವರು ಕಾಳಸಂತೆಯಲ್ಲಿ ಮಾರುತ್ತಿದ್ದಾರೆ. ಇಂಥ ಸಹಕಾರ ಸಂಘಗಳಿಂದ ಕಾಳಸಂತೆ ಆಗುವುದನ್ನು ತಪ್ಪಿಸಬಹುದು. ಈಗ ಬಳಕೆದಾರರ ಸಂಘಗಳು, ಹಾಲಿನ ಸಂಘ, ಗೃಹನಿರ್ಮಾಣ ಸಂಘ, ಹಾಗೂ ಇನ್ನಿತರ ಬೇರೆ ಬೇರೆ ರೂಪದ ಸಂಘಗಳು ಸ್ಥಾಪನೆಯಾಗಿವೆ. ನಮ್ಮಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳು ಇನ್ನೂ ಹೆಚ್ಚಾಗಿ ಬೆಳೆಯಬೇಕೆಂದು ಹೇಳುತ್ತೇನೆ. ಈಗ ಅಲ್ಲಿ ಮುನಿಸಿಪಾಲಿಟಿಯೊಳಗೆ ಮನೆ ಕಟ್ಟಬೇಕೇ ಹೊರತು, ಅದರ ಸುತ್ತುಮುತ್ತಲಿನ ಬೆಲ್ಟ್ ಏರಿಯಾದಲ್ಲಿ ಮನೆಗಳನ್ನು ಕಟ್ಟಬೇಕಾದರೆ, ಅದಕ್ಕೆ ಸಹಕಾರ ಸಿಗುತ್ತಾ ಇಲ್ಲ, ಮತ್ತು ಅಂಥ ಸಂದರ್ಭ ಬಹಳ ಕಡಿಮೆ. ಮುನಿಸಿಪಾಲಿಟಿ ಏರಿಯಾದಲ್ಲಿ ಯಾವ ರೀತಿ ತೊಂದರೆ ಇದೆಯೋ, ಅದೇ ರೀತಿಯಲ್ಲಿ ಬೆಲ್ಟ್ ಏರಿಯಾದ ಜನರಿಗೂ ಕಷ್ಟ ಕಾರ್ಪಣ್ಯಗಳು, ವಸತಿ ಸೌಕರ್ಯದ ಅಭಾವ ಬಹಳವಾಗಿದೆ. ಆದ್ದರಿಂದ ಈ ರೀತಿ ಬೆಲ್ಟ್ ಏರಿಯಾದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಕಲ್ಪಿಸುವ ಹಾಗೆ, ಹೆಚ್ಚು ಹೆಚ್ಚು ಹಣವನ್ನು ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಒದಗಿಸಿ ಕೊಡಬೇಕೆಂದು ನಾನು ಸಹಕಾರ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ಸಹಕಾರ ಸಂಸ್ಥೆಗಳಲ್ಲಿ ಒಂದು ಕಾರ್ಯಕಾರಿ ಮಂಡಳಿ ಇದೆ. ಇದರಲ್ಲಿ ಒಂದು ದೋಷವಿದೆ. ಅದನ್ನು ಪರಿಹರಿಸಿದರೆ, ಸಹಕಾರಿ ಸಂಘ ಸಂಸ್ಥೆಗಳು ಇನ್ನೂ ಹೆಚ್ಚಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅದೇನೆಂದರೆ—ಅದರಲ್ಲಿ ಡೈರೆಕ್ಟರ್ ಆಗಿ ಬರತಕ್ಕವರು ಪಟ್ಟಭದ್ರವಾಗಿ ನಾವೇ ಇರಬೇಕೆಂಬ ಭಾವನೆಯಿಂದ 14-15 ವರ್ಷವಾದರೂ ಇರತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಅವರಿಗೆ ನಾಲ್ಕು ವರ್ಷದಿಂದ ಹೆಚ್ಚು ಇರಬಾರದ ಹಾಗೆ ಒಂದು ನಿಬಂಧನೆಯನ್ನು ಮಾಡಿದರೆ ಬಹಳ ಉಪಕಾರವಾಗುತ್ತದೆ; ಮತ್ತು ಅದರಿಂದ ಬಿಸಿ ಬಿಸಿ ರಕ್ತದ ನವತರುಣರು ಬಂದು ಸೇವೆ ಸಲ್ಲಿಸಲು ಒಂದು ಅವಕಾಶವಾಗುತ್ತದೆ. ಮತ್ತು ಇದೇ ಸಂದರ್ಭದಲ್ಲಿ ಹೆಚ್ಚಿನ ಆಹಾರಧಾನ್ಯ ಮತ್ತು ಇತರ ಆಹಾರಪದಾರ್ಥಗಳು ವ್ಯಾಪಾರಸ್ಥರಿಂದ ಸಹಕಾರ ಸಂಘಗಳಲ್ಲಿ ಹೆಚ್ಚಾಗಿ ದೊರಕುತ್ತದೆ ಎಂಬ ಭಾವನೆ ಇಡೀ ರಾಜ್ಯದಲ್ಲಿ ಬಂದಿರುವಾಗ, ಅಲ್ಲಿ ನಡೆಯುವಂತಹ ಮೋಸವೆಲ್ಲವನ್ನೂ ತನಿಖೆ ಮಾಡಿಸಬೇಕು. ಮೇಲ್ಮಟ್ಟದಲ್ಲಿ ಅಧಿಕಾರಿಗಳು ಒಳ್ಳೆಯವರಿದ್ದರೂ, ಕೆಲವೊಮ್ಮೆ ಈ ಕೆಳಗಿನವರಿಂದಾಗಿ, ಎಲ್ಲರಿಗೂ ಕೆಟ್ಟ ಹೆಸರು ಬರುತ್ತದೆ; ಅದರಿಂದ ಅಧಿಕಾರಿಗಳಲ್ಲದೆ, ಸಚಿವರಿಗೂ ಹೆಚ್ಚಿನ ತಪ್ಪು ತಿಳಿವಳಿಕೆ ಬರುವುದು. ಅದಕ್ಕೋಸ್ಕರ ಅಂಥ ಸಂಘಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಅಲ್ಲಿ ಸಹಕಾರ ಸಂಸ್ಥೆಗಳನ್ನು ಒಂದು ಸಿ. ಐ. ಡಿ. ಸೆಲ್ ಆಗಿ ಪರೀಕ್ಷೆ ಮಾಡಬೇಕು. ಅಲ್ಲಿ ಆಹಾರ

(ಶ್ರೀ ಬಿ. ಎಂ. ಇದಿನಬ್ಬ)

ಧಾನ್ಯಗಳ ಚೀಲಗಳನ್ನು ಪರೀಕ್ಷೆ ಮಾಡಬೇಕು, ಸಕ್ಕರೆ ಚೀಲಗಳನ್ನು ಪರೀಕ್ಷೆ ಮಾಡಬೇಕು. ಈ ರೀತಿ ಮಾಡಿದರೆ, ನೌಕರರಲ್ಲಿಯೂ ಒಂದು ರೀತಿಯ ಭಯ ಬರುತ್ತದೆ. ಮತ್ತು ಮುಂದೆ ಆ ಇಲಾಖೆಯಲ್ಲಿ ತಪ್ಪು ಮಾಡಬಾರದು ಎಂಬ ಒಂದು ಭಯದಿಂದ ಯಾರೂ ತಪ್ಪು ಮಾಡುವುದಕ್ಕೆ ಹೋಗಲಾರರು. ಆ ಒಂದು ದೋಷವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಏಕೆಂದರೆ, ಭಾರತ ದಲ್ಲಿ 1650 ಕೋಟಿ ರೂಪಾಯಿಯ ಆಹಾರವನ್ನು ಇಲಿಗಳೇ ತಿಂದು ಬಿಡುತ್ತದೆ ಎಂದು ತಜ್ಞರು ಲೆಕ್ಕ ಹಾಕಿದ್ದಾರೆ. ಆದ್ದರಿಂದ ಸಹಕಾರ ಸಂಸ್ಥೆಗಳಲ್ಲಿ ಈ ತೆಲವಾನು ಹಾಕುವುದನ್ನು ತಪ್ಪಿಸ ಬೇಕು ಮತ್ತು ಅಲ್ಲಿರುವ ಎರಡು ಕಾಲಿನ ಇಲಿಗಳನ್ನು ಹೆಗ್ಗಣಗಳನ್ನು ಹಿಡಿಯುವ ಒಂದು ಪ್ರಯತ್ನ ವನ್ನು ಮಾಡಬೇಕೆಂದು ಹೇಳುತ್ತೇನೆ ಮತ್ತು ಇದರಿಂದ ಸಹಕಾರಿ ತತ್ವ ಒಳ್ಳೆಯ ರೀತಿಯಿಂದ ನಡೆದು ಇಡೀ ರಾಜ್ಯದ ಕೊರತೆ, ನೀಗಿಸಿ, ನಮ್ಮ ದೇಶದ ಕಲ್ಯಾಣವಾಗುತ್ತದೆ; ಇದನ್ನು ಮಾನ್ಯ ಸಹಕಾರ ಸಚಿವರು ಮಾಡಿಕೊಟ್ಟು ದೇಶ ಕಲ್ಯಾಣವನ್ನು ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದನೆ ಯನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸಭಾಪತಿಯವರೇ, ಸಹಕಾರಿ ವಿಷಯವಾಗಿ ಮಾತ ನಾಡುವುದಕ್ಕೆ ಪೂರ್ವದಲ್ಲಿ ಇಂದು ಸಭೆಯ ಮುಂದೆ ಇರತಕ್ಕ ಡಿಮ್ಯಾಂಡ್ 21, 23, 25, 39 ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇವರ ಆಡಳಿತೆಯ ದೃಷ್ಟಿಕೋನದ ಹಾಗೂ ಮುತ್ಸದ್ದಿತನದ ಅಭಾವದಿಂದ, ಜನತೆಯ ಹಿತವನ್ನು ಸಾಧಿಸುವಂತಹ ಅನೇಕ ಯೋಜನೆ ಗಳನ್ನು ಅಳವಡಿಸದಿರುವುದರಿಂದ ಹಾಗೂ ವಿನಾ ಕಾರಣ ದುರ್ವ್ಯವಹಾರದ ಯೋಜನೆಯನ್ನು ರೂಪಿಸಿಕೊಂಡು ರಾಜ್ಯದ ಜನತೆಗೆ ಹೆಚ್ಚು ಕರಭಾರವನ್ನು ಹೊರಿಸುವ ವಿಚಾರವನ್ನು ಈ ಆಡಳಿತೆಯ ಮಾಗಣಿಯನ್ನು ನಾನು ವಿರೋಧಮಾಡುತ್ತೇನೆ. ಒಂದು ನೂರು ವರ್ಷಕ್ಕಿಂತಲೂ ಪೂರ್ವದಲ್ಲಿ ರಾಯಲ್ ಕಮಿಶನ್ ಎಂಬುದು ಮಾಡಿದ ಒಂದು ವರದಿಯಲ್ಲಿ ಒಕ್ಕಲತನದ ಸುಧಾರಣೆಯಾಗ ಬೇಕಾದರೆ ಸಹಕಾರೀ ಚಳುವಳಿಯಿಂದಲೇ ಎಂದು ಹೇಳಿದ್ದಾರೆ. ನನಗೆ ಸಂತೋಷವೇನೆಂದರೆ, ಸಹಕಾರದ ವಿಚಾರ ಮಾತನಾಡುವಾಗ ಮಾನ್ಯ ಶ್ರೀ ನಿಜಲಿಂಗಪ್ಪನವರು ಇಲ್ಲಿ ಇದ್ದಾರೆ. ನಿಜವಾಗಿ ವಕ್ಕಲುತನದ ವಿಷಯದಲ್ಲಿ ಆಸಕ್ತಿ ಇದ್ದರೆ ಇವರು ಸಹಕಾರಿ ಸಂಘಗಳ ಬಗ್ಗೆ ಹೆಚ್ಚಿನ ಪರಿಶ್ರಮ ವಹಿಸಿ, ಮುತುವರ್ಜಿ ವಹಿಸಿ ಕಾರ್ಯವನ್ನು ಮಾಡಬೇಕು. ಅವರೇ ತಮ್ಮದೇ ಆದ ನಿಜಲಿಂಗಪ್ಪ ಕಮಿಟಿಯ ಒಂದು ವರದಿಯಲ್ಲಿ ಹೇಳಿರುವಂತೆ:

> "As indicated earlier another problem that faces the cultivator is that of raising the loan by agricultural requisites for the farm and foodgrains and consumer goods to maintain himself till the harvest."

ಈ ರೀತಿ 1959ರಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಅವರಿಗೆ ತಾವೇ ಇಂತಹ ಅಧಿಕಾರಕ್ಕೆ ಬರುವ ಕಾಲ ಬಂದೀತು ಎಂದು ಭಾವಿಸಿದ್ದಾರೋ ಇಲ್ಲೋ ಗೊತ್ತಿಲ್ಲ. ಅದನ್ನು ಇಂದು ಅವರು ಸಾಧಿಸಿದ್ದಾರೆಯೇ? ಈ ಪುಸ್ತಕದಲ್ಲಿ ಬರೆದ ಈ ವಾಕ್ಯ ಒಂದನ್ನಾದರೂ ಸಾಧಿಸಿದ್ದರೆ, ನಿಜವಾಗಿಯೂ ಇವತ್ತು ಎರಡೂ ವರೆ ಕೋಟಿ ಜನಾಂಗ ಅವರಿಗೆ ಚಿರಋಣಿಯಾಗುತ್ತಿತ್ತು. ಆದರೆ ಹಾಗಾಗಲಿಲ್ಲ. ನಿನ್ನೆ ನಮಗೆ ಸಹ ಕಾರ್ಯ ಖಾತೆಯವರು ಕಳಿಸಿದ ಒಂದು ಟಿಪ್ಪಣಿಯನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ, ತಾಲ್ಲೂಕುಗಳಿವೆ ಎಂಬುದನ್ನು ತಿಳಿಸಲು ಪ್ರಯತ್ನ ಪಟ್ಟಿದ್ದಾರೆ. ಇದರಿಂದ, ಈ ನಮ್ಮ ಚಳುವಳಿ ಎಷ್ಟು ಬೆಳೆದಿದೆ ಎಂಬುದನ್ನು ತೋರಿಸುವುದೇ ಅವರ ಒಂದು ಉದ್ದೇಶವೆಂದು ಕಾಣುತ್ತದೆ. ಸಂಖ್ಯೆಯ ಮಾನದಿಂದ ಬೆಳೆದಿದೆಯಲ್ಲದೇ ಗುಣದಿಂದ ಬೆಳೆಯಲಿಲ್ಲ. ಸಂಖ್ಯಾಮಾನದ ಬೆಳವಣಿಗೆಗೆ ಇಲಾಖೆಯವರು ಹೊಣೆಯಲ್ಲ. ಇಂದು ಮನೆ ಮನೆಗೂ ಸಹಕಾರ ಚಳುವಳಿ ಹಬ್ಬಿದೆ. ಚಳವಳಿಗಾಗಿ ಪ್ರಚಾರ ಮಾಡಬೇಕಾಗಿಲ್ಲ. ಸಹಕಾರ ಚಳುವಳಿ ಊರು ಊರಿಗೆ. ಮನೆ ಮನೆಗೆ ಮುಟ್ಟಿದೆ. ಅದು ಬೆಳೆದದ್ದು ನಿಮ್ಮ ಸಹಕಾರ ನೀತಿಯಿಂದಲ್ಲ. ನಿಮ್ಮ ಶ್ರೇಯಸ್ಸಿನಿಂದಲ್ಲ. ನಿಮ್ಮ ನೀತಿಯಿಂದ ನಿಜವಾಗಿ ಬೆಳೆದಿದ್ದರೆ, ಆಗ ನಾನು ಅವರಿಗೆ ನಿಜವಾಗಿಯೂ ವಂದನಾರ್ಪಣೆಯನ್ನು ಅರ್ಪಿಸಲೇ ಬೇಕಾಗಿತ್ತು.

11-00 A. M.

ಎಷ್ಟು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೆಂದು ಪರೀಕ್ಷಿಸಿದ್ದೀರಿ ? ನಿಮ್ಮ ಅಂಕಿ ಅಂಶಗಳನ್ನು ನೋಡಿದರೆ ಎಷ್ಟು ಹಣವನ್ನು ಸಂಘಗಳಿಗೆ ಕೊಟ್ಟಿದ್ದೀರಿ, ಅವರು ಎಷ್ಟು ಹಣ

ವನ್ನು ರೈತರಿಗೆ ಹಂಚಿದ್ದಾರೆನ್ನುವುದು ಗೊತ್ತಾಗುತ್ತದೆ. ಕೇವಲ ರಿಜರ್ವ್ ಬ್ಯಾಂಕ್‌ನಿಂದ ಬರುವ ಹಣವನ್ನು ಮಾತ್ರ ನೀವು ಸಂಘಗಳಿಗೆ ಹಂಚಿದ್ದೀರಿ. ಇವತ್ತು ಒಕ್ಕಲಿಗರ ಆರ್ಥಿಕ ಅಭಿವೃದ್ಧಿಯನ್ನು ತಾವು ಎಷ್ಟರವರೆಗೆ ಸಾಧಿಸಿದ್ದೀರಿ ? ಹಿಂದಿನ ಉತ್ಪಾದಕರ ಸಹಕಾರ ಸಂಘಗಳು ಎಷ್ಟು ಲಾಭವನ್ನು ಪಡೆಯುತ್ತಿದ್ದವು, ಇಂದಿನ ಉತ್ಪಾದಕರ ಸಹಾಕರ ಸಂಘಗಳು ಎಷ್ಟು ಲಾಭವನ್ನು ಪಡೆಯುತ್ತಿವೆಯೆಂಬುದನ್ನು ಆಲೋಚನೆ ಮಾಡಿ ನೋಡೋಣ. ನನಗೆ ಸಮಯಾವಕಾಶ ಕಡಿಮೆಯಿರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳುತ್ತೇನೆ : ಪ್ರಾಮುಖ್ಯವಾಗಿ ಒಕ್ಕಲು ತನದವರು ಈ ಸಹಕಾರ ಸಂಘಗಳಿಂದ ಎಷ್ಟರಮಟ್ಟಿನ ಪ್ರಯೋಜನ ಪಡೆಯುತ್ತಿದ್ದಾರೆಂಬುದನ್ನು ಸಹಕಾರ ಮಂತ್ರಿಗಳು ಮತ್ತು ಇಡೀ ಮಂತ್ರಿಮಂಡಲದವರು ಅರಿಯಬೇಕಾಗಿದೆ. ಬೆಳೆಯುವ ರೈತ ಬಜಾರಿಗೆ ತನ್ನ ಬೆಳೆಯನ್ನು ತೆಗೆದುಕೊಂಡು ಹೋದಾಗ ಅವನಿಗೆ ತನ್ನ ಬೆಳೆಯ ಬೆಲೆಯನ್ನು ನಿಗದಿ ಮಾಡುವ ಅಧಿಕಾರವಿರುವುದಿಲ್ಲ. ಕೊಂಡುಕೊಳ್ಳುವವರೇ ಬೆಲೆಯನ್ನು ನಿಗದಿ ಮಾಡುತ್ತಾರೆ. ಬೆಳೆಯುವವನಿಗೆ ಬೆಲೆಯನ್ನು ನಿರ್ಧರಿಸುವ ಹಕ್ಕನ್ನು ತಾವು ಎಲ್ಲಿ ಕೊಟ್ಟಿದ್ದೀರಿ ಆ ಬಗ್ಗೆ ಏನು ಪ್ರಯತ್ನಿಸಿದ್ದೀರಿ ಎಂದು ಕೇಳುತ್ತೇನೆ. ರೈತನು ತಾನು ಬೆಳೆದ ಬೆಳೆಯನ್ನು ಸಹಕಾರ ಸಂಘಗಳಿಗೆ ಅಥವಾ ಪೇಟೆಗೆ ತೆಗೆದುಕೊಂಡು ಹೋಗುವುದು ಸ್ಮಶಾನಕ್ಕೆ ಹೆಣವನ್ನು ತೆಗೆದುಕೊಂಡು ಹೋದಂತಾಗಿದೆ. ಅವರು ಹೇಳಿದ ಬೆಲೆಗೆ ಕೊಟ್ಟು ಬರಬೇಕಾಗಿದೆ. ರೈತನಿಗೆ ಬೆಲೆ ಕಟ್ಟುವ ಅಧಿಕಾರ ವಿಲ್ಲದಿದ್ದರೆ ಸಹಕಾರ ಸಂಘಗಳು ಮತ್ತು ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇದ್ದರೇನು, ಇಲ್ಲದಿದ್ದರೇನು ? ಇವತ್ತು ಈ ಸಹಕಾರ ಸಂಘಗಳನ್ನು ಮತ್ತು ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ನಾವು ದೂಷಿಸುವುದು ತಪ್ಪು. ಅವರಿಗೆ ಸರ್ಕಾರದವರು ಯಾವ ರೀತಿಯ ಅಧಿಕಾರವನ್ನೂ ಕೊಟ್ಟಿಲ್ಲ. ಒಂದು ಸರಿಯಾದ ಕಾಯಿದೆ, ಕಾನೂನನ್ನು ಇಟ್ಟಿಲ್ಲ. ಸಹಕಾರ ಸಂಘಗಳಲ್ಲಿ ಮತ್ತು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಲ್ಲಿ ಕೆಲವು ಜನರನ್ನು ದೊಡ್ಡಸ್ತಿಕೆಗೆ ಚೇರ್‌ಮನ್ನರನ್ನಾಗಿ ನೇಮಿಸಿ, ಹಿಂದಿನ ಬಾಗಿಲಿನಿಂದ ಎಲ್ಲಾ ಅಧಿಕಾರ ಸೂತ್ರಗಳನ್ನು ನೀವೇ ಇಟ್ಟುಕೊಂಡಿದ್ದೀರಿ. ಯಾರ ಕೈಯ್ಯಲ್ಲಿ ಮೈಸೂರು ರಾಜ್ಯದ ಅಧಿಕಾರವಿದೆಯೋ, ಯಾರು ಮಂತ್ರಿಮಂಡಲದಲ್ಲಿ ಇದ್ದಾರೋ ಅವರೇ ಚೇರ್‌ಮನ್‌ರಿದ್ದಂತಾಗಿದೆ. ಎಲ್ಲಾ ಅಧಿಕಾರಗಳನ್ನೂ ತಾವೇ ಪಡೆಯಲು ಈ ರೀತಿಯ ಸಹಕಾರ ಸಂಘಗಳನ್ನು ಮಾಡಿದ್ದಾರೆಂದು ಹೇಳಿದರೆ ತಪ್ಪು ತಿಳಿದುಕೊಳ್ಳಬಾರದು. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರು ಜನರ ಪ್ರತಿನಿಧಿಗಳಾದರೂ ಸಹ, ನಿಜವಾಗಿ ಕಾನೂನಿನಂತೆ ಕೆಲಸ ಮಾಡಲು ಅವರು ಅಸಮರ್ಥರಾಗಿದ್ದಾರೆ. ಜನರ ಅಭಿಪ್ರಾಯದಲ್ಲಿ ಸಹಕಾರ ಇಲಾಖೆಯಲ್ಲಿರುವ ರಿಜಿಸ್ಟ್ರಾರ್ ಅವರನ್ನು ದೇವರಿಗೆ ಸಮಾನರಾದವರೆಂದು ತಿಳಿಯುವ ಭಾವನೆಯಿದೆ. ಇವರಿಗೆ ಕೊಡಬೇಕಾಗಿರುವ ಮಹತ್ವದ ಸ್ಥಾನವನ್ನು, ಗೌರವ ಘನತೆಗಳನ್ನು ನಮ್ಮ ರಾಜ್ಯದಲ್ಲಿ ಕೊಟ್ಟಿಲ್ಲ. ಇಡೀ ಭಾರತ ದೇಶದಲ್ಲಿ ಪ್ರತಿ ರಾಜ್ಯಗಳಲ್ಲಿ ಅವರವರ ರಿಜಿಸ್ಟ್ರಾರ್ ಹುದ್ದೆಗಿರುವ ಗೌರವ ಇನ್ನು ಯಾರಿಗೂ ಇಲ್ಲ ವೆಂಬ ಒಂದು ಭಾವನೆ ನಮಗಿದೆ. ಅವರ ಸ್ಥಾನ ಅಷ್ಟೊಂದು ದೊಡ್ಡದಾಗಿದೆ. ಅವರು ಎಲ್ಲರಿಗೂ ಸ್ನೇಹಿತರಾಗಿ, ಮಾರ್ಗದರ್ಶಕರಾಗಿ ಕೆಲಸ ಮಾಡುವುದು ಸಹಜ. ಆದರೆ ಇಂದು ನಮ್ಮ ರಾಜ್ಯದಲ್ಲ ರಿಜಿಸ್ಟ್ರಾರ್ ಅವರ ಸ್ಥಾನ, ಗೌರವ ಕಡಿಮೆಯಾಗಿ, ಅವರು ಯಾವ ಕೆಲಸ ಮಾಡಲೂ ಸರ್ಕಾರದವರು ಬಿಡುತ್ತಿಲ್ಲ. ರಿಜಿಸ್ಟ್ರಾರ್ ಅವರು ತಮ್ಮ ಕೈಯ್ಯಲ್ಲಿರಬೇಕು, ಎಲ್ಲಾ ಕೆಲಸಗಳು ತಮ್ಮ ಅನುಮತಿ ಯಿಂದ ನಡೆಯಬೇಕೆನ್ನುವ ಅಭಿಪ್ರಾಯದಲ್ಲಿ ಇವರು ಇದ್ದಾರೆ. ಸಹಕಾರ ಸಂಘಗಳು ಪ್ರಬಲವಾಗಿ ಬೆಳೆದಾಗ, ಅಲ್ಲಿಯ ಮುಖಂಡತ್ವವನ್ನು ತನ್ನ ಕೈಯ್ಯಲ್ಲಿಟ್ಟುಕೊಳ್ಳಬೇಕೆಂಬ ಪ್ರಯತ್ನವನ್ನು ಸರ್ಕಾರ ದವರು ಮಾಡುತ್ತಿದ್ದಾರೆ. ಈ ರೀತಿಯೆಲ್ಲಾ ಮಾಡುವುದು ನಮಗೆ ಬೇಡವಾಗಿದೆ. ಈ ರೀತಿ ಮಾಡುವುದು ಸರಿಯಲ್ಲ. ಇದನ್ನು ಮಂತ್ರಿಮಂಡಲದವರು ಗಂಭೀರವಾಗಿ ಆಲೋಚನೆ ಮಾಡ ಬೇಕಾಗಿದೆ. ಈಗಿರುವ ಒಂದು ಸಂಪ್ರದಾಯ ಹೋಗಬೇಕು. ನಾನು ಜಂಬಕ್ಕೆ ಹೇಳುತ್ತಿದ್ದೇನೆಂದು ತಾವು ತಿಳಿಯಬಾರದು. ಏಕೆಂದರೆ ತಾವು ಇವತ್ತು ತಾವು ಆಕಡೆ ಇರಬಹುದು. ನಾಳೆ ಈ ಕಡೆ ಬರಬಹುದು. ರಿಜಿಸ್ಟ್ರಾರ್ ಆಗಲಿ, ಬೇರೆ ಆಡಳಿತಗಾರರಾಗಲಿ ಒಂದು ನೀತಿ ನಿಯಮದ ಮೇಲೆ ಕಾನೂನಿನಂತೆ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕು. ಬೇರೆಯವರು ತಪ್ಪು ಮಾಡಿದಾಗ ಕ್ರಮ ತೆಗೆದುಕೊಳ್ಳುವಂತೆ, ಸರಕಾರದವರು ಏನಾದರೂ ತಪ್ಪು ಮಾಡಿದರೆ ಅವರಮೇಲೂ ಸಹ ಕ್ರಮ ತೆಗೆದುಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಸಂಘಗಳು, ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳು, ಸ್ಟೇಟ್ ಲೆವೆಲ್ ಮಾರ್ಕೆಟಿಂಗ್ ಸೊಸೈಟಿ, ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಕೆಲಸ ಮಾಡುವ ಇನ್ನೂ ಅನೇಕ ರೀತಿಯ ಸೊಸೈಟಿಗಳು ಇವೆ. ಈ ಸೊಸೈಟಿಗಳಿಗೆ ಜಿಲ್ಲಾ ಸಹಕಾರಿ ಸೆಂಟ್ರಲ್ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್ ಮತ್ತು ಇನ್ನಿತರ ಬ್ಯಾಂಕುಗಳ ಮೂಲಕ ಸಾಲವಾಗಿ ಹಣ ಸಿಗುತ್ತದೆ. ಈ ಸೊಸೈಟಿಗಳು ಯಾವ ರೀತಿ ಕೆಲಸ ಮಾಡುತ್ತಿವೆಯೆಂಬುದನ್ನು ನೋಡೋಣ. 1951 ರಲ್ಲಿ ರೂರಲ್ ಕ್ರೆಡಿಟ್ ಸರ್ವೆ ಕಮಿಟಿಯಾಯಿತು. ನಂತರ ದಿವಂಗತ ವಿ. ಎಲ್. ಮೆಹತಾ ಕಮಿಟಿ ರಿಪೋರ್ಟ್ ಸಹ

(ಶ್ರೀ ಕೆ. ಎಚ್. ಪಾಟೀಲ್)

ಆಯಿತು. ರೂರಲ್ ಕ್ರೆಡಿಟ್ ಸರ್ವೆ ಕಮಿಟಿಯವರು ಒಕ್ಕಲಿಗರಿಗೆ ಸುಲಭ ದರದಲ್ಲಿ ಅವನಿಗೆ ಬೇಕಾಗುವಷ್ಟು ಹಣವನ್ನು ಒದಗಿಸಬೇಕೆಂದು ಹೇಳಿದೆ. ಈ ಕಮಿಟಿಯವರು ಹೇಳಿರುವ ಸಲಹೆಗಳಲ್ಲಿ ಎಷ್ಟು ಜಾರಿಗೆ ತಂದಿದ್ದೀರಿ. ಎಷ್ಟು ಸಹಕಾರ ಸಂಸ್ಥೆಗಳಲ್ಲಿ ಅಳವಡಿಸಿದ್ದೀರಿ. ಅವರು ಹೇಳಿರುವ ಸಲಹೆಗಳಲ್ಲಿ ನೂರರಲ್ಲಿ ಒಂದು ಭಾಗವನ್ನೂ ಇದುವರೆಗೆ ಪರಿಶೀಲನೆ ಮಾಡಿಲ್ಲ, ಜಾರಿಗೆ ತಂದಿಲ್ಲ ವೆಂದು ಹೇಳುತ್ತೇನೆ. ರಿಜರ್ವ್ ಬ್ಯಾಂಕಿನವರು ಕೊಡುವ ಹಣ ರೈತರಿಗೆ ಸುಲಭವಾಗಿ ಸಿಗುತ್ತಿಲ್ಲ. ರಿಜರ್ವ್ ಬ್ಯಾಂಕ್‌ನವರು ಹಣವನ್ನು ಸಾಲವಾಗಿ ಕೊಡುವಾಗ ತಮ್ಮ ವಾಸ್ತವಿಕ ಬಡ್ಡಿ ದರಕ್ಕಿಂತ ಎರಡು ಪರ್‌ಸೆಂಟ್ ಕಡಿಮೆ ಬಡ್ಡಿ ಹಾಕುತ್ತಾರೆ. ನಂತರ ಅಪೆಕ್ಸ್ ಬ್ಯಾಂಕ್‌ನವರು ಅರ್ಧ ಪರ್‌ಸೆಂಟ್ ಬಡ್ಡಿ ಹಾಕುತ್ತಾರೆ. ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ನವರು ಮತ್ತೆ ಎರಡೂವರೆ ಪರ್‌ಸೆಂಟ್ ಬಡ್ಡಿ ಜಾಸ್ತಿ ಹಾಕತ್ತಾರೆ. ಈ ಪ್ರಕಾರದಲ್ಲಿ ರೈತನಿಗೆ ಹಣ ಮುಟ್ಟುವಲ್ಲಿ ಅವನು 100ಕ್ಕೆ ಒಂಬತ್ತೂವರೆ ಪರ್‌ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಮುಂದೆ ಇನ್ನೂ ಎಷ್ಟು ಹೆಚ್ಚಿಸುತ್ತಾರೋ ಗೊತ್ತಿಲ್ಲ.

[Mr. SPEAKER in the Chair]

ನಮ್ಮ ರಾಜ್ಯದಲ್ಲಿ ಈ ಪ್ರಕಾರವಾಗಿ ರೈತರಿಗೆ ಒಂಬತ್ತೂವರೆ ಪರ್‌ಸೆಂಟ್ ಬಡ್ಡಿ ಬೀಳುತ್ತಿದೆ. ನಮ್ಮ ರಾಜ್ಯದಲ್ಲಿ ಒಟ್ಟು 18,374 ಸೊಸೈಟಿಗಳಿವೆ. 35 ಲಕ್ಷ 15 ಸಾವಿರ ಜನ ಮೆಂಬರ್‌ಗಳಿದ್ದಾರೆ. ಶೇರ್ ಬಂಡವಾಳ 28 ಕೋಟಿ 15 ಲಕ್ಷ ಇದೆ. ಠೇವಣಿ 35 ಕೋಟಿ ಮಾತ್ರವಿದೆ. ಸಾಲ 95 ಕೋಟಿ ರೂಪಾಯಿಗಳಿಗೆ ಮಿಕ್ಕಿದೆ. ಎಲ್ಲಾ ಸಹಕಾರ ಸಂಘಗಳಲ್ಲಿ ಬರುತ್ತಿರುವ ಲಾಭ ನೋಡಿದರೆ ನೂರಕ್ಕೆ ಎರಡು ಪರ್ಸೆಂಟ್‌ಗೆ ಕಮ್ಮಿಯಿದೆ. ನಮ್ಮ ಮೈಸೂರು ರಾಜ್ಯದ ಉದ್ದಿಮೆಗಳೆಲ್ಲ ನಷ್ಟ ವನ್ನನುಭವಿಸುವಾಗ ನಮ್ಮ ಸಹಕಾರ ಸಂಘಗಳಲ್ಲಿ ಇಷ್ಟಾದರೂ ಲಾಭ ಬರುತ್ತಿದೆ ಎಂಬುದನ್ನು ನೋಡಿ ಸುಮ್ಮನಿರಬಹುದಾದರೂ ಅದು ಅಷ್ಟೇನು ಹೇಳಿಕೊಳ್ಳುವ ಮಾತಲ್ಲ. ರಿಜರ್ವ್ ಬ್ಯಾಂಕ್ ನಿಂದ ಕಡಿಮೆ ದರದಲ್ಲಿ ಸಾಲ ಪಡೆದು ರೈತರಿಗೆ ಹೆಚ್ಚಿನ ದರದಲ್ಲಿ ಕೊಡುತ್ತಿರುವುದನ್ನು ನೋಡಿದರೆ, ಆಡಳಿತದಲ್ಲಿ ಬಿಗಿಯಿಲ್ಲ, ಹಣದ ದುರುಪಯೋಗ ತಾಂಡವವಾಡುತ್ತಿದೆಯೆಂದು ಹೇಳಬಹುದು.

ಇನ್ನು ರಿಜಿಸ್ಟ್ರಾರ್ ಕೆಲಸದ ಬಗ್ಗೆ ಹೇಳುವುದಾದರೆ ಈ ದಿವಸ ರಿಜಿಸ್ಟ್ರಾರರು, ಜಾಯಿಂಟ್ ರಿಜಿಸ್ಟ್ರಾರರು, ಡೆಪ್ಯುಟಿ ರಿಜಿಸ್ಟ್ರಾರರು ಮುಂತಾದವರೆಲ್ಲಾ ಇದ್ದಾರೆ. ಹುದ್ದೆಗಳಲ್ಲಿ ಬದಲಾವಣೆ ಯಾಗಿದೆಯೇ ಹೊರತು ಅಧಿಕಾರದಲ್ಲಿ ಬದಲಾವಣೆಯಾಗಿಲ್ಲ. ಡೆಪ್ಯುಟಿ ರಿಜಿಸ್ಟ್ರಾರ್ ಆಗಿದ್ದವರು ಜಾಯಿಂಟ್ ರಿಜಿಸ್ಟ್ರಾರ್ ಆಗಿದ್ದಾರೆ. ಒಂದೊಂದು ಜಿಲ್ಲೆಗೆ ಒಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರರನ್ನ ನೇಮಿಸಿದ್ದಾರೆ. ಕೇವಲ ಹುದ್ದೆಗಳನ್ನು ಹೆಚ್ಚಿಸಿ ಬೇಕಾದವರಿಗೆ ಪಗಾರ ಕೊಡಲು ಅವಕಾಶ ಮಾಡಿರುವರೇ ಹೊರತು ತಾರತಮ್ಯ ಹೆಚ್ಚುಮಾಡಿಲ್ಲ. ಇಂದು ಸಹಕಾರಿ ರಂಗ ಬಹಳ ವಿಸ್ತೀರ್ಣ ವಾಗಿದೆ. ಬೇಕಾದ ವ್ಯಕ್ತಿಗಳಿಗೆ ಅವಕಾಶ ಮಾಡಲಾಗಿದೆಯೇ ವಿನಾ ಜನರಿಗೆ ಸಾಕಷ್ಟು ಉಪಯೋಗ ವಾಗಿರುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟಿನ ವಿಚಾರದಲ್ಲೂ ಬಹು ವಿಸ್ತೀರ್ಣವಾಗಿದೆ. ಇದರಲ್ಲಿ ಹೆಚ್ಚು ಕಾರ್ಯಕ್ಷಮತೆಯನ್ನುಂಟುಮಾಡಲು ಮಾರ್ಕೆಟಿಂಗ್ ಆಫೀಸರ್ ಹುದ್ದೆ ಮತ್ತು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಹುದ್ದೆ ಕೆಲಸ ಕಾರ್ಯಗಳನ್ನು ನಿರ್ದಿಷ್ಟ ಮಾಡಿ ಅವರಿಬ್ಬರ ಮೇಲೆ ಒಬ್ಬ ಕೋ-ಅಪರೇಟಿವ್ ಕಮಿಷನರ ಹುದ್ದೆ ಮಾಡಿರಿ. ಹಾಗೆ ಮಾಡಿದರೆ ಪ್ರಗತಿಯಾಗುತ್ತದೆ. ಇಲ್ಲದಿದ್ದರೆ ಸರಿಯಾದ ರೀತಿಯಲ್ಲಿ ಆಡಳಿತ ನಡೆಯುವುದಿಲ್ಲ. ನಮ್ಮ ಸಹಕಾರ ಚಳವಳಿಗೆ ಸರಿಯಾದ ಕೀರ್ತಿ, ಒಂದು ಒಳ್ಳೆಯ ಸ್ವರೂಪ ಬರುವುದಿಲ್ಲ. ಇಂದು ಪಂಡಿತ್ ಕಮಿಟಿ ಮಾಡಿದರು, ಅದರ ವರದಿ ಬಂತು. ಆದರೆ ಅದರಂತೆ ಅಮಲಿಗೆ ತಂದಿರಾ ? ನೀವು ಮಾಡಿದ ಸಮಿತಿಯ ವರದಿಗೆ ಮನ್ನಣೆ ಯಿಲ್ಲದಿದ್ದರೆ ಸಮಿತಿ ರಚಿಸಿ ಪ್ರಯೋಜನವೇನು ? ಆ ವರದಿಯನ್ನು ಒಪ್ಪಿಕೊಂಡು ಅದರಂತೆ ಕಾರ್ಯಕ್ರಮ ಕೈಕೊಳ್ಳಬೇಕಾಗಿತ್ತು. ಕೆಲವು ಸೊಸೈಟಿಗಳನ್ನು ಅದರ ಸ್ವೀಕಾರ ಮಾಡಿ ನಾಲ್ಕೈದು ತಿಂಗಳುಗಳಾದರೂ ಅವಕ್ಕೆ ಮಂಜೂರಾತಿಯನ್ನು ಕೊಡುವುದಿಲ್ಲ. ಒಮ್ಮೆ ವರದಿ ಪ್ರಕಟವಾದ ನಂತರ ಪಗಾರ ಹೆಚ್ಚಳಕ್ಕೆ ನಿಮ್ಮ ಮಂಜೂರಿಯೇಕೆ ?

ಆಡಿಟ್ ಬಗ್ಗೆ ಹೇಳುವುದಾದರೆ ರಿಜಿಸ್ಟ್ರಾರರ ಆಫೀಸಿನ ಯಾರೋ ಕ್ಲಾರ್ಕರಾದಂಥವರು ಮಾಡುವುದಾದರೆ ಅದು ಹೇಗೆ ಸರಿಯಾದ ಆಡಿಟ್ ಆಗುತ್ತದೆ ? ಅಧ್ಯಕ್ಷರು ತಪ್ಪುಮಾಡಿದರೆ ರಿಜಿಸ್ಟ್ರಾರ್ ಬರೆಯಬಹುದು, ರಿಜಿಸ್ಟ್ರಾರ್ ತಪ್ಪುಮಾಡಿದರೆ ಯಾರು ಬರೆಯಬೇಕು ? ರಿಜಿಸ್ಟ್ರಾರರ ಕೈಯೊಳಗಿರು ವವರು ರಿಜಿಸ್ಟ್ರಾರರಿಗೆ ಹಾನಿಯಾಗುವಂತೆ ಬರೆಯುವರೇ ? ಅದ್ದರಿಂದ ಇದಕ್ಕೆ ಪ್ರತ್ಯೇಕವಾಗಿ ಏರ್ಪಾಡು ಮಾಡಿದರೆ ಬೇರೆಯವರನ್ನು ನೇಮಕ ಮಾಡಿದರೆ ಆಗ ಆಡಿಟ್ಟಿಗೆ ಘನತೆ ಗೌರವ-

ಬರಬಹುದು. ಇಂಥ ಆಡಿಟ್ ವರ್ಗ ನಿರ್ಮಾಣ ಮಾಡುವುದಕ್ಕೆ ನಿಜವಾಗಿಯೂ ಈ ಮೂಲಕ ನಿಜಲಿಂಗಪ್ಪನವರಿಗೆ ನೈತಿಕ ಧೈರ್ಯವಿದ್ದರೆ ಮಾಡಲೆಂದು ಆಹ್ವಾನ ಕೊಡುತ್ತೇನೆ. ಇದೊಂದ ನ್ನಾದರೂ ಮಾಡಲೆಂದು ಅವರನ್ನು ಪ್ರಾರ್ಥನೆಮಾಡುತ್ತೇನೆ. ಅವರು ಬಲವತ್ತರವಾದ ಪ್ರತ್ಯೇಕ ಆಡಿಟ್ ಶಾಖೆಯನ್ನು ನೇಮಕವಮಾಡಿ ಸಹಕಾರ ಸಂಘಗಳಾಗಲಿ, ಬೇರೆ ಕಡೆಗಳಲ್ಲಾಗಲೀ ಯಾರು ತಪ್ಪುಮಾಡಿದರೂ ಕೂಡ ತಪ್ಪಿತಸ್ಥರು ಅಧಿಕಾರಸ್ಥರಾದರೂ ಮಂತ್ರಿಗಳಾದರೂ ಕೂಡ ಅವರಿಗೆ ಸರಿಯಾದ ಶಿಕ್ಷೆ ವಿಧಿಸಿ ಜೈಲಿಗೆ ಹಾಕಲು ಅವಕಾಶವಿರುವಂತೆ ಮಾಡಬೇಕು. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕಾಯಿದೆ ಇರಕೂಡದು ಎಲ್ಲರಿಗೂ ಒಂದೇ ರೀತಿಯಿರಬೇಕು. ತಪ್ಪುಮಾಡಿದವ ರೆಲ್ಲರಿಗೂ ಒಳ್ಳೆಯ ರೀತಿಯಲ್ಲಿ ಶಿಕ್ಷೆ ಮಾಡಬೇಕು.

ಸ್ಟೇಟ್ ಪಾರ್ಟ್‌ನರ್ ಷಿಪ್ ವಿಚಾರ ತೆಗೆದುಕೊಂಡರೆ ಹಣ ಹಾಕುವುದು, ತೆಗೆದುಕೊಳ್ಳುವುದು ಇದೆ. ಇದಕ್ಕೆ ಒಂದು ನಿರ್ದಿಷ್ಟ ಯೋಜನೆಮಾಡಬೇಕು, ಸೇಕಡ 50 ರಷ್ಟು ಷೇರಿರುವವರಿಗೆ ಅವಕಾಶ ಕೊಡಬೇಕು, ಬೇಕಾದವರಿಗೆ ಕೊಟ್ಟು ತೊಂದರೆಯಾಗುವುದಕ್ಕೆ ಅವಕಾಶ ಕೊಡಬಾರದು. ಯಾರು ಶಿಫಾರಸು ಮಾಡಿದರೂ ಯೋಚನೆಮಾಡಿ ಅವಕಾಶಕೊಡಬೇಕು. ಸರಕಾರದ ಅಂಕಿಅಂಶಗಳ ಪ್ರಕಾರ 1,470 ಗೊಡೌನುಗಳನ್ನು ಕಟ್ಟಬೇಕೆಂದರೆ 960 ಕಟ್ಟಿ ಉಳಿದಿರುವುದಕ್ಕೆ ಕಟ್ಟದಿದ್ದರೂ ಹಣ ತೆಗೆದು ಕೊಂಡಿದ್ದಾರೆ. ಕೆಲವು ಸೊಸೈಟಿಗಳಲ್ಲಿ ಗೊಡೌನು ಮಂಜೂರು ಮಾಡಿದರೂ ತೆಗೆದುಕೊಂಡ ಸಾಲದ ಕಂತನ್ನು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಗೋಡೌನು ಹಣ ತೆಗೆದುಕೊಂಡಿದ್ದರೂ ಮಾಡಿರುವರೇ ಇಲ್ಲವೇ ಎಂಬುದು ಗೊತ್ತಿಲ್ಲ. ಈ ಪರಿಸ್ಥಿತಿ ಹೋಗಬೇಕು. ನಿಷ್ಪಕ್ಷಪಾತವಾದ ರೀತಿಯಲ್ಲಿ ವಿಚಾರಿಸಿ ನ್ಯಾಯವನ್ನು ಪರಿಪಾಲಿಸಿ ಸೌಲತ್ತು ಸೌಲಭ್ಯಗಳನ್ನು ಕೊಡಬೇಕು. ಸಹಕಾರ ರಂಗದಿಂದ ರಾಜಕೀಯವನ್ನು ದೂರವಾಗಿಡಬೇಕು, ಕಾಂಗ್ರೆಸ್ಸಿನವರೇ ಆಗಲಿ ಯಾವ ಪಕ್ಷದವರೇ ಆಗಲಿ ಎಲ್ಲರಿಗೂ ನ್ಯಾಯ ಒಂದೇ ರೀತಿ ಇರಬೇಕು. ಪಾಟೀಲರು ಅಧಿಕಾರದಲ್ಲಿರುವ ಸಹಕಾರ ಸಂಘವನ್ನು ಹತ್ತಿಕ್ಕಿದರೆ ಅದರಿಂದ ಕಲ್ಯಾಣವಾಗುತ್ತದೆ ಎಂದು ತಮ್ಮ ಹಿಂಬಾಲಕರು ಯಾರೋ ಕಿವಿಯಲ್ಲಿ ಹೇಳಿದರೆ ಅದನ್ನೇ ಕೇಳಿ ಹತ್ತಿಕ್ಕುವುದು ಸರಿಯಲ್ಲ. ಮಾನ್ಯ ನಿಜಲಿಂಗಪ್ಪನವರು ತಮ್ಮ ಹೃದಯದಲ್ಲಿ ವಿಚಾರಮಾಡಿ ಹೇಳಲಿ. ನಾಡಗೌಡರು ಈಗತಾನೆ ಸಹಕಾರೀ ಖಾತೆಗೆ ಬಂದಿ ದ್ದಾರೆ. ಅವರಿಗೆ ತಿಳಿವಳಿಕೆ ಸಾಲದು, ಸಹಕಾರಿ ರಂಗದ ಬಗ್ಗೆ ಅವರಿಗೆ ಅನುಭವ ಸಾಲದ್ದರಿಂದ ಅವರಿಗೆ ಹೇಳುವುದಿಲ್ಲ, ಅವರಿಗೆ ಆಡಳಿತ ಸಂಬಂಧಪಟ್ಟಿದ್ದರೂ ಸಹ ನಿಜವಾಗಿ ಸಹಕಾರೀ ಖಾತೆಗೆ ನಿಜಲಿಂಗಪ್ಪನವರೇ ಹೊಣೆ ಎಂದು ಅವರಿಗೆ ಎಚ್ಚರಿಕೆ ಕೊಡುತ್ತೇನೆ. ಅವರು ಭಾರತದ ನಾಯಕ ರೆಂದು ಜಾಯಿಂಟ್ ಫಾರ್ಮಿಂಗ್ ಕಮಿಟಿಯನ್ನು ನೇಮಿಸಿ ನಿಜಲಿಂಗಪ್ಪ ಕಮಿಟಿ ಎಂದು ಕರೆದಿದ್ದಾರೆ. ಹೀಗಿರುವಾಗ ಅವರ ಕಾಲದಲ್ಲಿ ಸಹಕಾರೀ ಜೀವನ ಕೆಡಿಸಬಾರದು ಜನತೆಯಿಟ್ಟ ವಿಶ್ವಾಸಕ್ಕೆ ದ್ರೋಹ ಬಗೆಯಬಾರದು.

ಇಂಡಸ್ಟ್ರಿಯಲ್ ಬ್ಯಾಂಕು ಹೇಗಿದೆಯೆಂಬುದನ್ನು ನೋಡಿ. ಇಂದು ಈ ಬ್ಯಾಂಕಿನಲ್ಲಿ ದುರಾಡಳಿತ ಅತಿಯಾಗಿದೆ, ಒಂದೆರಡಲ್ಲ, ಲಕ್ಷಗಟ್ಟಲೆ ಹಣ ಹೋದರೂ ಕೇಳ ವವರೇ ಇಲ್ಲ. ಹುಬ್ಬಳ್ಳಿ ಕರ್ನಾಟಕ ಕ್ಯಾಲೆಂಡರಿಂಗ್ ಸಂಘಕ್ಕೆ ಎಷ್ಟು ಬಂಡವಾಳ ಹಾಕಿರುವಿರಿ ಏನಾಗಿದೆ ನೋಡಿ. ಅದನ್ನು ಯಾವ ಡೈರೆಕ್ಟರಾಗಲಿ ಅಥವಾ ಮಂತ್ರಿಗಳಾಗಲಿ ಯಾರಾದರೂ ನೋಡಿದ್ದಾರೆಯೇ ? ಅಲ್ಲಿರುವವ ರೆಲ್ಲರ ಮೇಲೂ ಸರ್ಚಾರ್ಜ್ ಮಾಡಬಹುದು, ಲಕ್ಷಗಟ್ಟಲೆಹಣ ಹಾಳುಮಾಡಿದ್ದಾರೆ. ಅದರ ಬೆಳವಣಿಗೆಗೆ ಅನುಕೂಲ ಮಾಡುವುದರ ಬದಲು ಅದೇ ಫಾರಿನ್ ಎಕ್ಸ್‌ಛೇಂಜ್ ತಂದು ಬೇರೆಯವರಿಗೆ ಕೊಟ್ಟಿದ್ದರೆ ಉದ್ಯೋಗಾಭಿವೃದ್ಧಿಗೆ ಅನುಕೂಲವಾಗುತ್ತಿತ್ತು. ನಿಮ್ಮ ಹಿಂದಿರುವವರು, ಭಟ್ಟಂಗಿಗಳು ವರ್ಷ ಕ್ಕೊಂದು ಸಲ ನಿಮ್ಮನ್ನು ಪ್ರದರ್ಶನಕ್ಕೆಂದು ಕರೆಸಿ ನಿಮ್ಮ ಫೋಟೋ ಅಲ್ಲಿ ಹಾಕುತ್ತಾರೆ, ನಿಮಗೆ ಬೇಕಾದ ಮರ್ಯಾದೆ ಮಾಡುತ್ತಾರೆ ಎಂದು ಸುಮ್ಮನೆ ಇದ್ದೀರಿ. ತಮ್ಮ ಷಷ್ಠ್ಯಬ್ಧಿಯ ಸಲುವಾಗಿ ಸಹಕಾರ ಸಂಘಗಳಲ್ಲಿ ಕಾಂಟ್ರಿಬ್ಯೂಷನ್ ಎಂದು ಖರ್ಚು ಹಾಕಿದರು, ಇದನ್ನು ನೋಡಿ ಹೇಗೆ ಸುಮ್ಮನಿದ್ದೀರಿ. ಒಂದೊಂದು ಸಂಘದಲ್ಲೂ 500–1,000 ಹೀಗೆಲ್ಲಾ ಇದಕ್ಕೆ ಖರ್ಚುಮಾಡುವುದಕ್ಕೆ ಕಾಯಿದೆಯಲ್ಲಿ ಅವಕಾಶ ಇದೆಯೇ ? ಇದಕ್ಕೆ ಭ್ರಷ್ಟಾಚಾರವೆನ್ನದಿದ್ದರೆ ಮತ್ತೇನೆನ್ನಬೇಕು ? ವಿರೋಧ ಪಕ್ಷದವರು ಇಲ್ಲಸಲ್ಲದ ಟೀಕೆ ಮಾಡುವುದಿಲ್ಲ, ವಿಚಾರಮಾಡಿ. ಇದಕ್ಕೆ ಯಾರು ಹೊಣೆಯೋ ಅವರಿಗೆ ಶಿಕ್ಷೆಮಾಡಿ. ಮುಂದೆ ಈ ರೀತಿ ಮಾಡದ ಹಾಗೆ ಬಂದೋಬಸ್ತು ಮಾಡಿ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ಒಂದು ಹಾಸ್ಟಲು ಅಥವಾ ಕಾಲೇಜಿಗೆ ಜಾಗ ಕೇಳಿದರೆ ಕ್ರಮ ತೆಗೆದು ಕೊಳ್ಳುವ ಹವ್ಯಾಸ ಮಾಡುತ್ತೀರಿ. ಅದೇ ಈ ದಿವಸ ಕಿತ್ತೂರು ಚನ್ನಮ್ಮ ಫಂಡಿಗಾಗಿ ಹಣ ಕೇಳಲು ಸರ್ಕ್ಯುಲರನ್ನು ಯಾವ ಆಧಾರದ ಮೇಲೆ ಕೊಡಲಾಗಿದೆ ? ನೀವೇ ಹೀಗೆ ಮಾಡುವಾಗ ಇನ್ನೊಬ್ಬರ ಮತ್ತು ಮಾರ್ಕೆಟ್‌ಯಾರ್ಡುಗಳಲ್ಲಿ ಗುಡಿಗಳನ್ನು ಹೇಗೆ ಕಟ್ಟಲು ಒಪ್ಪಿದ್ದೀರಿ. ತಪ್ಪನ್ನೆಂತು ಅರಿಸಬಲ್ಲಿರಿ ?

(ಶ್ರೀ ಕೆ. ಎಚ್. ಪಾಟೀಲ್)

ಇವತ್ತಿನ ದಿವಸ ಅಪೆಕ್ಸ್ ಬ್ಯಾಂಕಿನಲ್ಲಿ ನಿಮ್ಮ ಪ್ರತಿನಿಧಿಗಳೂ ಇರುತ್ತಾರೆ, ಜನತೆಯ ಪ್ರತಿನಿಧಿಗಳೂ ಬರುತ್ತಾರೆ, ಚುನಾವಣೆ ನಡೆಯುತ್ತದೆ ಎಲ್ಲರೂ ಓಟು ಹಾಕುತ್ತಾರೆ. ನಾಮಿನೇಟೆಡ್ ಮೆಂಬರನ್ನು ಅಪೆಕ್ಸ್ ಬ್ಯಾಂಕಿನ ಸೆಕ್ರೆಟರಿ ಅಂತ ಹೇಳಿ ರಿಜಿಸ್ಟ್ರಾರ್‌ರವರು ಹಾಕುತ್ತಾರೆ. ಈ ರೀತಿ ಎಲ್ಲಾ ಅಕ್ರಮ ಕೆಲಸ ಮಾಡುತ್ತಾ ಇದ್ದೀರಿ, ನಿಮ್ಮ ಹಾಗೂ ನಿಮ್ಮ ರಿಜಿಸ್ಟ್ರಾರರ ಮೇಲೆ ಅರ್ಬಿಟ್ರೇಷನ್ ಹೋಗಲಿಕ್ಕೆ, ಕೋರ್ಟಿಗೆ ಹೋಗಲಿಕ್ಕೆ ಅಧಿಕಾರ ಇಲ್ಲ. ನಾವು ದಾವೆ ಮಾಡುತ್ತೇವೆ ಎಂದು ಹೇಳುವುದೂ ಕೂಡ ಕಾಯ್ದೆಯಿಂದ ಬರುವಂತಿಲ್ಲ. ಪ್ರಜಾಪ್ರಭುತ್ವದಲ್ಲಿ 'ನೋ ಬಾಡಿ ಷಲ್ ಬಿ ದಿ ಜಡ್ಜ್ ಆಫ್ ಹಿಸ್ ಓನ್ ಕಾಸ್ (No body shall be the Judge of his own cause). ಎನ್ನುವುದನ್ನಾದರೂ ಲಕ್ಷ್ಯದಲ್ಲಿ ತೆಗೆದುಕೊಳ್ಳಿರಿ ಎಂದು ಹೇಳುತ್ತೇನೆ. ಸ್ಟೇಟ್ ಪಾರ್ಟ್‌ನರ್‌ಷಿಪ್ ಇರಬೇಕೆಂದು ಸೆಕ್ಷನ್ 54ರ ಪ್ರಕಾರ ಕ್ರಮತೆಗೆದುಕೊಳ್ಳಲಿಕ್ಕೆ ಪ್ರಯತ್ನಪಟ್ಟಿದ್ದೀರಿ ಸಂತೋಷ. ನಿಮಗೆ ಕಡುವೈರಿಯಾದವರನ್ನು ಹಿಂದಕ್ಕೆ ಸರಿಸಲು ಪ್ರಯತ್ನ ಮಾಡಿದ್ದೀರಿ, ಉಳಿದವರನ್ನು ಮಾಡಿಲ್ಲ, ಇನ್ನು ಮುಂದಾದರೂ ಇದಕ್ಕೆ ಹೆಚ್ಚು ಮುತುವರ್ಜಿವಹಿಸಿರಿ. ನನಗೆ ಮಾಡಿದ ಅನ್ಯಾಯ ಅನ್ಯರಿಗೆ ಮಾಡಬೇಡಿರಿ ಇದು ಬಹಳ ಕೆಟ್ಟದ್ದು ಸಹಕಾರದ ಚಳುವಳಿಯನ್ನೇ ನೀವು ಗೋರಿ ಮಾಡುವವರು ಆಗುತ್ತೀರಿ. ನೀವು ಅನ್ನಬಹುದು, ತಕಾವಿ ಸಾಲ ಕೊಡುತ್ತೇವೆ, 3 ಸಾವಿರ ರೂಪಾಯಿ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್‌ಗಳ ಮುಖಾಂತರ ಹಂಚುತ್ತೇವೆ ಎಂದು. ಅದು ಸರಿಯಾಗಿ ವಿನಿಯೋಗವಾಗದ ಪರಿಸ್ಥಿತಿ ಆಗಿದೆ. ಖಾದಿ ಬೋರ್ಡಿನಂತಹ ಪ್ರಸಂಗವೇ ಈ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್‌ನಲ್ಲೂ ಮುಂದೆ ಬಂದರೆ ಬರುತ್ತದೆ ಅದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಅದರ ಸಲುವಾಗಿ ತಮಗೆ ಪ್ರಾರ್ಥನೆ ಮಾಡುತ್ತೇನೆ ಅದರ ಬಗ್ಗೆ ಸ್ವಲ್ಪ ಲಕ್ಷ್ಯ ತೆಗೆದುಕೊಳ್ಳಬೇಕು. ಇನ್ನು ಕೆ. ಆರ್. ನಗರದ ಬ್ರಾಂಚ್ ಸೊಸೈಟಿಯಲ್ಲಿ ಸಹಿತ ಟೆಂಪೊರರಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆಯೆಂತಾ ನೋಟೀಸ್ ಕೊಟ್ಟಿದ್ದಾರೆ ಅದರ ಬಗ್ಗೆ ಯೋಗ್ಯವಾದ ತನಿಖೆಯನ್ನು ಅಧಿಕಾರಿಗಳಿಂದ ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗ ಸಹಕಾರ ರಂಗದಲ್ಲಿ ಈ ಡಿಪಾರ್ಟ್‌ಮೆಂಟಿನೊಳಗೆ ಕೆಲವರಿಗೆ ಜಹಗೀರಿ ಹಾಕಿದ್ದೀರಿ. ಯಾರೊಬ್ಬರು ಇದ್ದಾರೋ ಅವರಿಗೇ ಲಾಭವಾಗಬೇಕು ಮತ್ತೊಬ್ಬರಿಗೆ ಲಾಭವಾಗಬಾರದು, ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಸೂಕ್ತವಾದ ಸಲಹೆ ಕೊಟ್ಟರು. ವರ್ಗಾವರ್ಗಿಯಲ್ಲಿ ಯಾವ ಮೆಂಬರರೂ ಕೈ ಹಾಕಬೇಡಿ ಅಂತ ಹೇಳಿರುವುದು ಬಹಳ ಸಂತೋಷ, ಅವರು ಅನ್ಯಾಯವಾದಲ್ಲಿ ಯಾರೂ ಕೈ ಹಾಕಬಾರದು ಎಂದು ಹೇಳಲಿಲ್ಲ. ನನ್ನ ಗಮನಕ್ಕೆ ಬಂದಿರುವುದನ್ನು ಹೇಳುತ್ತೇನೆ. ಅದನ್ನು ಪರೀಕ್ಷೆ ಮಾಡಿ, ಹೆಸರು ಹೇಳುವುದಿಲ್ಲ, ಎಲ್ಲಿ ಅಂತ ಹೇಳುವುದಿಲ್ಲ, ಅಂತೂ ಕೆಲವರಿಗೆ ನವಕರಿ ಜಹಗೀರಿ ಆಗಿದೆ. ಕಾರಕೂನನಾಗಿ ಒಂದೇ ಸ್ಥಳದಲ್ಲಿದ್ದರೂ ಮೇಲೂ ಹೋಗುವ ಹಾಗೆ ಇಲ್ಲ ಕೆಳಗೂ ಬರುವ ಹಾಗೆ ಇಲ್ಲ. ಹೀಗೇಕೆ ? ಈ ರೀತಿ ಇರುವುದರಿಂದ ನಿಮ್ಮೆಲ್ಲರ ಅಂಡರ್ ಹ್ಯಾಂಡ್ ಡೀಲಿಂಗ್ಸ್ ಇದೆ ಎಂದು ಸಂಶಯ ಬರುತ್ತಿದೆ. ನಿಮ್ಮ ವರ್ತನೆ ಉತ್ತಮಗೊಳ್ಳಬೇಕಾಗಿದ್ದರೆ ಒಬ್ಬರಿಗೆ ಒಂದು ಒಬ್ಬರಿಗೊಂದು ಕ್ರಮ ಕೈಗೊಳ್ಳುವುದನ್ನು ಮಾಡಬೇಡಿ. ನಮ್ಮ ಮೈಸೂರು ರಾಜ್ಯದ ಸಹಕಾರ ಶಾಖೆಯ ರಿಜಿಸ್ಟ್ರಾರ್‌ರವರು ಹಾಗೂ ಸೆಕ್ರೆಟರಿಯವರು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಸೆಕ್ರೆಟರಿಯವರಿಗೆ ಹುಲಕೋಟಿ ಕೋ ಆಪರೇಟಿವ್ ಕ್ಯಾಟಲ್ ಫೀಡ್ ಪ್ರೋಸೆಸ್ಸಿಂಗ್ ಸಂಘಕ್ಕೆ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದ್ದರೆಂದು ಕೇಳುತ್ತೇನೆ. ಆದರೆ ಆ ಆಶ್ವಾಸನದಂತೆ ನಡೆಯಲಿಲ್ಲ. ಕೇಂದ್ರದ ಸಹಾಯವನ್ನು ಅದನ್ನು ಅವರಿಗೆ ಬಿಟ್ಟು ಮತ್ತೊಬ್ಬರಿಗೆ ಕೊಟ್ಟಿದ್ದಾರೆ. ಇಂತಹ ಸತ್ಯಕ್ಕೆ ದೂರವಾದ ಆಶ್ವಾಸನಗಳನ್ನು ಮಾಡಬೇಡಿ. ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಿರುವಂತಹ ಅನೇಕ ದೋಷಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಿರಿ. ಸಹಕಾರಿ ಸಂಘಗಳಲ್ಲಿ ಸಿಕ್ಕಬೇಕಾದ ವಸ್ತುಗಳು ವ್ಯವಸ್ಥಿತವಾಗಿ ಸಿಕ್ಕಬೇಕು, ಬೀಜ ಕಡಿಮೆ ದರದಲ್ಲಿ ಸಿಕ್ಕಬೇಕು, ನೀವು ಕೊಡತಕ್ಕ ಸಾಲ ಸದಾಕಾಲ ಸಿಕ್ಕಬೇಕು, ಗೊಬ್ಬರ ಮತ್ತು ಬೀಜ ಮಾರ್ಕೆಟಿಂಗ್ ಸೊಸೈಟಿ ಮೂಲಕ ಕ್ರೆಡಿಟ್ ಮೇಲೆ ಕೊಡಲಿಕ್ಕೆ ಅನುಕೂಲ ಮಾಡಬೇಕು ಮತ್ತು ಮಾಲನ್ನು ಮಾರಾಟ ಮಾಡುವಾಗ ಯೋಗ್ಯವಾದ ಬೆಲೆಯಲ್ಲಿ ದೊರಕಿಸಲಿಕ್ಕೆ ಅನುಕೂಲ ಮಾಡಿಕೊಡಬೇಕು. ಮತ್ತು ಸಾಲಗಳನ್ನು ಕಾಲಕ್ಕೆ ಸರಿಯಾಗಿ ವಾಪಸು ಕೊಟ್ಟಂತವರಿಗೆ ಸವಲತ್ತಿನ ಬಡ್ಡಿ ಕೊಡುವಂತಹ ಯೋಜನೆಯನ್ನು ಆಳವಡಿಸಿಕೊಳ್ಳಬೇಕು. ಪ್ರೊಸೆಸಿಂಗ್ ಸೊಸೈಟಿ ಬಗ್ಗೆ ನಿಷ್ಪಕ್ಷಪಾತಿಗಳಾಗಿ ಮುತುವರ್ಜಿಯಿಂದ ಕೆಲಸ ಮಾಡಬೇಕು, ಯಾವುದೇ ತರಹದ ಪಕ್ಷಪಾತ ಬರಬಾರದು. ರಿಜಿಸ್ಟ್ರಾರ್‌ರವರು ಈಗಿರತಕ್ಕವರು ಐ.ಎ.ಎಸ್. ಆಫೀಸರಾಗಿದ್ದಾರೆ. ಅವರು ಮುಖ್ಯ ಮಂತ್ರಿಗಳು ಹೇಳಿದ್ದಕ್ಕೆಲ್ಲಾ ಸರಿ ಅಂತ ಹೇಳಿ ಅದರಂತೆಯೇ ಹೋಗಬಾರದು ನಾವು ಹೇಳಿದ್ದೆಲ್ಲಾ ಮಾಡುತ್ತಾರೆ ಅಂತ ಹೇಳಿ ಸಚಿವರು

ಭ್ರಮೆ ಇಟ್ಟುಕೊಂಡಿದ್ದಾರೆ. ಅದಕ್ಕೆ ಅವಕಾಶ ಕೊಡದೇ ಯಾವುದು ನ್ಯಾಯವಾಗಿ ಆಗಬೇಕೋ ಅದನ್ನು ನಿರ್ದಾಕ್ಷಿಣ್ಯವಾಗಿ ಮಾಡತಕ್ಕ ಮನೋಭಾವ ಉಳ್ಳವರಾಗಬೇಕೆಂದು ಹೇಳುತ್ತಾ ಇದ್ದೇನೆ. ಈಗಿರತಕ್ಕ ರಿಜಿಸ್ಟ್ರಾರ್ ಸಾಹೇಬರು ಇನ್ನು ಮುಂದಾದರೂ ಆ ರೀತಿ ಮಾಡುತ್ತಾರೆ ಎಂದು ಹೇಳಿ ಅವರಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ಇನ್ನು ಸಹಕಾರಿ ಖಾತೆಯಲ್ಲಿ ಕೆಲವು ಮಂದಿ ನೌಕರರಿಗೆ ಬಡ್ತಿಕೊಡುವಾಗ ಮತ್ತು ಇನ್‌ಕ್ರಿಮೆಂಟ್ ಕೊಡುವಾಗ ಬಹಳ ಅನ್ಯಾಯವಾಗಿದೆ. ಮೊದಲಿನ ರಿಜಿಸ್ಟ್ರಾರ್‌ರವರು ಹೇಳಿದ್ದೇ ಒಂದು ರೀತಿ, ಈಗಿನವರದೇ ಒಂದು ರೀತಿ, ಮುಂದಿನವರದೇ ಒಂದು ರೀತಿ ಹೀಗೆ ಆಗಬಾರದು. ವ್ಯಕ್ತಿ ಯಾರೇ ಇರಲಿ ಅದನ್ನು ಗಮನಕ್ಕೆ ತೆಗೆದುಕೊಳ್ಳಬಾರದು. ಒಟ್ಟಾರೆ ನೌಕರರ ವರ್ಗಕ್ಕೆ ನ್ಯಾಯವಾಗಬೇಕು ಎನ್ನುವಂತಹ ಮಾತನ್ನು ಹೇಳಿ ಇಲ್ಲಿಯವರೆಗೂ ನಾನು ಬಹಳ ಕಟುವಾಗಿ ಕೆಲವು ಶಬ್ದಗಳನ್ನು ಆಡಿದ್ದರೂ, ಅದನ್ನು ನ್ಯಾಯ ದೃಷ್ಟಿಯಿಂದ, ಸಹಕಾರ ಚಳುವಳಿಯ ಅಭ್ಯುದಯದ ದೃಷ್ಟಿಯಿಂದ, ಮಾತನಾಡಿದ್ದೇನೆ. ಶ್ರೀಮಾನ್ ಮೆಹತಾರವರ ಮುಖಂಡತ್ವ ಪಡೆದಿದ್ದ ಸಹಕಾರ ರಂಗದಲ್ಲಿ ಕೆಲಸಮಾಡಿದಂತಹ ನಮಗೆ ಈ ಸಹಕಾರದ ಚಳುವಳಿಯನ್ನು ನೋಡಿ ರಕ್ತ ಕುದಿದು ವಿಶೇಷ ಆಸಕ್ತಿಯುಂಟಾಗಿ ಈ ರೀತಿ ಕಠಿಣವಾಗಿ ಮಾತನಾಡಬೇಕಾಯಿತು. ಮಹಾತ್ಮ ಗಾಂಧಿಯವರು ಹೇಳಿರತಕ್ಕ ಈ ಸಹಕಾರ ಚಳುವಳಿ ಪ್ರಗತಿಹೊಂದಿ, ಇಡೀ ಭಾರತದ ಜನತೆಗೆ ಒಂದು ಮಾರ್ಗದರ್ಶನವಾಗಲಿ, ಆ ಮೂಲಕ ಒಕ್ಕಲಿಗರ ಪ್ರಗತಿಯಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ನಂಜಪ್ಪ (ಗಂಡಸಿ).—ಸನ್‌ಮಾನ್ಯ ಸಭಾಪತಿಗಳೇ, ಈ ದಿವಸ ಗ್ರಾಮಾಭಿವೃದ್ಧಿ, ಸಹಕಾರ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ತಮ್ಮ ಮುಖಾಂತರವಾಗಿ ಕೊಡುತ್ತಾ ಇದ್ದೇನೆ. ನಮ್ಮ ದೇಶದ ಸುಮಾರು ಒಂದು ಕೋಟಿ 83 ಲಕ್ಷದಷ್ಟು ನಮ್ಮ ರೈತ ಬಂಧುಗಳ ಉದ್ಧಾರವಾಗಬೇಕಾದರೆ ಮುಖ್ಯವಾಗಿ ಗ್ರಾಮಾಭಿವೃದ್ಧಿ, ಸಹಕಾರ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆ ಯಶಸ್ವಿಯಾಗಿ ಕೆಲಸ ಮಾಡಬೇಕು. ಈ ಸಂದರ್ಭದಲ್ಲಿ ನಾನು ಈ ವಿಷಯವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಹೇಳುವುದಾದರೆ, ತಾಲ್ಲೂಕು ಅಭಿವೃದ್ಧಿ ಮಂಡಲಗಳು ಈಗ ಸಾಮಾನ್ಯವಾಗಿ 7-8 ವರ್ಷಗಳಿಂದ ಒಂದು ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದಿರುವುದು ತಮಗೆಲ್ಲರಿಗೂ ಗೊತ್ತಿರುವಂತಹ ವಿಚಾರ. ತಾಲ್ಲೂಕು ಬೋರ್ಡುಗಳ ಜವಾಬ್ದಾರಿ ಅತಿ ಹೆಚ್ಚಿನ ಜವಾಬ್ದಾರಿ. ಸಾಮಾನ್ಯವಾಗಿ ಒಂದು ತಾಲ್ಲೂಕಿಗೆ ಸಂಬಂಧಪಟ್ಟ ರಸ್ತೆಗಳ ನಿರ್ಮಾಣ, ಹೈಸ್ಕೂಲುಗಳನ್ನು ನಡೆಸುವುದು, ಜನಾರೋಗ್ಯ, ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವುದು, ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಿಸುವುದು ಮತ್ತು ಸಣ್ಣ ನೀರಾವರಿ ಕೆಲಸಗಳನ್ನು ಮಾಡುವುದು, ಇಂತಹ ಅನೇಕ ಜವಾಬ್ದಾರಿಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿದ್ದಾರೆ. ಈ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ಈ ತಾಲ್ಲೂಕು ಬೋರ್ಡುಗಳು ಮೊಟ್ಟಮೊದಲನೆಯ ಸಾರಿ ನಿರ್ವಹಿಸಿರುವುದು ನಿಜವಾಗಿಯೂ ಕೂಡ ಒಂದು ಮಹತ್ ಸಾಧನೆ. ಈ ಮಹತ್ ಸಾಧನೆಯನ್ನು ಇನ್ನೂ ಉತ್ತಮ ಮಟ್ಟದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಕೆಲವು ಅಡ್ಡಿ ಅಡಚಣೆಗಳು ಈ ಸಂದರ್ಭದಲ್ಲಿ ಬರುತ್ತಾ ಇವೆ. ತಾಲ್ಲೂಕು ಬೋರ್ಡುಗಳಿಗೆ ಹಣ ಕಂದಾಯದಲ್ಲಿ ಶೇಕಡ 20 ಭಾಗವನ್ನು ಮಾತ್ರ ಕೊಡುತ್ತಾರೆ, ಅವರಿಗೆ ಇರತಕ್ಕ ಜವಾಬ್ದಾರಿ ಕೆಲಸಗಳನ್ನು ಅಷ್ಟರಿಂದ ನಿರ್ವಹಿಸಲು ಅದು ಸಾಕಾಗುವುದಿಲ್ಲ. ಆದ್ದರಿಂದ ಅದನ್ನು 20 ಪರ್ಸೆಂಟ್‌ನಿಂದ 50 ಪರ್ಸೆಂಟ್‌ನವರೆಗಾದರೂ ಕೂಡ ಏರಿಸಿ ಅವುಗಳ ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನಾನು ಮನವಿ ಮಾಡಿಕೊಳ್ಳುತ್ತಾ ಇದ್ದೇನೆ.

11-30 A.M.

ಈ ತಾಲ್ಲೂಕ್ ಬೋರ್ಡುಗಳು ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಿಗೂ ನೀರನ್ನು ಅವ್ಯಾಹತವಾಗಿ ಒದಗಿಸಬೇಕಾದುದು ಅವುಗಳ ಆದ್ಯ ಕರ್ತವ್ಯ. ಆದರೆ ಇದುವರೆಗೂ ಈ ನೀರನ್ನು ಒದಗಿಸತಕ್ಕ ವಿಚಾರದಲ್ಲಿ ಕೆಲವು ಎಡರು ತೊಡರುಗಳು ಬಂದಿವೆ. ಕುಡಿಯುವ ನೀರಿನ ಬಾವಿಗಳ ಎಸ್ಟಿಮೇಟೆಡ್ ಹಣದಲ್ಲಿ ಶೇಕಡಾ 50ರಷ್ಟನ್ನು ಸರ್ಕಾರದವರು ಕೊಡಬೇಕೆಂದೂ, ಇನ್ನುಳಿದ ಹಣದಲ್ಲಿ ಶೇಕಡ 25 ರಷ್ಟನ್ನು ತಾಲ್ಲೂಕ್ ಬೋರ್ಡಿನವರೂ, ಶೇಕಡ ಹನ್ನೆರಡೂವರೆಯಷ್ಟು ಹಣವನ್ನು ಆ ವಿಲೇಜ್ ಪಂಚಾಯಿತಿಯವರೂ ಮತ್ತು ಉಳಿದ ಶೇಕಡ ಹನ್ನೆರಡೂವರೆಯನ್ನು ಗ್ರಾಮಸ್ಥರು ಕೊಡಬೇಕೆಂಬ ಒಂದು ನೇಮವನ್ನು ಹಾಕಲಾಗಿದೆ. ಇದು ಬಹಳ ಶೋಚನೀಯವಾದ ವಿಚಾರ. ಸಾಮಾನ್ಯವಾಗಿ ನಾವೆಲ್ಲರೂ ನೋಡುತ್ತಿರುವಂತೆ ಈ ದಿವಸ ಹಳ್ಳಿಯ ಜನರ

(ಶ್ರೀ ಬಿ. ನಂಜಪ್ಪ)

ಹಾಗೂ ಹಳ್ಳಿ ಪಂಚಾಯಿತ್ತಿಗಳ ಸ್ಥಿತಿಗತಿಗಳೇನಿರುತ್ತವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಸಾಮಾನ್ಯವಾಗಿ ಒಂದೊಂದು ಪಂಚಾಯಿತಿಗೂ ಇದ್ದರೆ ಒಂದೂವರೆ ಅಥವಾ ಎರಡು ಸಾವಿರ ರೂಪಾಯಿಗಳ ಉತ್ಪತ್ತಿಯಿರುತ್ತದೆ. ಅವರು ಒಂದು ಊರಿನಲ್ಲಿ ಒಂದು ಬಾವಿಯನ್ನು ತೆಗೆಸ ಬೇಕಾಗಿದ್ದರೆ ಅದಕ್ಕೆ ಆಗತಕ್ಕ ಎಸ್ಟಿಮೇಟಿನಲ್ಲಿ ಅವರ ವರಮಾನದಲ್ಲಿ ಮೂವತ್ತೇಳೂವರೆ ಭಾಗವನ್ನು ಆ ಒಂದು ಬಾವಿಗೆ ಕೊಟ್ಟುಬಿಟ್ಟರೆ ಅವರು ಬೇರೆ ಇನ್ನಾವ ಕೆಲಸಗಳನ್ನೂ ಕೈಗೊಳ್ಳುವುದಕ್ಕೆ ಹಣಕಾಸಿನ ತೊಂದರೆಯುಂಟಾಗಿ ಅವರು ವರ್ಷವೆಲ್ಲಾ ಕೈ ಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳ ಬೇಕಾಗುತ್ತದೆ, ಇದು ಅಷ್ಟು ವಿಹಿತವಾದುದಲ್ಲ ಎಂದು ಹೇಳುತ್ತೇನೆ. ಆದುದರಿಂದ ಇನ್ನು ಮುಂದೆ ಈ ಕುಡಿಯುವ ನೀರಿನ ಬಾವಿಗಳ ಪೂರಾ ಖರ್ಚನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ದಿವಸ ಕುಡಿಯುವ ನೀರಿನ ಬಾವಿಗಳನ್ನು ಒದಗಿಸತಕ್ಕ ವಿಚಾರದಲ್ಲಿ ಗ್ರಾಮದ ಜನರು ಶೇಕಡ ಹನ್ನೆರಡೂವರೆಯಷ್ಟು ಹಣವನ್ನು ಕೊಡ ಬೇಕೆಂದು ಏನು ಒಂದು ಆದೇಶವನ್ನು ಕೊಟ್ಟಿದ್ದಾರೆ, ಇಂಥಾ ಆದೇಶಗಳು ಇನ್ನೂ ಅನೇಕವಾಗಿವೆ. ಅವರು ಹಳ್ಳಿಯಲ್ಲಿ ಒಂದು ಸ್ಕೂಲನ್ನು ಕಟ್ಟಬೇಕೆಂದರೆ ಅದಕ್ಕೆ ಹಣವನ್ನು ಕೊಡಬೇಕು, ಒಂದು ಬಾವಿ ಮಾಡಿಸಬೇಕು ಎಂದರೆ ಅದಕ್ಕೆ ಹಣವನ್ನು ಕೊಡಬೇಕು, ಒಂದು ರಸ್ತೆ ಮಾಡಬೇಕು ಎಂದರೆ ಅದಕ್ಕೆ ಹಣವನ್ನು ಕೊಡಬೇಕು. ಹೀಗೆ ಅಲ್ಲಿ ನಡೆಯತಕ್ಕ ಪ್ರತಿಯೊಂದು ಅಭಿವೃದ್ಧಿ ಕಾರ್ಯಗಳಿಗೂ ಅವರು ಹಣವನ್ನು ಕೊಡಬೇಕು, ಅವರಿಂದ ಹಣವನ್ನು ವಸೂಲ್ಮಾಡಬೇಕು ಅಂದರೆ ಅದು ಬಹಳ ಕಷ್ಟದ ಕೆಲಸ. ಈ ದಿವಸ ಹಳ್ಳಿಯ ಜನರ ಸ್ಥಿತಿಗತಿಗಳು ಬಹಳ ಕಷ್ಟಕರವಾಗಿರುತ್ತವೆ. ಮಳೆ ಬೆಳೆಗಳಿಲ್ಲದೆ ಅವರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಆದುದರಿಂದ ಇನ್ನುಮೇಲೆ ಅವರಿಂದ ಯಾವ ಹಣವನ್ನೂ ವಸೂಲ್ಮಾಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ಈ ಕುಡಿಯುವ ನೀರಿನ ಬಾವಿಗಳನ್ನಾದರೂ ಸರ್ಕಾರದವರು ಸಂಪೂರ್ಣವಾಗಿ ಅವರ ಖರ್ಚಿನಿಂದಲೇ ಮಾಡಿಸಿಕೊಡ ಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳ ವಿಚಾರಕ್ಕೆ ಬಂದರೆ—ಪ್ರತಿಯೊಂದು ಗ್ರಾಮದಲ್ಲೂ ಶಾಲೆಗಾಗಿ ಒಂದೊಂದು ಕಟ್ಟಡ ಬೇಕೇ ಬೇಕಾಗಿದೆ. ಅವುಗಳನ್ನು ಒದಗಿಸಬೇಕಾಗಿದ್ದರೆ ಸರ್ಕಾರದವರು ಒಂದೂವರೆ ಸಾವಿರ ರೂಪಾಯಿಗಳನ್ನು ಮಾತ್ರ ಈಗ ಕೊಡುತ್ತಿದ್ದಾರೆ. ಏನಿಲ್ಲ ಎಂದರೂ ಒಂದು ಸ್ಕೂಲನ್ನು ಕಟ್ಟಬೇಕಾದರೆ ಅದಕ್ಕೆ 4,400 ರೂಪಾಯಿಗಳಿಗೆ ಕಡಮೆಯಾಗುವುದಿಲ್ಲ; ಇಷ್ಟು ಅಂದಾಜಾಗುತ್ತದೆ. ಇದರಲ್ಲಿ ಸರ್ಕಾರದವರು ಕೊಡತಕ್ಕ ದುಡ್ಡನ್ನು ವಜಾ ಮಾಡಿದರೆ ಇನ್ನುಳಿಯ ತಕ್ಕ ಸುಮಾರು ಮೂರೂವರೆ ಸಾವಿರ ಅಥವಾ 3,400 ರೂಪಾಯಿಗಳನ್ನು ಆ ಗ್ರಾಮ ಪಂಚಾಯಿತಿ ಯವರು ಕೊಡಬೇಕು. ಆ ಪಂಚಾಯಿತಿಗೆ ಇರತಕ್ಕ ವಾರ್ಷಿಕ ವರಮಾನವೆಲ್ಲಾ ಎರಡೂವರೆ ಸಾವಿರ ಇದ್ದರೆ ಹೆಚ್ಚಾಯಿತು. ಹಾಗಿರುವಾಗ ಆ ಪಂಚಾಯಿತಿಗಳಿಂದ ಈ ಕೆಲಸಗಳನ್ನು ಸಾಧಿಸು ವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವಿದೆ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಒಂದು ಊರಿನಲ್ಲಿ ಒಂದು ಶಾಲೆಯನ್ನು ಕಟ್ಟುವುದಕ್ಕೂ ಅವರಲ್ಲಿ ಹಣವಿಲ್ಲ ಎನ್ನುವುದಾದರೆ ಅವರಿನ್ನು ಉಳಿದ ಗ್ರಾಮಗಳ ಅಭಿವೃದ್ಧಿಗೆ ಹಣವನ್ನು ಎಲ್ಲಿಂದ ಒದಗಿಸಬೇಕು ? ಇಂಥಾ ತೊಂದರೆಗಳಿರು ವುದರಿಂದ ಸರ್ಕಾರದವರು ಈ ಶಾಲಾ ಕಟ್ಟಡಗಳಿಗೆ ಕೊಡತಕ್ಕ ಗ್ರಾಂಟನ್ನು ಇನ್ನೂ ಜಾಸ್ತಿಮಾಡಿ ಇದರ ಜೊತೆಗೆ ತಾಲ್ಲೂಕ್ ಬೋರ್ಡಿನಿಂದ ಎಷ್ಟು ಹಣವನ್ನು ಕೊಡಬೇಕು ಎಂಬುದನ್ನೂ ಸಹ ನಿರ್ಧರಿಸಿ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಒದಗಿಸಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ—ಸಣ್ಣ ನೀರಾವರಿ ಕಾಂಗಾರಿಗಳ ವಿಚಾರಕ್ಕೆ ಬಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕಾನೂನಿನ ಚೌಕಟ್ಟಿನಲ್ಲಿ 10 ಎಕರೆ ಅಚ್ಚುಕಟ್ಟಿನೊಳಗೆ ಬರತಕ್ಕ ಸಣ್ಣ ಸಣ್ಣ ನೀರಾವರಿ ಕಾಂಗಾರಿಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಲಾಗಿದೆ. ಮಲೆನಾಡಿನ ಸ್ಥಿತಿಯನ್ನು ಹೇಳುವುದಾದರೆ ಅಲ್ಲಿ ಇಂಥಾ ಸಣ್ಣ ಕೆರೆಗಳ ಸಂಖ್ಯೆ ಬಹಳ. ಅಲ್ಲಿ ಇಂಥ ಸಣ್ಣ ಕೆರೆಗಳ ಸಂಖ್ಯೆ ಸುಮಾರು 6,500 ಕ್ಕೂ ಮೇಲಿವೆ. ಅವುಗಳ ಕೆಳಗಿನ ಅಚ್ಚುಕಟ್ಟು 18 ಸಾವಿರ ಎಕ್ರೆಗಳಾಗುತ್ತದೆ. ಈ ದಿವಸ ತಾಲ್ಲೂಕ್ ಬೋರ್ಡಿನವರು ಈ ಎಲ್ಲಾ ಕೆರೆಗಳ ಕೋಡಿ, ತೂಬುಗಳ ಜೀರ್ಣೋದ್ಧಾರ ಕಾರ್ಯವನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಅವರ ಮೇಲೆ ಬಿದ್ದಿವೆ. ಆದರೆ ಈ ಕಾರ್ಯಗಳನ್ನೆಲ್ಲಾ ನಡೆಸಬೇಕಾದರೆ ಅದಕ್ಕೆ ಸಾಕಾಗುವಷ್ಟು ಹಣವನ್ನು ಸರ್ಕಾರ ಒದಗಿಸಿಲ್ಲ. ಕೆಲವಕ್ಕೆ ಒಂದು ಟೋಕನ್ ಗ್ರಾಂಟ್ ರೂಪದಲ್ಲಿ ಒಂದು ಲಕ್ಷ ಅಥವಾ 80 ಸಾವಿರ ರೂಪಾಯಿಗಳನ್ನು ಒದಗಿಸ ಲಾಗಿದೆ. ಈ ಹಣದಲ್ಲಿ ಆ 6,500 ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಮುಗಿಸುವುದಕ್ಕೆ ಎಷ್ಟು

ವರ್ಷಗಳು ಬೇಕು ಎಂಬುದನ್ನು ಈ ಸಭೆಯವರೇ ತೀರ್ಮಾನ ಮಾಡಬೇಕಾಗಿದೆ. ಅಷ್ಟು ಕೆರೆಗಳ ಕೆಲಸ ಮಾಡುವುದಕ್ಕೆ ಇಷ್ಟು ಹಣ ಸಾಕಾಗುತ್ತದೆಯೇ ? ಸರ್ಕಾರದವರು ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳ ಬಗ್ಗೆ ಎಷ್ಟು ಕಾತುರತೆಯಿಂದ ಅವುಗಳ ಕೆಲಸವನ್ನು ನಡೆಸುತ್ತಿದ್ದಾರೋ ಅಷ್ಟೇ ಕಾತುರತೆಯಿಂದ ಇವುಗಳ ಕೆಲಸವನ್ನೂ ಕೂಡ ನಡೆಸಬೇಕು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಅದವುಟ್ಟಿಗೂ ಇತ್ತ ಕಡೆಗೆ ಹೆಚ್ಚಿನ ಗಮನ ಕೊಟ್ಟರೆ ದೇಶದಲ್ಲಿ ಉಂಟಾಗಿರತಕ್ಕ ಆಹಾರಾಭಾವವನ್ನು ಅಲ್ಪಸ್ವಲ್ಪವಟ್ಟಿಗಾದರೂ ಉತ್ತಮಪಡಿಸಬಹುದು ಎಂದು ಹೇಳುತ್ತೇನೆ. ಆದರೆ ಇಂಥಾ ಸಣ್ಣ ಪುಟ್ಟ ಕೆರೆಗಳು ಒಬ್ಬೊಬ್ಬ ರೈತರ ಅಚ್ಚುಕಟ್ಟಿನೊಳಗೆ ಸೇರಿರುತ್ತವೆ. ಇಷ್ಟು ಅನುಕೂಲವನ್ನು ಸರ್ಕಾರದವರು ಮಾಡಿಕೊಟ್ಟರೆ ಅದರಿಂದ 3-4 ಸಂಸಾರಗಳಿಗೆ ಬಹಳ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ಆದುದರಿಂದ ಸರ್ಕಾರದವರು ಈ ಬಾಬಿಗೆ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಪಂಚಾಯಿತಿಗಳ ವಿಚಾರಕ್ಕೆ ಬಂದರೆ—ಈಗ ಇವು ಹೇಗೆ ಕೆಲಸ ಮಾಡುತ್ತವೆ ಎಂಬ ವಿಚಾರ ತಮಗೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಈ ಹಿಂದೆ ಇವುಗಳಿಗೆ ಯಾರು ಸೆಕ್ರೆಟರಿಗಳಾಗಿದ್ದರೋ ಅವರನ್ನು ತೆಗೆದುಹಾಕಿ ಈ ದಿವಸ ಅಲ್ಲಿಗೆ ಕೇವಲ 3 ತಿಂಗಳ ಟ್ರೈನಿಂಗನ್ನು ಪಡೆದಿರತಕ್ಕ ಜನರನ್ನು ಸೆಕ್ರೆಟೆರಿಗಳನ್ನಾಗಿ ನೇಮಕ ಮಾಡಲಾಗಿದೆ. ಈ ದಿವಸ ಅನೇಕ ಪಂಚಾಯಿತಿಗಳ ಅಧ್ಯಕ್ಷರು ಅಷ್ಟು ವಿದ್ಯಾವಂತರಾಗಿರುವುದಿಲ್ಲ. ಅವರಿಗೆ ಈ ವಿಚಾರಗಳಲ್ಲಿ ಒಂದು ಸರಿಯಾದ ಮಾರ್ಗದರ್ಶನ ಮಾಡಿಕೊಟ್ಟು, ಈ ಪಂಚಾಯಿತಿಗಳ ಕೆಲಸವನ್ನು ಸುಗಮವಾಗಿ ನಡೆಸಿಕೊಂಡು ಹೋಗತಕ್ಕ ಹೊಣೆಗಾರಿಕೆ ಆ ಕಾರ್ಯದರ್ಶಿಗಳ ಮೇಲಿದೆ. ಅಂಥ ಸ್ಥಾನಕ್ಕೆ ಕೇವಲ 3 ತಿಂಗಳು ಟ್ರೈನಿಂಗ್ ಪಡೆದವರನ್ನು ಹಾಕಿದರೆ ಆ ಕೆಲಸಗಳೆಲ್ಲಾ ಸರಿಯಾಗಿ ನಡೆಯುತ್ತವೆಯೇ ಎಂಬ ವಿಷಯದಲ್ಲಿ ಎಲ್ಲರಿಗೂ ಸಂಶಯ ಉಂಟಾಗಿದೆ. ಈ ದಿವಸ ಹೊಸದಾಗಿ ಸೆಕ್ರೆಟೆರಿಗಳಾಗಿ ಬರತಕ್ಕವರಿಗೆ ಅವರ ಜವಾಬ್ದಾರಿಯೇನು ಎಂಬುದೇ ಅವರಿಗೆ ಸರಿಯಾಗಿ ಗೊತ್ತಿರುವುದಿಲ್ಲ. ಇಂಥವರನ್ನು ಕೆಲಸಕ್ಕೆ ಕಳುಹಿಸುತ್ತಿರುವುದು ಬಹಳ ಶೋಚನೀಯ. ಅವರಿಗೆ ಯಾವ ಒಂದು ಜವಾಬ್ದಾರಿಯೂ ಗೊತ್ತಿಲ್ಲ. ಅವರ ಕರ್ತವ್ಯವೇನು ಎಂಬುದು ಅವರಿಗೆ ಗೊತ್ತಿರುವುದಿಲ್ಲ. ಒಂದು ಪಂಚಾಯಿತಿಯ ಸರಹದ್ದಿನಲ್ಲಿರತಕ್ಕ ಒಂದು ಸೊಸೈಟಿ ಮತ್ತು ಒಂದು ಗ್ರಾಮಪಂಚಾಯಿತಿ ಈ ಎರಡನ್ನೂ ದಕ್ಷತೆಯಿಂದ ನಿರ್ವಹಿಸತಕ್ಕಂಥ ಉತ್ತಮ ಕೆಲಸಗಾರರಾದ ಜನರನ್ನು ಆ ಜಾಗಕ್ಕೆ ನೇಮಕ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಾಗೆ ಮಾಡಿದರೆ ಅವರು ಅಲ್ಲಿ ಒಂದು ಉತ್ತಮ ಸೇವೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ, ನನಗೆ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. MALLIKARJUNASWAMY.—Mr. Speaker, Sir, While wholeheartedly endorsing the Demands of the Development and Co-operation Ministries, I would like to confine myself to the co-operative movement to begin with, and I think, I shall do well to quote Mr. Reeds, here. Sir, it is when we open the book of nature, it is when we read the story of evolution through millions of years and the shedding of blood and tears which people have undergone in the process of evolution, and it is when we study the laws regulating the life and laws of production and development, we will see plainly how well is the theory that God is love. It is exactly here, I would like to say that co-operative movement is a movement for the alround development and economic prosperity of the rural India, I agree with that. But, here, it is only the equals that can thrive in this field, it may be agreed that it may be either communal or economic equality. Of course, it is said that the movement is each for all and all for each. But the mutual robbery is going on, and here I would like to say that individual exploitation has been replaced by institutional exploitation, and we people, we co-operators say that these are co-operatives for the benefit of all.

(SRI M. MALLIKARJUNASWAMY)

I would like to say here the observation made by the Reserve Bank of India in the recent past about our co-operative movement. In my District, *i. e.*, Mandya, this movement has made appreciable progress. This area is an agriculturally developed area. Even here it is only 55 to 65 per cent of the Co-operatives that are in a good position and these Co-operatives are catering to the needs of the ryots. The history of the other Co-operatives speak a sad tale. Of-course once I spoke on the floor of this House about Malavalli Co-operative where tampering of records, misappropriation of money and manipulation of accounts have been done. I had brought all these irregularities to the notice of this Hon'ble House on that occasion. Even to-day this co-operative is not free from that. Of-course the policy of the Government with regard to the withdrawal of the criminal prosecution is highly defective. Some of the non-officials representing the people have their share in this affair. Therefore, it is not right even to the Congress or non-congress members to get into the affairs of the Society. Such people must be taught a lesson whoever it may be and deterrant punishment must be given. So far as the co-operative farming is concerned, it has some basic force and the same thing exists in the case of industrial cooperatives. I would like to mention that the Minister and the Secretary of the Department should read a book called " Blossoms in the Dust " by Kusum Nair on co-operative farming and should understand as to how the co-operative movement should be run. Coming to the rights of the scheduled Casts and scheduled tribes people in the co-operative sphere, I really wonder whether these people, are getting real benefits through this co-operative movement. I would mention for instance this Milk Dairy Scheme and Fishery Co-operatives in South Kanara. I would like to bring to the notice of the Hon'ble House that Milk Dairy scheme and Fisheries Co-operatives are working well. There are people in this Independent India who are doing this fishing in the coastal area. They must be encouraged in all respects and all facilities should be given to them. Coming to this scheduled castes Co-operative Housing scheme, Mr. Speaker Sir, it is a very sad tale to tell. time and again we are bringing to the notice of the Government that facilities that are being extended to them are not reaching them at all and action should be taken to see that all possible facilities should be given to these people. They are the most neglected people in the country. Their plight is miserable. They must be encourged to develop leadership in them also. The House Building Co-operative Society must have their own man as President and let not the Taluk Board President be the President. The decision must be revised by Government. I am urging on the Government, *i.e.*, our Congress Government, if you do it, do it, otherwise they will be going against the very interests of the scheduled castes people and the scheduled castes people will become hostileand the Government members like me will also become hostile if the interests of the scheduled castes people are neglected, and the decision is not changed. Therefore let them take it to their mind and

do something to help these people. This is for the fifth time I am making this appeal on the floor of the House. About 11 years ago I made a statement on the floor of this House, Mr. Speaker Sir, and I would like to reiterate. I fell in love with two Apsaras coming from Delhi, *i.e.*, Community Development Programme and the National Extension Scheme. Our country expected a lot from these lofty ideals. But they introduced some sort of demoralisation into the very society. Mr. Gurupadaswamy, Minister of State made a statement that it is going to be reconsidered by the Government of India. I sound a note of warning to the Government of India through you.

Mr. SPEAKER.—Warning to the Central Government through me...

Sri M. MALLIKARJUNASWAMY.—...through the Chief Minister who will be attending the Planning Commission and National Development Council. I am telling that all S.E.Os. and non-graduate S.E.Os must be absorbed, to begin with in the Co-operative Department, Education Department and other Departments. They are now in well placed position. Coming to the last point Sir, I would like to say that we must not be blind to the fact that the Panchayat Raj which is a domineering factor in the country, will purposely neglect the sanitary and drainage work being extended to the scheduled castes locality. The Government must earmark certain funds with clear instructions to the Panchayat Raj to take up these works to begin with in the localities where the scheduled caste people live. With these remarks I thank you Mr. Speaker for having given me an opportunity to speak on this important demand.

ಶ್ರೀಮತಿ ಕೆ. ಲೀಲಾವತಿ ರೇ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಕೋ-ಅಪರೇಷನ್ನು ಮತ್ತು ಪಂಚಾಯಿತಿ ಇಲಾಖೆಯ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಪುಷ್ಟೀಕರಿಸುತ್ತ ಕೆಲವು ಸೂಚನೆಗಳನ್ನು ಇಲ್ಲಿ ಕೊಡಬೇಕೆಂದಿದ್ದೇನೆ.

ಪಂಚಾಯಿತಿ ಎಂದರೆ, ಪಂಚಾಯಿತಿ ರಾಜ್ಯ ಮಾಡಲಿಕ್ಕೆ ಪ್ರಯತ್ನಿಸಿ ನಮ್ಮ ದೇಶದಲ್ಲಿ ಅದನ್ನು ಕಾರ್ಯಗತಮಾಡುವಂತಾದರೆ ರಾಮ ರಾಜ್ಯ ಸ್ಥಾಪನೆಯಾದಂತೆ ಎಂದು ಮಹತ್ಮಾ ಗಾಂಧಿಯವರು ಹೇಳುತ್ತಿದ್ದರು. ಅದರೆ ಪಂಚಾಯಿತಿ ರಾಜ್ಯ ಏನಾಗಿದೆ ಎಂದರೆ, ನಮ್ಮ ಹಿಂದೆ ಇದ್ದ ಹಿರಿಯರು ಹೇಳುತ್ತಿದ್ದ ಒಂದು ಗಾದೆ ನೆನಪಿಗೆ ಬರುತ್ತದೆ. ಅದು ಮನೆಯವರೆಲ್ಲ ನಿಮ್ಮವರೇ ಆದರೆ ತಂಬಿಗೆ ಮಾತ್ರ ಮುಟ್ಟಬೇಡಿ ಎಂದ ಹಾಗೆ ಪಂಚಾಯಿತಿ ರಾಜ್ಯದ ಪ್ರತಿನಿಧಿಗಳಾಗಿ ಪಂಚಾಯಿತಿಯವರಿಗೆ ಸರಿಯಾದ ನಿರ್ದಿಷ್ಟವಾದ ಅಧಿಕಾರವಿಲ್ಲದೆ ಪಂಚಾತಿಗಳಾಗಲೀ ತಾಲ್ಲೂಕಾ ಬೋರ್ಡುಗಳಾಗಲೀ ಅವರವರ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಂಡು ಹೋಗುವುದು ಅಸಾಧ್ಯವಾಗಿದೆ. ಈ ದಿನ ನಮ್ಮಲ್ಲಿ ಏನು ಹೊಸ ಕಾನೂನು ಜಾರಿಯಲ್ಲಿದೆ ಅದನ್ನು ಮಾಡಲಿಕ್ಕೆ ಆಗದೇ ಹೋದರೆ ಅದಕ್ಕೆ ಒಂದು ತಿದ್ದುಪಡಿ ಮಾಡಿ ಪಂಚಾಯಿತಿ ಅಥವಾ ತಾಲ್ಲೂಕಾ ಬೋರ್ಡುಗಳಿಗೆ ಅವರ ಕೆಲಸಗಳನ್ನು ನಿರ್ವಹಿಸುವುದಕ್ಕೆ ಇರತಕ್ಕ ವಿಷಯಗಳನ್ನು ಕೆಲವು ಕಟ್ಟು ನಿಟ್ಟುಗಳನ್ನು ತೆಗೆಯಬೇಕು. ಇದರ ಉದ್ದೇಶಗಳು ವಿಫಲವಾಗಬೇಕಾದರೆ ಕಾನೂನನ್ನು ಸಡಿಲಿಸಬೇಕಾದರೆ ಅದನ್ನೂ ಬೇಗನೆ ಮಾಡಿ, ಸರಿಯಾಗಿ ಜಾರಿಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪಂಚಾಯಿತಿಗಳಿಗೂ ತಾಲ್ಲೂಕು ಬೋರ್ಡುಗಳಿಗೂ ಎಲ್ಲಾ ಕಾರ್ಯಕ್ರಮಗಳಲ್ಲೂ ಸಂಬಂಧ ಇದೆ. ಆದರೆ ಕೆಲವು ಪಂಚಾಯಿತಿಗಳಲ್ಲಿ ಪಾಲಿಟಿಕ್ಸ್ ಇರುವುದರಿಂದ ಕೆಲವು ಹಳ್ಳಿಗಳಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅಸಾಧ್ಯವಾಗಿದೆ. ಇದು ಎಲ್ಲರಿಗೂ ಗೊತ್ತಿದೆ. ಪ್ರತಿಯೊಂದು ಕಾರ್ಯಕ್ರಮವನ್ನು ನಿರ್ವಹಿಸುವುದಾದರೆ ಪಂಚಾಯಿತಿ ಮೂಲಕ ಆಗಬೇಕು ಈಗ ಅದು ಅಸಾಧ್ಯವಾಗಿದೆ. ಆದುದರಿಂದ ಅವುಗಳಿಗೆ ನಿರ್ದಿಷ್ಟವಾದ ಸಂಬಂಧವನ್ನು ಕಲ್ಪಿಸುವುದು ಅಗತ್ಯ ಎಂದು ಹೇಳುತ್ತೇನೆ. ಮತ್ತು ತಾಲ್ಲೂಕು ಬೋರ್ಡು ಅಧಿಕಾರಿಗಳಿಗೆ ಅಧಿಕಾರ ಕೊಡಬೇಕೆಂದು ಹೇಳುತ್ತೇನೆ ತಾಲ್ಲೂಕು ಬೋರ್ಡುಗಳಿಗೆ ಅಧಿಕಾರ ಕೊಟ್ಟರೆ ಸರಿ. ಪ್ರತಿಯೊಂದು ಕಾರ್ಯಕ್ರಮಕ್ಕೂ ನಮ್ಮ ನಮ್ಮ ಜಿಲ್ಲೆಯಿಂದ ಮೈಸೂರು ಅಥವಾ

(ಶ್ರೀಮತಿ ಲೀಲಾವತಿ ರೈ)

ಬೆಂಗಳೂರಿಗೆ ಪ್ರತಿಯೊಂದು ವಿಷಯಕ್ಕೂ ಅಪ್ರೂವಲ್‌ಗೆ ಹೋಗಬೇಕಾಗಿದೆ. ಇದನ್ನು ವ್ಯಸನದಿಂದ ಹೇಳಬೇಕಾಗಿದೆ. ಯಾವುದೇ ಡಿಪಾರ್ಟ್ಮೆಂಟ್ ಆಗಲಿ ಡೀಸೆಂಟ್ರಲೈಸೇಷನ್ ಆಫ್‌ಪವರ್ ಎಂದು ಏನೂ ಮಾಡಿಲ್ಲ. ಪಂಚಾಯಿತಿ, ತಾಲ್ಲೂಕ್ ಬೋರ್ಡ್ ಅವರ ಕಾರ್ಯಕ್ರಮಗಳನ್ನು ಡೆಪ್ಯೂಟಿ ಕಮೀಷನ ದವರು ಅಪ್ರೂವಲ್ ಮಾಡಿದರೂ ಅದು ಅಲ್ಲಿಂದ ಡಿವಿಜನಲ್ ಕಮೀಷನರಿಗೆ ಬರಬೇಕಾಗಿದೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಮೊದಲನೇ ಬಡ್ಜೆಟ್ ಡಿಮ್ಯಾಂಡ್ ಮೇಲೆ ನಾನು ಭಾಷಣ ಮಾಡಿದಾಗ ಡಿವಿಜನಲ್ ಕಮೀಷನರ್ ಆಫೀಸನ್ನು ತೆಗೆಯಬೇಕೆಂದು ಹೆಚ್ಚು ಜನರ ಸೂಚನೆಯಾಗಿತ್ತು. ಇದು ಒಂದು ಬಾಟಲ್‌ನೆಕ್ ಆಗಿದೆ. ಇದನ್ನು ತೆಗೆಯಬೇಕೇ, ಬಿಡಬೇಕೇ ಎನ್ನುವುದನ್ನು ಸರ್ಕಾರ ನಿಗದಿ ಮಾಡಬೇಕು. ಈ ಮನೆಯ ಡಿಸಿಷನ್ ಮೇರೆಗೆ ಹೋಗುತ್ತದೆ. ಯಾವುದೇ ಕಾರ್ಯಕ್ರಮ ಆಗಲಿ ಡಿವಿಜನಲ್ ಕಮೀಷನರ ಅಪ್ರೂವಲ್ ಇಲ್ಲದೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರಿಂದಾಗಿ ಹಳ್ಳಿ ಗಾಡಿನ ಕಾರ್ಯಕ್ರಮಕ್ಕೆ ಅಡ್ಡಿಬರುತ್ತದೆ. ಈ ಕೋ-ಅಪರೇಟೀವ್ ಮುಖಾಂತರ ಆಹಾರ ಸಾಮ ಗ್ರಿಗಳನ್ನು ಕೊಡುವಂತೆ ನಿಗದಿ ಆಗಿದೆ ಎಂದು ಸರ್ಕಾರದವರು ಆದೇಶ ಮಾಡಿದ್ದಾರೆ. ಇದನ್ನು ಪಂಚಾಯಿತಿಗೆ ಕೊಡಬೇಕು ಎಂದು ಹೇಳುತ್ತೇನೆ. ಅವರ ಮೂಲಕ ಹಂಚಿಕೆ ಆಗುವುದು ಅಗತ್ಯ. ಪ್ರತಿ ಹಳ್ಳಿಯಲ್ಲಿಯೂ ಪಂಚಾಯಿತಿ ಇದೆ. ಪ್ರತಿ ಹಳ್ಳಿಯಲ್ಲೂ ಆಹಾರಸಾಮಗ್ರಿಗಳು ಬಾರದೆ ಡಿಸ್ಟ್ರಿಬ್ಯೂಷನ್ ನಿಂತುಹೋಗಿ ತೊಂದರೆಯಾಗಿದೆ. ಇದನ್ನು ಪರಿಶೀಲಿಸಬೇಕು.

ಇನ್ನು ತಾಲ್ಲೂಕು ಬೋರ್ಡುಗಳಿಗೆ ಶಾಲೆಗಳು, ಮಾರ್ಗಗಳು, ಮೋರಿಗಳು ಮಾಡುವುದಕ್ಕೆ ಬೇಕಾದ ಹಣದ ವ್ಯವಸ್ಥೆ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲ್ ಜಾಸ್ತಿ ಇವೆ. ಹಳೆ ಮೈಸೂರಿನಲ್ಲಿ ಜಾಸ್ತಿ ಇಲ್ಲ. ಅಂಥಾದ್ದು ಪ್ರತಿಯೊಂದು ಶಾಲೆಗಳ ಕಟ್ಟಡ ರಿಪೇರಿಗೆ ಅಪ್ಲಿಕೇಷನ್ಸ್ ತಾಲ್ಲೂಕು ಬೋರ್ಡಿಗೆ ಬರುತ್ತದೆ. ಈ ಶಾಲಾ ಕಟ್ಟಡ ಮಕ್ಕಳ ಮೇಲೆ ಬೀಳುವ ಹಾಗೆ ಇದೆ. ಅದಕ್ಕೂ ವರ್ಷಂಪ್ರತಿ ಬೇಕಾದ ಹಣವನ್ನು ತಾಲ್ಲೂಕು ಬೋರ್ಡು ಒದಗಿಸಬೇಕು ಎಂದು ಹೇಳುತ್ತೇನೆ. ಇಲ್ಲದಿದ್ದರೆ ತಾಲ್ಲೂಕ್ ಬೋರ್ಡ್‌ನವರು ಈ ಕಷ್ಟವನ್ನು ಸಹಿಸಿಕೊಳ್ಳುವು ದಕ್ಕಾಗುವುದಿಲ್ಲ. ಸಂಬಂಧಪಟ್ಟವರು ಉತ್ತರ ಹೇಳಲಿಕ್ಕೆ ಕಷ್ಟವಾಗುತ್ತದೆ. ಸರ್ಕಾರದವರು ಕೆಲವೊಂದು ಹಣವನ್ನು ಅದಕ್ಕೆ ಪ್ರತ್ಯೇಕವಾಗಿ ಇಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಮಾತನಾಡಿದ ಸದಸ್ಯರು ಬಾವಿಗಳಿಗೆ, ಪಂಚಾಯಿತಿಗೆ ಕಾಂಟ್ರಿಬ್ಯೂಷನ್ 37½ ಪರ್ಸೆಂಟು ಕೊಡಬೇಕು ಎಂದು ಹೇಳಿದರು. ಸೌತ್ ಕೆನರಾಕ್ಕೆ ಒಂದು ಕಾನೂನು ಮೈಸೂರಿಗೆ ಒಂದು ಕಾನೂನು ಹೇಳಿದರು. ಅಂಥಾದ್ದೇನೂ ಇಲ್ಲ. ಬಾವಿ ಕೆಲಸ ಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಬಹಳ ಮುಂದುವರೆದಿದೆ. ಎಲ್ಲಿ ಬೇಕೋ ಅಲ್ಲಿ ಬಾವಿಗಳು ಆಗುತ್ತವೆ. 5 ಪರ್ಸೆಂಟು ಕೊಡದಿದ್ದರೂ ಪರವಾಯಿಲ್ಲ, ಪಬ್ಲಿಕ್ ಕಾಂಟ್ರಿಬ್ಯೂಷನ್ 12½ ಪರ್ಸೆಂಟು ತೆಗೆದುಕೊಂಡು ಮಾಡುತ್ತಾ ಇದ್ದೇವೆ. ಪಬ್ಲಿಕ್ ಕಾಂಟ್ರಿಬ್ಯೂಷನ್ ಕೂಡ ಕೆಲವೊಂದು ಕಡೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗು ವುದಿಲ್ಲ. ಅದನ್ನು ಬಿಟ್ಟು ಫುಲ್ ಗ್ರಾಂಟ್‌ನಲ್ಲಿ ಈ ಬಾವಿಗಳು ಅಗತ್ಯವೇ? ಷೆಡ್ಯೂಲ್ ಟ್ರೈಬ್ಸ್ ಏರಿಯಾ ಬ್ಯಾಕ್‌ವರ್ಡ್ ಏರಿಯಾ ಕಡೆಗಳಲ್ಲಿ ಪಬ್ಲಿಕ್ ಕಾಂಟ್ರಿಬ್ಯೂಷನ್ ರಿಲ್ಯಾಕ್ಸ್ ಮಾಡಬೇಕು; ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತೆ ಕೆಲವು ಡಿಪಾರ್ಟ್‌ಮೆಂಟ್ ಏನು ಇವೆ ಅವು ತಾಲ್ಲೂಕಾ ಮಟ್ಟದಲ್ಲಿ ಇದ್ದು ಪ್ರತಿಯೊಂದು ಇಲಾಖೆಯೂ ತಾಲ್ಲೂಕ್ ಬೋರ್ಡಿಗೆ ಒಳಪಟ್ಟು ಇರಬೇಕು ಎಂದು ಹೇಳುತ್ತೇನೆ. ಅದನ್ನು ಸರ್ಕಾರ ಗಮನಿಸಬೇಕು. ರೆವಿನ್ಯೂ ಡಿಪಾರ್ಟ್ ಮೆಂಟಿನಿಂದ ಷೆಡ್ಯೂಲ್ಡ್‌ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ಗೆ ದರಖಾಸ್ತು ಕೊಡುವುದು ಕಷ್ಟವಾಗಿದೆ. ನಮಗೆ ಅದರಮೇಲೆ ಹತೋಟಿ ಇಲ್ಲ. ಯಾವುದೇ ಡಿಪಾರ್ಟ್‌ಮೆಂಟ್ ಆದರೂ ತಾಲ್ಲೂಕ್ ಬೋರ್ಡಿಗೂ ಅದಕ್ಕೂ ಸಂಬಂಧ ಇರುತ್ತದೆ. ಆದಕಾರಣ ಅವರ ಕೆಲಸಕಾರ್ಯಗಳನ್ನು ನಿರ್ವಹಿ ಸುವುದಕ್ಕೆ ತಾಲ್ಲೂಕ್‌ಬೋರ್ಡನ್ನು ಕನ್‌ಸಲ್ಟ್ ಮಾಡಬೇಕು. ಹಾಗೆ ಮಾಡಿದರೆ ಉತ್ತಮವಾಗು ತ್ತದೆ, ಕೆಲಸಕಾರ್ಯಗಳು ಸುಲಭವಾಗುತ್ತದೆ ಎಂದು ಹೇಳುತ್ತೇನೆ. ಹೆಚ್ಚಿಗೆ ಹೇಳದೆ ತಾಲೂಕಾ ಬೋರ್ಡುಗಳಿಗೆ ಅದಷ್ಟು ಫೈನಾನ್ಸ್ ಜಾಸ್ತಿ ಮಾಡಿ ಅವರ ಕೆಲಸಕಾರ್ಯಗಳಿಗೆ ಅನುಕೂಲತೆ ಗಳನ್ನು ಒದಗಿಸಿಕೊಟ್ಟು ಕೆಲಸಕಾರ್ಯಗಳು ಸುಲಭವಾಗಿ ಆಗುವಂತೆ ಅವರು ಬೆಂಗಳೂರಿಗೋ ಮೈಸೂರಿಗೋ ಬಾರದಿರವಹಾಗೆ ತಾಲ್ಲೂಕ್ ಬೋರ್ಡುಗಳೇ ಕೆಲಸ ಮಾಡುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ಇರುವ ಇನ್ನೂ ನಾಲ್ಕಾರು ಡಿಮ್ಯಾಂಡುಗಳು ಮಂಜೂರು ಆಗುವ ಮುನ್ನ

ನಾಲ್ಕಾರು ಸಲಹೆಗಳನ್ನು ಕೊಡಬೇಕು ಎಂದು ಈ ಸಭೆಯ ಮುಂದೆ ನಿಂತಿದ್ದೇನೆ. ಮೊದಲು ಪೌರಸಭೆಗಳು, ಹಳೇ ಮೈಸೂರಿನಲ್ಲಿನಲ್ಲಿರುವ ಪೌರಸಭೆಗಳು ತಮ್ಮದೇ ಆದ ಒಂದು ವೈಶಿಷ್ಟ್ಯವನ್ನು ಪಡೆದಿವೆ. ಇತ್ತೀಚೆಗೆ ಕಾನೂನು ಆದಮೇಲೆ ಪೌರಸಭೆಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈವೊತ್ತಿನ ದಿವಸ ಮಂತ್ರಿಗಳು ಬಾಂಬೆ ಮುನಿಸಿಪಲ್ ಆಕ್ಟ್ ಮತ್ತು ನಮ್ಮ ಮುನಿಸಿಪಲ್ ಆಕ್ಟ್ ಹೋಲಿಸಿ ನೋಡಬೇಕು. ಈವೊತ್ತಿನ ದಿವಸ ನಮ್ಮ ಮುನಿಸಿಪಲ್ ಆಕ್ಟ್ ಬಹಳ ಕೀಳುದರ್ಜೆ ಅಕ್ಟ್ ಆಗಿದೆ ಎಂದು ಎಲ್ಲಾ ಪೌರಸಭಾ ಪ್ರತಿನಿಧಿಗಳೂ ತಿಳಿಸಿದ್ದಾರೆ. ಆಲ್ ಇಂಡಿಯಾ ಲೋಕಲ್ ಸೆಲ್ಫ್ ಗೌರ್ನಮೆಂಟ್ ಮೀಟಿಂಗ್‌ಗೆ ನಾನು ಹೋದಾಗ ಅಲ್ಲಿಯ ತಜ್ಞರು ಬೊಂಬಾಯಿ ಅಕ್ಟ್ ಏನು ಇದೆ ಅಂತಹ ಆಕ್ಟನ್ನು ನಾವು ಮಾಡಲಿಲ್ಲ ಎನ್ನುವ ಪ್ರಶ್ನೆ ಮಾಡಿದರು. ಈ ವಿಚಾರದಲ್ಲಿ ಹಿಂದೆ ಆಕ್ಟ್ ಬಂದಾಗ ನಾವು ಅನೇಕ ಅಮೆಂಡ್‌ಮೆಂಟ್ ಸೂಚಿಸಿದೆವು. ಆದರೂ ಸಲಹೆಗಳನ್ನು ಮಾಡಿದಾಗ ಅಂದಿನ ಮಂತ್ರಿಗಳು ಗಮನ ಕೊಡಲಿಲ್ಲ. ಕಾರಣ ಅಂದಿನ ಮಂತ್ರಿಗಳು ಸಿಟಿ ಮುನಿಸಿಪಲ್ ಪ್ರಸಿಡೆಂಟ್ ಆಗಿ ಕೆಲಸ ಮಾಡಿದವರು. ಅವರು ಟೌನ್ ಮುನಿಸಿಪಾಲಿಟಿಗಳಿಗೂ, ಸಿಟಿ ಮುನಿಸಿಪಾಲಿಟಿಗಳಿಗೂ ಅನ್ವಯವಾಗುವ ಹಾಗೆ ಒಂದೇ ಕಾನೂನು ರಚಿಸಿದರು. ಸಿಟಿ ಮುನಿಸಿಪಾಲಿಟಿಗಳ ಆದಾಯ, ಅಧಿಕಾರಿಗಳ ಸಂಖ್ಯೆ, ಆಡಳಿತ ವಿಸ್ತರಣೆ ನೋಡಿದರೆ ಟೌನ್ ಮುನಿಸಿಪಾಲಿಟಿಗೆ ಹೋಲಿಕೆ ಇಲ್ಲ. ಸಿಟಿ ಮುನಿಸಿಪಾಲಿಟಿಗೂ, ಒಂದೇ ಕಾನೂನನ್ನು ಮಾಡಿದ್ದನ್ನು ನೋಡಿದರೆ ಅವರು ಈ ಆಕ್ಟ್‌ನ ಕಡೆಗೆ ಅವರ ಮನಸ್ಸನ್ನು ಹರಿಸಿಲ್ಲ ಎಂದು ನಾನಾದರೂ ಹೇಳಬೇಕಾಗಿದೆ. ಇವೊತ್ತಿನ ದಿವಸ ಪೌರಸಭೆಗಳಿಗೆ ಸರ್ಕಾರ ಯಾವ ಮೂರು ಕಾಸಿನ ಸಹಾಯವೂ ಕೊಡುತ್ತಾ ಇಲ್ಲ. ಸಾಲವನ್ನು ಮಾತ್ರ ಕೊಡುತ್ತಿದ್ದಾರೆ. ಬೆಂಗಳೂರು ಪೌರಸಭೆಗೆ 5 ಕೋಟಿ ರೂಪಾಯಿ ಆದಾಯ ಇದೆ. ಕೇವಲ 5 ಸಾವಿರ ರೂಪಾಯಿ ಆದಾಯ ಬರುವ ಪೌರಸಭೆಗಳೂ ಇವೆ. ನೀರಿನ ಬಗ್ಗೆ ಹಾಗೂ ಒಳಚರಂಡಿಗಳ ಬಗ್ಗೆ ಬಹಳ ಕಷ್ಟಪಡಬೇಕಾಗಿದೆ. ಇವೊತ್ತಿನ ದಿವಸ ಬಾಂಬೆ ಆಕ್ಟ್‌ನಂತೆ ಪ್ರತಿನೀರಿನ ಸಂಬಂಧಿನ ಸ್ಕೀಂಗೆ ಅರ್ಧ ಗ್ರಾಂಟನ್ನು, ಚರಂಡಿ ವ್ಯವಸ್ಥೆ ಮತ್ತು ಅಭಿವೃದ್ಧಿ ಕೆಲಸ ಕಾರ್ಯಗಳಿಗೆ 100 ಕ್ಕೆ 25 ಭಾಗವನ್ನು ಕೊಡಲು ನಮ್ಮ ಆಕ್ಟ್‌ನಲ್ಲಿ ಅವಕಾಶ ಕೊಡಬೇಕಾಗಿ ನಾನು ಸೂಚಿಸುತ್ತೇನೆ.

12-00 NOON

ಇನ್ನು ಎನ್.ಇ.ಎಸ್. ವಿಚಾರದಲ್ಲಿ ಹೇಳುವುದಾದರೆ, ಅಲ್ಲಿ ಸೇಕಡ 90ರಷ್ಟು ವ್ಯವಸಾಯದಲ್ಲಿ ಪ್ರಗತಿಯಾಗಿದೆಯೆಂದು ಅನೇಕ ಅಧಿಕಾರಿಗಳು ಮತ್ತು ಮಂತ್ರಿಗಳು ಭಾಷಣಮಾಡುತ್ತಾ ಹೇಳುತ್ತಿದ್ದಾರೆ. ವರ್ಷಂಪ್ರತಿ ಎನ್.ಇ.ಎಸ್. ಮೊದಲನೆಯ ಹಂತದಲ್ಲಿ 12 ಲಕ್ಷ ರೂಪಾಯಿಗಳನ್ನೂ, ಎರಡನೆಯ ಹಂತದಲ್ಲಿ 5 ಲಕ್ಷ ರೂಪಾಯಿಗಳನ್ನೂ ಅಂದರೆ ಒಟ್ಟು 17 ಲಕ್ಷ ರೂಪಾಯಿಗಳನ್ನೂ ಸರ್ಕಾರದವರು ಒಂದೊಂದು ಬ್ಲಾಕಿಗೆ ಕೊಟ್ಟಿದ್ದಾರೆ. ಒಟ್ಟು 47 ಕೋಟಿ ರೂಪಾಯಿಗಳನ್ನು ಈ ಎನ್.ಇ.ಎಸ್. ಬ್ಲಾಕುಗಳಿಗಾಗಿ ಕೊಡುತ್ತಿದ್ದಾರೆ. ಹಿಂದೆ ಒಂದು ಸಾರಿ ಒಂದು ಬ್ಲಾಕಿನ ಪ್ರಾಜೆಕ್ಟಿಗೆ ಡಿವಿಜನಲ್ ಕಮಿಷನರ್ ಅವರಾದ ಶ್ರೀ ತಿಪ್ಪೇರುದ್ರಯ್ಯನವರು ಹೋದಾಗ ಅಲ್ಲಿನ ಎಗ್ಸಿಕ್ಯುಟಿವ್ ಅಧಿಕಾರಿಗಳನ್ನು ಕರೆದು ಬಾರಯ್ಯ ನೋಡೋಣ, ನೀನು ಕೊಟ್ಟ ಕುರಿ ಮತ್ತು ಕೋಳಿಗಳು ಎಷ್ಟು ಜಾಸ್ತಿ ಹೆಚ್ಚಿವೆ ಎಂಬುದಾಗಿ ನಾಲ್ಕಾರು ಸಂತೆಗಳಿಗೆ ಹೋಗಿ ನೋಡಲಾಗಿ ಎನ್. ಇ. ಎಸ್. ರವರು ಕೊಟ್ಟಿದ್ದ ಕೋಳಿಯಾಗಲೀ ಅಥವಾ ಕುರಿಯಾಗಲೀ ಒಂದೂ ಇರಲಿಲ್ಲ. ಹಾಗೆಯೇ ಕುರಿ ಕೊಟ್ಟವರ ಬಳಿ ಹೋದಾಗ ಅಲ್ಲಿ ಅವರು ಹೇಳಿದ್ದು ಏನೆಂದರೆ, ಕಳೆದ ಹಬ್ಬಕ್ಕೆ ಆ ಕುರಿಗಳನ್ನು ಉಪಯೋಗಿಸಿಕೊಳ್ಳಲಾಯಿತು ಎಂದು, ಇನ್ನೊಂದೆಡೆ ವಿಚಾರಿಸಿದಲ್ಲಿ ನನ್ನ ತಮ್ಮನ ಮಗಳ ಮದುವೆಗೆ ಉಪಯೋಗಿಸಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಇದನ್ನು ನೋಡಿದರೆ, ನಿಜವಾಗಿ ಎನ್.ಇ.ಎಸ್.ನ ಧ್ಯೇಯಗಳು ಖಂಡಿತವಾಗಿ ಸಾಧನೀಯವಾಗುತ್ತಿಲ್ಲ. ಆದ್ದರಿಂದ ಈ ಎನ್.ಇ.ಎಸ್. ಬ್ಲಾಕುಗಳನ್ನು ಕೊಡಲೇ ತೆಗೆದುಹಾಕುವುದರಲ್ಲಿ ಈ ದೇಶಕ್ಕೆ ಬಹಳ ಉಪಕಾರವಿದೆ ಈ ಎನ್.ಇ.ಎಸ್.ಗೋಸ್ಕರ 40ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಅಷ್ಟು ದುಡ್ಡನ್ನೂ ಈಗಾಗಲೇ ನುಂಗಿದ್ದಾರೆ. ಯಾವ ಎನ್.ಇ.ಎಸ್. ಬ್ಲಾಕು ಕೂಡ ಜವಾಬ್ದಾರಿಯುತವಾಗಿ ಕೆಲಸಮಾಡಿಲ್ಲ. ಅವುಗಳಿಂದೇನೂ ಪ್ರಯೋಜನವಾಗಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ಈ ದೇಶವಲ್ಲಿ ಚೋಳರು, ಪಲ್ಲವರು, ಕದಂಬರು, ಹೀಗೆ ಅನೇಕರು ಆಳಿದರು. ಚೋಳರ ಕಾಲದಲ್ಲಿ ಪ್ರತಿಯೊಂದು ಹಳ್ಳಿಗೂ ಒಂದು ಕೆರೆ, ದೇವಸ್ಥಾನ ಮತ್ತು ಒಂದು ತೋಪು ಮಾಡಿದರು. ಅವರು ಆಗ ಕಟ್ಟಿದಂಥ ಕೆರೆಗಳನ್ನು ಇವತ್ತೂ ನೋಡುತ್ತಿದ್ದೇವೆ. 17 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 4 ಕೆರೆಗಳನ್ನು ನಿರ್ಮಾಣ ಮಾಡುವುದಕ್ಕಿಂತ ಕೇವಲ 2 ಸಾವಿರ ಎಕರೆ ನೀರಾವರಿ ಅಭಿವೃದ್ಧಿ ಮಾಡಿದ್ದರೆ ಈಗಿನ ಅಹಾರಭಾವವೇ ಇರುತ್ತಿರಲಿಲ್ಲ. ಬೇರೆಯವರಲ್ಲ ಹೋಗಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಕೈಯೊಡ್ಡುವ ಯೋಜನೆಯೇ ನಮ್ಮ ಸರ್ಕಾರಕ್ಕೆ ಈಗ ಇರುತ್ತಿರಲಿಲ್ಲ. ಆದ್ದರಿಂದ ಸುಮ್ಮನೆ ಎನ್.ಇ.ಎಸ್. ಗಳನ್ನು ಸ್ಥಾಪನೆಮಾಡಿ ಎಷ್ಟು ಕೆಲಸಗಳನ್ನು ದೇಶದ ಹಿತಕ್ಕಾಗಿ ಮಾಡಿದ್ದೀರಿ? ವೃಥಾ ಅವಕ್ಕೆ ಹಣ ಖರ್ಚು ಅಗುತ್ತಿದೆಯೇ ವಿನಾ ಇನ್ನೇನೂ ಸಾಧನೆ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಎನ್.ಇ.ಎಸ್. ಬ್ಲಾಕುಗಳಿಂದ ಏನೂ ಪ್ರಯೋಜನವಾಗುತ್ತಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಎನ್.ಇ.ಎಸ್.ಗಳಲ್ಲಿ ಸಂಬಳಸಾರಿಗೆಗಳಿಗಾಗಿ ಬಹಳ ಹಣ ಖರ್ಚಾಗುತ್ತಿದೆ. ಆದ್ದರಿಂದ ಅದಕ್ಕೆ ಖರ್ಚಾಗುವುದನ್ನು ನಿಲ್ಲಿಸಿ ಕೂಡಲೇ ಇರ್ರಿಗೇಷನ್ ಡೆವಲಪ್‌ಮೆಂಟಿಗೆ ಹಾಗೂ ದೇಶಾಭ್ಯುದಯ ಕಾರ್ಯಗಳಿಗಾಗಿ ಆ ಹಣವನ್ನು ಖರ್ಚುಮಾಡಿದ್ದರೆ ಸರ್ಕಾರದ ಆಡಳಿತ ಇನ್ನೂ ಹೆಚ್ಚಿನಮಟ್ಟದಲ್ಲಿ ನಡೆಯಲು ಸಹಕಾರಿಯಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಕೋ-ಆಪರೇಷನ್ ವಿಷಯ. ಮಂತ್ರಿಗಳು ಅಂಕಿ ಅಂಶಗಳನ್ನು ಕೊಟ್ಟಿದ್ದು ನೋಡಿದರೆ ಸಹಕಾರ ದೇಶದಲ್ಲಿ ಎಷ್ಟು ವಿಸ್ತಾರವಾಗಿ ಬೆಳೆಯುತ್ತಿದೆ ಎಂಬುದಾಗಿ ಹೇಳಬಹುದು. ಆದರೆ ಮಂತ್ರಿಗಳು ಒಂದು ವಿಷಯವನ್ನು ಹೇಳಬೇಕು. ಸಹಕಾರ ಸಂಘಗಳಲ್ಲಿ ಎಷ್ಟು ಬಾಕಿ ಸುಸ್ತಿ ಇದೆಯೆಂದು. ಯಾವ್ಯಾವ ಸಂಘಗಳಲ್ಲಿ ಎಷ್ಟೆಷ್ಟಿದೆ. 146 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದರೆ, ಕೇವಲ 116 ಕೋಟಿ ರೂಪಾಯಿಗಳಷ್ಟು ಮಾತ್ರ ವಾಪಸ್ಸು ಬಂದಿದೆಯೆಂದು ಹೇಳಿದರೆ, ಪೂರ್ತಿಯಾಗಿ ನೀವು ಕೊಟ್ಟ ಹಣ ವಾಪಸ್ಸು ಬಂದಿಲ್ಲವೆಂದು ನಾನು ಹೇಳಬಹುದು. ಯಾವ ಸಹಕಾರ ಸಂಘದ ಬ್ಯಾಲೆನ್ಸ್‌ಷೀಟನ್ನು ನೋಡಿದರೂ ಅದರ ಡಿಮ್ಯಾಂಡ್, ಕಲೆಕ್ಷನ್ ಮತ್ತು ಬ್ಯಾಲೆನ್ಸ್ ಎಷ್ಟು ಎಂದು ನೋಡಿದರೆ ಖಂಡಿತವಾಗಿ ಮುಕ್ಕಾಲುಭಾಗದಷ್ಟು ಸುಸ್ತಿ ಇರುತ್ತದೆ. ಇವತ್ತಿನ ದಿವಸ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನ ಲೆಕ್ಕಗಳನ್ನು ನೋಡಿದರೆ, 1966-67ನೇ ಸಾಲಿನಲ್ಲಿ ಬರಬೇಕಾದ್ದು ಒಂದು ಕೋಟಿ 29 ಲಕ್ಷ ರೂಪಾಯಿಗಳ ವ್ಯವಹಾರದಲ್ಲಿ ಕೇವಲ 35 ಲಕ್ಷ ರೂಪಾಯಿಗಳು ವಸೂಲಾಗಿ 94 ಲಕ್ಷ ರೂಪಾಯಿಗಳಷ್ಟು ಸುಸ್ತಿ ಇದೆ. ಮತ್ತು ಕೇಂದ್ರ ಕೈಗಾರಿಕಾ ಬ್ಯಾಂಕಿನಲ್ಲಿ 80 ಲಕ್ಷ ಸುಸ್ತಿ ಇದೆ. ತುಮಕೂರು ಜಿಲ್ಲಾ ಬ್ಯಾಂಕಿನ 63 ಲಕ್ಷ ರೂಪಾಯಿಗಳ ವ್ಯವಹಾರಕ್ಕೆ 50 ಲಕ್ಷರೂಪಾಯಿಗಳಷ್ಟು ಸುಸ್ತಿ ಇದೆ. ಅದರ ವ್ಯವಹಾರ ನೀತಿ ಸತ್ಯಭ್ರಷ್ಟ ನೀತಿಯಾಗಿದೆ. ಉಳಿದ 13 ಲಕ್ಷರೂಪಾಯಿಗಳಷ್ಟು ಹಣ ಪ್ರೊಡ್ಯೂಸ್ ಲೋನ್ ಸುಸ್ತಿ ಸಾಲವೆಂದು ತೋರಿಸುತ್ತಿದ್ದಾರೆ. ಇದು ಹೇಗೆ ಸಾಧ್ಯ? ಇಲ್ಲವೇ ಅಷ್ಟು ಹಣದಷ್ಟು ಪದಾರ್ಥವಿರಬೇಕು. ಇಲ್ಲ ಹಣವಿರಬೇಕು. ಇವತ್ತು ಅವೆರಡೂ ಇಲ್ಲ. ಅವೆಲ್ಲವೂ ಮಾಯ ವಾಗಿದೆ. 13 ಲಕ್ಷ 60 ಸಾವಿರ ಸುಸ್ತಿ ಇದೆಯೆಂದು ಸುಳ್ಳು ಲೆಕ್ಕವನ್ನು ಕೊಟ್ಟಿದ್ದಾರೆ. ಬ್ಯಾಂಕ್ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ. ವ್ಯವಹಾರ ಹೀಗಿದೆ. ಅಲ್ಲಿನ ಇಲಾಖಾಧಿಕಾರಿ ಗಳು ಶುದ್ಧ ನಾಲಾಯಕ್ಕಾಗಿದ್ದಾರೆ. ಆದರಿಂದ ಅವರ ಪದಾರ್ಥಗಳನ್ನು ನಿಮ್ಮ ಸುಬರ್ದಿಗೆ ಕೊಟ್ಟು ಗೊಡೌನಿಗೆ ಸೀಲು ಹಾಕಿ ನಿಮ್ಮ ಸುಬರ್ದು ಬಿಟ್ಟ ಮಾಲು ಏನಾಯಿತು? ಬೀಗದ ಕೈಗಳನ್ನು ನೀವು ಇಟ್ಟುಕೊಂಡು ಅವನ ಹಣವನ್ನು ವಾಪಸ್ಸು ಪಡೆಯದೇ ಕೊಟ್ಟಿದ್ದೀರಿ. 13 ಲಕ್ಷ 60 ಸಾವಿರ ರೂಪಾಯಿಗಳಷ್ಟು ಸುಸ್ತಿ ಇರಬೇಕೆಂದು ಸುಳ್ಳುಲೆಕ್ಕವನ್ನು ಹೇಳಿದ್ದಾರೆ. ಇನ್ನು ಕೋ-ಆಪರೇಟಿವ್ ವ್ಯವಹಾರ ಎಷ್ಟು ಚೆನ್ನಾಗಿರಬೇಕೆಂಬುದನ್ನು ತಾವೇ ಅರ್ಥ ಮಾಡಿ ಕೊಳ್ಳಬಹುದು. ಕೋ-ಆಪರೇಟಿವ್ ಇನ್‌ಸ್ಪೆಕ್ಟರ್ ಒಬ್ಬರಿಗೆ ವರ್ಗವಾಗುವ ಒಂದು ಸಂದರ್ಭ ಬಂದಾಗ ಅವರಿಗೆ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಕೆಲವು ಭಾಷಣಗಳು ನಡೆದುವು. ಅವುಗಳಲ್ಲಿ ಕೆಲವು ಹೀಗೆ ಇವೆ. ಅಲ್ಲಿ ಭಾಷಣ ಮಾಡಿದ ಒಬ್ಬರು ಅವರ ಗುಣಗಳನ್ನು ಹೊಗಳುತ್ತಾ ಇವರು ಬಹಳ ದಯಾಳುಗಳು, ನಮ್ಮ ಸಂಘಕ್ಕೆ ಒಮ್ಮೆ ಭೇಟಿ ಕೊಟ್ಟಾಗ ಅಲ್ಲಿನ ಲೆಕ್ಕಪತ್ರಗಳ ಪ್ರಕಾರ 626 ರೂಪಾಯಿಗಳ ಸಿಲ್ಕು ಕಮ್ಮಿ ಇದ್ದಾಗ್ಯೂ ಕೂಡ ಸ್ಟಾಕು ಚೆಕ್ ಮಾಡಿದಾಗ checked and found correct ಎಂಬುದಾಗಿ ಸರ್ಟಿಫೈ ಮಾಡಿದ್ದಾರೆ. ಇಂತಹ ದಯಾಳುಗಳಾದ ಇನ್‌ಸ್ಪೆಕ್ಟರ್ ಸಿಕ್ಕುವುದಿಲ್ಲವೆಂದು ಹೇಳಿ 40 ಸೇರು ಸಣ್ಣಕ್ಕಿ ಚೀಲವನ್ನು ಅವರ ಜೀಪಿಗೆ ಹಾಕಿಸಿದರು. ಇನ್ನೊಬ್ಬ ಸ್ಟೇಟ್ ಆಫೀಸರು ನಮ್ಮ ತಾಲ್ಲೂಕಿಗೆ ಬಂದಾಗ ಅವರು ಏನು ಮಾಡಿದರೆಂಬುದನ್ನು ನಾನು ಈಗ ಹೇಳುತ್ತೇನೆ. ನಮ್ಮಲ್ಲಿರತಕ್ಕ ಕಂಬಳಿ ಮಾರ್ಕೆಟಿಂಗ್ ಸೊಸೈಟಿಯು ಸುಮಾರು 40 ಸಾವಿರ ಬಿಲ್ಲು ಗಳೆಲ್ಲಕ್ಕೂ ಒಂದು ರೂಪಾಯಿಗೆ ಆರು ಕಾಸು ರಿಬೇಟ್ ಕೊಡುವಂತೆ ಮಾಡಿ ಅದೆಲ್ಲ ದುಡ್ಡನ್ನೂ ಅವನೇ ನುಂಗಿದ್ದಾನೆ. ಅದರ ಬಗ್ಗೆ ದೂರು ಹೇಳಿದಾಗ ಈ ಅಧಿಕಾರಿ ಏನು ಹೇಳುತ್ತಾನೆಂದರೆ, ಇವೆಲ್ಲವನ್ನೂ ಏಕೆ ಬರೆದುಕೊಳ್ಳುತ್ತೀರಿ, ನಿಮಗೆ ಬುದ್ಧಿ ಇಲ್ಲವೇ, ನಾನು ತಿಂದರೇನು ನೀವು ತಿಂದರೇನು, ಎಲ್ಲರೂ ನಮ್ಮವರು ಎಂಬ ಭಾವನೆ ಬರಬೇಕು ಎಂದು ಹೇಳಿದ್ದಾನೆ.

ಹೋದ ಸಾರಿ ಒಬ್ಬ ಮಂತ್ರಿಗಳು ತುಮಕೂರಿಗೆ ಒಂದು ಕಡೆ ಮಂಕು ತಿಮ್ಮನ ಕಥೆಯೊಂದನು ಹೇಳಿದರು. ಅದರಲ್ಲಿ ಒಂದು ಕಡೆ ಒಂದು ಮಾತನ್ನು ಹೇಳಿದುದನ್ನು ಮಂತ್ರಿಗಳು ಹೇಳಿದ್ದಾರೆ

ಏಕೆ, ನೀವು ನೋಡುತ್ತಿದ್ದೀರಿ, ಕೇಂದ್ರ ಸರ್ಕಾರದವರು ಹತ್ತಾರು ಸಹಸ್ರ ಕೋಟಿ ರೂಪಾಯಿಗಳ ಸಾಲ ಮಾಡಿದರೆ ನಮ್ಮ ಸರ್ಕಾರದವರು ನೂರಾರು ಕೋಟಿ ರೂಪಾಯಿಗಳ ಸಾಲ ತೆಗೆದು ಕೊಂಡಿದ್ದಾರೆ, ಆದರೆ ಆ ಸಾಲವನ್ನು ವಾಪಸ್ಸು ಕೊಡಬೇಕು ಎಂಬುದಾಗಿ ಯಾವ ಪುಸ್ತಕದಲ್ಲಿ ಬರೆದಿದೆ ಎಂದು ಹೇಳಿರುವುದನ್ನು ಮಾನ್ಯ ಮಂತ್ರಿಗಳು ಭಾಷಣ ಮಾಡುತ್ತಾ ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ದೇಶದಲ್ಲಿ ಸಹಕಾರ ಸತ್ಯಶೂನ್ಯವಾಗಿ ನಡೆಯುತ್ತಿದೆಯೆಂಬುದು ಗೊತ್ತಾಗುತ್ತದೆ.

ಇನ್ನು ಸಹಕಾರ ಕ್ಷೇತ್ರದಲ್ಲಿ ಮೂರನೆಯ ಒಂದು ಭಾಗದಷ್ಟು ಅಧಿಕಾರಿಗಳ ಬಗ್ಗೆ ಜನ ಸಾಮಾನ್ಯರು ಅದರಲ್ಲಿಯೂ ಸಹಕಾರವನ್ನು ಮೆಚ್ಚಿರುವವರು ಇದಕ್ಕೆ ಒಂದು ರಾಜಕೀಯ ಬಣ್ಣ ವನ್ನು ಕಟ್ಟಿ ಈ ಸಹಕಾರವನ್ನೇ ಪೂರ್ತಿಯಾಗಿ ಸತ್ಯಶೂನ್ಯವಾಗಿ ಹಾಗೂ ಸತ್ಯಭ್ರಷ್ಟವಾಗಿ ಮಾಡಿ ದ್ದಾರೆಂದರೆ ಅದೇನೂ ತಪ್ಪಾಗಲಾರದು. ಇವತ್ತಿನದಿವಸ ಸಹಕಾರದ ಬೆಳವಣಿಗೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಗಾಧ ನಂಬಿಕೆಯನ್ನು ತೋರಿಸಿದರು. ಆದರೆ ಇಲ್ಲಿ ಅಧಿಕಾರಿಗಳ ಮೇಲೆ ಯಾವ ರೀತಿಯಲ್ಲಿ ಟೀಕೆಗಳನ್ನು ಮಾಡಿದ್ದಾರೆಂಬುದನ್ನು ನೋಡಿದರೆ, ತನ್ನ ಮನೆಯಲ್ಲಿರುವ ಹೆಂಡತಿ ಮಕ್ಕಳು ತನ್ನಮೇಲೆ ಯಾವ ರೀತಿಯಲ್ಲಿ ಬೀಳುತ್ತಾರೆಂಬ ದಾಟಿಯಲ್ಲಿ ಹೇಳಿದಂತಿದೆ, ಇದು ವಿಷಾದಕರವಾದದ್ದು. ಇವತ್ತಿನ ದಿವಸ ಸಹಕಾರ ಯಾವುದೇ ಒಂದು ಒಳ್ಳೆಯ ರೀತಿಯಲ್ಲಿ ನಿಜವಾಗಿ ಬೆಳೆಯಬೇಕಾದರೆ ಇದರಲ್ಲಿ ಸ್ವಚ್ಛ ಅಧಿಕಾರಬೇಕು. ಸುಮಾರು 20 ವರ್ಷಗಳ ರಾಜ್ಯಾಡಳಿತವನ್ನು ನೋಡಿ ಹೇಳುವುದಾದರೆ, ಇವರು ಆ ಅವಧಿಯಲ್ಲಿ ಸಾಧಿಸಿರುವುದೇನೆಂದರೆ, ಕಮ್ಯೂನಲ್ ಬ್ಯಾಲೆನ್ಸ್ ಮತ್ತು ಟ್ಯಾಕ್ಸ್ ಯಾವ ಒಂದು ಇಲಾಖೆಯಲ್ಲಿಯೂ ಅಭಿವೃದ್ಧಿ ಕಾಣುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿಯೂ ಹಾಗೆಯೇ ಇದೆ. ಟ್ಯಾಕ್ಸ್ ಅಂದರೆ pat the Congressmen ಅಥವಾ pat by the Congressmen. ತುಮಕೂರು ಜಿಲ್ಲಾ ಬ್ಯಾಂಕ್ ಮೇಲೆ 10 ಚಾರ್ಜುಗಳನ್ನು ಕೊಡುತ್ತೇನೆ. ಈಗಿರತಕ್ಕ ಅಲ್ಲಿಯ ಕಾರ್ಯದರ್ಶಿಗಳು ಮೂರು ಸಾರಿ ವರ್ಗವಾಗಿದೆ ಎಂದು ಆರ್ಡರ್ ಬಂತು. ಅವರನ್ನು ವರ್ಗ ಮಾಡಬೇಕೆಂದು ಅನೇಕರು ಹೇಳಿದರೂ ಅಲ್ಲಿ ರಾಜಕೀಯ ಮುಖಂಡರು ಯಾರು ಇದ್ದಾರೋ ಅವರು ಅವರನ್ನು ಅಲ್ಲಿಯೇ ಇಡುತ್ತಿದ್ದಾರೆ. ಸುಮಾರು ಮೂರು ಲಕ್ಷ 60 ಸಾವಿರ ರೂಪಾಯಿಗಳ ಕಂಟ್ರಾಕ್ಟ್ ಒಬ್ಬರಿಗೆ ಕೊಟ್ಟು ಅಲ್ಲಿ ವಿಶ್ವಾಸ ಬೆಳೆಸಿಕೊಂಡು ಅಲ್ಲಿರುವವರಾಗಿದ್ದಾರೆ. ಆ ಕಂಟ್ರಾಕ್ಟರ್ ಯಾರು ಅಂದರೆ ಅಲ್ಲಿಯ ತಾಲ್ಲೂಕು ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು. ಆ ಒಂದು ಕಂಟ್ರಾಕ್ಟರ ನಿದರ್ಶನವೇ ಸಾಕು. ನಿಮ್ಮ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಎಷ್ಟರಮಟ್ಟಿಗೆ ಅನ್ಯಾಯ ನಡೆಯುತ್ತಿದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇದರ ವಿಚಾರವಾಗಿ ಒಂದು ದೊಡ್ಡ ಚರಿತ್ರೆಯನ್ನು ಬರೆಯಬಹುದು ಎಂಬುದಾಗಿ ನನ್ನ ಸ್ನೇಹಿತರೊಬ್ಬರು ನಿನ್ನೆ ಹೇಳಿದ್ದಾರೆ. ಈಗಿನ ಸಮಯಕ್ಕೆ ಸರಿಯಾಗಿ ಲಾಭ ಇರಬಹುದು ಎಂದು ಹೇಳಿರುತ್ತಾರೆ. ಆದರೆ ಇಂತಹ ಅವ್ಯವಸ್ಥೆಗೆ ಯಾರು ಕಾರಣರು ? ಅಂದರೆ ನಿಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ಚೀಫ್ ಮಾರ್ಕೆಟಿಂಗ್ ಆಫೀಸರ್ ಆಗಿರುತ್ತಾರೆ. ಆ ಒಂದು ಸೊಸೈಟಿಯ ವಿಚಾರವಾಗಿ ನಾನು ಸರ್ಕಾರಕ್ಕೆ ಬರೆದಿದ್ದೇನೆ. ವರ್ತಕರು ಕಂಟ್ರಾಕ್ಟರುಗಳಾಗಿ ದ್ದರೆ ಅವರೂ ಸಹ ಬಿಲ್‌ಗಳನ್ನು ಪ್ರಾಂಪ್ಟಾಗಿ ಕೊಡಬೇಕು.

ನಮ್ಮ ಸೊಸೈಟಿಗಳಲ್ಲಿ ಈಗ ಸುಮಾರು ಎರಡು ವರ್ಷಗಳಿಂದ 12 ಸಾವಿರ ರೂಪಾಯಿಗಳ ಬಿಲ್ಲು ನಿಂತಿದೆ. ಇದೇ ರೀತಿ ಎಷ್ಟೋ ಸೊಸೈಟಿಗಳಲ್ಲಿ ಬಿಲ್ಲುಗಳು ಬಾಕಿ ನಿಂತಿವೆ. ಚೀಫ್ ಅಕೌಂಟ್ಸ್ ಆಫೀಸರ ವಿಷಯದಲ್ಲಿ ಕೆಲವು ಅನುಮಾನಾಸ್ಪದವಾದ ವಿಚಾರಗಳಿವೆ. ಆದ್ದರಿಂದ ಅವರನ್ನು ತನಿಖೆ ಮಾಡಿ 24 ಗಂಟೆಯಲ್ಲಿ ಆಚೆ ಕಳುಹಿಸಬೇಕು. ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದವರೂ ಕೂಡ ಮೂರು ನಾಲ್ಕು ತಿಂಗಳು ಸುಮಾರು 15 ಲಕ್ಷ ರೂಪಾಯಿಗಳ ಬಿಲ್ಲನ್ನು ನಿಲ್ಲಿಸಿದ್ದಾರೆ. ಅವುಗಳನ್ನು ಮಂಜೂರು ಮಾಡುವಂತೆ ಹೇಳಬೇಕು. ಈ ಸೊಸೈಟಿಗಳಲ್ಲಿ ದುಬಾರಿ ಆಡಳಿತ ಏನು ಆಗುತ್ತಿದೆಯೋ ಅದನ್ನು ತಪ್ಪಿಸಬೇಕು. ಈ ಸೊಸೈಟಿಗಳಿಗೆ ಯಾವುದೇ ಟೆಂಡರ್ ಕಾಲ್‌ಫಾರ್ ಮಾಡಿದರೂ ಕೂಡ ಅದಕ್ಕೆ ಕ್ವೊಟೇಷನ್‌ಗಳನ್ನು ಕಳುಹಿಸುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಅದಕ್ಕೆ ಕಾರಣ ಅಲ್ಲಿ ಅನೇಕ ಲೋಪದೋಷಗಳಿವೆ. ಅದು ಇಡೀ ದೇಶಕ್ಕೇ ಗೊಬ್ಬರವನ್ನು ಸರಬರಾಜು ಮಾಡುವ ಕೇಂದ್ರ. ಗೊಬ್ಬರ ಬೇಕೆಂದು ಜನ ಬಾಯಿ ಬಿಡುತ್ತಿದ್ದಾರೆ. ಮುಖ್ಯವಾಗಿ ಯಾರೂ ಅಲ್ಲಿ ಸತ್ಯ ಸಂಧರಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ರಾಜಕೀಯ ಪ್ರವೇಶ ಜಾಸ್ತಿಯಾಗುತ್ತಿದೆ. ಅದನ್ನು ತಪ್ಪಿಸಬೇಕು. ಬಸವಣ್ಣನವರ ಒಂದು ವಚನದಲ್ಲಿ ದೇಶಕ್ಕೆ ಯಾರು ದೊಡ್ಡ ಮನುಷ್ಯ ಎಂದು ಹೇಳಿದ್ದಾರೆ ಸರ್ವರಲೇಸ ಬಯಸುವವನೇ ಕುಲಜ ಎಂದು ಹೇಳಿದ್ದಾರೆ. ಈಗ ನಾನು ಅದನ್ನು ಬದಲಾಯಿಸಿ ಜಾತೀಯ ಬೆಳೆಸಿದವ ಕುಲ್ಲಜನಲ್ಲ, ಪಕ್ಷಾವ ಬಳಸಿದವ ಕುಲಜನಲ್ಲ. ಸರ್ವರ ಲೇಸ ಬಯಸುವ ಕುಲಜ ಹೇಳಿ ಎಂದು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ಮತ್ತು ಸಭೆಯ ಗಮನಕ್ಕೆ ತರಬೆಸುತ್ತೇನೆ. ವ್ಯವಸಾಯದ ಅಭಿವೃದ್ಧಿಯಾಗ ಬೇಕಾದರೆ ಹಳ್ಳಿಗಾಡಿನ ಜನರ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಈ ದಿವಸ ಸಹಕಾರ ಸಂಘ ಗಳು ಹೆಚ್ಚು ಮುತುವರ್ಜಿಯಿಂದ, ಸತ್ಯ ಸಂಧತೆಯಿಂದ, ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ. ಕೇವಲ 10 ನಿಮಿಷಗಳನ್ನು ಮಾತ್ರ ನನಗೆ ಅವಕಾಶವನ್ನು ಕೊಟ್ಟಿರುವುದರಿಂದ ಸ್ವಲ್ಪ ಸಂಕ್ಷಿಪ್ತವಾಗಿ ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಈ ಸಹಕಾರ ಸಂಘಗಳು ಅಭಿವೃದ್ಧಿಯಾದ ಮೇಲೆ ಕೈಗಾರಿಕೆ ಗಳೂ ಕೂಡ ಸಹಕಾರ ಸಂಘಗಳ ಮುಖಾಂತರವೇ ನಡೆಯಬೇಕು ಎನ್ನುವುದು ನನ್ನ ವೈಯ್ಯಕ್ತಿಕ ವಾದ ಮತ್ತು ಖಚಿತವಾದಂತಹ ಅಭಿಪ್ರಾಯ. ಈಗ ಉದಾಹರಣೆಗೆ ಹೇಳುವುದಾದರೆ ಇತ್ತೀಚೆಗೆ ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜಯು ಜಾರಿಗೆ ಬಂದಮೇಲೆ ಹಿಂದೂಸ್ಥಾನ ದಲ್ಲೆಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಸಹಕಾರ ಸಂಘಗಳ ಮುಖಾಂತರ ಸ್ಥಾಪನೆ ಮಾಡತಕ್ಕಂಥ ಒಂದು ಪದ್ಧತಿ ಜಾರಿಗೆ ಬಂದಿದೆ. ರೈತರ ದೃಷ್ಟಿಯಿಂದ ನೋಡುವುದಾದರೆ ಅವರಿಗೆ ಕಬ್ಬಿಗೆ ಜಾಸ್ತಿ ಬೆಲೆ ಸಹಕಾರ ಸಂಘಗಳಿಂದ ಸ್ಥಾಪನೆ ಮಾಡಿರತಕ್ಕ ಸಕ್ಕರೆ ಕಾರ್ಖಾನೆಗಳಿಂದ ಸಿಕ್ಕುತ್ತಿದೆ. ಕಂಪೆನಿಗಳ ಆಡಳಿತಕ್ಕೊಳಪಟ್ಟು ಕೆಲಸ ಮಾಡತಕ್ಕ ಸಕ್ಕರೆ ಕಾರ್ಖಾನೆಗಳೇನಿವೆಯೋ ಅವು ಸಹಕಾರ ಸಂಘಗಳ ಮುಖಾಂತರ ಸ್ಥಾಪಿಸಲ್ಪಟ್ಟ ಸಕ್ಕರೆ ಕಾರ್ಖಾನೆಯವರು ಕೊಟ್ಟಷ್ಟು ಪ್ರಮಾಣದಲ್ಲಿ ಕಬ್ಬಿಗೆ ಬೆಲೆಯನ್ನು ಕೊಡುವುದಿಲ್ಲ. ನಮ್ಮ ಸಹಕಾರ ಸಂಘಗಳ ಆಡಳಿತದಲ್ಲಿರುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಒಂದು ಟನ್ ಕಬ್ಬಿಗೆ 12 ರೂಪಾಯಿ ಜಾಸ್ತಿ ಕೊಡುತ್ತಾರೆ. ಈ ಸಹಕಾರ ಸಂಘಗಳಲ್ಲಿ ಒಂದು ವೇಳೆ ಆಡಳಿತವೇನಾದರೂ ಕೆಟ್ಟು ಹೋದ ಪಕ್ಷದಲ್ಲಿ ಆ ಸಂಘಗಳ ಷೇರ್ ಹೋಲ್ಡರುಗಳು ಅದನ್ನು ಸರಿಪಡಿಸಿ ಅದರಲ್ಲಿ ಹೆಚ್ಚು ಉತ್ಪತ್ತಿ ಬರುವಂತೆ ಮಾಡುತ್ತಾರೆ; ಅದರ ಅಭಿವೃದ್ಧಿಯನ್ನು ಸಾಧನೆ ಮಾಡುತ್ತಾರೆ. ಆದ್ದರಿಂದ ರೈತರಿಗೆ ಈ ಸಹಕಾರ ಸಂಘಗಳಿಂದ ಹೆಚ್ಚು ಉಪಯೋಗವಾಗುತ್ತದೆ. ಹಾಗೇನೇ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಹೆಚ್ಚು ಅಭಿವೃದ್ಧಿಯಾಗುವಂತೆ ಮಾಡಬೇಕು. ಆಯಾಯ ತಾಲ್ಲೂಕುಗಳು ಅಭಿವೃದ್ಧಿಯಾಗಬೇಕಾದರೆ, ಜನಗಳಿಗೆ ಹೆಚ್ಚಿನ ಸೌಕರ್ಯಗಳು ದೊರೆಯಬೇಕಾದರೆ ತಾಲ್ಲೂಕು ಮಾರಾಟ ಸಹಕಾರ ಸಂಘಗಳು ಹೆಚ್ಚು ಮುತವರ್ಜಿಯಿಂದ ಕೆಲಸ ಮಾಡಬೇಕು. ಅದಕ್ಕಾಗಿ ಸರ್ಕಾರದವರು ಅದರ ಕಡೆಗೆ ಹೆಚ್ಚಿಗೆ ಗಮನಕೊಡಬೇಕು. ಪ್ರತಿಯೊಂದು ಮಾರಾಟ ಸಹಕಾರ ಸಂಘಗಳೂ ತನ್ನದೇ ಆದ ಒಂದು ಪ್ರೋಸೆ ಸಿಂಗ್ ಯೂನಿಟ್ ಅನ್ನು ಪಡೆದುಕೊಳ್ಳತಕ್ಕಂಥದ್ದು ಸೂಕ್ತ. ಅದರ ಕಡೆ ಹೆಚ್ಚು ಗಮನಕೊಡಬೇಕು. ಏತಕ್ಕೆಂದರೆ ಒಂದು ಪ್ರೋಸೆಸಿಂಗ್ ಯೂನಿಟ್ ಆಯಾ ತಾಲ್ಲೂಕಿನ ಮಾರಾಟ ಸಹಕಾರ ಸಂಘದಲ್ಲಿ ದ್ದರೆ, ಆ ತಾಲ್ಲೂಕಿನಲ್ಲಿ ರೈತರು ಏನು ಏನು ಉತ್ಪತ್ತಿ ಮಾಡುತ್ತಾರೆಯೋ ಅದನ್ನೆಲ್ಲಾ ಅವರು ಕೊಂಡುಕೊಳ್ಳಬಹುದು. ಆ ಸಹಕಾರ ಸಂಘಗಳವರು ಹೆಚ್ಚು ಲಾಭವನ್ನು ತೆಗೆದುಕೊಳ್ಳುವುದಿಲ್ಲ. ಆ ಸಂಘದ ಸಿಬ್ಬಂದಿ ಖರ್ಚು ಎಷ್ಟಾಗುತ್ತದೆ ಎಂಬುದನ್ನು ಲೆಕ್ಕ ಹಾಕಿಕೊಂಡು, ಮಾರಾಟ ಮಾಡುವು ದರಲ್ಲಿ ಬರತಕ್ಕ ನಿವ್ವಳ ಲಾಭದಲ್ಲಿ ರೈತರಿಗೆ ಬೋನಸ್ ರೂಪದಲ್ಲಿ ಹೆಚ್ಚು ಹಣ ಕೊಡುತ್ತಾರೆ. ಈಗ ಮಂಡ್ಯಾದಲ್ಲಿ ಸರ್ವೀಸ್ ಕೋ-ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿ ಮಾಡಿಕೊಂಡು ರೈತರಿಗೆ, ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಆ ಸಹಕಾರ ಸಂಘದಲ್ಲಿ ಬಂದಂತಹ ನಿವ್ವಳ ಲಾಭ ದಲ್ಲಿ ರೈತರಿಗೆ ಒಂದು ಕ್ವಿಂಟಾಲ್ ಬತ್ತಕ್ಕೆ ಮೂರು—ನಾಲ್ಕು ರೂಪಾಯಿಗಳ ಬೋನಸ್ ಕೊಟ್ಟಿದ್ದಾರೆ. ಈ ಸಹಕಾರ ಸಂಘಗಳು ಕೆಲಸ ಮಾಡುವುದಕ್ಕೆ ವರ್ತಕರು ಅಡ್ಡ ಬರುತ್ತಾರೆ. ನಾನು ಸುಮಾರು ಐದು ವರ್ಷಗಳ ಕಾಲ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಕಾರ್ಯದರ್ಶಿ ಯಾಗಿ ಕೆಲಸ ಮಾಡಿದ್ದೇನೆ. ನಮ್ಮ ಸಹಕಾರ ಸಂಘ ಬೆಳೆಯಬೇಕು, ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ದೃಷ್ಟಿಯಿಂದ ಅದರಲ್ಲಿ ಒಂದು ಬಟ್ಟೆ ಮಾರಾಟ ಮಾಡತಕ್ಕಂಥ ಸೆಕ್ಷನ್ ತೆಗೆಯಬೇಕೆಂದು ಪ್ರಯತ್ನ ಮಾಡಿದಾಗ ನನಗೆ ಆ ವಿಷಯದಲ್ಲಿ ಸಾಕಷ್ಟು ಅನುಭವ ವಿರಲಿಲ್ಲ. ಆದ್ದರಿಂದ ನಾನು ಬೆಂಗಳೂರಿಗೆ ಬಂದು ಬಟ್ಟೆಯನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದೆ. ಅನುಭವ ಬಂದಮೇಲೆ ಪ್ರೊಡ್ಯೂಸಿಂಗ್ ಸೆಂಟರುಗಳಿಂದ ನಾವು ಬಟ್ಟೆಯನ್ನು ತಂದು ಏತಕ್ಕೆ ಮಾರಾಟ ಮಾಡಬಾರದು ಎಂದು ಯೋಚನೆ ಮಾಡಿ ಬಟ್ಟೆ ಪ್ರೊಡ್ಯೂ ಸಿಂಗ್ ಸೆಂಟರುಗಳಾದ ಬೊಂಬಾಯಿ, ಮದ್ರಾಸ್, ಕೊಯಮತ್ತೂರು ಈ ಪ್ರದೇಶಗಳಿಗೆ ಕಾಗದ ಬರೆದು ನಾವು ಸಹಕಾರ ಸಂಘದಲ್ಲಿ ಬಟ್ಟೆ ಮಾರಾಟ ಶಾಖೆಯನ್ನು ತೆರೆಯಬೇಕೆಂದಿದ್ದೇವೆ. ಬಟ್ಟೆ ಯನ್ನು ನಮಗೆ ಕಳುಹಿಸಿಕೊಡಿ ಎಂದು ಹೇಳಿದಾಗ ವರ್ತಕರು ನಮಗೆ ಬರತಕ್ಕ ಲಾಭವನ್ನು ಇವರು ತಪ್ಪಿಸುತ್ತಾರೆ ಎಂದು ನಮಗೆ ತಡೆ ಉಂಟುಮಾಡಿದರು. ಆದರೂ ಸಹ ನಾವು ಹೋರಾಟ ಮಾಡಿ ಆ ಪ್ರೊಡ್ಯೂಸಿಂಗ್ ಸೆಂಟರುಗಳಿಂದ ಬಟ್ಟೆಯನ್ನು ತರಿಸಿ ಜನಗಳಿಗೆ ಮಾರಾಟ ಮಾಡಿದ್ದೇವೆ. ಒಟ್ಟಿನಲ್ಲಿ ಈ ಮಾರಾಟ ಸಹಕಾರ ಸಂಘದಲ್ಲಿ ರೈತರು ಉತ್ಪತ್ತಿ ಮಾಡತಕ್ಕ ಪದಾರ್ಥಗಳನ್ನು

ಕೊಂಡು ಕೊಂಡು ಅದನ್ನು ಮಾರಾಟಮಾಡಿ ಆದರಿಂದ ಬಂದಂಥ ನಿವ್ವಳ ಲಾಭವನ್ನು ರೈತರಿಗೆ ಬೋನಸ್ ರೂಪದಲ್ಲಿ ಹಂಚಿದ್ದೇವೆ. ಇದರಿಂದ ರೈತರಿಗೆ ಹೆಚ್ಚಿನ ಉಪಯೋಗ ಇದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಹೆಚ್ಚು ನಿಗಾ ಕೊಡಬೇಕು.

ಇನ್ನು ಜಿಲ್ಲಾ ಸಹಕಾರ ಬ್ಯಾಂಕುಗಳ ಬಗ್ಗೆ ಹೇಳುವುದಾದರೆ ಈ ಬಾಂಕುಗಳಲ್ಲಿ ರೈತರಿಗೆ ಅಲ್ಪಾವಧಿಯ ಸಾಲ, ಮಧ್ಯಮಾವಧಿಯ ಸಾಲ ಮತ್ತು ದೀರ್ಘಾವಧಿಯ ಸಾಲಗಳನ್ನು ಕೊಡುತ್ತಿದ್ದಾರೆ. ಈ ಬ್ಯಾಂಕುಗಳಲ್ಲಿ ಫಿಕ್ಷೆಡ್ ಡಿಪಾಜಿಟ್, ಪಿಗ್ಮಿ ಡಿಪಾಜಿಟ್‌ಗಳನ್ನು ಕಲೆಕ್ಟ್ ಮಾಡಿ ಫೈನಾನ್ಸಿಯಲ್ ರಿಸೋರ್ಸಸ್ ಅನ್ನು ಹೆಚ್ಚು ಮಾಡಿಕೊಂಡು ಇಟ್ಟುಕೊಂಡಿದ್ದಾರೆ ಆಯಾಯ ಕ್ಷೇತ್ರಗಳಿಗೆ ಸಂಬಂಧಪಟ್ಟ ರೈತರಿಗೆ ಹೆಚ್ಚು ಸಹಾಯವನ್ನು ಮಾಡಬಹುದು. ಸರ್ವೀಸ್ ಕೋಅಪರೇಟೀವ್ ಸೊಸೈಟಿಗಳೇನೋ ಚೆನ್ನಾಗಿ ಕೆಲಸಮಾಡುತ್ತವೆ. ಅವುಗಳಲ್ಲಿ ನ್ಯೂನತೆ ಇರುವುದು ಏನೆಂದರೆ ಅವುಗಳಿಗೆ ಸಾಕಷ್ಟು ಗೋಡೌನ್‌ಗಳು ಇಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಗಮನ ಕೊಡಬೇಕು.

ಇನ್ನು ಕನ್‌ಸ್ಯೂಮರ್ಸ್ ಸೊಸೈಟಿಯ ವಿಷಯವನ್ನು ಹೇಳುವುದಾದರೆ, ಬಳಕೆದಾರರಿಗೆ ಅನುಕೂಲವಾಗುವಂತೆ ಆಗಬೇಕಾದರೆ, ಬೆಲೆಗಳು ಹೆಚ್ಚಿನ ಮಟ್ಟಕ್ಕೆ ಹೋಗದಂತೆ ತಡೆಗಟ್ಟಬೇಕು. ಆದ್ದರಿಂದ ಬೆಲೆಗಳನ್ನು ಏರಿಸುತ್ತಿರುವ ವರ್ತಕರು ಮತ್ತು ದಳ್ಳಾಳಿಗಳನ್ನು ತಡೆಯಲು ಹೆಚ್ಚು ಹೆಚ್ಚು ಕನ್‌ಸೂಮರ್ ಸೊಸೈಟಿಗಳು ಕೆಲಸ ಮಾಡುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಕೊನೆಯ ಪಕ್ಷ ಬಳಕೆದಾರರ ಸಂಘಗಳು ಎಲ್ಲರಿಗೂ ಅವಶ್ಯಕವಾಗಿ ಬೇಕಾಗುವ ಪದಾರ್ಥಗಳನ್ನು ಸರಬರಾಜು ಮಾಡದೇ ಇದ್ದರೆ ತೊಂದರೆಯಾಗುತ್ತದೆ. ವ್ಯಾಪಾರಿಗಳ ಮೇಲೆ ದಳ್ಳಾಳಿಗಳ ಮೇಲೆ ಒಂದು ರೀತಿಯ ಚೆಕ್ಕ ಇಡುವುದಕ್ಕಾದರೂ ಈ ಕಂಜೂಮರ್ಸ್ ಸ್ಟೋರ್ಸ್ ಕೆಲಸ ಮಾಡಬೇಕು. ಈ ವ್ಯವಸ್ಥೆಯಲ್ಲಿ ಡಬ್ಬಲ್ ಕಂಪಾರ್ಟಮೆಂಟ್ ಸಿಸ್ಟಂ ಎಂದು ಇದೆ. ಅದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ಸಹಕಾರಿ ಸಂಘಗಳ ಅಧಿಕಾರಿಗಳು ತಮ್ಮ ಕರ್ತವ್ಯದ ಕಡೆಗೆ ಹೆಚ್ಚು ಗಮನ ಕೊಡಬೇಕು. ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗುತ್ತದೆ. ಅದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಲು ಆಡಿಟ್ ಸೆಕ್ಷನ್ ಚೆನ್ನಾಗಿ ಕೆಲಸ ಮಾಡಬೇಕು. ಒಂದು ತಾರೀಖು ಗೊತ್ತು ಮಾಡಿ ಆ ತಾರೀಖಿನೊಳಗಾಗಿ ಆಡಿಟ್ ನಡೆಸಬೇಕು. ಏನಾದರೂ ಮಿಸ್‌ಅಪ್ರೋಪ್ರಿಯೇಷನ್ ಮಾಡಿದ್ದು ಕಂಡು ಬಂದರೆ ಕೂಡಲೇ ಪ್ರೊಸೆಕ್ಯೂಟ್ ಮಾಡತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಕಾನೂನು ಮಾಡಬೇಕು ಮತ್ತು ಕ್ರಮ ತೆಗೆದುಕೊಳ್ಳಲು ಗಮನ ಕೊಡಬೇಕು ಎಂದು ಹೇಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Speaker, I rise to oppose the Demands placed before the House. I would like to make certain observations as regards the Demand for rural development and the lumpsum provision of Rs. 1.11 cores made without mentioning the details of the developmental works. I may bring to the notice of the House that a provision for the develonment of the department for Bangalore Division, Mysore Division and Gulbarga Division has been made but Belgaum Division has been neglected. I may say here that the prosperity of a State depends upon the prosperity of very part of the State. The Government cannot achieve all round rural development or accelerated development without the inclusion of Belgaum division. A point that is to be considered here is that as a result of 15 years planning whether the standard of living of the common man is raised or not. At present even today the common man or the agriculturist is toiling in the hot Sun with a loin cloth. The essential needs such as food, clothing and housing are not met by the Government. The common man is continuing to stay in the same thatched hut with mud walls and there is no sanitation in the villages. The roads are filled with mud

(SRI N. B. SIRDESAI)

and there are no latrines. There are many villages which have no drinking water wells. The Government have failed to provide drinking water wells to every village. Education and Agriculture which are fundametal things for the improvement of rural development are completely negected. I do not deny that the Government has tried its best to achieve progress but the progress achieved so far is far from satisfactory.

As regards education I would like to point out that there is great need for secondary schools in the malnad areas and the Government have failed to open secondary schools and even primary schools. Sufficient funds are not provided to the Taluk Boards and with the meagre funds at their disposal they cannot open primary schools.

As regards agriculture, the Government are trying their best but they have failed to achieve better progress. Improvement in agriculture depends upon the irrigation facilities, supplying of improved seeds improved implements, etc. Irrigation can be classified into three classes, tanks, wells and canals. The Government have failed to achieve progress in carrying out repairs to the existing tanks and constructing new tanks. They have not constructed sufficient number of canals for irrigation purposes. There are social evils which the Government have failed to overcome beecause of the new tenancy laws. The tenants who were ignorant of litigation are now after litigation. They have formed a habit of visiting courts. With the enforcement of the prohibition laws the habit of drinking is still persisting in the rural areas.

As regards the public health, the Government have failed to establish sufficient number of dispensaries and to upgrade the existing dispensaries. For the Community Development a provision of Rs. 4.73 crores is made and I would like to touch only two or three points. From my own experience I may say that the Goverument is not releaeing funds well in advanee. They release funds in the last week of February or in the first week of March when financial year is about to close. It becomes impossible for a Taluk Board to spend the amounts and the amounts are lapsed. I would request the Government to release the amounts to the Taluk Boards well in advance.

12-30 P.M.

The quantum of contribution from the public in the C.D.P. is 25 per cent and in the L.D.W. is 10 per cent. I request the Government that the quantum of public contribution under C.D.P. should be lowered to 10 per cent as in the case of L.D.W. because the people in malnad areas feel it hard to pay so much and take up the responsibility of the works. The Government have not made sufficient provision for the construction of roads, culverts and dispensaries. So the grant under aid to local bodies should be increased to a considerable extent and

I would request that the amounts allotted for the local development works may be utilised for the pipe water schemes wherever there is feasibility. I would like to point out here that the transfers of the Government officials in the Block are effected frequently though they have framed rules that before the expiry of five years the block officials should not be transferred. But without consulting the Taluk Boards the Government officers according to their whims and fancis are effecting transfers and that is coming in the way of progress of the Taluk Board.

As regards the Miscellaneous Demand I would like to point out here that it is good that Government is making provision for beggars. But they should set up some industries and employ them. It is no use making provision without setting up some industries and allowing them to go on abegging.

In respect of co-operation I would like to bring to the notice of the House that the Government is lagging behind in that sector. They should follow the example of Kolhapur District in Maharashtra. It has achieved far better progress. There are certain defects in the co-operative rules. Here the Government is not allowing a society to take up different kinds of work whereas there the Government are allowaing a society to do other types of business. Another suggestion that I wish to make is, there should be an amendment to the Co-operative Societies Act to make the children co-operative minded. The school children should be made eligible for membership of a school co-perative. Then only there would be progress in the co-operative field.

With these words I thank the Chair.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಸಹಕಾರಿ ಮತ್ತು ಗ್ರಾಮಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಗ್ರಾಮಾಭಿವೃದ್ಧಿ, ಸಹಕಾರ, ಮತ್ತು ಸಾಮುದಾಯಕ ಅಭಿವೃದ್ಧಿ ಯೋಜನೆಗಳು, ರಾಷ್ಟ್ರೀಯ ವಿಸ್ತರಣಾ ಯೋಜನಗಳು ಹಾಗೂ ಸ್ಥಳೀಯ ಅಭಿವೃದ್ಧಿ ಕಾರ್ಯಗಳು ಮತ್ತು ವಿವಿಧ ಬಾಬುಗಳು, ಈ ಬೇಡಿಕೆಗಳನ್ನು ಹೃತ್ಪೂರ್ವಕ ವಾಗಿ ಸ್ವಾಗತಿಸುತ್ತ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಹೇಳಬಯಸುತ್ತೇನೆ.

ಮೊದಲನೆಯದಾಗಿ ಪಂಚಾಯಿತಿ ರಾಜ್ಯದ ಬಗ್ಗೆ ಹೇಳುವುದಾದರೆ ಮಾನ್ಯ ಸದಸ್ಯೆಯರಾದ ಶ್ರೀಮತಿ ಲೀಲಾವತಿ ರ್ಸೈ ಅವರು ಹೇಳಿದುದು ಅಕ್ಷರಶಃ ನಿಜ. ಮನೆಯಲ್ಲಾ ನಿಮ್ಮದು, ತಂಬಿಗೆ ಮುಟ್ಟಬೇಡಿ ಎಂದು ಅವರು ಏನು ಹೇಳಿದರು, ಅದು ಸರಿಯಾಗಿ ಹೇಳಿದ್ದಾರೆ. ಜನಗಳು ಯಾವುದೇ ಒಂದು ಬೇಡಿಕೆಯನ್ನು ಮಂತ್ರಿಗಳ ಮುಂದೆ ಇಟ್ಟಾಗ ತಾಲ್ಲೂಕು ಬೋರ್ಡ್ ಕಡೆಗೆ ಕೈ ತೋರಿಸುತ್ತಾರೆ. ಆದರೆ ನಮ್ಮಲ್ಲಿ ಹಣವಿಲ್ಲ. ಏನೋ ಒಂದು ದೊಡ್ಡದಾದ ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಜನಗಳು ಯಾವುದೇ ಒಂದು ಬೇಡಿಕೆಯನ್ನು ಅವರ ಮುಂದೆ ಇಟ್ಟಾಗ ನೀವು ತಾಲ್ಲೂಕು ಬೋರ್ಡನವರ ಹತ್ತಿರ ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಅನೇಕ ತಾಲ್ಲೂಕು ಬೋರ್ಡುಗಳ ಬಜೆಟ್ ಕೇವಲ ಒಂದು ಲಕ್ಷ ರೂಪಾಯಿ ಒಳಗೇ ಇದೇ. ಇಂಥದ್ದರಲ್ಲಿ ಅಲ್ಲಿಯ ಸಿಬ್ಬಂದಿ ವೆಚ್ಚ, ರಸ್ತೆಗಳ ವೆಚ್ಚ ಇವನ್ನೆಲ್ಲಾ ಮಾಡುವುದೇ ಬಹಳ ದುಸ್ತರವಾಗಿದೆ. ಈ ಕಡೆ ಸರ್ಕಾರದವರು ಗಮನ ಹರಿಸಬೇಕೆಂದು ಕೇಳಿಕೊಳ್ಳಬಯಸುತ್ತೇನೆ.

ಪ್ರತಿಯೊಂದರಲ್ಲಿಯೂ ಸಹ ಆಡಳಿತಗಾರರು ಮಧ್ಯೆ ಪ್ರವೇಶಿಸುತ್ತಾರೆ. ತಾಲ್ಲೂಕು ಬೋರ್ಡಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿಲ್ಲ. ಯಾವುದೇ ಮುಖ್ಯವಾದ ವಿಷಯಗಳಿಗೆ, ಹಣಕೊಡಬೇಕಾದರೂ ಡಿವಿಜನಲ್ ಕಮಿಷನರ್ ಅನುಮತಿ ಬೇಕು. ವಿದ್ಯಾಭ್ಯಾಸಕ್ಕೆ ಖಾಸಗಿ ಹೈಸ್ಕೂಲುಗಳಿಗೆ ಅಲ್ಪಸ್ವಲ್ಪ ಧನ ಸಹಾಯ ನೀಡಬೇಕೆಂದರೂ ಕೂಡ ಸರ್ಕಾರ ಅವಕಾಶ

(ಶ್ರೀ ಜೆ. ಆರ್. ಹಾಲಸ್ವಾಮಿ)

ಕೊಡುತ್ತಿಲ್ಲ. ಡಿವಿಜನಲ್ ಕಮಿಷನರು ಖಾಸಗಿ ಹೈಸ್ಕೂಲುಗಳಿಗೆ ಸ್ವಲ್ಪವೂ ಧನ ಸಹಾಯ ನೀಡಬಾರದೆಂದು ಆದೇಶ ಕೊಟ್ಟಿದ್ದಾರೆ. ಇದು ನಿಜವಾಗಿಯೂ ಬಹಳ ಆಶ್ಚರ್ಯಕರವಾಗಿದೆ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಮುಖ್ಯವಾಗಿ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡ ಬೇಕಾದ್ದು ತಾಲ್ಲೂಕು ಬೋರ್ಡಿನ ಕರ್ತವ್ಯವಾಗಿವೆ. ಖಾಸಗಿ ಹೈಸ್ಕೂಲುಗಳಿಗೆ ಅಲ್ಪಸ್ವಲ್ಪ ಧನ ಸಹಾಯ ನೀಡುವುದಕ್ಕೆ ಅವಕಾಶ ಕೊಡಬೇಕು.

ಎಲ್ಲಿಯಾದರೂ ಹಳ್ಳಿಗಳಲ್ಲಿ ಬೆಂಕಿ ಬಿದ್ದಾಗ ಜನಗಳಿಗೆ ಸಹಾಯ ಮಾಡಬೇಕು ಎಂದರೆ ಜಿಲ್ಲಾಧಿಕಾರಿಗಳನ್ನು ಕೇಳಿ ಅವರ ಪರ್ಮಿಷನ್ ತೆಗೆದುಕೊಳ್ಳಬೇಕು. ಪ್ರತಿಯೊಂದರಲ್ಲಿಯೂ ಅಧಿಕಾರಿಗಳ ಪರ್ಮಿಷನ್ ತೆಗೆದುಕೊಳ್ಳದೆ ಏನೂ ಮಾಡುವ ಹಾಗೇ ಇಲ್ಲ. ಇದನ್ನು ತಪ್ಪಿಸಿ ಸಂಪೂರ್ಣ ಅಧಿಕಾರವನ್ನು ತಾಲ್ಲೂಕು ಬೋರ್ಡುಗಳಿಗೇ ಕೊಟ್ಟು, ಚೆನ್ನಾಗಿ ಆಡಳಿತ ನಡೆಯು ವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳಬಯಸುತ್ತೇನೆ.

ತಾಲ್ಲೂಕಿನಲ್ಲಿ ರಸ್ತೆಗಳನ್ನು ಮಾಡಿಸಬೇಕು ಎಂದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ತಾಲ್ಲೂಕು ಬೋರ್ಡಿನ ಕಡೆ ಬೊಟ್ಟು ತೋರಿಸುತ್ತಾರೆ. ಎರಡು ಮೂರು ಮೈಲಿ ರಸ್ತೆ ಮಾಡ ಬೇಕಾದರೂ ಹಣವಿಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕು ಬೋರ್ಡುಗಳಿಗಿರುವ ಅಲ್ಪ ಆದಾಯದಲ್ಲಿ ರಸ್ತೆಗಳನ್ನು ಮಾಡಿಸುವುದಕ್ಕಾಗುತ್ತಾ ಇಲ್ಲ. ರಸ್ತೆಗಳನ್ನು ಮಾಡುವುದಕ್ಕೆ ಹೆಚ್ಚು ಧನ ಸಹಾಯ ನೀಡಬೇಕು. ಎಲ್ಲೆಲ್ಲಿ ತಾಲ್ಲೂಕು ಬೋರ್ಡ ರಸ್ತೆಗಳಲ್ಲಿ ವಾಹನಗಳು ಓಡಾಡುತ್ತವೆ ಅಂಥ ಕಡೆ ಬರುವ ಮೋಟರ್ ವೆಹಿಕಲ್ ಟ್ಯಾಕ್ಸನಲ್ಲಿ ಕೆಲವು ಭಾಗವನ್ನು ತಾಲ್ಲೂಕು ಬೋರ್ಡಗಳಿಗೆ ಕೊಡಬೇಕೆಂದು ಈ ಸಂಬಂಧದಲ್ಲಿ ಹೇಳಬಯಸುತ್ತೇನೆ.

ಪಂಚಾಯಿತಿಗಳಿಗೂ ತಾಲ್ಲೂಕು ಬೋರ್ಡಗಳಿಗೂ ಸರಿಯಾದ ಲಿಂಕ್ ಇಲ್ಲ. ಸರಿಯಾದ ಲಿಂಕ್ ಇರುವ ಹಾಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಪಂಚಾಯಿತಿಗಳ ಆಡಳಿತ ಅಷ್ಟೊಂದು ಸರಿಯಾಗಿ ನಡೆಯುತ್ತಿಲ್ಲ. ಕಂದಾಯದ ಬಾಕಿ ಸಿಕ್ಕಾಪಟ್ಟೆ ಏರುತ್ತಿದೆ. ಮುಂಚೆ ಶ್ಯಾನುಭೋಗರು ಪಂಚಾಯಿತಿ ಕಂದಾಯವನ್ನು ವಸೂಲ್ಮಾಡಿ ಕೊಂಡು ಹೋಗುತ್ತಿದ್ದರು. ಆಗ ಅವರು ರೆವಿನ್ಯೂ ಕಂದಾಯವನ್ನು ವಸೂಲ್ಮಾಡುವುದಕ್ಕೆ ಮುಂಚೆ ಪಂಚಾಯಿತಿ ಕಂದಾಯವನ್ನು ವಸೂಲ್ಮಾಡುತ್ತಿದ್ದುದರಿಂದ ಸಂಪೂರ್ಣವಾಗಿ ವಸೂಲಾ ಗುತ್ತಿತ್ತು. ಈಗ ಸರ್ಕಾರದವರು 75-80 ರೂಪಾಯಿ ಸಂಬಳ ಕೊಟ್ಟು ಸೆಕ್ರೆಟರಿಗಳನ್ನು ನೇಮಿಸಿದ್ದಾರೆ. ಅವರ ಸಂಬಳಕ್ಕೂ ಸಹಿತ ಕಂದಾಯವನ್ನು ವಸೂಲ್ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕು ಮತ್ತು ಪಂಚಾಯಿತಿಗಳಲ್ಲಿರುವ ಕಂದಾಯದ ಬಾಕಿಯನ್ನು ಪೂರಾ ವಸೂಲ್ಮಾಡಿ ಪಂಚಾಯಿತಿಗಳ ಆಡಳಿತ ಸುಗಮವಾಗಿ ನಡೆಯುವಂತೆ ಮಾಡಬೇಕು. ಅಲ್ಲದೆ ಮುಖ್ಯವಾಗಿ ಬೇಕಾದ ಚರಂಡಿ, ರಸ್ತೆ ಮುಂತಾದ ಕೆಲಸಗಳನ್ನು ಮಾಡುವುದಕ್ಕೂ ಅವಕಾಶವಾಗುತ್ತದೆ. ಅದ್ದರಿಂದ ಸರ್ಕಾರ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸಹಕಾರದ ಬಗ್ಗೆ ಹೇಳುವುದಾದರೆ, ಸಹಕಾರಕ್ಕೆ ಸಂಬಂಧಪಟ್ಟ ಆಕ್ಟ್ ಮತ್ತು ರೂಲ್ಸ್ ಸ್ವಲ್ಪ ಬಿಗಿಪಡಿಸಬೇಕು. ಯಾರು ತಪ್ಪಿತಸ್ಥರಾಗಿರುತ್ತಾರೆ ಅಂಥವರಿಗೆ ಶಿಕ್ಷೆ ವಿಧಿಸುವುದಕ್ಕೆ ಶೀಘ್ರವಾಗಿ ಕ್ರಮ ಕೈಕೊಳ್ಳುವುದಕ್ಕೆ ಈಗಿನ ಆಕ್ಟ್ ಮತ್ತು ರೂಲ್ಸ್ ಪ್ರಕಾರ ಸಾಧ್ಯವಾಗುತ್ತಿಲ್ಲ. ಸಹಕಾರ ಸಂಘಗಳಲ್ಲಿ ಯಾರು ತಪ್ಪು ಮಾಡಿರುತ್ತಾರೆ ಅವರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಲು ಆಕ್ಟ್ ಮತ್ತು ರೂಲ್ಸ್ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಪಟ್ಟಭದ್ರ ಹಿತಗಳನ್ನು ತಪ್ಪಿಸುವುದಕ್ಕೆ ಏನಾದರೂ ಕಾನೂನು ಮಾಡಬೇಕೆಂದೂ ಈ ಸಂದರ್ಭದಲ್ಲಿ ಹೇಳುತ್ತೇನೆ.

ನಾನು ಕೈಗಾರಿಕಾ ಬ್ಯಾಂಕ್ ಅಧ್ಯಕ್ಷನಾಗಿರುವುದರಿಂದ ಕೈಗಾರಿಕಾ ಬ್ಯಾಂಕುಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇಡೀ ಇಂಡಿಯಾ ದೇಶದಲ್ಲೇ ಪ್ರಥಮವಾಗಿ ಜಿಲ್ಲಾ ಇಂಡಸ್ಟ್ರಿಯಲ್ ಬ್ಯಾಂಕುಗಳನ್ನು ನಮ್ಮಲ್ಲಿ ಸ್ಥಾಪಿಸಿದ್ದಾರೆ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಈಗಿರತಕ್ಕ 19 ಜಿಲ್ಲಾ ಕೈಗಾರಿಕಾ ಬ್ಯಾಂಕುಗಳಲ್ಲಿ ಬಹಳ ಚೆನ್ನಾಗಿ ಆಡಳಿತ ನಡೆಯುತ್ತಿದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅರ್ಥಿಕ ಮಂತ್ರಿಗಳು ಇನ್ನೂ ಹೆಚ್ಚು ಗಮನವನ್ನು ಈ ಬ್ಯಾಂಕುಗಳ ಕಡೆಗೆ ಹರಿಸಬೇಕು ಎಂದು ಕೇಳಿಕೊಳ್ಳಬಯಸು

ತ್ತೇನೆ. ಈಗ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕ್ ಧನ ಸಹಾಯ ನೀಡುತ್ತಿದೆ. ಅದು ಸಾಲುತ್ತಿಲ್ಲ. ಅವರಲ್ಲಿ ಕೂಡ ಸಾಕಷ್ಟು ಹಣವಿಲ್ಲದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಇಡೀ ಮೈಸೂರು ರಾಜ್ಯದಲ್ಲಿ ಚಿತ್ರದುರ್ಗ ಜಿಲ್ಲೆಯ ಇಂಡಸ್ಟ್ರಿಯಲ್ ಬ್ಯಾಂಕಿಗೆ ಹೆಚ್ಚು ಹಣ ಕೊಟ್ಟಿದ್ದಾರೆ. ಕಾರಣವಿಷ್ಟೆ, ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ, ಹರಿಹರಗಳಲ್ಲಿ ಬಹಳ ಕೈಗಾರಿಕೆಗಳಿರುವುದರಿಂದ 9 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆದರೂ ಇದು ಸಾಲದು. ದಾವಣಗೆರೆಯನ್ನು ಸ್ಪೆಷಲ್ ಆಗಿ ಟ್ರೀಟ್ ಮಾಡಿ ಕನಿಷ್ಟಪಕ್ಷ 20 ಲಕ್ಷ ರೂಪಾಯಿಗಳನ್ನು ದಾವಣಗೆರೆ ಕೈಗಾರಿಕಾ ಬ್ಯಾಂಕಿಗೆ ಕೊಡಿಸಿಕೊಡಬೇಕು. ಆ ಬ್ಯಾಂಕಿನ ಆಡಳಿತ ಚೆನ್ನಾಗಿ ನಡೆಯುತ್ತಿದೆ, ಪ್ರತಿ ತಿಂಗಳೂ ಕೂಡ ಲಾಭದಲ್ಲಿ ನಡೆಯುತ್ತಿದೆ ಎಂದು ಸಂತೋಷದಿಂದ, ಹೆಮ್ಮೆಯಿಂದ ಹೇಳಬಯಸುತ್ತೇನೆ.

ಕಳೆದ ವರ್ಷ ಕೊಟ್ಟ ಹಾಗೆ ಈ ವರ್ಷವೂ ಕೂಡ ಒಂದು ಲಕ್ಷ ಮ್ಯಾಚಿಂಗ್ ಕಾಂಟ್ರಿಬ್ಯೂಷನನ್ನು ಎಲ್ಲ ಕೈಗಾರಿಕಾ ಬ್ಯಾಂಕುಗಳಿಗೂ ಕೊಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕಿಗೆ ಕೂಡ 36 ಲಕ್ಷ ರೂಪಾಯಿ ಮ್ಯಾಚಿಂಗ್ ಗ್ರ್ಯಾಂಟ್ ಕೊಡಿಸಬೇಕೆಂದು ಈ ಸಂದರ್ಭದಲ್ಲಿ ಆರ್ಥಿಕ ಮಂತ್ರಿಗಳನ್ನೂ, ಮುಖ್ಯ ಮಂತ್ರಿಗಳನ್ನೂ ಕೇಳಿಕೊಳ್ಳುತ್ತೇನೆ. ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕ್ ಪರವಾಗಿ ಗ್ಯಾರೆಂಟಿಯಾಗಿ ರಿಜರ್ವ್ ಬ್ಯಾಂಕ್‌ನಿಂದ ಎರಡು ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ಕೊಡಿಸಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ; ಮತ್ತು ಇತ್ತೀಚೆಗೆ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಜಿಲ್ಲಾ ಕೈಗಾರಿಕಾ ಬ್ಯಾಂಕುಗಳ ಮೂಲಕ ಇಂಡಿವಿಜುಯಲ್ಸ್‌ಗೆ ಏನೂ ಕೊಡಬಾರದು ಬರೇ ಸಹಕಾರ ಸಂಘಗಳ ಮುಖಾಂತ ಕೊಡಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಆದರೆ ಇದರಿಂದ ಬ್ಯಾಂಕುಗಳು ಸುಲಲಿತವಾಗಿ ನಡೆಯುವುದಕ್ಕೆ ಬಹಳ ತೊಂದರೆಯಾಗುತ್ತದೆ. ಈಗಾಗಲೇ ಅನೇಕ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿಗಳು ಮುಚ್ಚಿವೆ. ಈಗ ಪುನಃ ಅದರ ಮುಖಾಂತರವೇ ಕೊಡಬೇಕು, ಇಂಡಿವಿಜುಯಲ್ಸ್‌ಗೆ ಕೊಡಬಾರದು ಎಂದರೆ, ಅದರಿಂದ ಅಷ್ಟು ಅನುಕೂಲವಾಗುವುದಿಲ್ಲ ಎಂದು ಹೇಳಬಯಸುತ್ತೇನೆ ಇಂಡಿವಿಜುಯಲ್ಸ್‌ಗೆ ಚೆನ್ನಾಗಿ ಕೆಲಸ ಮಾಡಬೇಕಾದರೆ, ಸಣ್ಣ ಸಣ್ಣ ಕೈಗಾರಿಕೋದ್ಯಮಿಗಳಿಗೆ ಸೊಸೈಟಿಗಳ ಮುಖಾಂತರ ತೆಗೆದುಕೊಳ್ಳುವುದಕ್ಕೆ ಬಹಳ ತಡ ಆಗುತ್ತದೆ. ಆದರೆ ಬ್ಯಾಂಕುಗಳ ಮೂಲಕ ಎಂದರೆ, 2-3 ದಿವಸಗಳಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ, ಇಂಡಿವಿಜುಯಲ್ಸ್‌ಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ರಿಸರ್ವ್ ಬ್ಯಾಂಕಿಗೂ ಈ ಕಷ್ಟವನ್ನು ತಿಳಿಸಬೇಕು. ಇದು ಬ್ಯಾಂಕುಗಳ ಆಡಳಿತದವರಿಗೆ ಗೊತ್ತಿದೆಯೇ ಹೊರತು ಅವರಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ರಿಜರ್ವ್ ಬ್ಯಾಂಕಿನವರಿಗೂ ತಿಳಿಸಿ ಒತ್ತಾಯ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ನಾಗಪ್ಪ ಬಸಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರ ಮಂತ್ರಿಯವರು ಮಂಡಿಸಿದಂತಹ ಗ್ರಾಮಾಭಿವೃದ್ಧಿ, ಸಹಕಾರ, ಸಾಮುದಾಯಿಕ ಅಭಿವೃದ್ಧಿ ಮೊದಲಾದುವುಗಳ ಬಗ್ಗೆ ನಾನು ಕಟುವಾಗಿ ಟೀಕಿಸಬಯಸುತ್ತೇನೆ. ನಗರ ಆಡಳಿತದ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಒಂದು ಹೊಸ ಕಾಯಿದೆಯನ್ನು 1964ನೇ ಇಸವಿಯಲ್ಲಿ ಜಾರಿಗೆ ತಂದಿದೆ. ಇದರಿಂದ ನಗರಾಡಳಿತದ ಬಗ್ಗೆ ಸಾಕಷ್ಟು ಅಡ್ಡಿ ಆತಂಕಗಳು ಆಗುತ್ತಿವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಹೈದರಾಬಾದ್ ಕರ್ಣಾಟಕದ ಬಗ್ಗೆ ಹೇಳುವುದಾದರೆ, 1956ನೇ ಕಾಯಿದೆ ಇರುವಾಗ, ಸ್ವತಂತ್ರವಾದ ಒಬ್ಬ ಮುನಿಸಿಪಲ್ ಇಂಜಿನಿಯರ್ ಕೊಡುವುದಕ್ಕೆ ಪ್ರೊವಿಜನ್ ಇತ್ತು. ಆದರೆ ನಮ್ಮ ಹೊಸ ಕಾಯಿದೆ ಬಂದನಂತರ ಮುನಿಸಿಪಲ್ ಇಂಜನಿಯರ್ ಎಂಬ ಪೋಸ್ಟನ್ನು ಪಿ.ಡಬ್ಲ್ಯು.ಡಿ.ಗೆ ಕೊಟ್ಟು ಮುನಿಸಿಪಾಲಿಟಿ ಮಾಡತಕ್ಕ ಕಾರ್ಯಗಳಿಗೆ ಆತಂಕವಾಗಿ ಬಿಟ್ಟಿದೆ. ಅಲ್ಲಿ ಸಾಕಷ್ಟು ದುಡ್ಡಿನ ಕೊರತೆ ಇಲ್ಲದಾಗ್ಯೂ ಕೆಲಸಗಳು ಕಾರ್ಯಗತವಾಗದೆ ಉಳಿದು ಬಿಟ್ಟಿವೆ. ಆದ ಕೆಲಸಗಳು ಕೆಟ್ಟುಹೋಗಿವೆ. ಒಂದು ಉದಾಹರಣೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ರಾಯಚೂರ ನಗರ ಸಭೆಯವರೂ ಈ ಬಗ್ಗೆ ರಿಸಲ್ಯೂಶನ್ ಪಾಸ್ ಮಾಡಿ ಕಳಿಸಿಕೊಟ್ಟಿದ್ದಾರೆ. ಅಲ್ಲಿ ಮಾಡಿದಂತಹ ಸಿಮೆಂಟ್ ರೋಡಿನ ಮೇಲೆ, ಮನುಷ್ಯ ಕೂಡ ತಿರುಗಾಡಲಾರ, ಅಂಥ ಸಿಮೆಂಟ್ ರೋಡ್. ಪಿ.ಡಬ್ಲ್ಯುಡಿ. ಕಡೆಯಿಂದ ಮಾಡಿಸಲಾಗಿದೆ. ಅದಕ್ಕಿಂತ ಮೊದಲು, 20 ವರ್ಷದ ಹಿಂದೆ ಮಾಡಿದಂತಹ ರೋಡಾದರೂ, ಸಾಕಷ್ಟು ಒಳ್ಳೆಯ ವ್ಯವಸ್ಥೆಯಲ್ಲಿದೆ. ಅಲ್ಲದೆ ನೀರಿನ ಬಗ್ಗೆ 1939ನೇ ಇಸವಿಯಲ್ಲಿ ನೈಜಾಮ ಸಾಹೇಬರು ಮಾಡಿದ ಯೋಜನೆ ಬಹಳ ಚೆನ್ನಾಗಿದೆ. ಆದರೆ ಅದಕ್ಕೆ ರಿಪೇರಿ ಮಾಡುವ ಶಕ್ತಿ ಈ ಸರ್ಕಾರಕ್ಕೆ ಇಲ್ಲ. ಈಗ ಅಲ್ಲಿರತಕ್ಕ ಜನ ಸಂಖ್ಯೆ 20 ಸಾವಿರದಿಂದ 80 ಸಾವಿರಕ್ಕೆ ಏರಿದೆ. ಅಲ್ಲಿ ಒಂದು ಹೊಸ ಯೋಜನೆ ಮಾಡಬೇಕಾಗಿದೆ.

(ಶ್ರೀ ಎಂ. ನಾಗಪ್ಪ ಬಸಪ್ಪ)

ಆದರೆ ಆ ಸ್ಕೀಮ್ ಮೂರು ವರ್ಷದಿಂದ ಇವತ್ತಿನವರೆಗೂ ಕಾರ್ಯಗತವಾಗಿಲ್ಲ. ವರ್ಷದಲ್ಲಿ ನಾಲ್ಕಾರು ಸಾರಿ ನೀರು ಸರಬರಾಜು ನಿಂತು ಹೋಗುತ್ತದೆ. ಹೊಸ ಸ್ಕೀಮನ್ನು ಪ್ರಾರಂಭ ಮಾಡದೆ ಜನರಿಗೆ ಬಹಳ ಕಷ್ಟವಾಗುತ್ತದೆ. ಇದರ ಕಡೆ ತೀವ್ರ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಎರಡನೆಯದಾಗಿ ಸಹಕಾರದ ಬಗ್ಗೆ ಹೇಳುವುದಾದರೆ, ಈ ಸಹಕಾರ ಸಂಸ್ಥೆಗಳು ಸ್ವಹಕಾರ ಸಂಸ್ಥೆಗಳಾಗಿವೆ. ಇದರಲ್ಲಿ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.

ರಾಯಚೂರು ತಾಲೂಕಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳು 214 ಇವೆ. ಅದರಲ್ಲಿ ಕ್ರೆಡಿಟ್ ಸೊಸೈಟಿಗಳು 71, ನಾನ್ ಕ್ರೆಡಿಟ್ ಸೊಸೈಟಿಗಳು 143. ಇದರಲ್ಲಿ ಎಷ್ಟು ನೂರಕ್ಕೆ ಎಂಭತ್ತರಷ್ಟು ಸೊಸೈಟಿಗಳು ಲಿಕ್ವಿಡೇಶನ್ ಪರಿಸ್ಥಿತಿಗೆ ಬಂದಿವೆ. ಅದಕ್ಕೆ ಕಾರಣ ಅಲ್ಲಿ ನಡೆಸತಕ್ಕಂತಹ ಏನು ವ್ಯವಸ್ಥೆ ಇದೆ, ಅದು ಇಲ್ಲಿರುವ ಆಡಳಿತ ಪಕ್ಷದ ಜನರ ಕೈಯಲ್ಲಿ ಬಂದು ಅದನ್ನು ಸುಲಲಿತವಾಗಿ ನಡೆಸುತ್ತಾ ಇಲ್ಲ. ಉದಾಹರಣೆಗೆ ಇವತ್ತಿನ ದಿವಸ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿ ನೋಡಿ, ಯಾವುದು ಕೋಆಪರೇಟಿವ್ ಉದ್ದಿಶ್ಯದ ಮೇಲೆ ನಡೆಯುತ್ತದೆಯೋ, ಅಲ್ಲಿ ಮೊನ್ನೆ ಒಬ್ಬ ಅಲ್ಲಿಯ ಸೆಕ್ರೆಟರಿಗೆ ಫುಡ್‌ಗ್ರೇನಿನ ಆರ್ಡರಿನಲ್ಲಿ 500 ರೂಪಾಯಿ ದಂಡ ಕೋರ್ಟಿನಿಂದ ವಿಧಿಸಲಾಗಿದೆ; ಮತ್ತು ಅಲ್ಲಿ ಒಂದು ಲಕ್ಷ ಚೀಲ ಶೇಂಗಾ ಮಾರ್ಕೆಟ್ಟಿನಲ್ಲಿ ಬಿದ್ದಿದೆ. ಆದರೆ ಅವನ್ನು ಪರ್ಚೇಸ್ ಮಾಡ ತಕ್ಕ ಶಕ್ತಿ ಈ ಸೊಸೈಟಿಗೆ ಇಲ್ಲ. ಅಲ್ಲಿ ರೈತರಿಗೆ ಬರತಕ್ಕ ಕಷ್ಟವನ್ನು ನೀಗಿಸುವ ಮನೋಭಾವ ಸರ್ಕಾರಕ್ಕೆ ಇಲ್ಲ. ಆದರೆ ಫುಡ್‌ಗ್ರೈನಿನಲ್ಲಿ ಲಾಭವಾಗುತ್ತದೆಂದು ಆ ವ್ಯವಹಾರವನ್ನು ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರು ನನ್ನ ಗಮನ ಸೂಚನೆಗೆ ಉತ್ತರಿಸುತ್ತ ಹೇಳಿದರು, ನಾವು ಬೊಂಬಾಯಿಗೆ ಬರೆದಿದ್ದೇವೆ, ರೈಲ್ವೆಯದು ವ್ಯವಸ್ಥೆ ಆಗುತ್ತದೆ, ಆ ಮೇಲೆ ಪರ್ಚೇಸ್ ಮಾಡುತ್ತೇವೆಂದು. ಈ ರೀತಿಯ ವಿಳಂಬ ಸರಿಯಲ್ಲ.

ಇನ್ನೊಂದು ವಿಚಾರ ಹೇಳುತ್ತೇನೆ. ರಾಯಚೂರು ವುಲ್ ಇಂಡಸ್ಟ್ರಿ ಕೋಆಪರೇಟಿವ್ ಬೇಸಿಸ್ ಮೇಲೆ ನಡೆದಿದೆ. ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿರಬಹುದು. ರಾಜ್ಯದ ಕಾಂಗ್ರೆಸ್ ಪಕ್ಷದ ಮಾಜಿ ಉಪಾಧ್ಯಕ್ಷರಾಗಿರತಕ್ಕಂತಹವರು ಇಲ್ಲಿಯ ಸೊಸೈಟಿಯ ಕಾರ್ಯದರ್ಶಿ, ತಮ್ಮ ಬಂಧುಗಳಿಗೆ ಅಲ್ಲಿ ಒಂದು ಲಕ್ಷದಷ್ಟು ದಾನದ ರೂಪವಾಗಿ ಬಂದ ಅಮೇರಿಕನ್ ವುಲ್ಲನ್ನು ಕೊಟ್ಟಿದ್ದರು. ಆದರೆ ಅದನ್ನು ರಾಯಚೂರು ಸೊಸೈಟಿಯವರು ಅಮೃತಸರದಲ್ಲಿ ಯಾರಿಗೋ ಮಾರಾಟ ಮಾಡಿದರು. ಇದರಿಂದ ಎರಡು ಲಕ್ಷ ರೂಪಾಯಿ ಸಂಪಾದನೆ ಮಾಡಿದ್ದಾರೆ. ಇದು ಎಲ್ಲರಿಗೂ ಗೊತ್ತು. ಇದುವರೆಗೂ ಈ ವಿಚಾರದಲ್ಲಿ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥ ಸಹಕಾರಿ ಸಂಸ್ಥೆಗಳು ಯಾವ ನಿಷ್ಠೆಯಿಂದ ಕೆಲಸ ಮಾಡುತ್ತಿವೆ ಎಂದು ನೋಡಬಹುದು.

ಇನ್ನೊಂದು ವಿಚಾರ. ತಾಲ್ಲೂಕು ಬೋರ್ಡಿನಲ್ಲಿ ಇವತ್ತಿಗೆ ಸ್ವಾತಂತ್ರ್ಯ ಬಂದು 20 ವರ್ಷವಾದರೂ ಎಲ್ಲಾ ಹಳ್ಳಿಗಳಿಗೂ ನೀರನ್ನು ಒದಗಿಸುವುದಕ್ಕಾಗಲಿಲ್ಲ. ರಾಯಚೂರಿನಲ್ಲಿ ಇವತ್ತು 130-134 ಹಳ್ಳಿಗಳಿದ್ದರೂ, ಅದರಲ್ಲಿ 25 ಹಳ್ಳಿಗಳಿಗೆ ನೀರೇ ಇಲ್ಲ ಅಲ್ಲ ಕುಡಿಯುವ ನೀರಿನ ಬಾವಿಗಳೇ ಇಲ್ಲ. ಹಿಂದೆ ನೈಜಾಮರ ಕಾಲದಲ್ಲಿ ಕಟ್ಟಿಸಿದಂತಹ ಬಾವಿಗಳನ್ನು ರಿಪೇರಿ ಮಾಡಬೇಕಾಗಿದೆ. ಆದರೆ ನಮ್ಮ ಸರ್ಕಾರ ಕಟ್ಟಿಸಿದಂತಹ ಬಾವಿಗಳು ಈಗಾಗಲೇ ಬಿದ್ದುಹೋಗಿವೆ. 100ರಲ್ಲಿ 50 ಶಾಲೆ ಕಟ್ಟಡಗಳು ನಾಲ್ಕಾರು ವರ್ಷಗಳಲ್ಲೇ ಬಿದ್ದುಹೋಗಿವೆ. ಇದಕ್ಕೆ ಕಾರಣವಿಷ್ಟೆ. ಆಡಳಿತ ಪಕ್ಷದವರು ಹಸ್ತಕ್ಷೇಪ ಮಾಡಿ, ತಮಗೆ ಮತ್ತು ತಮ್ಮವರಿಗೆ ಲಾಭ ಮಾಡಬೇಕೆಂದು, ದುರುದ್ದೇಶದಿಂದ ಅವರಿಗೆ ದುಡ್ಡು ಒದಗಿಸಿಕೊಟ್ಟು, ಅವರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು ತೆರಿಗೆಯಿಂದ ಬರತಕ್ಕ ಹಣವನ್ನು ಈ ತರಹ ದುರ್ವಿನಿಯೋಗಮಾಡುತ್ತಾರೆಂದು ಹೇಳಬಯಸುತ್ತೇನೆ. ಅದಲ್ಲದೆ ಮುಖ್ಯವಾಗಿ ನಮ್ಮ ಸರ್ಕಾರದವರನ್ನು ಕೇಳುವುದಿಷ್ಟೆ, ಪಂಚಾಯ್ತಿ ಆಕ್ಟಿನಲ್ಲಿ ಅಥವಾ ಕೋ-ಆಪರೇಟಿವ್ ಆಕ್ಟಿನಲ್ಲಿ ಒಂದು ತಿದ್ದುಪಡಿಯನ್ನು ಅವಶ್ಯವಾಗಿ ಮಾಡಬೇಕೆಂದು ಕೋರುತ್ತೇನೆ. ಈ ಕೋ-ಆಪರೇಟಿವ್‌ನಲ್ಲಿರತಕ್ಕ ಅಧ್ಯಕ್ಷರನ್ನು, ತಾಲ್ಲೂಕು ಬೋರ್ಡಿಗೆ ಬರದಂತೆ ಡಿಸ್‌ಕ್ವಾಲಿಫಿಕೇಷನ್ ಆಕ್ಟ್ ಮಾಡತಕ್ಕಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಈ ನಿರ್ಣಯ ತೆಗೆದುಕೊಳ್ಳದಿದ್ದರೆ ಸಾಕಷ್ಟು ಜನತೆಗೆ ಹಾನಿಯಾಗುತ್ತದೆಂದು ಹೇಳುತ್ತೇನೆ. ಇಂಥವರೇ ಮುಂದೆ ಎಂ.ಎಲ್.ಎ.ಗಳಾಗಿ ಬರುತ್ತಾರೆ. ಎಂ.ಎಲ್.ಎ.ಗಳಾಗಬೇಕೆನ್ನುವವರಿಗೆ ತಾಲ್ಲೂಕ್ ಬೋರ್ಡಿನ ಪ್ರೆಸಿಡೆಂಟರಿಗೆ ಟಿಕೇಟು ಕೊಡಿಸುತ್ತೀರಿ. ಅವರು ಮುಂದೆ ತಾವು

ಎಂ.ಎಲ್.ಎ. ಆಗಬೇಕೆನ್ನುವ ದೃಷ್ಟಿಯಿಂದ ತಮಗೆ ಬೇಕಾದ ಜನರಿಗೆ ಸವಲತ್ತುಗಳನ್ನು ಮಾಡಿ ಕೊಡುತ್ತಾರೆ. ಇವರು ಸಾಮಾನ್ಯ ರೈತರಿಗೆ ಯಾವ ರೀತಿಯ ಸವಲತ್ತುಗಳನ್ನೂ ಕೊಡುವುದಿಲ್ಲ. ತಾಲ್ಲೂಕ್ ಪ್ರೆಸಿಡೆಂಡ್, ಸಹಕಾರ ಸಂಘಗಳ ಪ್ರೆಸಿಡೆಂಟ್ ಎಲ್ಲರೂ ಕಾಂಗ್ರೆಸ್ಸಿನವರ ಕಡೆಯವರೇ ಇರುತ್ತಾರೆ. ಇವರು ತಮಗೆ ಬೇಕಾದವರಿಗೆ ಮಾತ್ರ ಸವಲತ್ತುಗಳನ್ನು ಕೊಟ್ಟು ಲಾಭ ಪಡೆಯು ವುದಕ್ಕೆ ನೋಡುತ್ತಿರುತ್ತಾರೆ. ಆದ್ದರಿಂದ ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಬಗ್ಗೆ ಹೇಳಬೇಕಾದರೆ, ಹಳ್ಳಿಗಳಲ್ಲಿ ಕೆಲವು ಸೊಸೈಟಿಗಳಿವೆ. ಹಳ್ಳಿಗಳಲ್ಲಿ ಸೊಸೈಟಿಗಳನ್ನು ಸ್ಥಾಪಿಸುವುದಕ್ಕಿಂತ ಮೊದಲು ಸಾಹುಕಾರರು ರೈತರಿಗೆ ಸಾಲವನ್ನು ಕೊಡುತ್ತಿದ್ದರು. ಇವತ್ತಿನದಿವಸ ಈ ಸಾಹುಕಾರರೇ ಸೊಸೈಟಿಯನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ನಡೆಸುತ್ತಿದ್ದಾರೆ. ಈ ಸಾಹುಕಾರರು ತಮಗೆ ಬೇಕಾದವರಿಗೆ ಮಾತ್ರ ಸಾಲವನ್ನು ಕೊಡುತ್ತಾರೆ ಹೆಚ್ಚಿನ ಬಡ್ಡಿಯ ಮೇಲೆ.

ಶ್ರೀ ಎಸ್. ಡಿ. ಕೋಠಾವಾಳೆ.—ನೀವು ಅವರನ್ನೇ ಚುನಾಯಿಸಿದ್ದೀರಿ !

ಶ್ರೀ ಎಂ. ನಾಗಪ್ಪ ಬಸಪ್ಪ.—ನೀವು ತಮ್ಮ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳಿಗೆ ಹೇಳಿ ಕೊಂಡು ತಮಗೆ ಬೇಕಾದವರನ್ನು ಪ್ರೆಸಿಡೆಂಟ್ ಮಾಡಿಸುತ್ತೀರಿ. ತಮಗೆ ಬೇಕಾದವರನ್ನೇ ತರಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೀರಿ. ಇಂಥ ಮೋಸ ಮಾಡಿ ದುಡ್ಡು ಹೊಡೆಯುವುದು ನಮಗೆ ಬೇಕಿಲ್ಲ.

ಶ್ರೀ ಪಿ. ಎಂ. ನಾಡಗೌಡ.—ಮನೆ ಹೆಂಡತಿ ಸೊಂಟ ಮುರಿದರು ಎಂಬಂತೆ, ನಿಮ್ಮ ಜನರು ಮಾಡುವ ತಪ್ಪಿಗೆ ಸರ್ಕಾರದವರನ್ನೇಕೆ ಟೀಕಿಸುತ್ತೀರಿ ?

ಶ್ರೀ ಎಂ. ನಾಗಪ್ಪ ಬಸಪ್ಪ.—ಯಾರಾದರೂ 5 ಸಾವಿರಕ್ಕೆ ಮೇಲ್ಪಟ್ಟು ಸಾಲವನ್ನು ಕೇಳಿದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು, ಅಂತಹ ಅರ್ಜಿಗಳನ್ನೆಲ್ಲಾ ಇಲ್ಲಿಯ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಮಂಜೂರಾತಿಗೆ ಕಳಿಸುತ್ತಾರೆ. ಇದರಿಂದ ಬಹಳ ನಿಧಾನವಾಗುತ್ತದೆ. ಈ ವಿಚಾರ ವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಅವರು ಇನ್ನು ಮುಂದೆ ಜಿಲ್ಲಾ ಮಟ್ಟದಲ್ಲೇ ಕೊಡುವಂತೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಆದರೆ ಈಗ ಬಂದಿರುವ ಅರ್ಜಿಗಳನ್ನು ಜಾಗ್ರತೆ ತೀರ್ಮಾನ ಮಾಡುವಂತೆ ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮೂರು ನಾಲ್ಕು ಜನ ದಳ್ಳಾಳಿಗಳು ಇದ್ದಾರೆ. ಅರ್ಜಿ ಹಾಕಿಕೊಂಡಿರುವವರಲ್ಲಿ ಕೆಲವರು ಇಂತಹವರನ್ನು ಕರೆದು ಕೊಂಡು ಬಂದು 200 ರಿಂದ 400ರ ವರೆಗೆ ಲಂಚ ಕೊಟ್ಟು ಇಲ್ಲಿರುವ ಅಧಿಕಾರಿಗಳನ್ನು ಸರಿಮಾಡಿ ಕೊಂಡು ಹಿಂದೆ ಬಂದ ತಮ್ಮ ಅರ್ಜಿಗಳನ್ನು ಮಂಜೂರು ಮಾಡಿಸಿಕೊಂಡು ಬರುತ್ತಿದ್ದಾರೆ ; ಮುಂದೆ ಬಂದ ಅರ್ಜಿಗಳು ಹಾಗೆಯೇ ಉಳಿದಿವೆ. ಎಲ್ಲರಿಗೂ ಈ ರೀತಿ ಹಣ ಖರ್ಚು ಮಾಡುವ ಶಕ್ತಿಯಿಲ್ಲ ದಿರುವುದರಿಂದ, ಉಳಿದವರ ಅರ್ಜಿಗಳನ್ನು ಜಾಗ್ರತೆ ಮಂಜೂರು ಮಾಡಿಸಬೇಕೆಂದು, ಆ ಕಡೆ ಸರ್ಕಾರದವರು ತೀವ್ರವಾದ ಗಮನ ಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುಬ್ಬರಾವ್ ಹಲಸನಾಡ್ (ಬೈಂದೂರು).—ಮಾನ್ಯ ಸಭಾಧ್ಯಕ್ಷರೇ, ಈ ದಿನ ಸಭೆಯ ಮುಂದೆ ಮಂಡಿಸಿರುವ ಅಭಿವೃದ್ಧಿ, ಸಹಕಾರ ವಗೈರೆ ಇಲಾಖೆಗಳಿಗೆ 13 ಕೋಟಿ ರೂಪಾಯಿಗಳನ್ನು ತೆಗೆದಿಟ್ಟ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ. ಕಾರಣ ಹಣವು ಸರಿಯಾದ ರೀತಿಯಲ್ಲಿ ವಿನಿಯೋಗವಾಗುವುದಿಲ್ಲ. ಸರಿಯಾದ ದಕ್ಷತೆಯನ್ನು ವಹಿಸಿಕೊಂಡು ಕೆಲಸ ಮಾಡುವವರು ಈ ಸರ್ಕಾರದಲ್ಲಿ ಯಾರೂ ಕಾಣುವುದಿಲ್ಲ. ನಮ್ಮ ಶ್ರೀ ರಾಜಗೋಪಾಲಾಚಾರಿಯವರು ಹೇಳಿದಂತೆ, ಎನಿಮಿ (Enemy) ನಂಬರ್-2 ಆದ ಪಿ.ಡಬ್ಲ್ಯು.ಡಿ. ಎಂಬ ಒಂದು ಇಲಾಖೆ ಇದೆ. ಆ ಇಲಾಖೆ ಯಲ್ಲಿರುವವರು ಸರಿಯಾದ ರೀತಿಯಿಂದ, ಜವಾಬ್ದಾರಿಯಿಂದ ಕೆಲಸ ಮಾಡಿಸುತ್ತಿಲ್ಲ, ಅವರು ಮಾಡಿ ಸಿರುವ ಹೆಚ್ಚಿನ ಕೆಲಸವೆಲ್ಲಾ ಒಂದೆರಡು ವರ್ಷದ ಅವಧಿಯಲ್ಲೇ ಹಾಳಾಗುತ್ತಿರುವುದು ಕಂಡು ಬರುತ್ತಿದೆಯೆಂದು ಹೇಳುತ್ತಾರೆ. ಆ ಇಲಾಖೆಯಲ್ಲಿರುವವರು ದಕ್ಷತೆ ವಹಿಸದೆ, ಬರೀ ಕಂಟ್ರಾಕ್ಟರು ಗಳ ಹೊಟ್ಟೆ ತುಂಬಿಸಿ, ತಮ್ಮ ಚೇಲಗಳನ್ನು ಭರ್ತಿ ಮಾಡಿಕೊಳ್ಳುವುದರಲ್ಲೇ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಊರಿನ ಬಳಿ ಕೆಲವು ಕಾಲದ ಹಿಂದೆ ಬಾರಂದಾಡಿ ಎಂಬಲ್ಲಿ ಸಾಧಾರಣ 15 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ನೀರು ದಾಸ್ತಾನು ಮಾಡುವ ಒಂದು ಕಟ್ಟೆಯನ್ನು ಕಟ್ಟಿಸಿದರು. ಆದರೆ ನೀರು ಬುಡದಲ್ಲೇ ಹೋಯಿತು, ಕೆಟ್ಟು ಹಾಳಾಯಿತು. ಇನ್ನೊಂದು

(ಶ್ರೀ ಸುಬ್ಬರಾವ್ ಹಲಸನಾಡ್)

ಉದಾಹರಣೆ ಹೇಳುವುದಾದರೆ, ಈ ವರುಷ ಹಕ್ಲಾಡಿಯಲ್ಲಿ ಸಾಧಾರಣ 40 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಕಟ್ಟೆ ಕಟ್ಟಿಸುತ್ತಾ ಇದ್ದಾರೆ. ಆ ಬಗ್ಗೆ ಒಂದು ನಕ್ಷೆಯನ್ನು ತಯಾರು ಮಾಡಿ, ಟೆಂಡರ್ ಕರೆದಿದ್ದರು. ನಕ್ಷೆಯ ಪ್ರಕಾರ ನೆಲದ ಮಟ್ಟದಿಂದ 20 ಅಡಿ ಆಳ ತೋಡಿ ಕೆಲಸ ಮಾಡಬೇಕಾಗಿತ್ತು. ಆದರೆ ಈಗ 15 ಅಡಿ ಮಾತ್ರದವರೆಗೆ ಆಳ ತೋಡಿ ಕೆಲಸ ಮಾಡುತ್ತಿದ್ದಾರೆಂದು ತಿಳಿದುಬಂತು. ಇದರ ಗತಿ ಏನಾಗುತ್ತದೆಂದು ಮಳೆಗಾಲದ ನಂತರ ನೋಡಬೇಕಾಗಿದೆ.

ಇನ್ನು ನಮ್ಮಲ್ಲಿ ಒಂದು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ ಇದೆ. ಹಲವಾರು ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ, ಆ ಬೋರ್ಡಿಗೆ ಉತ್ತಮವಾದ ಪರಂಪರೆ ಇಲ್ಲವಾಗಿದೆ. ಈ ಬೋರ್ಡಿಗೆ ಹೈಸ್ಕೂಲುಗಳನ್ನು, ಆಸ್ಪತ್ರೆಗಳನ್ನು ನಡೆಸಿಕೊಂಡು ಹೋಗಬೇಕಾದ ಘನತೆ ತೋರುವುದಿಲ್ಲ. ಈ ವಿಚಾರವಾಗಿ ತಾರೀಖು 29-3-1967ರ ನನ್ನ ಭಾಷಣದಲ್ಲಿ ಕೆಲವು ವಿವರಗಳನ್ನು ತಿಳಿಸಿದ್ದೇನೆ. ಅಭಿವೃದ್ಧಿ ಕಾಮಗಾರಿಕೆಗಳನ್ನು ಮಾಡಿಸಲು ಬೇಕಾದ ಜವಾಬ್ದಾರಿಕೆಗಳು ಆ ಬೋರ್ಡಿನಲ್ಲಿರುವವರು ತಿಳಿದಂತಿಲ್ಲ. ಪ್ರತಿಯೊಂದು ಕಡೆಯಲ್ಲೂ ರಾಜಕೀಯ ಹಿತಾಶಕ್ತಿಗಳಿಗೆ ಎಡೆಗೊಡಲಾಗುತ್ತಿದೆ. ಸಿಬ್ಬಂದಿ ವರ್ಗದಲ್ಲಿ ತಮ್ಮವರು, ಪರರು ಎಂಬ ಭೇದವನ್ನು ಬಹಳಮಟ್ಟಿಗೆ ಆಚರಿಸಲಾಗುತ್ತಿದೆ. ತಮ್ಮ ರಾಜಕೀಯ ಕೆಲಸಗಳಿಗೆ ಈ ಸಿಬ್ಬಂದಿ ವರ್ಗವನ್ನು ಬಳಸಿಕೊಂಡು ಬರುತ್ತಿರುವುದು ಕಂಡುಬರುತ್ತದೆ. ಕಳೆದ ಮಹಾಚುನಾವಣೆಯಲ್ಲಿ ಈ ರೀತಿ ನಡೆದ ಅನೇಕ ನಿದರ್ಶನಗಳು ಈಗಾಗಲೆ ಬೆಳಕಿಗೆ ಬಂದಿವೆ. ನಮ್ಮ ಕುಂದಾಪುರದಲ್ಲೇ ಹೀಗೆ ನಡೆದಿದೆ, ತಮ್ಮ ರಾಜಕೀಯಕ್ಕೆ ಅನುಕೂಲವಾಗದೆ ತಮ್ಮಷ್ಟಕ್ಕೆ ತಾವು ಇದ್ದ 31 ಮಂದಿ ನೌಕರರ ಮೇಲಿನ ಸೇಡನ್ನು ತೀರಿಸಿಕೊಳ್ಳಲು, ಹಿಂದೆ ಎಂದೂ ಆಗದಂಥ ರೀತಿಯಲ್ಲಿ, 9 ಹೈಸ್ಕೂಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ 35 ಮಂದಿ ನೌಕರರನ್ನು ಏಕಕಾಲದಲ್ಲಿ, ಅದರಲ್ಲೂ ಮಳೆಗಾಲ ಪ್ರಾರಂಭವಾಗುವ ಸಮಯದಲ್ಲಿ ಸ್ಥಳಾಂತರಗೊಳಿಸಿದ್ದಾರೆ. ಆ 35 ಮಂದಿಯಲ್ಲಿ 5 ಜನ ಮುಖ್ಯೋಪಾಧ್ಯಾಯರುಗಳು, 25 ಜನ ಸಹಾಯಕ ಉಪಾಧ್ಯಾಯರುಗಳು, 5 ಜನ ಬಡ ಪೇದೆಗಳು. ಈ ಉಪಾಧ್ಯಾಯರುಗಳ ಬಗ್ಗೆ ಇದೇ ಸಂದರ್ಭದಲ್ಲಿ ಒಂದು ವಿಷಯವನ್ನು ಸರ್ಕಾರಕ್ಕೆ ಹೇಳಬೇಕಾಗುತ್ತದೆ, ನಮ್ಮ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ಈ ಹಿಂದೆ ಯಾವಾಗಲೂ ಎರಡು ಜಾತಿಯ ಪಂಗಡದ ಹುಡುಗರಿಂದ ಗಲಾಟೆ ವಗೈರೆ ನಡೆಯುತ್ತಾ ಬಂದು, ಶಿಸ್ತುಗಳು ಇಲ್ಲದಂತಾಗಿತ್ತು. ಈಗ ಮೂರು ನಾಲ್ಕು ವರ್ಷಗಳಿಂದ ಇವರು ಸತತವಾಗಿ ಕೆಲಸ ಮಾಡಿ ವಿದ್ಯಾ ಮಟ್ಟದಲ್ಲೂ, ಶಿಸ್ತಿನ ಮಟ್ಟದಲ್ಲೂ ಒಂದು ಕ್ರಮಕ್ಕೆ ತಂದು, ಈ ವರ್ಷ ಇಡೀ ಮೈಸೂರು ಸಂಸ್ಥಾನದಲ್ಲೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕನ್ನು ಪಡೆಯುವಂತೆ ಮಾಡಿದರು. ಮತ್ತು ತಮ್ಮಲ್ಲಿರುವ 11ನೇ ತರಗತಿ ಪರೀಕ್ಷೆಯಲ್ಲೂ ಕಾಲೇಜಿನ ಮಟ್ಟಕ್ಕೆ ತಂದಿರಿಸಿದರು. ಅಂತಹ ಶಾಲೆಯಲ್ಲಿರುವ ಮುಖ್ಯೋಪಾಧ್ಯಾಯರು ಮತ್ತು ಇತರರು ಹೆಚ್ಚಿನ ಸಂಖ್ಯೆಯಲ್ಲಿ ಇದೇ ಶಾಲೆಯಿಂದ ವರ್ಗ ಮಾಡಿದ್ದಾರೆ. ಇದರಿಂದ ಏನಾಯಿತೆಂದರೆ, ಶಾಲೆಯು ಹಾಳಾಗಿ ಮುಂಚಿನ ಗತಿಗೆ ಬರುವಂತಾಯಿತು. ಅಲ್ಲದೆ ಈ ಹೆಡ್‌ಮಾಸ್ತರಿಗೆ 1962 ರಿಂದ 1967 ರವರೆಗೆ ನಾಲ್ಕು ಸಾರಿ ವರ್ಗ ಮಾಡಿದ್ದಾರೆ.

ಇನ್ನೊಂದು ಸಣ್ಣ ವಿಷಯವೆಂದರೆ, ನಮ್ಮ ಕುಂದಾಪುರ ತಾಲ್ಲೂಕ್ ಡೆವಲಪ್‌ಮೆಂಟಿನ ಬ್ಲಾಕ್‌ಗಳಲ್ಲಿ ಸಬ್ಸಿಡಿಯ ಮೇಲೆ ಕೊಡುವ ಹೊಲಿಗೆ ಯಂತ್ರವನ್ನು ವಿತರಣೆ ಮಾಡುವಾಗಲೂ, ಅದರಲ್ಲಿ ರಾಜಕೀಯ ಪಕ್ಷಪಾತ ನಡೆಯುತ್ತಿದೆ. ಅದರಲ್ಲಿರುವ ಅಧಿಕಾರಿಗಳು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿ, ತಮಗೆ ಬೇಕಾದ ಹಣವಂತರಿಗೆ ಕೊಡುತ್ತಿದ್ದಾರೆ. ಅದನ್ನೇ ನಂಬಿ ಜೀವನ ಮಾಡುವವರಿಗೆ ಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಎರಡು ವರ್ಷಗಳಿಂದ ಕುಮಾರಿ ಪ್ರೇಮಾಬಾಯಿ ಎಂಬುವಳು ಹೊಲಿಗೆ ಯಂತ್ರಕ್ಕಾಗಿ ಅರ್ಜಿ ಮಾಡಿಕೊಳ್ಳುತ್ತಾ ಬಂದಿದ್ದಳು. ಆದರೆ ಅವಳಿಗೆ ಇದುವರೆಗೆ ಕೊಟ್ಟಿಲ್ಲ. ಅವಳ ಅರ್ಜಿಯ ಪ್ರತಿಯೊಂದನ್ನು ತಮ್ಮ ಅವಗಾಹನೆಗೆ ಇಡುತ್ತೇನೆ. ತಾವು ಈ ವಿಚಾರದಲ್ಲಿ ತಕ್ಕದಾದ ಕ್ರಮವನ್ನು ತೆಗೆದುಕೊಂಡು, ಇನ್ನು ಮುಂದೆಯಾದರೂ ಬಡ ಜನರಿಗೆ ಮಾತ್ರ ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಕುಂದಾಪುರದ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನ ವಿಷಯವನ್ನು ಹೇಳುತ್ತೇನೆ. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನ ಮೆಂಬರುಗಳು ನೌಕರರುಗಳು ಮತ್ತು ಪ್ರೆಸಿಡೆಂಟರು ಎಲ್ಲರೂ ಮಹಾ ಮಹಾ ಕಾಂಗ್ರೆಸ್ ಭಕ್ತರೇ ಆಗಿದ್ದಾರೆ. ಅದರೆ ಏನು ಹೇಳುವುದು? ಇತ್ತೀಚೆಗೆ ಮಾನ್ಯ ಜಿಲ್ಲಾಧಿಕಾರಿಗಳು ಅಲ್ಲಿಗೆ ಸಂದರ್ಶನವಿತ್ತು ಲೆಕ್ಕ ಪರಿಶೋಧನೆ ಮಾಡುವಾಗ,

1961 ರಿಂದ 1967ರ ವರೆಗೆ ಗ್ರ್ಯಾಂಟು, ಸ್ಪೆಶಲ್ ಗ್ರ್ಯಾಂಟು ಎಂತ ಹೇರಳ ಹಣ ಈ ಬೋರ್ಡಿಗೆ ಬಂದಿದೆಯಾಗಿಯೂ, ಆ ಹಣದಲ್ಲಿ ಖರ್ಚುಗಳು ಹೋಗ್ತಾ ಬಾಕಿ ರೂಪಾಯಿ ಒಂದು ಲಕ್ಷ ನಲವತ್ತು ಸಾವಿರ ಕೈಯಲ್ಲಿ ಶಿಲ್ಕು ಇರಬೇಕಾಗಿತ್ತು. ಆದರೆ ಅಲ್ಲಿ ಶಿಲ್ಕು ಇದ್ದುದು ಬರೇ 6 ಸಾವಿರ ಚಿಲ್ಲರೆ ಮಾತ್ರ ಎಂದು ಕಂಡುಬಂದಿದೆ, ಬಾಕಿ ಹಣಗಳು ಏನಾಯಿತು ಎಂಬುದು ತಿಳಿಯಲಿಕ್ಕೆ ಅಸಾಧ್ಯವಾಗಿ ಇನ್ನು ಮುಂದೆ ಯಾರಿಗೂ ಚೆಕ್‌ಗಳನ್ನು ಕೊಡಬಾರದೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿ, ತಡೆಹಿಡಿದು ಹಾಗೆಯೇ ರಿಪೋರ್ಟ್‌ಗಳನ್ನು ಬರೆದುಕೊಂಡು ಹೋಗಿದ್ದಾರಂತೆ. ಈಗ ನೌಕರರಿಗೆ ಸಂಬಳ ವಗೈರೆ ಕೊಡಲು ಹಣವಿಲ್ಲವಂತೆ.

1-00 P.M.

ಇನ್ನು ಇತರ ಆಡಳಿತ ಸಂಸ್ಥೆಯಲ್ಲೂ ಒಂದಕ್ಕೊಂದು ಹೊಂದಿಕೆ ಇಲ್ಲ. ನಾಲ್ಕು ಜನ ಬೇಕಾಗುವಲ್ಲಿ ಹತ್ತು ಜನರಿರುತ್ತಾರೆ. ಕೆಲಸಕ್ಕಾಗಿ ಯಾವುದಾದರೂ ಒಂದು ಆಫೀಸಿಗೆ ಹೋದರೆ ಮೇಜಿನಿಂದ ಮೇಜಿಗೆ ತಿರುಗಿ ತಲೆಯಮೇಲೆ ಕೈ ಇಟ್ಟುಕೊಂಡು ಬರಬೇಕಾಗುತ್ತದೆ. ಕಾಗದ ಪತ್ರದ ಮೂಲಕ ತಿಳಿದುಕೊಳ್ಳುವ ಅಂದರೆ ವರ್ಷಾನುಗಟ್ಟಲೆ ಉತ್ತರವೇ ಬರುವುದಿಲ್ಲ. ಸರಿಯಾದ ರೀತಿಯಲ್ಲಿ ಆಡಳಿತೆ ನೋಡಲು ನಮ್ಮ ಈಗಿನ ಸರಕಾರಕ್ಕೆ ಬರುವುದಿಲ್ಲವಾಗಿ ಕಂಡುಬರುತ್ತದೆ. ಉದಾಹರಣೆಗೆ ಒಂದು ವಿಷಯ ಹೇಳುತ್ತೇನೆ. ಬರೇ 96 ರೂಪಾಯಿ ಸಂಬಳದ ಹೈಸ್ಕೂಲಿನ ಬಡ ಮಾಸ್ತರು 1957ರಲ್ಲಿ ನಿವೃತ್ತರಾದರು—ತನ್ನ ಪೆನ್‌ಷನ್ ಬಗ್ಗೆ ಅರ್ಜಿ ಮಾಡಿಕೊಂಡರು. 1963 ರಲ್ಲಿ ರಿಮೈಂಡರ್ ಕಳಿಸಿದರು—ಈವರೆಗೆ ಉತ್ತರವೂ ಇಲ್ಲ, ಪೆನ್‌ಷನ್ನೂ ಇಲ್ಲ. ನಿಯಮ ಹೀಗಿದೆ: ''1956 ನೇ ನವೆಂಬರದಲ್ಲಿ ಮದ್ರಾಸು ರಾಜ್ಯದಿಂದ ಬೇರ್ಪಟ್ಟು ಮೈಸೂರಿಗೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡುಶಾಲೆಗಳ ಉಪಾಧ್ಯಾಯರ ಪ್ರಾಯ 55ರ ನಂತರ ನಿವೃತ್ತಿಹೊಂದಿ ಪೆನ್‌ಷನ್ನಿಗೆ ಅರ್ಹರಾಗುವರು. ಅವರಲ್ಲ ಹಲವರು ಹಿಂದಿನ ಮದ್ರಾಸು ನಿಯಮಕ್ಕೆ ಸರಿಯಾಗಿ ಪ್ರಾಯ 60 ರ ತನಕ ಖಾಸಗಿ ಶಾಲೆಗಳಲ್ಲಿ ಕನಿಷ್ಠ ವೇತನದಲ್ಲಿ ನೇಮಕಹೊಂದಿದ್ದಾರೆ.

''ಪೆನ್‌ಷನ್ ಮತ್ತು ನಂತರದ ವೇತನ ಕೂಡಿ ನಿವೃತ್ತಿಯ ಮೊದಲಿನ ವೇತನಕ್ಕಿಂತಲೂ ಕಡಿಮೆಯಾಗಿದ್ದಲ್ಲಿ, ಪೂರ್ಣ ಪೆನ್‌ಷನ್, ಯಾ ಹಿಂದಿನ ವೇತನಕ್ಕೆ ಅಧಿಕವಾಗದಷ್ಟು ಪೆನ್‌ಷನ್ನನ್ನು ನಿವೃತ್ತಿಯ ನಂತರದ ಕನಿಷ್ಠ ವೇತನದೊಂದಿಗೆ ಕೊಡಬೇಕೆಂಬ ನಿಯಮವಿದೆ.'' ಆದರೆ ಮೇಲೆ ಹೇಳಿದ ಉಪಾಧ್ಯಾಯರಿಗೆ ಖಾಸಗಿ ಶಾಲೆಯಲ್ಲಿ ನೇಮಕಗೊಂಡ 5 ವರ್ಷದ ಅವಧಿಯಲ್ಲಿ ಪೆನ್‌ಷನ್ ಕೊಡಲಾಗದಿರುವುದು ನಿಯಮಕ್ಕೂ ನ್ಯಾಯಕ್ಕೂ ವಿರೋಧ. ಈ ಬಾಬಿನಲ್ಲಿ ಮಂತ್ರಿಯವರೊಬ್ಬರನ್ನು ನೋಡಿದೆ, ಉತ್ತರವೇ ಇಲ್ಲ. ನಂತರ 13 ನೇ ತಾರೀಖಿನಲ್ಲಿ ಮತ್ತೊಬ್ಬರನ್ನು ಕಂಡು ಹೇಳಿಕೊಂಡೆ. ತಕ್ಕ ಕ್ರಮವನ್ನು ಕೈಕೊಳ್ಳಲಾಗುವುದೆಂತ ನನಗೆ ಉತ್ತರ ಬಂತು, ನಮ್ಮ ಬಡ ಮಾಸ್ತರ ಪುಣ್ಯವೆಂದು ಭಾವಿಸಿದೆ. ಹೀಗೆ ಹೇಳುತ್ತಾ ಹೋದರೆ ಅನೇಕ ವಿಷಯಗಳು ಸಿಕ್ಕುತ್ತದೆ. ಆದ್ದರಿಂದ ನಾನು ಹೇಳುತ್ತೇನೆ, ಎಲ್ಲಾ ಗ್ರಾಮಗಳಲ್ಲಿ ಪಂಚಾಯಿತಿಗಳು ಇರುವುವು. ಪಂಚಾಯತಿ ರಾಜ್ಯ ಮಾಡಬೇಕೆಂಬ ಸರಕಾರದ ಇಚ್ಛೆ ಇರುತ್ತದೆ. ಆದ್ದರಿಂದ ಪಂಚಾಯಿತಿಗಳಿಗೆ ಹೆಚ್ಚಿನ ಸವಲತ್ತನ್ನು ಕೊಟ್ಟು ಈಗಿರುವ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡನ್ನು ರದ್ದುಪಡಿಸಿ, ಜಿಲ್ಲಾ ಅಧಿಕಾರಿಯವರಿಗೆ ಸರ್ವತರದ ಅಧಿಕಾರವನ್ನು ಕೊಡಬೇಕೆಂತಲೂ, ಹಾಗೆ ಮಾಡಿದಲ್ಲಿ ಈ ಹೊಲಸು ರಾಜಕೀಯವು ಕಡಮೆಯಾಗುವುದಲ್ಲದೆ, ಸರಕಾರಕ್ಕೂ ಬಹಳ ಉಳಿತಾಯವಾಗುತ್ತದೆ, ಆಡಳಿತೆಯೂ ಚೆನ್ನಾಗಿ ನಡೆಯುತ್ತದೆಂತ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಸಭಾಪತಿಯವರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ELECTION OF MEMBERS TO THE SUBORDINATE LEGISLATION COMMITTEE

Results

Mr. SPEAKER.—I have an announcement to make: It relate to lecton of Members to the Committee on Subordinate Legislation.

(Mr. SPEAKER)

As the number of nominaitons to the Committee on Subordinate Legislation is equal to the number of seats to be filled, the following members are declared elected to the Committee on Subordinate Legislation :—

Sriyuths :

1. L. Srikantiah
2. M. Nagappa
3. B. P. Gangadhar
4. C. M. Desai
5. S. Bhimanna
6. Siddiah Kashimath
7. S. H. Basanna
8. B. V. Magavi

Under sub-rule (3) of Rule 196 of the Rules of Procedure and Conduct of Business in the Mysore Legislative Assembly, I hereby nominate Sri C.M. Dasai as the Chairman of the Subordinate Legislation Committee.

I suppose the reply can begin at 5 P.M. and the Debate can go on till that hour. The Debate will go on from 3 P.M. to 5 P.M. in the afternoon and the reply begins at 5 P.M and we close by 7 P.M.

Member's Representation

SRI K. H. PATIL.—I had given notice of a Call Attention regarding the death of a person in police action at Gadag as also a short notice Question three days back.

MR. SPEAKER.—The hon'ble Member will kindly come and meet me at Five Minutes to Three.

The House will now stand adjourned to meet again at 3-00 P.M.

The House adjourned at Five Minutes past One of the Clock and reassembled at Five Minutes post Three of the Clock.

[MR. SPEAKER in the Chair]

BUDGET ESTIMATES FOR 1967-68—DEMANDS FOR GRANTS

Demand Nos. 21, 23, 25 and 39

(Debate Continued)

Sri S. R. BOMMAI (Kundgol).–Mr. Speaker Sir, I oppose the demand before the House. Sir, it is a well known feature of the modern age that most of the Politicians and economists have come to the conclusion that the co-operative economy is the only solution to meet the problems posed by totaliterianism, collectivism, capitalism and imperialism. This co-operative economy is not a simple policy matter. It is a way of life and it is a philosophy of life of the people who decide their own future. They collectively pull together the resources for their self development and progress without the aid of capitalists and collectivists in a democratic way. The Co-operative movements has embrased all avenues of the life. Take for example agriculture, industries marketing and Consumer goods and even the marriage problems are tackled by the co-operative movement. Sir, this movement has acquired so much of importance and the people have to play the important role in this movement. Sir, it may not be said it is the only duty of the Government to develop the co-operative movement. The Government should intervene to prevent misuse of money and the partiality that is being shown to some sections of the people in the co-operative movement. Most of the provisions of the Co- oprative Act have to be revised, especially the article 69 has to be amended, so that the people who are participating in the movement can effectively conduct the business. In a number of provisions the officials have been given most of the powers and they are interfering and coming in the way of progress of the Societies. In this country, a new co-operative capitalists' class have come into existance who style themselves as poineers of the co-operative movement. Most of them have no independent means of livelihood or any profession or vacation or no property. They have entered in the co-operative movement and have amassed wealth and move in luxury cars at the cost of common man. There are also some inherent defects in the co-operative Act and procedure. In a society at when there is a complaint that lakhs of rupees have been misappropriated and there is a huge loss in the Society. Who is responsible for it ? The poor Secretary and the officials are being held responsible. I would suggest that section 69 of the Act should be amended and some penal provisions must be introduced making provisions for the Directors and the Chairman to be held responsible for loss and also for the misappropriation, shortage, or wastage in the societies. There are instances wherein lakhs of rupees are lost and eaten away. Straightaway it is not possible for the Government or Registrar to take any action on any of the concerned persons under Section 69 of the Act. Therefore this clause may be

(SRI S. R. BOMMAI)

amended. Similar to those of the Company Act, making provisions that the Directors will be held responsible for any loss or wastage, etc. Sir, this section must be amended immediately so that the persons who are at the helm of affairs of the co-operative societies must feel this is a responsibility and also must be held responsible for whatever losses or misappropriations in the society. Then only there will be a steady growth and a proper growth of the movement.

Sir, coming to co-operative movement in our State I am proud to state that it is taking a very good shape and a lot of progress has been made in the co-operative movement due to the efforts of the people as well as Government. While looking to the facts and figures that have been submitted to us, we find that from Refinance Corporation of India, the State Government have been able to procure Rs. 4 crores for Tunga and Bhadra projects and also Rs. 2 crores in respect of areca and cocoanut crops. Here I would like to make a suggestion that these benefits may be extended to groundnut crops also. Then so far as North Karnatak is concerned where irrigation is not possible, soil conservation is the most important work to be undertaken. This could be done only with the help of Refinance Corporation. I heard from the Officer concerned that Rs. 30 to Rs. 40 crores are needed for soil conservation, levelling, bunding and improving the land. This amount should be made available. Then coming to the question of credit facilities, it has been increased from Rs. 8 crores to Rs. 20 crores. But I am sorry to state that these Rs. 20 crores are not reaching the agriculturist. We are trying to avoid middle men and commission agent. The purpose of co-operative movement also is to avoid middlemen, but new middlemen have sprung up. They are leaders of co-operative movement and officers. Sir, it is a well-known fact that when an agriculturist applies for a loan to be granted by the Land Mortgage Bank at Bangalore, local leaders catch hold of half a dozen such people and take Rs. 200 from each person, come to Bangalore and get the order from the Bank in respect of the person who has paid money to him. So, the politician or co-operator or the officer is taking the interest that was taken by the money lender or the commission that has been taken by the merchant. This must be stopped. Otherwise, real benefit is not at all got by the agriculturist. To have a loan of Rs. 3,000, nearly Rs. 500 to Rs. 600 have to be spent by the agriculturist. If this is the way in which the loan is advanced, I do not think our agriculturist will ever get real benefit from the credit facilities.

Then coming to co-operative industries, Sir, so far as co-operative industries are concerned, the state of affairs is very pitiable in the state. About textile co-operative mills I want to say a word. I am given to understand that in Madras State about 8 co-operative mills were started within a year and commenced production. How they did it? The State

Government appointed 3 persons having Deputy Commissioner's powers, one for acquisition of land, one to purchase machinery and the third person to do other administrative work. They purchased the land, erected the machinery and production started and they were handed over to the co-operative concerns. By that they have saved a lot of commission in lakhs to the co-operative institution. It is also wellknown that in most of the co-operative mills, when they purchase machinery, they get 5 to 10 per cent commission which is not accounted for since it is taken by the middlemen. I request the Minister for Co-operation who is an enthusiastic young man to have these guiding factors in mind in building up co-operative industries.

I would be failing in my duty if I do not mention about the only co-operative mill, *i.e.,* the Karanatak Co-operative Textile Mill at Hubli. A crore of rupees has been advanced by the Bank and the Government, but today the whole of Rs. 1 crore is sinking. Who is responsible for it? What steps have been taken? Though one crore of people's money is wasted, we are not able to haul up the culprit? There is no provision sufficient to empower the officers immediately to take steps. That is why I suggest the amendment of Section 69 of the Co-operative Societies Act.

Then the most important fact in the co-operative movement is audit. This Audit Department, I say is a misnomer. They audit accounts of the society nearly after 2 or 3 years. By that time, the official who is in charge of the society is transferred or the director is changed so that we will not be able to know who has committed the mistake and who is responsible for it. Therefore, the Audit Department must be an independent Department and it should have nothing to do with the co-operative Department. We should have an independent audit which should finish audit on a particular date of the current year. Otherwise it will not be possible to check misappropriations and misapplications in the society.

Then I would only say something about Janatha Bazaar, because in a way I am in charge of Hubli Janatha Bazaar. This is a very good project that has been started by the Government of India. So far as Janatha Bazaar business is concerned, from my experience of it in the past 3 months, I suggest firstly that Government should provide proper funds; secondly the Government should see that the official or manager who is a Government personnel should be a person with business acumen having all the knowledge of the business. Otherwise, the officer who has no knowledge of business of what is cotton and what is textiles, what are foodgrains, what is commission agency and what percentage of profit we should have and what rate should be fixed, it is very difficult for non-officials to work for the benefit of the movement. I may state in Hubli the cycle tyres were sold in black market at 16 rupees more than the rate fixed. We got these cycle tyres and sold them at fair price. In a month, the cycle dealers in Hubli and Dharwar were forced to publish that they were willing to sell tyres at the rate fixed by the

(SRI S. R. BOMMAI)

factory. A number of such instances can be quoted. Therefore, if this movement is properly worked, it will help the people. It will depend upon both officials and non-officials work in the movement. Unless the persons connected with the movement are honest and unless the character and moral standard of our people are raised, we have no solution. To have a successful consumer movement, the Government should impose restriction that 20 per cent of the product at least should be sold to the consumer co-operative societies. Then I would also suggest financial aid to be given to these societes. This will help the co-operative movement considerably.

ಶ್ರೀ ಎಂ. ದೊಡ್ಡಣಗೌಡ (ಸಿರುಗುಪ್ಪಾ).—ಮಾನ್ಯ ಅಧ್ಯಕ್ಷರೇ, ಸಹಕಾರ ಮತ್ತು ಪಂಚಾಯಿತಿ ರಾಜ್ಯ ಶಾಖೆಯ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಇಂದು ಈ ದೇಶದೊಳಗೆ ವ್ಯವಸಾಯುವನ್ನು ಅಭಿವೃದ್ಧಿ ಮಾಡಬೇಕೆಂದು ಪ್ರತಿಯೊಬ್ಬ ಸದಸ್ಯರೂ ಅವರು ವಿರೋಧ ಪಕ್ಷದವರಾಗಲೀ, ಆಡಳಿತ ಪಕ್ಷದವರಾಗಲೀ ಹೇಳುವುದು ಸರಿಯಾಗಿದೆ. ಇದರಲ್ಲಿ ಸಂದೇಹವೇನೂ ಇಲ್ಲ. ಆದರೆ ವ್ಯವಸಾಯುವನ್ನು ಅಭಿವೃದ್ಧಿ ಮಾಡಬೇಕಾದರೆ ಶ್ರೀಮಂತರುಗಳ ಹಾಗೂ ಸಹಕಾರ ಸಂಘಗಳ ಸೇವೆಯು ಅತ್ಯಕತ್ಯ. ಆದರೆ ಇವರನ್ನು ನಿರ್ವಹಿಸತಕ್ಕ ಕೆಲಸಗಳ ಜವಾಬುದಾರಿ ಎಲ್ಲ ಸಂಘಗಳ ಮೇಲೆಯೇ ಇರುತ್ತದೆ. ಈ ಸಹಕಾರ ಸಂಘಗಳು ಇಂದು ಸಮರ್ಪಕವಾಗಿ ಸೇವೆ ಮಾಡುತ್ತಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಲೇ ಬೇಕಾಗುತ್ತದೆ. ಇದಕ್ಕೆ ಸರಿಯಾದ ನಿಗಾವಣೆ ಇಡದೇ ಇರುವುದೇ ಕಾರಣ. ಇಂತಹ ಮುಖ್ಯ ಕೆಲಸಗಳ ಕಡೆಗೆ ಸರಕಾರ ತೀವ್ರವಾದ ಲಕ್ಷ್ಯಕೊಡಬೇಕು. ಸರಕಾರ ಹಾಗೂ ಸಹಕಾರ ಸಂಘಗಳು ಇವಕ್ಕೆ ಕೆಲಸ ಮಾಡಲು ಅನುಕೂಲವಾಗುವಂತೆ ಪ್ರತಿಯೊಂದು ಸಂಘದಲ್ಲಿಯೂ ಒಂದೊಂದು ಆಫೀಸು ಇರುವುದು ಅವಶ್ಯವಾಗಿದೆ. ಸಂಘಕ್ಕೆ ತನ್ನದೇ ಆದ ಆಫೀಸು ಇದ್ದರೆ ಅಲ್ಲಿನ ಸದಸ್ಯರುಗಳಿಗೆ ಬೇಕಾಗುವ ರೆಂಟ್ ಸಬ್‌ಸಿಡಿ ಸಾಲದ ಸಹಾಯ, ಸಾಲ ಇತ್ಯಾದಿ ಸಹಾಯಗಳನ್ನು ಅಲ್ಲಿರುವ ಆಫೀಸಿನಿಂದಲೇ ಪಡೆಯಲು ಅನುಕೂಲವಾಗುತ್ತದೆ ಮತ್ತು ರೈತರಿಗೆ ಅನುಕೂಲವೂ ಆಗುತ್ತದೆ. ಪ್ರತಿಯೊಂದು ಸಹಕಾರ ಸಂಘಗಳಿಂದಲೂ ಗೊಬ್ಬರ ಹಾಗೂ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲು ಈಗ ನಮ್ಮ ಕಡೆಯಲ್ಲಿ ಬಿ.ಡಿ.ಸಿ. ಬ್ಯಾಂಕು ಮೂಲಕ ಕ್ಯಾಷ್ ಕ್ರೆಡಿಟ್ ಸೌಕರ್ಯ ಕೊಟ್ಟಿರುತ್ತಾರೆ. ಆದರೆ ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾಗಿರುವವರು ಹಾಗೂ ಕಾರ್ಯದರ್ಶಿಗಳಾಗಿರುವವರು ತಮ್ಮದೇ ಪ್ರೈವೆ ಪರ್ಸ್ ಇದ್ದ ಹಾಗೆ ಇಲ್ಲಿ ಕೆಲಸ ಮಾಡುತ್ತಿರುವುದರಿಂದ ಇದರ ಪರಿಣಾಮ ಜನಕ್ಕೆ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಸಾಕಷ್ಟು ಉತ್ತಮವಾಗಿ ಕೆಲಸ ಮಾಡುವಂತೆ ಮಾಡುವುದು ಸರಕಾರದ ಜವಾಬುದಾರಿಯಾಗಿದೆ. ಇದರ ಬಗ್ಗೆ ಲಕ್ಷ್ಯ ಕೊಡಬೇಕು. ಮತ್ತು ಪ್ರತಿಯೊಂದು ರಿಕಾರ್ಡನ್ನೂ ಸರಕಾರ ಆಗಾಗ್ಗೆ ಸಹಕಾರ ಸಂಘಗಳಿಗೆ ಬಂದು ತನಿಖೆ ಮಾಡಬೇಕು ಹಾಗೆ ಮಾಡಿದರೆ ಸಹಕಾರ ಸಂಘಗಳು ಚೆನ್ನಾಗಿ ಬೆಳೆಯಲು ಅವಕಾಶ ಸಿಗುತ್ತದೆ. ಅಲ್ಲದೆ ಇಂತಹ ಸಹಕಾರ ಸಂಘಗಳಿಗೆ ಸರಕಾರದ ಕಡೆಯಿಂದಲೇ ಅಥವಾ ಬ್ಯಾಂಕ್‌ಗಳಿಂದ ಒಬ್ಬ ಸೆಕ್ರೆಟರಿಗಳನ್ನು ನೇಮಿಸತಕ್ಕದ್ದು ಅತ್ಯಗತ್ಯ. ಹಳ್ಳಿಗಾಡಿನಲ್ಲಿರುವ ಸಹಕಾರ ಸಂಘಗಳಲ್ಲಿ ಪ್ರತಿಯೊಂದು ಹಳ್ಳಿಯಲ್ಲಿರುವ ಮನೆಗಳಲ್ಲಿರುವ ಎಲ್ಲರೂ ಸಹಾಕಾರ ಸಂಘಗಳ ಮೆಂಬರುಗಳಾಗಿರುವಂತೆ ಒತ್ತಾಯ ಮಾಡಬೇಕು. ಹೆಚ್ಚು ಜನ ಸದಸ್ಯರಾಗಿ ಬರುವುದರಿಂದ ಸಹಕಾರ ಸಂಘಗಳು ಚೆನ್ನಾಗಿ ಕೆಲಸಮಾಡಲು ಅನುಕೂಲವಾಗುತ್ತವೆ. ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಇಲ್ಲಿ ಮಾತಾಡುತ್ತಾ ಕೋ-ಆಪರೇಟೀವ್ ಫಾರ್ಮಿಂಗ್ ಪದ್ಧತಿ ಇಲ್ಲಿ ಕೆಲಸ ಮಾಡುತ್ತಿರುವುದು ಸರಿಯಿಲ್ಲ ಇದು ಕಾಳರಾತ್ರಿಯಂತಾಗಿದೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಸುಮಾರು 448 ಫಾರ್ಮಿಂಗು ಕೋಆಪರೇಟಿವ್ ಸೊಸೈಟಿಗಳಿವೆ. ಸುಮಾರು 10,100 ಸದಸ್ಯರುಗಳಿದ್ದಾರೆ. 4,400 ಎಕರೆಗಳಷ್ಟು ಭೂಮಿಯನ್ನು ಸೊಸೈಟಿಗಳು ಪಡೆದಿದೆ. ಇದರ ಪೈಕಿ ಸುಮಾರು 30,325 ಎಕರೆಗಳಷ್ಟು ಭೂಮಿ ಸಾಗು ಆಗಿದೆ. ಇದರಲ್ಲಿ ಇನ್ನೂ ಹತ್ತು ಸಾವಿರ ಎಕರೆಗಳಷ್ಟು ಭೂಮಿ ಸಾಗುವಳಿಯಾಗದೆ ಬಾಕಿ ನಿಂತಿವೆ. ಇದಕ್ಕಾಗಿ 54 ಪಂಪು ಸೆಟ್ಟುಗಳು ಕೊಟ್ಟು ನೂರಾರು ಬಾವಿಗಳನ್ನು ತೆಗೆಸಿ ನೀರನ್ನು ಒದಗಿಸಿಕೊಡುತ್ತಿದ್ದಾರೆ. ಆದುದರಿಂದ

ಕೋಆಪರೇಟಿವ್ ಫಾರ್ಮಿಂಗು ಸೊಸೈಟಿಗಳು ಕೆಲಸ ಮಾಡುತ್ತಿವೆ. ಆದರೆ ಕೆಲವು ಕಡೆಗಳಲ್ಲಿ ಸಮರ್ಪಕವಾಗಿ ಕೆಲಸಗಳನ್ನು ಮಾಡದೇ ಇರಬಹುದು. ಇದಕ್ಕೆ ಕೆಲವಾರು ತೊಡಕುಗಳು ಬಂದಿರುವುದರಿಂದ ಸಂಘಗಳು ಇಲ್ಲಿ ಕೆಲಸ ಮಾಡಲಾಗಲಿಲ್ಲ. ಅಲ್ಲದೆ ಈಗ ಸರಕಾರದವರು ಮಾಡಿರುವ ಲ್ಯಾಂಡ್ ರಿಫಾರಂಸ್ ಆಕ್ಟನ್ನು ಜಾರಿಗೆ ತಂದಿರುವುದರಿಂದ ಸಾಗುವಳಿ ಮಾಡುವ ರೈತರೆ ಭೂಮಾಲೀಕನಾಗಬೇಕಾಗಿರುವುದರಿಂದ ಅದಕ್ಕೆ ಸರಕಾರ ಸಹಾಯ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಹಳ್ಳಿಗಳ ರೈತರಿಗೆ ತಾಂತ್ರಿಕ ಸಹಾಯ ಹಾಗೂ ಮತ್ತಿತರ ಸಹಾಯಗಳನ್ನು ಕೊಟ್ಟು ಪ್ರತಿಯೊಂದು ಹಳ್ಳಿಯೂ ಉದ್ಧಾರವಾಗುವಂತೆ ಮಾಡಬೇಕು. ಬಡ ರೈತರ ಉದ್ಧಾರವಾಗಬೇಕಾದರೆ ಕೋಆಪರೇಟಿವ್ ಸೊಸೈಟಿಗಳ ಮೂಲಕವೇ ಆಗಬೇಕು. ಇಲ್ಲದೇ ಇದ್ದರೆ ರೈತರ ಉದ್ಧಾರವಾಗುವುದಿಲ್ಲ. ಇರಿಗೇಷನ್ ಮೂಲಕ ಬಡ ರೈತರು ಸಾಗುಮಾಡಲಿಕ್ಕಾಗುವುದಿಲ್ಲ. ಧನಿಕರೇ ಇರಿಗೇಷನ್ ಮೂಲಕ ಸಾಗುಮಾಡುತ್ತಾರೆ. ಇದಕ್ಕಾಗಿಯೇ ಕೋಆಪರೇಟೀವ್ ಫಾರ್ಮಿಂಗು ಸೊಸೈಟಿಗಳನ್ನು ಮಾಡಿ ರೈತರು ಉದ್ಧಾರವಾಗಬೇಕೆಂದು ಸಹಾಯ ಮಾಡುತ್ತಿದ್ದಾರೆ.

ಇನ್ನು ನಮ್ಮ ರಾಜ್ಯದಲ್ಲಿ ಬಳ್ಳಾರಿಯ ಹತ್ತಿರ ಒಂದು ಷುಗರ್ ಫ್ಯಾಕ್ಟರಿ ನಡೆಯುತ್ತಿದೆ. ಇಲ್ಲಿ ಸರಕಾರದ ಪತಿಯಿಂದ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರು ಇದ್ದಾರೆ. ಆದರೆ ಇವರಿಂದ ಸಮರ್ಪಕವಾಗಿ ಕೆಲಸಗಳು ನಡೆಯುತ್ತಿಲ್ಲ- ಇಲ್ಲಿ ನೇಮಿಸಿರುವ ಮಾನೇಜಿಂಗ್ ಡೈರೆಕ್ಟರು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಇಲ್ಲಿನ ಫ್ಯಾಕ್ಟರಿಗೆ ಕಬ್ಬು ಕೊಡುವ ಸ್ಥಿತಿಯಲ್ಲಿಲ್ಲ. ಇದನ್ನು ನಾವು ಆಗಲೇ ಸರಕಾರದ ಗಮನಕ್ಕೂ ತಂದಿದ್ದೇವೆ. ಆದುದರಿಂದ ಸರಕಾರದವರು ಇಲ್ಲಿರುವ ಬಿ. ಸಿ. ಸ್ಟೋರ್ಸ್ ಮೂಲಕ ಬೇಪರ್ಡಿಸಿ ಸೊಸೈಟಿಗಳನ್ನು ಮಾಡಿ ಇಲ್ಲಿನ ರೈತರಿಗೆ ಸಿಗುವಂತೆ ತಕ್ಕ ವ್ಯವಸ್ಥೆ, ಮಾಡಿ ಸರಕಾರ ಅದನ್ನು ಕಾರ್ಯಗತವಾಗುವಂತೆ ಮಾಡಬೇಕು. ಎಂದು ಇಲ್ಲಿ ನಾನು ಕೇಳಿಕೊಳ್ಳುತ್ತೇನೆ. ರೈತರು ಅಭಿವೃದ್ಧಿಯಾಗಬೇಕಾದರೆ ಅವನಿಗೆ ಸರಿಯಾಗಿ ಸಿಗತಕ್ಕ ನೀರು, ಅವನ ಕೆಲಸಗಳನ್ನು ಮಾಡಲು ಸರಕಾರದಿಂದ ಸಿಗುವ ಸಾಲ ಹಾಗೂ ಸೀಮೆ ಗೊಬ್ಬರ ಸಕಾಲದಲ್ಲಿ ದೊರೆಯುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಪ್ರಜಾಸತ್ತಾತ್ಮವಾದ ಈ ರಾಜ್ಯದಲ್ಲಿ ಅಧಿಕಾರಿಗಳಿಂದಲೇ ಕೂಡಿರುವ ಒಂದು ಕಮಿಟಿ ಮಾಡಿರೋದು ತಪ್ಪು ಇದರೊಳಗೆ ನಾನ್ ಅಫಿಷಿಯಲ್ಸ್‌ಗಳು ಸೇರಿಸದೇ ಬರೀ ಅಧಿಕಾರಿಗಳದ್ದೇ ಒಂದು ಕಮಿಟಿ ಮಾಡಿ ಅವರು ಕೊಡುವ ಸಲಹೆಗಳನ್ನು ಸರಕಾರ ಕಾರ್ಯಗತ ಮಾಡುತ್ತದೆ. ಅವರು ಯಾವ ರೀತಿಯಾಗಿ ಬೀಜಗಳ ಹಾಗೂ ಗೊಬ್ಬರ ಹಂಚಿಕೆಯಾಗಬೇಕು ಎನ್ನುವುದನ್ನು ಈ ಶಾಖೆಯ ಮಂತ್ರಿಗಳಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಅದರ ಬಗ್ಗೆ ತಂದರೆ ಪರಿಶೀಲನೆ ಮಾಡಿ ಶೀಘ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಇನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರ ಇಲ್ಲಿ ತರಬೇಕಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ತಾಲ್ಲೂಕಾ ಬೋರ್ಡುಗಳಿವೆ. ಈ ಬೋರ್ಡುಗಳ ಅಧ್ಯಕ್ಷರೇ ಆ ತಾಲ್ಲೂಕಿನ ಅಭಿವೃದ್ಧಿಗಾಗಿ ಹೆಣಗುತ್ತಾರೆ. ಅವರ ಜವಾಬುದಾರಿಗೆ ಕೊಟ್ಟು ಅದನ್ನು ತಾಲ್ಲೂಕಿನಲ್ಲಿ ಇರುವ ಜನರ ಒಂದು ಕಮಿಟಿ ಮಾಡಿ ಅವರ ಮೂಲಕ ಹಂಚಿಕೆ ವ್ಯವಸ್ಥೆ ಮಾಡುವಂತೆ ಏರ್ಪಾಡು ಮಾಡಬೇಕು. ತಾಲ್ಲೂಕಾ ಬೋರ್ಡಿನ ಅಧ್ಯಕ್ಷರೇ ಅಲ್ಲಿನ ಕಮಿಟಿಗೆ ಅಧ್ಯಕ್ಷರಾಗಿರಬೇಕು ಮತ್ತು ಅಲ್ಲಿರುವ ಎಂ. ಎಲ್. ಎ. ಗಳನ್ನೂ ಸೇರಿಸಿಕೊಂಡು ತಾಲ್ಲೂಕಿನ ಅಭಿವೃದ್ಧಿ ಕಡೆಗೆ ಗಮನ ಕೊಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ನಮ್ಮ ಸಿರಿಗುಪ್ಪಾ ತಾಲ್ಲೂಕಿನ ಬಳಿ ರೈತರಿಗೆ ಸಾಗುವಳಿಯಲ್ಲಿ ಆಸಕ್ತಿ ಬೆಳೆಯಲು ಒಂದು ಯೋಜನೆ ಮಾಡಿಕೊಂಡು ಇಲ್ಲಿನ ಜನರಿಗೆ ಸಹಾಯ ಮಾಡಬೇಕು.

ಇನ್ನು ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನೀರಾವರಿಯೋಜನೆಯಲ್ಲಿ ಮೂರು ವಿಧವಾದ ಸಾಗುವಳಿ ಕ್ರಮ ಇದೆ. ಒಂದು ವೆಟ್ ಸಾಗುವಳಿ, ಇನ್ನೊಂದು ಡ್ರೈ ಕಂ ವೆಟ್ ಮತ್ತು ಮೂರನೇದು ಪೆರಿನ್ನಿಯಲ್ಲಿ ವಾಟರ್ ಸೋರ್ಸು ಮೂಲಕ ಸಾಗು ಮಾಡುವುದು. ಹೀಗೆ ಇಲ್ಲಿ ಸುಮಾರು 43 ಸಾವಿರ ಎಕರೆಗಳಷ್ಟು ಡ್ರೈಕಮ್‘ವೆಟ್’ ಸಾಗುವಳಿಯಾಗಬೇಕಾದುದರಲ್ಲಿ ಸುಮಾರು 15 ಸಾವಿರ ಎಕರೆಗಳಷ್ಟು ಸಾಗು ಆಗಿದೆ ಇನ್ನೂ 22 ಸಾವಿರ ಎಕರೆಗಳಷ್ಟು ಭೂಮಿ ಸಾಗುವಳಿಯಾಗಬೇಕಾಗಿದೆ. ಸುಮಾರು 10–14 ವರ್ಷಗಳಾದರೂ ಇನ್ನೂ ಇದನ್ನು ಸಾಗುವಳಿ ಮಾಡಲಿಕ್ಕೆ ಆಗಲಿಲ್ಲ. ಇದರಲ್ಲಿ ರೈತರಿಗೆ ಅಗತ್ಯವಾಗಿ ಬೇಕಾಗಿರುವುದು ನೀರು ಸರಿಯಾಗಿ ಸಿಕ್ಕದೆ ಸಾಗುವಳಿ ಮಾಡಲಾಗುತ್ತಿಲ್ಲ. ಸುಮಾರು 57 ರಿಂದ ನೀರು ತೆಗೆದುಕೊಳ್ಳದೇ ಇದ್ದರೂ ಇಲ್ಲಿ ವಾಟರು ರೇಟನ್ನು ವಸೂಲಿ ಮಾಡುತ್ತಿದ್ದಾರೆ. ವಾಟರ್ ರೇಟು ಎಲ್ಲಿದಕ್ಕೂ ಒಂದೇ ರೀತಿ ಮಾಡುವುದು ಸರಿಯಲ್ಲ. ಡ್ರೈಗೆ ಬೇರೆ, ಡ್ರೈ ಕಂ ವೆಟ್ಟಿಗೆ ಬೇರೆ ರೀತಿಯಾಗಿ ವಾಟರು ರೇಟು ಇರಬೇಕು. 1965-66 ರಿಂದ ಬೇರೆ ರೀತಿಯಾದ ವಾಟರು ಬೇಸಿಗೆಯಲ್ಲಿ ಕೊಡುತ್ತಿದ್ದಾರೆ. 57 ರಿಂದ 65ರವರೆಗೆ

(ಶ್ರೀ ಎಂ. ದೊಡ್ಡಣ್ಣಗೌಡ)

ಒಂದೇ ರೀತಿಯಾಗಿ ವಾಟರು ರೇಟನ್ನು ಹಾಕಿ ವಸೂಲು ಮಾಡುವುದು ಸರಿಯಲ್ಲ ಎಂದು ಸರಕಾರದ ಗಮನಕ್ಕೆ ಇಲ್ಲಿ ತರುತ್ತಿದ್ದೇನೆ. ಇದರ ಕಡೆಗೆ ಲಕ್ಷ್ಯಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಸುಮಾರು ಹತ್ತು ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಡ್ರೈ ಕಂ ವೆಟ್ ಫಸಲೇ ಆಗಿಲ್ಲ. ಇಂತಹವರ ಮೇಲೆ ರೆಂಟನ್ನು ವಸೂಲು ಮಾಡಬೇಕೆಂದರೆ ಇವರುಗಳು ಕೊಡುವ ಸ್ಥಿತಿಯಲ್ಲಿಲ್ಲ. ಶ್ರೀಮಂತರ ಮೇಲೆ ತೆರಿಗೆ ಹೇರಿದರೆ ಅವರು ಕೊಡಬಹುದು. ಆದರೆ ಬಡ ರೈತರು ಇಷ್ಟು ಹಣ ಕೊಡಲಾಗುವುದಿಲ್ಲ. ಸರಕಾರ ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಡ್ರೈ ಕಂ ವೆಟ್ ನೀರಾವರಿ ಮಾಡಲು ಸರಿಯಾಗಿ ನೀರು ಸಿಗದೆ ಇಲ್ಲಿನ ರೈತರು ಕಷ್ಟಕ್ಕೆ ಸಿಕ್ಕಿದಾರೆ. ಇದೇ ವರ್ಷದಲ್ಲಿ ಇಲ್ಲಿ ಸುಮಾರು 21 ದಿವಸ ನೀರು ಸಿಗಲಿಲ್ಲ. ಇದಕ್ಕೆ ಕಾರಣ ಇಲ್ಲಿದ್ದ ಕೆನಾಲ್ ಬ್ರೀಚ್ ಆಯಿತು ಯಾವತ್ತೂ ಪೈರು ಒಣಗಿಹೋದವು. ಆದುದರಿಂದ ಈ ಬಡ ರೈತರಿಗೆ ಸಾಗುವಳಿ ಮಾಡಲು ಸಾಕಷ್ಟು ಸಹಾಯಗಳು ಸರಕಾರದ ಮೂಲಕ ಭರವಸೆ ಸಿಗುವಂತೆ ಏರ್ಪಾಡು ಮಾಡಬೇಕೆಂದು ಇಲ್ಲಿ ಸೂಚಿಸುತ್ತೇನೆ.

ಇನ್ನು ಅರ್ಜಿಗಳ ವಿಷಯವಾಗಿ ಹೇಳಬೇಕಾದರೆ ಸಾಧಾರಣವಾಗಿ ಅಧಿಕಾರಿಗಳಿಂದ ಆಗುವ ಅನ್ಯಾಯಕ್ಕೆ ಸಚಿವರೇ ಹೊಣೆಗಾರಿಕೆಯೆಂದು ನಾನು ಹೇಳುತ್ತೇನೆ. ಬಳ್ಳಾರಿ ಅಸಿಸ್ಟೆಂಟ್ ಕಮಿಷನರ್ ವಿಷಯವಾಗಿ ಹೇಳಬೇಕಾದರೆ ಅವರಿಗೆ ಆಬ್‌ಜಕ್ಷನ್ ಪಿಟಿಷನ್ನುಗಳನ್ನು ವಕೀಲರ ಮುಖಾಂತರ ಕೊಟ್ಟರೆ ಅವನ್ನು ಕೊಡುವವರನ್ನು ಯಾವ ವಿಚಾರವನ್ನು ವಿಡದೆ ಅವರು ಸರ್ಕಾರಕ್ಕೆ ವರದಿಗಳನ್ನು ಕೊಟ್ಟಿರುತ್ತಾರೆ. ಅದು ಸರಿಯಲ್ಲ. ಇನ್ನೊಂದು ವಿಷಯ. ಈಗ ನಮ್ಮ ರಾಜ್ಯದಲ್ಲಿ ಎಲ್ಲಾದರೂ ಮನೆ ಕಟ್ಟಿಕೊಂಡು ಆ ಮನೆಯ ಪಕ್ಕದಲ್ಲಿ ಏನಾದರೂ 3 ಅಡಿಗಳಷ್ಟು ಜಾಗ ವಿದ್ದರೆ ಅಲ್ಲಿಯೂ ಮನೆಯನ್ನು ಕಟ್ಟಿಕೊಳ್ಳಿ ಎಂದು ಹೇಳತಕ್ಕ ಅಧಿಕಾರಿಗಳು ಇದ್ದಾರೆ. ಅಂಥವರು ಗವಿಯಲ್ಲಿ ಜೀವಿಸುವ ಪರಿಸ್ಥಿತಿಯನ್ನು ತಂದು ಹಾಕಿದ್ದಾರೆ. ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ಪರಿಶೀಲನೆಮಾಡಿ ಅಂತಹವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಂಡು, ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಹೊತ್ತು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

† ಶ್ರೀ ಸಿದ್ಧಯ್ಯ ಕಾಶೀಮಠ್.—ಅಧ್ಯಕ್ಷರೇ, ಈ ರಾಜ್ಯದ ಹಳ್ಳಿಗಳ ಅಭಿವೃದ್ಧಿಗಾಗಿ ಗ್ರಾಮಾಭಿವೃದ್ಧಿ, ಸಹಕಾರ, ಸಾಮುದಾಯಕ ಅಭಿವೃದ್ಧಿ ಮತ್ತು ವ್ಯವಸಾಯ ಬಾಬುಗಳ ಮುಖಾಂತರ ಹಳ್ಳಿಗಳಲ್ಲಿ ನೆಲಸತಕ್ಕ ಜನಗಳಿಗೆ ಸದುಪಯೋಗವಾಗಬೇಕೆಂದು ಸರ್ಕಾರದವರು ಇದಕ್ಕೆ ಒದಗಿಸಿರತಕ್ಕ ಹಣ ಬಹಳ ಕಡಿಮೆಯಾಗಿದ್ದರೂ ಈ ಹಣವೂ ಸರಿಯಾದ ರೀತಿಯಲ್ಲಿ ಗ್ರಾಮಗಳಿಗೆ ಮುಟ್ಟುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಈಗಾಗಲೇ ಹಳ್ಳಿಗಳಲ್ಲಿ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್ ಎಂಬುದಾಗಿ ರಸ್ತೆ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವುದಕ್ಕೆ ರಸ್ತೆಗಳನ್ನು ಮಾಡುತ್ತಿದ್ದರೂ ಅನೇಕ ರಸ್ತೆಗಳು ಇನ್ನು ಪೂರ್ಣವಾಗಿಲ್ಲ. ಅರ್ಧಂಬರ್ಧ ಕೆಲಸಗಳಾಗಿವೆ. ಹಣ ಸಾಲದೆ ಕೊಟ್ಟ ಸಾಲವನ್ನು ತೀರಿಸುವುದಕ್ಕೆ ಆಗದೆ ಅನೇಕ ರಸ್ತೆ ಕಾಮಗಾರಿಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ಗ್ರಾಮಾಂತರ ಜನಗಳಿಗೆ ತೊಂದರೆಯಾಗಿದೆ. ಕಾರಣವೇನೆಂದರೆ, ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನ್ನು ಪಿ.ಡಬ್ಲ್ಯು.ಡಿ. ಅಥವಾ ಟಿ.ಡಿ.ಬಿ. ಯವರಿಗೆ ಇದುವರೆಗೆ ವಹಿಸದೇ ಇರುವುದೇ ಆಗಿದೆ. ಅದರಿಂದಾಗಿ ಸುಮಾರು 10 ವರ್ಷಗಳಾದರೂ ಅವು ರಿಪೇರಿ ಆಗದೆ ಇವತ್ತಿನ ದಿವಸ ಗ್ರಾಮಗಳಲ್ಲಿರತಕ್ಕ ರೈತರಿಗೆ ತೊಂದರೆಯಾಗಿದೆ. ಆದ್ದರಿಂದ ಈ ಕೆಲಸವನ್ನು ಪಿ.ಡಬ್ಲ್ಯು.ಡಿ. ಅಥವಾ ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂದು ಹೇಳುತ್ತೇನೆ. ಗ್ರಾಮಗಳಲ್ಲಿನ ಆಡಳಿತ ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಗ್ರಾಮಪಂಚಾಯತಿ ಆಡಳಿತ ಸರಿಯಾಗಿ ನಡೆಯಬೇಕು. ಗ್ರಾಮಗಳಲ್ಲಿನ ರೈತರಿಗೆ ಆರ್ಥಿಕ ಮುಗ್ಗಟ್ಟು ಹೋಗಬೇಕಾದರೆ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡಬೇಕು. ಅವುಗಳ ಮೇಲ್ವಿಚಾರಣೆಯಲ್ಲಿ ಇರತಕ್ಕ ತಾಲ್ಲೂಕು ಬೋರ್ಡುಗಳು ಇವತ್ತಿನದಿವಸ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ ಇವೆಲ್ಲವೂ ಸರಿಹೋಗುತ್ತದೆ. ಇಷ್ಟೇ ಅಲ್ಲದೆ ಸುಮಾರು 8 ವರ್ಷಗಳಿಂದಲೂ ಗ್ರಾಮಪಂಚಾಯತಿಗಳಿಗೆ ತಾಲ್ಲೂಕು ಬೋರ್ಡುಗಳಿಂದ ಚುನಾವಣೆ ಆಗದೇ ಇರುವುದರಿಂದ ಅನೇಕರು ನಿರಾಶರಾಗಿ ಅಲ್ಲಿನ ಜನಗಳು ಕೆಲಸಮಾಡದೇ ಇರುವುದಾಗಿದೆ. ಗ್ರಾಮಗಳಿಗೆ ಸಾಕಷ್ಟು ಹಣವನ್ನು ಕೊಡದೇ ಇರುವುದರಿಂದ ಅಲ್ಲಿನ ಜನಗಳು ಕ್ಷಾಮದ ಬವಣೆಗೆ ಒಳ

ಗಾಗಿದ್ದಾರೆ. ಅಂತಹ ಗ್ರಾಮಗಳಲ್ಲಿ ಯಾವ ತರಹ ಕೆಲಸವೂ ಆಗಲಿಲ್ಲ. ಈಗ ಜನರಲ್ ಎಲೆಕ್ಷನ್ ಆಗಿದ್ದರೂ ಕೂಡ ಗ್ರಾಮಪಂಚಾಯತಿಗಳ ಮತ್ತು ತಾಲ್ಲೂಕು ಬೋರ್ಡುಗಳ ಚುನಾವಣೆ ಏಕೆ ಮಾಡಬಾರದೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರದವರು ಇವುಗಳ ಚುನಾವಣೆಯನ್ನು ಬಹಳ ತೀವ್ರದಲ್ಲಿ ಮಾಡಬೇಕು. ಅದನ್ನು ಸರಿಯಾದ ರೀತಿಯಲ್ಲಿ ರೂಪಿಸಬೇಕು ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಮಂಡಲಗಳಿಗೆ ಹಣ ಏನು ಲ್ಯಾಂಡ್ ರೆವಿನ್ಯೂ ಮುಖಾಂತರ ಕೊಡುತ್ತಾರೆಯೋ ಅದು ಏನೇನೂ ಸಾಲದು. ಈಗಾಗಲೇ ಅನೇಕ ಹಣಕ್ಕೆ ಸಂಬಂಧಪಟ್ಟ ವಿಧೇಯಕಗಳನ್ನು ಇಲ್ಲಿ ಪಾಸ್ ಮಾಡಿದ್ದೇವೆ. ತಾಲ್ಲೂಕು ಬೋರ್ಡುಗಳಿಗೆ ಕೇವಲ ಸ್ವಲ್ಪ ಹಣವನ್ನು ಮಾತ್ರ ಒದಗಿಸಿದ್ದಾರೆ. ಆದರೆ ತಾಲ್ಲೂಕು ಬೋರ್ಡುಗಳಿಗೆ ಎಷ್ಟು ಹಣವನ್ನು ಒದಗಿಸಿಕೊಟ್ಟರೂ ಆಡಳಿತ ಮಾತ್ರ ಸರಿಯಾಗಿ ಆಗುತ್ತಾ ಇಲ್ಲ. ಈ ತಾಲ್ಲೂಕು ಬೋರ್ಡುಗಳಿಗೆ ಮೋಟಾರು ವಾಹನಗಳ ತೆರಿಗೆಯ ಆದಾಯದಲ್ಲಿ ಸ್ವಲ್ಪಮಟ್ಟಿಗೆ ಹಣಸಹಾಯವನ್ನು ಮಾಡಬೇಕು. ಇಲ್ಲಿಯವರೆಗೂ ನಮ್ಮ ರಾಜ್ಯದಲ್ಲಿ ಈಗಾಗಲೇ ಎ.ಇ.ಎಸ್. ಬ್ಲಾಕುಗಳು ಎರಡನೇ ಸ್ಟೇಜಿನಲ್ಲಿ ಬಂದಿವೆ. ಇದರಲ್ಲಿ ಕೊಟ್ಟಿರುವ ಹಣವೂ ಸಾಲದು. ಇದರ ಹಿಂದೆ 10-6 ಲಕ್ಷ ರೂಪಾಯಿಗಳನ್ನು ಕೊಟ್ಟಿತ್ತು. ಪೂರ್ತಿ ಕೆಲಸಗಳು ಆಗದೆ ಅರ್ಧಂಬರ್ಧವಾಗಿ ಆ ಕೆಲಸಗಳನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಎರಡನೆ ಸ್ಟೇಜಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಪ್ರತಿ ಬ್ಲಾಕಿಗೆ ಕೊಟ್ಟಿದ್ದರೂ ಅಭಿವೃದ್ಧಿ ಕೆಲಸಕಾರ್ಯಗಳು ಸಾಕಷ್ಟು ಆಗಿಲ್ಲ. ಅಲ್ಲಿರತಕ್ಕ ಸಿಬ್ಬಂದಿಗಾಗಿಯೇ ಸುಮಾರು 50-60 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಆದ್ದರಿಂದ ಇನ್ನುಳಿದ 40-50 ಸಾವಿರ ರೂಪಾಯಿಗಳಲ್ಲಿ ಇಡೀ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ರೀತಿಯ ಏರ್ಪಾಡು ಮಾಡಬೇಕು. ಗ್ರಾಮಸೇವಕರನ್ನು ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್ ಆಫೀಸರುಗಳನ್ನು ವ್ಯವಸಾಯ ಖಾತೆಗೆ ವರ್ಗಾಯಿಸಿ ಅವರ ಮೂಲಕ ಈ ಬ್ಲಾಕಿನ ಕೆಲಸಗಳನ್ನು ಮಾಡಿಸುತ್ತೇವೆಂದು ಹೇಳುತ್ತಾರೆ. ಅದಕ್ಕೆ ಎಲ್ಲಿಂದ ಅವರು ರೊಕ್ಕ ತರಬೇಕು ? ಕೇವಲ 40 ಸಾವಿರ ರೂಪಾಯಿಗಳಲ್ಲಿ ತಾಲ್ಲೂಕು ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ವ್ಯವಸಾಯ ಖಾತೆಯಿಂದ ಹೆಚ್ಚಿಗೆ ಹಣವನ್ನು ಇವತ್ತಿನದಿವಸ ಒದಗಿಸಿಕೊಳ್ಳಬೇಕೆಂದೂ ಆ ಹಣವನ್ನು ಅದಕ್ಕಾಗಿಯೇ ಉಪಯೋಗಿಸಿಕೊಳ್ಳಬೇಕೆಂದೂ ಹೇಳುತ್ತೇನೆ. ಇಲ್ಲದಿದ್ದರೆ ಸುಮ್ಮನೆ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತದೆ. ಕೆಲಸವೇನೂ ಆಗುವುದಿಲ್ಲ. ಇಂಥಾದ್ದನ್ನು ಸರ್ಕಾರದವರು ಎದುರಿಸಬೇಕು. ನಾವು ತಿಳಿದುಕೊಂಡಿರುವ ಹಾಗೆ ಹಳ್ಳಿಗಳ ಅಭಿವೃದ್ಧಿ ಸಲುವಾಗಿ ಗ್ರಾಮಪಂಚಾಯತಿಗಳ ಆಡಳಿತ ಮತ್ತು ತಾಲ್ಲೂಕು ಬೋರ್ಡುಗಳ ಆಡಳಿತ ಸರಿಯಾದ ರೀತಿಯಲ್ಲಿ ನಡೆಯಬೇಕು.

ಇನ್ನು ಸಹಕಾರ ಸಂಘಗಳ ಅಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸರ್ಕಾರದವರು 61ನೇ ಇಸವಿಯಿಂದ 66ನೇ ಇಸವಿಯವರೆಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಸಂಘಗಳ ಸಂಖ್ಯೆ ಹಾಗು ಸದಸ್ಯರುಗಳ ಸಂಖ್ಯೆಯೇ ಹೆಚ್ಚುತ್ತಿದೆ. ನನ್ನ ಸ್ನೇಹಿತರೊಬ್ಬರು ಹೇಳಿದ ಹಾಗೆ ಇದರಲ್ಲಿ ಲಾಭ ಬಹಳ ಕಡಿಮೆ ಎಂದು ಹೇಳಿದರು. ಸಹಕಾರ ಸಂಘಗಳಿಂದ ಹೆಚ್ಚಿನ ಲಾಭಪಡೆಯದೆ ಅವುಗಳಲ್ಲಿ ಸದಸ್ಯರಾಗಿರತಕ್ಕವರಿಗೆ ಸಾಕಷ್ಟು ಸಹಾಯವಾಗಿ ಸಂಘಗಳಿಗೆ ನಿವ್ವಳ ಲಾಭವೇನೂ ಇಲ್ಲದೆ ಅದರ ಖರ್ಚು ನೀಗಿದರೆ ಸಾಕು ಎಂಬುದಾಗಿ ಹೇಳುವವರಲ್ಲಿ ನಾನೂ ಒಬ್ಬ. ಸಹಕಾರ ಸಂಘಗಳು ರೈತರಿಗೆ ಕೊಡುವ ಸಾಲದ ಮೇಲಿನ ಬಡ್ಡಿದರ ಬಹಳ ಜಾಸ್ತಿ. ಅದನ್ನು ಕಡಿಮೆ ಮಾಡಬೇಕು. ಆದರೂ ಸಹ ಸಹಕಾರ ಸಂಘಗಳಲ್ಲಿ ನಿವ್ವಳ ಆದಾಯವೇನೂ ಬರುತ್ತಿಲ್ಲ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಪ್ರತಿವರ್ಷ ಇವುಗಳ ಆದಾಯ ಹೆಚ್ಚುತ್ತಿದೆ. 1961 ರಲ್ಲಿ ಇವುಗಳ ನಿವ್ವಳ ಆದಾಯ 63 ಲಕ್ಷ ಇದ್ದುದು ಈವತ್ತು 2 ಕೋಟಿ 69 ಲಕ್ಷ ಆಗಿರುತ್ತದೆ. ಈ 5 ವರ್ಷಗಳಲ್ಲಿ ಈ ರೀತಿಯಲ್ಲಿ ಕಂಡುಬರುತ್ತಿದೆ. ಆ ರೀತಿ ನಿವ್ವಳ ಆದಾಯಕ್ಕೇ ಗಮನ ಕೊಡದೇ ರೈತರಿಗೆ ಹೆಚ್ಚಿನ ಅನುಕೂಲತೆಗಳನ್ನು ಸಹಕಾರ ಸಂಘಗಳ ಮೂಲಕ ಮಾಡಿಕೊಡಬೇಕು. ರೈತರಿಗೆ ಸಹಕಾರ ಸಂಘಗಳ ಮೂಲಕ ಹಣ ಸಹಾಯವನ್ನು ಮಾಡಿಸಬೇಕು. ಆ ಮೂಲಕ ಸರ್ಕಾರದ ಉದ್ದೇಶದ ಸಾಫಲ್ಯತೆ ಉಂಟಾಗಬೇಕು ಏಕೆಂದರೆ ಗ್ರಾಮಗಳಲ್ಲಿ ಇತ್ತೀಚೆಗೆ ಅನೇಕರು ಸಂಘ ಸಂಸ್ಥೆಗಳನ್ನು ಏರ್ಪಾಡು ಮಾಡಿಕೊಂಡಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 1651 ಸಹಕಾರ ಸಂಘಗಳು ನಾನಾ ತರಹದಲ್ಲಿ ಕೆಲಸಮಾಡುತ್ತಾ ಇವೆ. ಒಂದು ವಿಷಯ. ಪ್ರತಿ ವರ್ಷವೂ ಅವುಗಳು ಸರಿಯಾದ ರೀತಿಯಲ್ಲಿ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುತ್ತಿವೆ. ಸ್ವಲ್ಪ ಮಟ್ಟಿಗಾದರೂ ಸುಧಾರಣೆ ಇದೆ. ಎಲ್ಲೋ ಒಂದೆರಡು ಪರ್ಸೆಂಟು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂದು ಹೇಳಬಹುದು. ಅಂತಹುಗಳ ಬಗ್ಗೆ ಸರ್ಕಾರದವರು ನಿಗಾ ಕೊಟ್ಟು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಸುಮಾರು 10 ವರ್ಷಗಳಿಂದಲೂ ಒಂದು ವಿಷಯವನ್ನು

(ಶ್ರೀ ಸಿದ್ದಯ್ಯ ಕಾಶೀಮಠ್)

ಹೇಳುತ್ತಲೇ ಬಂದಿದ್ದೇನೆ. ಆ ವಿಚಾರದ ಕಡೆ ಸರ್ಕಾರ ಗಮನ ಕೊಟ್ಟಿಲ್ಲ. ಶಿರಹಟ್ಟಿ ತಾಲ್ಲೂಕಿನ ಪರಸ್ಪರ ಸಹಕಾರ ಸಂಘದಲ್ಲಿ ಸುಮಾರು 16 ವರ್ಷಗಳಿಂದಲೂ ನಾನು ನೋಡಿರುವಹಾಗೆ ಬೇಕಾದಷ್ಟು ದುರುಪಯೋಗವಾಗಿದೆ ಎಂಬುದಾಗಿ ಇವತ್ತು ಮತ್ತೊಮ್ಮೆ ಈ ಸಭೆಯಲ್ಲಿ ತಿಳಿಸುತ್ತಿದ್ದೇನೆ. ಆ ಬಗ್ಗೆ ಏನು ಕ್ರಮವನ್ನಾದರೂ ತೆಗೆದುಕೊಳ್ಳುವುದಕ್ಕೆ ಇಲ್ಲಿಯವರೆಗೂ ಇವರ ಕೈಲಿ ಏನೂ ಆಗಲಿಲ್ಲ. ಒಂದುಸಾರಿ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಾಗಲೂ ಹೇಳಿದ್ದಾಗಿದೆ. ಅಗ ಆ ಕಾನೂನು ಏಕೆ ಆಯಿತು ಎಂದು ಕೇಳಿದರೇ ಹೊರ್ತು ಇನ್ನೇನೂ ಆಗಲಿಲ್ಲ. ಆದ್ದರಿಂದ ಇನ್ನು ಮುಂದೆ ಈ ಸಹಕಾರ ಸಂಘಗಳಲ್ಲಿ ಯಾರಾದರೂ ತಪ್ಪಿತಸ್ಥರು ಇದ್ದರೆ ಅಂತಹವರಿಗೆ ಸರಿಯಾದ ಶಿಕ್ಷೆ ಕೊಡಲು ತಕ್ಕ ಶಾಸನವನ್ನೇ ಮಾಡಬೇಕು.

ಇನ್ನು ವೇರ್ ಹೌಸಿಂಗ್ ಸೌಲಭ್ಯಗಳನ್ನು ಪ್ರತಿ ತಾಲ್ಲೂಕಿಗೂ ಕೊಡಬೇಕು. ಉಗ್ರಾಣ ಮಳಿಗೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಮಾಡಿದರೆ ರೈತನು ತಾನು ಬೆಳೆದಂಥ ಮಾಲುಗಳಿಗೆ ಹೆಚ್ಚು ಲಾಭ ಪಡೆಯುತ್ತಾನೆ. ಆದ್ದರಿಂದ ಅವುಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸ್ಥಾಪಿಸಿ ಅದರ ಪ್ರಯೋಜನವನ್ನು ಎಲ್ಲರಿಗೂ ಮಾಡಿಕೊಡಬೇಕು. ಹಿಂದೆ ಸೂಪರ್‌ವಿಷನ್ ಯೂನಿಯನ್ಸ್ ಎಂದಿದ್ದುವು. ಮೇಲ್ವಿಚಾರಣೆಯ ಕೆಲಸ ಸಾಕಷ್ಟು ರೀತಿಯಲ್ಲಿ ಆಗುತ್ತಿತ್ತು. ಎಲ್ಲರಿಗೂ ಅವು ತೃಪ್ತಿಯಾಗಿದ್ದುವು. ಅಂತಹ ಯೂನಿಯನ್ನುಗಳನ್ನು ಕಾನೂನು ರೀತಿಯಿಂದ ಪ್ರತಿ ತಾಲ್ಲೂಕಿನಲ್ಲಿಯೂ ಸ್ಥಾಪನೆ ಮಾಡಿದರೆ ಅವುಗಳ ಮುಖಾಂತರ ರೈತರಿಗೆ ಸಾಕಷ್ಟು ಸಹಾಯ ಮಾಡಿದಂತಾಗುತ್ತದೆ. ಮೇಲ್ವಿಚಾರಣೆ ಚೆನ್ನಾಗಿ ಮಾಡಿದಂತಾಗುತ್ತದೆ. ಅವುಗಳನ್ನು ಊರ್ಜಿತ ಸ್ಥಿತಿಗೆ ತರುವುದಕ್ಕೆ ಕೂಡಲೇ ಸರ್ಕಾರದವರು ತಕ್ಕ ಪ್ರಯತ್ನಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದ ಜಮೀನು ಅಭಿವೃದ್ಧಿ, ನೀರಾವರಿ ಬಾವಿಗಳಿಗಾಗಿ ಏನೂ ಮಾಡಿಲ್ಲ. ಜಮೀನು ಅಭಿವೃದ್ಧಿ ಸಲುವಾಗಿ ಅಲ್ಲಿ ಟ್ರಾಕ್ಟರುಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನ್ನ ಸಲಹೆ. ಅಷ್ಟೇ ಅಲ್ಲದೆ ಕೆಲವು ಕಡೆಗಳಲ್ಲಿ ಬಾವಿಗಳನ್ನು ತೆಗೆಸಿದ್ದರೂ ಅದರಲ್ಲಿನ ನೀರನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ ಅದಕ್ಕಾಗಿ ಈಗ ವಿದ್ಯುಚ್ಛಕ್ತಿ ಸರಬರಾಜು ಹೆಚ್ಚಾಗುತ್ತಿರುವುದರಿಂದ ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳನ್ನು ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮುಖಾಂತರ ರೈತರಿಗೆ ಒದಗಿಸಿಕೊಡಬೇಕು. ಈಗ ಸಾಲದ ಅರ್ಜಿಗಳೇನಾದರೂ ರೈತರಿಂದ ಬಂದರೆ ಅವೆಲ್ಲವೂ ಬೆಂಗಳೂರಿನಲ್ಲಿಯೇ ತೀರ್ಮಾನವಾಗಿ ಮಂಜೂರಾಗಬೇಕಾಗಿವೆ. ಆದರೆ ಧಾರವಾಡದಲ್ಲಿ ಮತ್ತು ಅದರ ಸುತ್ತಮುತ್ತಲಿರುವ ಕೆಲವು ಭಾಗಗಳಲ್ಲಿ ಅಲ್ಲಿಯ ಡಿವಿಜನಲ್ ಬ್ಯಾಂಕುಗಳ ಮುಖೇನ ಸಾಲದ ಅರ್ಜಿಗಳನ್ನು ಮಂಜೂರು ಮಾಡಬೇಕೆಂಬ ಉದ್ದೇಶವನ್ನು ಸರ್ಕಾರದವರು ಏನು ಇಟ್ಟುಕೊಂಡಿದ್ದಾರೋ ಅದು ಬಹಳ ಒಳ್ಳೆಯದು. ಈರೀತಿ ಮಾಡಿದರೆ ಜನರು ಆ ಪ್ರದೇಶಗಳಿಂದ ಬೆಂಗಳೂರು ತನಕ ಬರುವ ಪದ್ಧತಿ ತಪ್ಪುತ್ತದೆ. ಒಟ್ಟಿನಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ರೈತರಿಗೆ ಪಂಪು ಸೆಟ್‌ಗಳನ್ನು ಒದಗಿಸಬೇಕು.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳ ವಿಚಾರ. ಸುಮಾರು 12 ವರ್ಷಗಳಿಂದಲೂ ಇವುಗಳಿಗೆ ಚುನಾವಣೆ ಆಗದೇ ಇರತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಅವು ಸ್ಥಗಿತಗೊಂಡಿವೆ. ಅವು ಈಗ ಯಾವ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆಯೋ ಗೊತ್ತಿಲ್ಲ.

ಇನ್ನು ಮುನಿಸಿಪಾಲಿಟಿಗಳ ಬಗ್ಗೆ ಹೇಳುವುದಾದರೆ, ಸಣ್ಣ ಸಣ್ಣ ಮುನಿಸಿಪಾಲಿಟಿಗಳು ಎಂದರೆ 10 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಮುನಿಸಿಪಾಲಿಟಿಗಳನ್ನು ಟೌನ್ ಪಂಚಾಯಿತಿ ಮುನಿಸಿಪಾಲಟಿಗಳೆಂದು, ಮಾಡಬೇಕು. ಅವುಗಳಿಗೆ ಸರ್ಕಾರದವರು ಸಾಕಷ್ಟು ಹಣ ಸಹಾಯವನ್ನು ಮಾಡಿ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದರ ಸಲುವಾಗಿ 10 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಸಣ್ಣ ಸಣ್ಣ ಮುನಿಸಿಪಾಲಿಟಿಗಳನ್ನು ಟೌನ್‌ಪಂಚಾಯಿತಿ ಮುನಿಸಿಪಾಲಿಟಿಗಳೆಂದು ಪರಿವರ್ತನೆ ಮಾಡಿದರೆ ಅವುಗಳ ಮುಖಾಂತರ ಜನಗಳಿಗೆ ಸೌಕರ್ಯಗಳು ದೊರೆಯುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ಎಲ್ಲರಿಗೂ ಕುಡಿಯುವ ನೀರನ್ನು ಕೊಡಬೇಕೆಂದು ರೂರಲ್‌ವಾಟರ್ ಸಪ್ಲೈಸ್ಕೀಮ್ ಎಂದು ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ. ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕಕಡೆ ಜನಗಳು ಕುಡಿಯುವ ನೀರನ್ನು ಒಂದು ಮೈಲಿ, 2 ಮೈಲಿ, 3 ಮೈಲಿ ಪ್ರದೇಶಗಳಿಂದ ಹೊತ್ತುಕೊಂಡು

ಬಂದು ನೀರನ್ನು ಕುಡಿಯುತ್ತಿದ್ದಾರೆ, ಆದರೂ ಸಹ ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟಂತೆ ಕಾಣುವುದಿಲ್ಲ. ಕೆಲವು ಕಡೆ ರೂರಲ್ ವಾಟರ್ ಸಪ್ಲೈ ಯೋಜನೆಯ ಬಗ್ಗೆ ಡಿಪಾಜಿಟ್ ಕಟ್ಟಿ ನೀರು ಕೊಡಿ ಎಂದು ಕೇಳಿದರೆ ಅದನ್ನು ಕೊಡುವುದಕ್ಕೆ ಸರ್ಕಾರದವರಿಗೆ ಆಗಿಲ್ಲ.

ಇನ್ನು ಜನತಾಬಜಾರ್‌ಗಳಲ್ಲಿ ಎಲ್ಲಾ ತರಹ ಸಾಮಾನುಗಳು ಸಿಕ್ಕುತ್ತವೆ ಎಂದು ಹೇಳುತ್ತಾರೆ, ಅಲ್ಲಿ ಶ್ರೀಮಂತರಾಗಿರತಕ್ಕವರು ಕೇಳತಕ್ಕಂಥ ಸಾಮಾನುಗಳು ಅಲ್ಲಿ ದೊರೆಯುತ್ತವೆ; ಬಡಜನಗಳಿಗೆ, ಸಾಮಾನ್ಯ ಜನಗಳಿಗೆ ಬೇಕಾದಂತಹ ಸಣ್ಣ ಪುಟ್ಟ ಸಾಮಾನುಗಳು ಅಲ್ಲಿ ಇಲ್ಲ. ಜನತಾಬಜಾರ್‌ನಲ್ಲಿ ಮಾರಾಟ ಮಾಡತಕ್ಕಂಥ ಸಾಮಾನುಗಳ ಪಟ್ಟಿ ಮತ್ತು ಅವುಗಳ ಬೆಲೆ ಹಾಕಿರುವುದನ್ನೂ ನಾನು ನೋಡಿದ್ದೇನೆ. 6 ರೂಪಾಯಿಗಳಿಂದ ಹಿಡಿದು ಒಂದು ಸಾವಿರ ರೂಪಾಯಿಗಳವರೆಗೂ ಬೆಲೆ ಬಾಳತಕ್ಕಂಥ ಸಾಮಾನುಗಳು ಅಲ್ಲಿವೆ. ಆದರೆ ಕಡಿಮೆ ಬೆಲೆಯ ಸಾಮಾನುಗಳನ್ನು ಅಲ್ಲಿ ಮಾರಾಟ ಮಾಡುತ್ತಿಲ್ಲ. ಜನಗಳಿಗೆ ಬೇಕಾದಂತಹ ಮೈದಾ, ರವೆ, ಗೋಧಿ, ಅಕ್ಕಿ ಮುಂತಾದ ಆಹಾರಪದಾರ್ಥಗಳನ್ನು ಅಲ್ಲಿ ಮಾರುವುದಕ್ಕೆ ವ್ಯವಸ್ಥೆ ಮಾಡಬೇಕು. ಸಾಮಾನ್ಯ ಜನತೆಯ ಬೇಡಿಕೆಗಳನ್ನು ಪೂರೈಸುವಂತೆ ಜನತಾಬಜಾರ್‌ನಲ್ಲಿ ಮಾಡಬೇಕು. ಈಗ ಬೆಂಗಳೂರಿನಲ್ಲಿರುವ ಜನತಾ ಬಜಾರು ಬಹಳ ಉತ್ತಮರೀತಿಯಿಂದ ಕೆಲಸ ಮಾಡುತ್ತಿದೆ. ಈಗ ಅಲ್ಲಿ ಕಾಯಿಪಲ್ಯ ಹಣ್ಣುಗಳನ್ನು ಏನು ಮಾರಾಟವಾಡುತ್ತಿದ್ದಾರೆಯೊ ಅದು ಹೆಚ್ಚಿನ ಕಿಮ್ಮತ್ತು ಇದೆ. ಅದನ್ನು ಕಡಿಮೆ ಬೆಲೆಗೆ ಮಾರುವುದಕ್ಕೆ ಸಹಾಯ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ, ಸಹಕಾರ ಮತ್ತು ಅಭಿವೃದ್ಧಿಶಾಖೆಯ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳು ಏನಿವೆಯೋ ಅವುಗಳಿಗೆ ಮುಂಜೂರಾತಿ ಕೊಡವಾಗ ನನ್ನ ಕ್ಷೇತ್ರದಲ್ಲಿರತಕ್ಕ ಕೆಲವು ಸಮಸ್ಯೆಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಕೇಂದ್ರ ಸರ್ಕಾರದವರ ಆದೇಶದಂತೆ ಕನ್‌ಸ್ಯೂಮರ್ಸ್ ಕೋಆಪರೇಟೀವ್ ಸೊಸೈಟಿಗಳನ್ನ ಮಾಡಬೇಕೆಂದು ಸರ್ಕಾರದವರು ಮಾಡಿದರು. ಆಯಾಯ ಸ್ಥಳಗಳಲ್ಲಿಯೇ ಸೊಸೈಟಿಗಳನ್ನು ಮಾಡಿ ಅವುಗಳಿಗೆ ಬೇಕಾದ ಸೌಲಭ್ಯಗಳನ್ನು ಏರ್ಪಾಡು ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಎಷ್ಟೇ ಹೇಳಿದರೂ ಕೂಡ ಅದು ಸಫಲವಾಗುವುದಿಲ್ಲ ಎಂದು ಇವೊತ್ತು ತಮ್ಮೆಲ್ಲರ ಗಮನಕ್ಕೂ ತರುತ್ತಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ನಾನೂ ಒಂದು ಸೊಸೈಟಿಯ ಅಧ್ಯಕ್ಷನಾಗಿದ್ದೇನೆ. ನನಗೆ ಅದರ ಅನುಭವ ಇದೆ. ಸಂಬಂಧಪಟ್ಟ ಸ್ಥಳೀಯ ಸೊಸೈಟಿಗಳಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಸರಿಯಾಗಿ ಕಲ್ಪಿಸಿಕೊಟ್ಟಿಲ್ಲ. ಈ ರೀತಿ ಆ ಸೊಸೈಟಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾತ್ಸಾರ ಮನೋಭಾವನೆ ಬಂದರೆ ಸೊಸೈಟಿಗಳು ಯಶಸ್ವಿಯಾಗುವುದಿಲ್ಲ. ನನ್ನ ಸ್ವಂತ ಅನುಭವದಿಂದ ನಾನು ಹೇಳುವುದಾದರೆ ನಮ್ಮ ಮಾಗಡಿ ಟೌನ್ ಕನ್‌ಸ್ಯೂಮರ್ಸ್ ಕೋಆಪರೇಟೀವ್ ಸೊಸೈಟಿಗೆ ಮ್ಯಾನೇಜೀರಿಯಲ್ ಕಾಸ್ಟ್ಸ್ ಕೊಟ್ಟಿಲ್ಲ. ಷೇರ್ ಅಮೌಂಟ್ ಅಡ್‌ಜೆಸ್ಟ್ ಮಾಡುವುದಕ್ಕೆ ಇದುವರೆಗೂ ಆಗಿಲ್ಲ. ಷೇರ್ ಸರ್ಟಿಫಿಕೇಟ್ ಕೊಟ್ಟರೆ ಹಣವನ್ನು ಕೊಡುತ್ತೇವೆಂದು ಹೇಳುತ್ತಾರೆ ಯಾವಕಾನೂನಿನಲ್ಲಿ ಷೇರ್ ಸರ್ಟಿಫಿಕೇಟ್ ಕೊಟ್ಟಮೇಲೆ ಮ್ಯಾನೇಜೀರಿಯಲ್ ಕಾಸ್ಟ್ಸ್ ಕೊಡಬೇಕೆಂದಿದೆಯೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಸೊಸೈಟಿಗಳಲ್ಲಿ ಇಂಥಾ ಒಂದು ಪರಿಸ್ಥಿತಿ ಇದೆ. ಈ ನ್ಯೂನತೆಗಳನ್ನು ಸರ್ಕಾರದವರು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ. ರೂರಲ್ ಕ್ರೆಡಿಟ್ ಸರ್ವೆ ಆಫ್ ಇಂಡಿಯಾ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ವೀಸ್ ಕೋಆಪರೇಟೀವ್ ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕು, ಅವುಗಳ ಮೂಲಕ ರೈತರಿಗೆ ಪ್ರತಿಯೊಂದು ಸೌಲಭ್ಯವನ್ನೂ ಒದಗಿಸಿಕೊಡಬೇಕು ಎಂದು ಹೇಳಿದ್ದಾರೆ. ಗೊಬ್ಬರ, ಬೀಜ ಮತ್ತು ಇತರ ಸಲಕರಣೆಗಳು ಸಹಕಾರ ಸಂಘಗಳ ಮುಖಾಂತರ ಸಿಕ್ಕುತ್ತವೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಈಗ ನೋಡುವುದರಲ್ಲಿ ಆ ಸೊಸೈಟಿಗಳಲ್ಲಿ ಅನೇಕ ಲೋಪ ದೋಷಗಳಿವೆ ಅವುಗಳ ಮೇಲ್ವಿಚಾರಣೆಯನ್ನು ನಡೆಸತಕ್ಕ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುವುದಿಲ್ಲ. ಇದರಿಂದಾಗಿ ಅನೇಕ ಸೊಸೈಟಿಗಳಲ್ಲಿ ಲೋಪದೋಷಗಳು ಉಂಟಾಗಿವೆ. ಕೆಲವು ಕಡೆ ಹಣದ ದುರುಪಯೋಗ ಕೂಡ ಆಗಿದೆ. ಆದಕಾರಣ ಅವುಗಳಿಂದ ರೈತರಿಗೆ ಸಿಕ್ಕಬೇಕಾದ ಸೌಲಭ್ಯಗಳು ಸರಿಯಾಗಿ ಸಿಕ್ಕುತ್ತಾ ಇಲ್ಲ. ಆದ್ದರಿಂದ ಸರ್ಕಾರದವರು ಇದನ್ನೆಲ್ಲಾ ಸರಿಪಡಿಸಬೇಕು. ವ್ಯವಸಾಯ ಇಲಾಖೆಯವರು ಗೊಬ್ಬರ ಬೀಜ ಮತ್ತು ವ್ಯವಸಾಯದ ಉಪಕರಣಗಳನ್ನು ಆಯಾ ಸ್ಥಳಗಳಲ್ಲಿರತಕ್ಕ ಸರ್ವೀಸ್ ಕೋಆಪರೇಟೀವ್ ಸೊಸೈಟಿಗಳ ಮುಖಾಂತರ ದೊರೆಯುವಂತೆ ಏರ್ಪಾಡು ಮಾಡಬೇಕು.

ಇನ್ನು ಸರ್ಕಾರದವರು ಸೊಸೈಟಿಗಳ ಮುಖಾಂತರ ರೈತರಿಗೆ ಏನು ಸಾಲವನ್ನು ಕೊಡುತ್ತಾರೆಯೋ ಅದು ರೈತರಿಗೆ ಗೊತ್ತಾಗುವುದಿಲ್ಲ, ಆದ್ದರಿಂದ ಅದು ಅವರಿಗೆ ಸರಿಯಾಗಿ ಸಿಕ್ಕುವುದಿಲ್ಲ.

(ಶ್ರೀ ಸಿ. ಆರ್. ರಂಗೇಗೌಡ)

ಈಗ ಉದಾಹರಣೆಗೆ ಹೇಳುವುದಾದರೆ ಬಾಚೇನಹಟ್ಟಿ ಸರ್ವೀಸ್ ಕೋಆಪರೇಟಿವ್ ಸೊಸೈಟಿಗೆ ಸರ್ಕಾರದವರು 16 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದನ್ನು ಅವರು ರೈತರಿಗೆ ಕೊಟ್ಟಿಲ್ಲ ಆ ಹಣದ ದುರುಪಯೋಗವಾಗಿದೆ. ಇದೇ ರೀತಿ ಜಾಲಮಂಗಲ ಕೋಆಪರೇಟೀವ್ ಸೊಸೈಟಿಗೆ 26 ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದನ್ನು ಅವರು ರೈತರಿಗೆ ಕೊಟ್ಟಿಲ್ಲ. ಅದು ದುರುಪಯೋಗವಾಗಿದೆ ಈ ವಿಷಯವನ್ನು ನಾನು ನನ್ನ ಕಟ್ ಮೋಷನ್‌ನಲ್ಲಿ ಕೂಡ ಕೊಟ್ಟಿದ್ದೇನೆ. ಈ ಸಹಕಾರ ಸಂಘಗಳಲ್ಲಿ ನಡೆಯತಕ್ಕ ಲೋಪದೋಷಗಳನ್ನು ಹಣ ದುರುಪಯೋಗವಾಗುವುದನ್ನು ನಾನು ನನ್ನ ಹಿಂದಿನ ಟರ್ಮಿನಲ್ಲಿಯೂ ಅನೇಕ ವೇಳೆ ಸರ್ಕಾರದ ಗಮನಕ್ಕೆ ತಂದಿದ್ದೇನೆ ಆದರೂ ಸಹ ಸರ್ಕಾರದವರು ಸೊಸೈಟಿಗಳಲ್ಲಿರತಕ್ಕ ಲೋಪದೋಷಗಳನ್ನು ತೊಡೆದುಹಾಕಿ ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ಕ್ರಮವನ್ನು ಕೈಗೊಂಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಜಾಯಿಂಟ್ ಫಾರ್ಮಿಂಗ್ ಕೋಆಪರೇಟಿವ್ ಸೊಸೈಟಿಗಳು ಆಗುವುದು ಬಹಳ ಮುಖ್ಯ ಅಗತ್ಯ ಎಂದು ಸರ್ಕಾರದವರು ತಿಳಿದುಕೊಂಡು ಅವುಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ ಕೆಲವು ಸೊಸೈಟಿಗಳಲ್ಲಿ ತಂದೆ ಅಧ್ಯಕ್ಷರು, ಮಗ ಸೆಕ್ರೆಟರಿ, ಹೆಂಡತಿ ಟ್ರೆಜರರು, ತಮ್ಮ ಕುಟುಂಬದವರೇ ಕೆಲವು ಸದಸ್ಯರು ಆಗಿರತಕ್ಕಂಥ ಅನೇಕ ಸೊಸೈಟಿಗಳು ಇವೆ ನನ್ನ ಕ್ಷೇತ್ರದಲ್ಲಿ ಇಂಥಾ 16 ಸೊಸೈಟಿಗಳಿವೆ ಯಾವ ಅಧಿಕಾರಿಗಳೂ ಅಲ್ಲಿಗೆ ಹೋಗಿ ಅವುಗಳನ್ನು ತನಿಖೆ ಮಾಡಿಲ್ಲ. ಆದ್ಧರಿಂದ ಈ ಸೊಸೈಟಿಗಳನ್ನು ತನಿಖೆಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆಮಾಡಬೇಕು. ಈ ಜಾಯಿಂಟ್ ಫಾರ್ಮಿಂಗ್ ಕೋಆಪರೇಟೀವ್ ಸೊಸೈಟಿಗಳು ಯಶಸ್ವಿಯಾಗಿ ನಡೆಯಬೇಕಾದರೆ ರೈತರಿಗೆ ಹೆಚ್ಚಿನ ಸಾಲ ಮತ್ತು ಇತರ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆಗಾಗ್ಗೆ ತನಿಖೆ ನಡೆಸಬೇಕು. ಮಂತ್ರಿಗಳು ಪ್ರವಾಸಮಾಡಿದಾಗ ಆ ಸೊಸೈಟಿಗಳಿಗೆ ಭೇಟಿಕೊಡಬೇಕು. ಈ ರೀತಿ ಮಾಡುವುದಾದರೆ ಅದು ಯಶಸ್ವಿಯಾಗಿ ನಡೆಯುತ್ತವೆ. ಹೆಚ್ಚು ಆಹಾರವೂ ಉತ್ಪತ್ತಿಯಾಗುತ್ತದೆ. ಬೆಟ್ಟಹಳ್ಳಿ ಮತ್ತು ವಾಡಹಳ್ಳಿ ಮತ್ತು ಹಲಸಬೆಲೆ ಸೊಸೈಟಿಗಳಿಗೆ ಎಂದು 11,500 ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅವು ಇವೆಯೋ ಇಲ್ಲವೋ ಗೊತ್ತಿಲ್ಲ. ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳಿಗೆ ದನದ ಕೊಟ್ಟಿಗೆ ಮುಂತಾದ್ದಕ್ಕೆ ಹಣ ಕೊಟ್ಟಿದೆ ಆದರೆ Cattle shed ಕಟ್ಟುವುದಕ್ಕೆ ಬದಲಾಗಿ ವಾಸದ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ ಹಣವೆಲ್ಲಾ ಏನೇನು ಆಗಿದೆಯೋ ಗೊತ್ತಿಲ್ಲ. ಅಂತೂ ಹಣ ದುರುಪಯೋಗವಾಗಿದೆ. ಈ ರೀತಿ ಹಣ ದುರುಪಯೋಗವಾದರೆ ಸೊಸೈಟಿಗಳು ಯಶಸ್ವಿಯಾಗುತ್ತವೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಬಗಿನೀಗೆರೆ ಕೂಡೊಕ್ಕಲು ಸಹಕಾರ ಸಂಘದಲ್ಲಿ ಹಣ ದುರುಪಯೋಗವಾಗಿವೆ ಎಂದು ನಾನು ಸರ್ಕಾರಕ್ಕೆ ಕಾಗದವನ್ನು ಬರೆದಿದ್ದೇನೆ. ಆದರೂ ಸಹ ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಆ ಸೊಸೈಟಿಯು ಆಡಿಟ್ ಆಗಿಲ್ಲ. ಮೊನ್ನೆ ಅದರ ಆಡಿಟ್ ಆದಾಗ ಲೆಕ್ಕಪತ್ರಗಳು ಒಂದೂ ಸರಿಯಾಗಿಲ್ಲ ಎಂದು ತಿಳಿದು ಬಂದಿದೆ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಸೊಸೈಟಿಗಳನ್ನು ಮುಚ್ಚಿರಿ ಎಂದು ನಾನು ಹೇಳುವುದಿಲ್ಲ. ಅವುಗಳು ಯಶಸ್ವಿಯಾಗಿ ನಡೆಯುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ಹೇಳಬೇಕಾದರೆ ಸ್ಮಿತಿ ಮತ್ತು ಕಾರ್‌ಪೆಂಟ್ರಿಗೆ ಸಂಬಂಧಪಟ್ಟಂತೆ ಇದ್ದಂಥಹ ಒಂದು ಸೊಸೈಟಿಯ ಬಗ್ಗೆ ನಾನು ಹಿಂದೆ ಒಂದು ಸಾರಿ ಪ್ರಶ್ನೆ ಕೇಳಿದಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಆ ಸೊಸೈಟಿ ಡಿಫಂಕ್ಟ್ ಆಗಿದೆ ಮುಚ್ಚಿ ಹೋಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆ ಸೊಸೈಟಿಯಲ್ಲಿ 2,580 ರೂಪಾಯಿಗಳ ಸಾಮಾನುಗಳನ್ನು ಮಾರಾಟಮಾಡಿದ್ದಾರೆ ಆ ಹಣವೆಲ್ಲಾ ಏನಾಯಿತು ಎಂದು ನಾನು ಪ್ರಶ್ನೆ ಕೇಳುತ್ತೇನೆ. ಆ ಸೊಸೈಟಿಗೆ ಸಂಬಂಧಪಟ್ಟಹಾಗೆ ಬ್ಯಾಂಕಿನಲ್ಲಿದ್ದ 8-10 ಸಾವಿರ ರೂಪಾಯಿಗಳಲ್ಲಿ 150 ರೂಪಾಯಿಗಳು ಮಾತ್ರ ಇದೆ. ಉಳಿದ ಹಣವೇನಾಯಿತು ? ಆ ಸೊಸೈಟಿಯನ್ನು ಮುಚ್ಚಿದ ಮೇಲೆ ಮತ್ತೆ ಅಲ್ಲಿ ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಆ ಸೊಸೈಟಿಯನ್ನ ಬೇರೆ ಕಡೆಗೆ ಹೇಗೆ ಹೊಸ ಕಟ್ಟಡಕ್ಕೆ ವರ್ಗಾಯಿಸಿದ್ದಾರೆ? ಮೊದಲು ಸೊಸೈಟಿ ಇದ್ದಂತಹ ಹಳೆಯ ಕಟ್ಟಡಗಳೂ ಹಾಗೆಯೇ ಇವೆ ಆ ಸೊಸೈಟಿಗೆ 7 ಸಾವಿರ ರೂಪಾಯಿಗಳನ್ನ ಕೊಟ್ಟು ಜಮೀನು ಕೊಂಡುಕೊಂಡಿದ್ದಾರೆ. $3\frac{1}{2}$ ಸಾವಿರ ರೂಪಾಯಿಗಳನ್ನು ಕೊಟ್ಟು ಮನೆಯನ್ನು ಕೊಂಡುಕೊಂಡಿದ್ದಾರೆ. ಕ್ರಯಪತ್ರದಲ್ಲಿ ಹನ್ನೊಂದು ಸಾವಿರವೆಂದು ನಮೂದಿಸಿ ಹಣಪೋಲಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ

ನನ್ನ ಕಟ್‌ಮೋಷನ್‌ನಲ್ಲಿ ಕೂಡ ಕೆಲವು ವಿಷಯಗಳನ್ನ ಹೇಳಿದ್ದೇನೆ. ಅವುಗಳನ್ನ ತನಿಖೆ ಮಾಡುತ್ತೀರಾ ಹೇಗೆ ಎಂಬುದನ್ನ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಹೇಳುತ್ತೇನೆ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಸಾಲ ಕೊಟ್ಟಿದ್ದಾರೆ. ಈ ದುಡ್ಡು ಯಾರದು ? ಇದು ರೈತನ ದುಡ್ಡು. ಸಾಲ ಕೊಡುವಾಗ ಸರಿಯಾಗಿ ಸೆಕ್ಯುರಿಟಿ ತೆಗೆದುಕೊಂಡಿದ್ದಾರೆಯೇ ? ಕೊಟ್ಟ ಸಾಲಕ್ಕೆ ಸರಿಯಾದ ಜಮೀನು ಇದೆಯೇ ? ಇನ್‌ವೆಸ್ಟಿಗೇಷನ್ ಮಾಡುವುದಾದರೆ ಅದಕ್ಕೆ ಸರ್ವೆ ನಂಬರ್ ಕೂಡ ಹೇಳಬೇಕಾಗುತ್ತದೆ. ಹಳ್ಳಿಗಳಿಗೆ ಯಾರೂ ಹೋಗುವುದಿಲ್ಲ. ಇತ್ತೀಚಿಗೆ ಜೋಡಿ ವಿಲೇಜ್ ಗೆಜ್ಜಗಾರುಗುಪ್ಪೆ ಎಂದು ಪ್ರೋಸ್ಟ್ ಆಗಿದೆ. ಆದರೆ ಜಮೀನು ಎಲ್ಲಿ ಇದೆ ಗೊತ್ತಿಲ್ಲ. ಆದರೂ ಈಡುಮಾಡಿ ಸಾಲ ಕೊಡಲಾಗಿದೆ. ಇಂಥ ಅವ್ಯವಹಾರ ನಡೆದಿದೆ.

ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿ ಎಂದು ಇದೆ. ಸದರಿ ಸೊಸೈಟಿಯವರು ಮನೆ ಕಟ್ಟಲು ಸಾಲಕೊಟ್ಟರು. ಸಾಲಪಡೆದವರು ಮನೆಕಟ್ಟುತ್ತಿದ್ದಂತೆಯೇ ತೀರಿಹೋದರು ಮನೆಯು ಅರ್ಧಕ್ಕೆ ನಿಂದಿದೆ. ಮನೆಯವರು ಸಾಲ ತೀರಿಸುವಮಟ್ಟದಲ್ಲಿಲ್ಲ ಸಾಲಕ್ಕಾಗಿ ಮನೆ ಹರಾಜು ಮಾಡಲು ಸ್ಥಳೀಯ ಸೊಸೈಟಿ ಮನೆ ಹರಾಜು ಮಾಡಿ ಎಂದು ಮೇಲಿನ ಅಧಿಕಾರಿಗಳಿಗೆ ರಜಿಸ್ಟ್ರಾರ್ ಅವರಿಗೆ ಕಾಗದ ಬರೆದರೂ ಕೂಡ ಅವರಿಂದ ಉತ್ತರವಿಲ್ಲ. ಕೊನೆಯದಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಯೋಜನೆಯನ್ನು ತೆಗೆದು ಹಾಕಿ ಈ ಕೆಲಸವನ್ನು ರೆವಿನ್ಯೂ ಇಲಾಖೆ ಮತ್ತು ಪಿ.ಡಬ್ಲ್ಯು.ಡಿ. ಇಲಾಖೆಗೆ ಒಪ್ಪಿಸುವುದು ಒಳ್ಳೆಯದು. ಈ ಬಗ್ಗೆ ಅನೇಕ ಸಲ ಸಲಹೆ ಕೊಟ್ಟಿದ್ದೇನೆ. ರೈತ ದಿನದಿನಕ್ಕೂ ಸಾಲಗಾರನಾಗುತ್ತಿದ್ದಾನೆ. ಇದರಿಂದ ರೈತನಿಗೆ ಅನುಕೂಲವಾಗಿಲ್ಲ. ಇಂಥ ಪರಿಸ್ಥಿತಿ ಇದೆ. ತಕ್ಕಾವಿ ಲೋನ್, ಲ್ಯಾಂಡ್ ಇಂಪ್ರೂವ್‌ಮೆಂಟಿಗಾಗಿ ಕೊಡುವ ಸಾಲ ಅಷ್ಟು ಕೊಡುತ್ತಾರೆ. ಲ್ಯಾಂಡ್ ಇಂಪ್ರೂವ್‌ಮೆಂಟಿಗೆ 50—60 ರೂಪಾಯಿ ಕೊಡುತ್ತಾರೆ. ಇದು ಏನೇನು ಸಾಲದು. ತಕ್ಕಾವಿ ಲೋನ್ 1,000—1,500 ರೂಪಾಯಿ ಕೊಡಬೇಕು. 15—20 ರೂಪಾಯಿ ಕೊಡುವುದು ಸರಿಯಲ್ಲ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಕೆರೆಗೆ ಕಟ್ಟೆ ಕಟ್ಟಿ ಬೆಂಗಳೂರು ನಗರಕ್ಕೆ ನೀರು ಕೊಡುತ್ತಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟಿಲ್ಲ. ಅನೇಕ ನೀರಾವರಿ ಬಾವಿಗಳು ಅಪೂರ್ಣವಾಗಿವೆ. ಅವುಗಳನ್ನು ಪೂರ್ತಿ ಕೆಲಸ ಮಾಡುತ್ತಿಲ್ಲ. ಮಾಗಡಿ ತಾಲ್ಲೂಕಿಗೆ ಆಗಿರತಕ್ಕ ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ಹೇಳಿ ಪೂಜ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Sri A. R. PANCHAGAVI.—(Arabhavi) Sir, I support the Demands made by the Government in respect of Demands Nos. 32, 34, 54 and 57 and I wish to offer some observations on these Demands.

The co-operative movement in our country has come to stay and it is pervading all activities of our life. The main work that is done by the co-operative societies now is to supply rural credit and from the meagre percentage of 3 per cent it was doing in 1950 or so, it has risen to more than 26 per cent and according to some even to 38 per cent and they say in Maharashtra it has reached to 45 per cent or so. I think we have to travel vast area as yet because under the new laws the agriculturists are hampered from obtaining loans from the money lenders and from private traders and the sources of borrowing are cut off. Under the new Debt Redemption Act and so many other Acts and also the licences that have to be obtained by money lenders, the sources are getting reduced and we have to rely more on these co-operative societies. So, it is not much to say that at least 55 per cent of these credit sources must be achieved within a short period, of say 10 years and that should be our target and leaving only 45 per cent to the licensed money lenders and others. We have fixed minimum limit of interest for the money lenders and even at that rate it is difficult for the cultivators to borrow. I agree that interest rates must be reduced. But in the initial stages

(SRI A. R. PANCHAGAVI)

when we have to build up capital for a society, the interest rate has to be high. For that purpose we have to mobilise the resources of the countryside and savings of the cultivators, though not much. The Government has to come to the aid of these societies by way of grants and contributing towards the share capital. Much help is given for building godowns and for the Secretaries' wages in the initial stages and it is good for development of co-operative movement. In our country and especially in our State much is paid for the sake of cultivators. Some are pessimistic about the credit increasing in the countryside. I do not think it should be the attitude. They say that with the increase in borrowing the cultivators are going to be ruined. That is not the case. Even if we take all the borrowings it may not be more than what the traders in the urban areas have. The total amount borrowed may not increase the amount that is borrowed by the traders in the urban areas. So, we need not worry. The prices of lands and agricultural commodities are increasing and on that ratio we have to increase the credit side of the amounts that are to be given to the cultivators. Whatever we have covered is not much not even 33 per cent at the rates that are prevailing in respect of the lands. When we talk of a little amount advanced to the cultivators, a view is taken by some that it is not correct. I think it is a reactionary attitude taken by those who are running the District Banks and Apex bank. They think that what they are giving to the cultivators is very much. That should not happen. If we take the value of the land of the cultivators, it amounts to lakhs of rupees but when we advance something like to 5,000 to 10,000, we say that the cultivators has borrowed large amount. Some people even say that just because a cultivator drinks tea or takes to good clothing, he has taken to the ways of easy living. That should not be the attitude. We, cultivators are not always to lead a miserable life of poverty. The minimum necessities of life should come to us and people should not think that just because we raise our standard of living a little, we are going to be ruined. That should not be the attitude. We are entitled to some relief as towns people are entitled to. We are entitled to educate our children and to bring them up in the fashion that others are doing. People think that cultivators should not educate their children or should not bring them up in the way that others are doing. That attitude should not be there. We are thinking very low of our cultivators. That should not be our attitude. That is the beaurccratic attitude that is still prevailing in most of the officers and in some of the officers of the Co-operative Department.

4-00 P.M.

Leaving aside the credit side, we have to increase the processing societies and take up processing of agricultural commodities. This is

being done on a small scale. There are some sugar factories and spinning and weaving mills which are run on co-operative basis; the rest of the processing is done mostly by big capitalists. That should not happen. Co-operatives should come forth and take up more of processing activities. The cropping pattern is changing. Irrigated cotton crop, maise crop, hybrid maize and jowar are bringing good money to the cultivators and increasing the yield. The processing societies should increasingly take up these activities. More attention should be paid to this aspect of co-operation; people should come forth and Government should help such processing institutions.

Some of the societies are being saddled with sales tax and other taxes. I may quote the instance of some of the pottery societies. Though the products are hand-made and come under the cottage industries they have to pay sales tax and even if we try to get exemption in some cases for these cottage industries, the Sales Tax Department is not willing to give them this exemption and consequently these societies have to be wound up. Same is the case with some of the handicraft societies. The Gokak Lacquer societies which are famous for their products had to suffer from a similar handicap. Such is the fate of some of these societies.

The NRS and CDP were much talked of. Now, we have to rethink about these things. The very first thing that the Government should do is to stop these institutions and send all the staff employed in them to their parent Departments; some of the staff should also be absorbed in the Taluk Development Boards and other organisations because that has been a huge wastage. That has been our experience for the last 10 years or more. We have wasted crores over that scheme and it is high time they should be wound up. These schemes have been able to give the villagers nothing; by these schemes we have not given roads or dispensaries or what the rural people require. We have forced our ideas upon these people; that should not be the attitude. We should do whatever the villagers and cultivators require. We have not been able to supply them their primary needs. From that point of view, it is high time these schemes are given up once for all. We should look to the requirements of the cultivators and a first hand idea of that will be given by the people who represent them.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ.

ಸ್ವಾಮಿ, ನನ್ನ ಸ್ನೇಹಿತರನೇಕರು ಈ ಸಹಕಾರದ ಅದ್ಯತೆ ಏನಿದೆ, ಅನುಕೂಲಗಳೇನಿವೆ, ನ್ಯೂನತೆಗಳು ಏನಿವೆ ಎನ್ನುವುದನ್ನು ಈಗಾಗಲೇ ವಿವರಿಸಿ ಹೇಳಿದ್ದಾರೆ. ಸಹಕಾರ ತತ್ವ ಬೇಡ ಎಂದು ನಮ್ಮ ದೇಶದಲ್ಲಿ ಯಾರೂ ಹೇಳುವುದಿಲ್ಲ. ಬಹಳ ಉತ್ತಮವಾದುದು ಹಳ್ಳಿ ಹಳ್ಳಿಗಳಿಗೂ, ಮನೆ ಮನೆಗೂ ಸಹಾಯ ಮತ್ತು ಅವಶ್ಯಕತೆಗಳನ್ನು ನೀಡತಕ್ಕ ಸಂಸ್ಥೆ ಎಂದು ಎಲ್ಲರೂ ತಿಳಿದು ಕೊಂಡಿದ್ದಾರೆ. ಆದರೆ ಇದು ಸಂಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡತಕ್ಕ ಜನ ಇವತ್ತು ಸ್ವಲ್ಪ ಕಡಿಮೆಯಾಗಿದ್ದಾರೆ. ಅಸೂಯೆ ಮತ್ತು ಅನಾವಶ್ಯಕವಾದ ಮಾತುಗಳು ಹೆಚ್ಚಾಗಿವೆಯೇ ವಿನಾ ಸಂಘ ಸಂಸ್ಥೆಗಳಲ್ಲಿ ಇದ್ದುದರಲ್ಲಿ ಶ್ರದ್ಧೆ ವಹಿಸಿ, ನಿಷ್ಕಾಮಂತರಾಗಿ ದಕ್ಷತೆಯಿಂದ ಕೆಲಸ ಮಾಡತಕ್ಕ ಜನ ಅನೇಕರು ಇಲ್ಲ ಎಂದು ನನ್ನ

(ಶ್ರೀ ಜಿ. ರಾಮೇಗೌಡ)

ಮನಸ್ಸಿಗೆ ಕಾಣುತ್ತಿದೆ. ಅದಕ್ಕೆ ಸಾರ್ವಜನಿಕರು ಮುಂದಾಳುಗಳು ಕಾರಣ; ಬಹುಮಟ್ಟಿಗೆ ಸರ್ಕಾರವೂ ಕಾರಣ ಎಂದು ನಾನು ಒತ್ತಿ ಹೇಳಬಯಸುತ್ತೇನೆ.

ಈಗ ಸಹಕಾರ ಸಂಸ್ಥೆಗಳು ಸರ್ಕಾರದ ಉತ್ತೇಜನದಿಂದಲೂ ಮತ್ತು ಸಾಮಾನ್ಯ ಜನರ ಇಷ್ಟದಿಂದಲೂ ಸುಮಾರು 18,800 ಸಹಕಾರ ಸಂಸ್ಥೆಗಳು ನಾನಾ ವಿಧವಾಗಿ ತಯಾರಾಗಿವೆ. ಆದರೆ ಅವುಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ, ಅವುಗಳಲ್ಲಿ ಎಷ್ಟು ಸಂಘಗಳು ಸುಸ್ತಿಯಾಗಿದೆ, ಆ ರೀತಿ ಸುಸ್ತಿಯಾಗುವುದಕ್ಕೆ ಕಾರಣವೇನು, ಅವುಗಳನ್ನು ಅಭಿವೃದ್ಧಿಪಡಿಸಬೇಕಾದರೆ ನಮ್ಮ ಕಾರ್ಯವೇನು ಎನ್ನುವುದು ಸರ್ಕಾರದ ಜವಾಬ್ದಾರಿಯೂ ಆಗಿದೆ. ಜನತೆಗೆ ಅದು ಬೇಕಿಲ್ಲದ್ದಾಗಿದೆ. ಆದ್ದರಿಂದ ಸರ್ಕಾರ ಮೊದಲು ಇದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕಾದ್ದು ಬಹಳ ಮುಖ್ಯವಾದುದು. ಇದರಲ್ಲಿ ದುರಾಡಳಿತದಿಂದ ಕೆಲವು ಸಹಕಾರ ಸಂಘಗಳು ಮುಚ್ಚಿವೆ ಎನ್ನುವುದು ಸರ್ಕಾರಕ್ಕೂ ಗೊತ್ತು, ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೂ ಗೊತ್ತು. ಆದರೆ ಇದು ಬಹುಮಟ್ಟಿಗೆ ಬೇಕು, ಬೇಡಿದಂಥ ಸಂಸ್ಥೆಗಳಾಗಿರುತ್ತವೆ. ಬಹು ಮುಖ್ಯವಾದ ವಿಷಯ ಹೇಳುವುದು ಎಂದರೆ ಯಾವಾಗ ಹಣ ದುರ್ವ್ಯಯವಾಗುತ್ತಿದೆ ಎಂದು ಸರ್ಕಾರಕ್ಕೆ ಗೊತ್ತಾಗುತ್ತದೆ, ಆ ತಕ್ಷಣ ಅದನ್ನು ಸೂಪರ್‌ಸೀಡ್ ಮಾಡಬೇಕು ಅಥವಾ ಇನ್ನು ಯಾವುದಾದರೂ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರಲ್ಲಿ ಸೂಪರ್‌ಸೀಡ್ ಒಂದು ಬಿಟ್ಟರೆ ಮತ್ತೆ ಯಾವ ಕ್ರಮವನ್ನೂ ಸುಲಭವಾಗಿ ತೆಗೆದುಕೊಳ್ಳುವುದಕ್ಕೆ ನಮ್ಮ ಆಕ್ಟ್‌ನಲ್ಲಿ ಯಾವೊಂದೂ ಪ್ರಾವಿಷನ್ ಸಹ ಇಲ್ಲ. ಸೂಪರ್‌ಸೀಡ್ ಮಾಡತಕ್ಕ ಕ್ರಮ ಸುಮಾರು ಆರು ತಿಂಗಳಾದರೂ ಬೇಕಾಗುತ್ತದೆ. ಆರು ತಿಂಗಳು ಒಬ್ಬನಲ್ಲಿ ಹಣ ಸೇರಿದ ಮೇಲೆ, 24 ಗಂಟೆಗಳಲ್ಲಿ ಖರ್ಚಾಗುವ ಹಣ ಆರು ತಿಂಗಳವರೆಗೂ ಅವನಲ್ಲೂ ಇರುವುದಿಲ್ಲ, ಅವನ ಮನೆಯಲ್ಲೂ ಇರುವುದಿಲ್ಲ, ಅವನ ವಂಶದಲ್ಲೂ ಇರುವುದಿಲ್ಲ, ಆವಾಗ ನಮ್ಮ ಸರ್ಕಾರದವರು ಹೋಗಿ ಅವನನ್ನು ಹಿಡಿದುಕೊಂಡರೆ ಅವನನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿರುವ ಅಧಿಕಾರವೇನಿದೆ ಅದನ್ನು ಆಯಾ ಸಂಘದ ಮೇಲ್ಪಟ್ಟ ಸಂಘಕ್ಕೆ ಕೊಡಬೇಕು ಅಥವಾ ಸರ್ಕಾರದವರು ಆಕ್ಟ್ ಮತ್ತು ರೂಲ್ಸನ್ನು ಜಾಗ್ರತೆಯಾಗಿ ಸರಿಪಡಿಸಬೇಕು. ಉಧಾಹರಣೆಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಗಂಟಗಾನಹಳ್ಳಿ ಸಹಕಾರ ಸಂಸ್ಥೆಯಲ್ಲಿ ಆಫೀಸ್ ಬೇರರುಗಳು ಸಹಸ್ರಾರು ರೂಪಾಯಿಗಳ ಹಣದ ದುರುಪಯೋಗ ಮಾಡಿದರು. ಇದು ನಡೆದದ್ದು ಒಂದು ವರ್ಷದ ಹಿಂದೆ. ಈ ಬಗ್ಗೆ ಪೋಲೀಸ್ ಕೇಸ್ ಕೊಟ್ಟಾಗ ಮೂರು ತಿಂಗಳ ನಂತರ ಪೋಲೀಸ್ ಸಬ್ ಇನ್‌ಸ್ಪೆಕ್ಟರು ನಿನ್ನ ಅರ್ಜಿ ಕ್ರಮವಾಗಿಲ್ಲ ಅದನ್ನು ಕ್ರಮ ಮಾಡಿ ಕಳಿಸಿ ಎಂದು ವಾಪಸ್ ಕಳಿಸಿದರು. ಎಷ್ಟರಮಟ್ಟಿಗೆ ಸರ್ಕಾರ ನಮಗೆ ಸಹಾಯ ಮಾಡುತ್ತದೆ? ಸಂಘ ಸಂಸ್ಥೆಗಳನ್ನು ಹೇಗೆ ಸರಿ ಮಾಡುವುದು ಎಂದು ಕೇಳುತ್ತೇನೆ. ಮೂರು ತಿಂಗಳಾದ ಮೇಲೆ ಅವರು ಹೇಳಿದಂತೆ ಸರಿಪಡಿಸಿಕೊಂಡು ದೂರನ್ನು ಕಳಿಸಿದರೆ, ನೀವು ಕಳಿಸುವುದಕ್ಕಿಂತ ಡೆಪ್ಯುಟಿ ರಿಜಿಸ್ಟ್ರಾರ್ ಮೂಲಕ ಬರುವುದು ಒಳ್ಳೆಯದು ಎಂದು ಹಿಂದಕ್ಕೆ ಕಳಿಸಿಕೊಟ್ಟರು. ಇಷ್ಟು ಆಗುವುದರೊಳಗೆ ಹಣ ದುರುಪಯೋಗ ಮಾಡಿದವನು ಹಣ ವಾಪಸ್ಸು ಮಾಡುವುದಕ್ಕಾಗದೆ ಕಾಂಗ್ರೆಸ್ಸಿಗೆ ಸೇರಿಕೊಂಡು ಅಧಿಕಾರಿಗಳನ್ನು ಹಿಡಿದು, ಮಂತ್ರಿಗಳನ್ನು ಹಿಡಿದು ಹಣ ದುರುಪಯೋಗ ಮಾಡಿಕೊಂಡಿರುವುದನ್ನು ಒಪ್ಪಿಕೊಂಡು ಕಾಲಹರಣ ಮಾಡುತ್ತಿದ್ದಾನೆ. ಪೋಲೀಸ್ ಅಧಿಕಾರಿಗಳು ಅವನ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಂಡಿಲ್ಲ ಇದರಿಂದ ಸಮಾಜದ ಜನಗಳು ನೀತಿ ಬಾಹಿರರಾಗುತ್ತಾರೆ. ಒಂದು ವರ್ಷವಾದರೂ ಕೇಸು ರಿಜಿಸ್ಟರ್ ಆಗದೆ ಇದ್ದರೆ ಹಣ ಹೇಗೆ ವಸೂಲಾಗುತ್ತದೆ ಎನ್ನುವುದನ್ನು ಮಂತ್ರಿಗಳು ಆಲೋಚನೆ ಮಾಡಬೇಕು.

ಹೀಗೆ ಆದಮೇಲೆ ಎಷ್ಟೋ ಜನರು ನಮ್ಮ ತಾಲ್ಲೂಕಿನಲ್ಲಿ, ಇನ್ನು ಮೇಲೆ ಸಾಲ ಪಡೆದು ಸುಮ್ಮನೆ ಇರುವುದಕ್ಕಿಂತಲೂ, ದಾವೆ ಹಾಕಿಸಿ, ಅದು ಮುಂದೆ ನಾನಾ ಹಂತಗಳಲ್ಲಿ ಹೋಗುವುದರಿಂದ 5–6 ವರ್ಷ ಆದರೂ ಮುಂದೆ ಹೋಗಬಹುದು ಎಂಬ ಒಂದು ಅಭಿಪ್ರಾಯ ಬಂದಿದೆ. ಆದ್ದರಿಂದ ಇದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವಿರಬೇಕು. ಇದೆಲ್ಲಾ ಗೊತ್ತಿದ್ದಮೇಲೆ ಈ ಸಂಸ್ಥೆಗಳು ಏಳಿಗೆಯಾಗಬೇಕಾದರೆ, ಒಂದು ಘನ ಸದುದ್ದೇಶವಿರಬೇಕೇ ಹೊರತು ಒಂದು ಸ್ವಾರ್ಥತೆಯಿಂದ ಯಾರಿಗೂ ಸಾಲ ಕೊಡಬಾರದು ಸಹಾಯ ಮಾಡಬಾರದು. ಅನೇಕ ಮಾನ್ಯ ಸದಸ್ಯರುಗಳು ಹೇಳಿದರು, ಇದರಲ್ಲಿ ಹಸ್ತಕ್ಷೇಪ ಇದೆಯೆಂದು. ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರ ಕೊಡಬೇಕು. ಆದ್ದರಿಂದ ಮನಸ್ಸು ಮಾಡಿ, ಶ್ರದ್ಧೆಯಿಂದ ಅಧಿಕಾರಿಗಳು ಸರ್ಕಾರದವರು ಕ್ರಮಬದ್ಧವಾಗಿ ಸಹಕಾರ ಸಂಸ್ಥೆಗಳ ಕೆಲಸ ಮಾಡಿದರೆ, ಭಾರತ ದೇಶದಲ್ಲಿ, ಅದರಲ್ಲೂ ಮೈಸೂರು ರಾಜ್ಯದಲ್ಲಿ ಬರುವಂತಹ ಹೆಚ್ಚಿನ ಕೀರ್ತಿ, ಇನ್ನು ಯಾವ ದೇಶದಲ್ಲೂ ಬರಲಾರದು ಎಂದು ಹೇಳು

ತ್ತೇನೆ. ಇನ್ನು ಕೆಲವು ಕೆಲಸಗಳನ್ನು ನಮ್ಮ ಸರ್ಕಾರದವರು ಮಾಡುತ್ತಾರೆ. ಕೋ-ಆಪರೇಟಿವ್ ಸೆಕ್ಟರಿನಲ್ಲಿ ಒಂದು ಮಿಲ್ ತೆರೆಯಬೇಕೆಂದು ದೊಡ್ಡಬಳ್ಳಾಪುರದಲ್ಲಿ ಲೈಸೆನ್ಸ್ ಕೊಟ್ಟರು. ನಂತರ ಅದನ್ನು ಕೊಯಂಬತ್ತೂರಿನವನೊಬ್ಬನಿಗೆ ಮಾರಿ ಬಿಟ್ಟರು. ಇದರ ಪ್ರೆಸಿಡೆಂಟ್ ಒಂದು ಲಕ್ಷ 20 ಸಾವಿರ ರೂಪಾಯಿ ಪಡೆದಿದ್ದಾರೆ. ಅವನನ್ನು ಕೇಳುವವರೇ ಇಲ್ಲ ಎಂದು ಕಾಣುತ್ತದೆ. ಈ ರೀತಿಯಿಂದ ನನಗನಿಸುತ್ತದೆ, ಮಂತ್ರಿಯವರನ್ನು ಹೊಂದಿಕೊಂಡಿದ್ದರೆ, ಒಂದು, ಎರಡು ಲಕ್ಷ ರೂಪಾಯಿ ಸಂಪಾದನೆ ಮಾಡಬಹುದೆಂದು. ನಮ್ಮ ದೇಶದಲ್ಲಿ ವಾಸ್ತವಿಕವಾಗಿ ಸಹಕಾರ ನೀತಿಯನ್ನು ಬೆಳೆಸದೆ ಇದ್ದರೆ, ಖಂಡಿತವಾಗಿಯೂ ನಮ್ಮ ದೇಶದಲ್ಲಿ ಇದು ಬೆಳೆಯುವುದು ಅಸಾಧ್ಯ. ನಮ್ಮಲ್ಲಿ ಒಂದು ಸಹಕಾರ ಸಂಘಕ್ಕೆ ಗೋಡೌನ್ ಕಟ್ಟಬೇಕೆಂದು ಸರ್ಕಾರ ಸ್ಥಳಬೇಕೆಂದು ಕೇಳಿದರೆ, ಅದು ಒಬ್ಬ ದೊಡ್ಡ ಕಾಂಗ್ರೆಸ್ ವ್ಯಕ್ತಿಗೆ ಕೊಡಬೇಕೆಂದು ಆರ್ಡರ್ ಆಗಿದೆಯೆಂದು ತಿಳಿದುಬಂದಿದೆ. ಇದು ತುಂಬಾ ಅನ್ಯಾಯ. ಸಹಕಾರ ಸಂಘಗಳಿಗೆ ಪ್ರೋತ್ಸಾಹ ನೀಡಬೇಕು. ಸರ್ಕಾರದ ಅಧಿಕಾರಿಗಳಿಗೆ ವ್ಯವಹಾರದಲ್ಲಿ ಸಹಕಾರಿ ಬ್ಯಾಂಕಿನಿಂದ ಡಿಮ್ಯಾಂಡ್ ಡ್ರಾಫ್ಟಗಳನ್ನು ನಿರಾಕರಿಸುತ್ತಾರೆ. ಷೆಡ್ಯೂಲ್ ಬ್ಯಾಂಕಿನಿಂದ ಬರಬೇಕು ಎಂದು ಒತ್ತಾಯ ಪಡಿಸುತ್ತಾರೆ. ಸಹಕಾರ ಬ್ಯಾಂಕಿನಿಂದ ಡಿಮ್ಯಾಂಡ್ ತಂದರೆ ಒಪ್ಪುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಬ್ಯಾಂಕುಗಳನ್ನು ಶೆಡ್ಯೂಲ್ಡ್ ಬ್ಯಾಂಕ್ ಆಗಿ ಮಾಡಿ. ಇದು ಕೋ-ಆಪರೇಟಿವ್ ಬ್ಯಾಂಕ್ ಅಪೆಕ್ಸ್ ಬ್ಯಾಂಕಿನ ಬ್ರಾಂಚಾಗಿದೆ. ಸೆಂಟ್ರಲ್ ಬ್ಯಾಂಕ್‌ಗಳನ್ನು ಶೆಡ್ಯೂಲ್ಡ್ ಬ್ಯಾಂಕಾಗಿ ಡಿಕ್ಲೇರ್ ಮಾಡಿ ಎಂದರೆ, ಮಾಡುತ್ತಾ ಇಲ್ಲ. ಸಹಕಾರಿ ತತ್ವದ ಮೇಲೆ ಪ್ರೀತಿ, ವಿಶ್ವಾಸವಿದ್ದರೆ ಈ ಆರ್ಡರ್ ಮಾಡಿ ಎಂದರೂ ಮಾಡುತ್ತಾ ಇಲ್ಲ. ನಿಜವಾಗಿಯೂ ಸರ್ಕಾರಕ್ಕೆ ಇಂಥ ಸಂಸ್ಥೆಗಳ ಮೇಲೆ ಪ್ರೇಮ ಬಂದರೆ ಏಕೆ ಸರಿಯಾಗುವುದಿಲ್ಲವೆಂದು ನಾನು ಬೇಕಾದರೆ, ಚಾಲೆಂಜ್ ಮಾಡುತ್ತೇನೆ. ಬಡವರಿಗೆ ಮೊದಲು ಸಹಾಯ ಮಾಡಿ. ರಿಸರ್ವ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಈ ಎಲ್ಲಾ ಬ್ಯಾಂಕುಗಳು ಸಹಕಾರಿ ಸಂಸ್ಥೆಗಳಿಗೆ ಹಣ ಕೊಡಬೇಕು. ಕಳೆದ ಎರಡು ಸಾಲುಗಳಲ್ಲಿ ಬರಗಾಲದ ದೆಸೆಯಿಂದ, ಮಳೆಯಿಲ್ಲದ ದೆಸೆಯಿಂದ ಕಷ್ಟ ಪಡುತ್ತಿರುವ ರೈತನಿಗೆ ಬಹಳ ಸಹಾಯವಾಗುತ್ತದೆ. ಸರ್ಕಾರ ಕಿವಿ ಕೇಳಿಸದಂತೆ ಇದ್ದರೆ ಈ ಸಂಸ್ಥೆಗಳು ಹೇಗೆ ಸರಿಯಾಗುತ್ತವೆ ? ರಿಸರ್ವ್ ಬ್ಯಾಂಕಿನವರು ಹೇಳುವುದರಲ್ಲಿ ಫಿಲಾಸಫಿ ಇಲ್ಲಾ. ಆದರೆ ಒಂದು ತತ್ವವನ್ನು ಅನುಸರಿಸಬೇಕು. ಹಾಗೆ ಮಾಡದಿದ್ದರೆ ಧನ ಸಹಾಯದಲ್ಲಿ ರಿಸರ್ವ್ ಬ್ಯಾಂಕಿನವರು ಕೈಬಿಟ್ಟು ಬಿಟ್ಟರೆ ಇವತ್ತಿನ ದಿವಸ 5–6 ಬ್ಯಾಂಕುಗಳು ನಡೆಯುತ್ತಿದ್ದದ್ದು ಅದು ಕೂಡ ನಡೆಯುವುದು ಬಹಳ ಕಷ್ಟವಾಗಿ ನಿಂತುಹೋಗುವ ಪರಿಸ್ಥಿತಿ ಬರುತ್ತದೆ. ಅಪೆಕ್ಸ್ ಬ್ಯಾಂಕ್ ಸೆಂಟ್ರಲ್ ಬ್ಯಾಂಕ್, ಇವೆರಡು ಧನ ಸಹಾಯವನ್ನು ಮಾಡಿದರೆ ಸರಿಹೋಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟ ಮತ್ತು ಇದು ಸರಿಹೋಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ವರ್ಷ ರಿಸರ್ವ್ ಬ್ಯಾಂಕಿನ ಧನ ಸಹಾಯ ಬಾರದಿದ್ದರೆ ಸರ್ಕಾರ ದೊಡ್ಡ ಮನಸ್ಸು ಮಾಡಿ ಒಂದು ಕೋಟಿ ರೂಪಾಯಿ ಯಾದರೂ ಕೊಟ್ಟು ರೈತರ ಕಷ್ಟ ಪರಿಹಾರ ಮಾಡಬೇಕು. ಜಿಲ್ಲಾ ಕೇಂದ್ರ ಬ್ಯಾಂಕ್‌ಗಳನ್ನು ಸುಧಾರಿಸಬೇಕು.

ಈಗ ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಅಪೆಕ್ಸ್ ಸಂಸ್ಥೆಗಳಲ್ಲಿ ನಮ್ಮ ಸರ್ಕಾರ ಯಾವ ಉದ್ದೇಶದಿಂದ ಸಹಕಾರ ತತ್ವದಲ್ಲಿ ನಂಬಿಕೆ ಇಲ್ಲದಿರತಕ್ಕ ಜನರನ್ನು ಮೇನೇಜಿಂಗ್ ಡೈರೆಕ್ಟರನ್ನಾಗಿ ಮಾಡಿರುತ್ತಾರೆಂದು ಗೊತ್ತಾಗುವುದಿಲ್ಲ. ಇದಕ್ಕೆ ಕಾರಣವೇನು ? ಒಂದು ಕಡೆ ಈಗಿನ ಅರ್ಥಿಕ ಮಂತ್ರಿಗಳು, 5 ವರ್ಷದ ಹಿಂದೆ ಒಂದು ಮಾತು ಹೇಳಿದರು. ಅದೇನೆಂದರೆ ಇನ್ನು ಒಂದು ವರ್ಷದೊಳಗೆ ಸರ್ಕಾರಿ ಅಧಿಕಾರಿಗಳು ಈ ಸಂಸ್ಥೆಯಲ್ಲಿರಕೂಡದು, ನಾನು ಕೂಡ ಇರಕೂಡದು ಎಂದು ಹೇಳಿದ್ದರು. ಆದರೆ ಇವತ್ತಿನ ದಿವಸ ನೋಡಿದರೆ, ರೆವೆನ್ಯೂ ಇಲಾಖೆಯ ಅಧಿಕಾರಿಗಳಿದ್ದಾರೆ. ಆ ಇಲಾಖೆಯ ಮೇಲೆ ಈ ಇಲಾಖೆ ಒಂದು ಕಾಂಪಿಟೀಶನ್ ನಡೆಯುತ್ತಿದೆ ಎಂಬಂತೆ ಅಧಿಕಾರಿಗಳನ್ನು ಇಟ್ಟಿದ್ದಾರೆ. ಅದರ ಜೊತೆಗೆ ಅಪೆಕ್ಸ್ ಬ್ಯಾಂಕ್ ಡೈರೆಕ್ಟರುಗಳ ಜೊತೆಗೆ ಕೆಲವು ಕಡೆ ಮೇನೇಜಿಂಗ್ ಡೈರೆಕ್ಟರ್ ಇಬ್ಬರನ್ನೂ ಬೇರೆ ಸ್ಥಳದಿಂದ ತಂದು ಸಹಸ್ರಾರು ರೂಪಾಯಿ ಸಂಬಳ ಕೊಟ್ಟು ಆಡಳಿತ ನಡೆಸುತ್ತಿದ್ದಾರೆ. ಒಂದು ಕಡೆ ನಿಮ್ಮದು ಸಮೃದ್ಧಿ ರಾಜ್ಯವಾಗಬೇಕು, ಇನ್ನೊಂದು ಕಡೆ ಬೇಕಾದಷ್ಟು ಹಣವನ್ನು ಹೀಗೆ ಅಧಿಕಾರಿಗಳನ್ನು ತಂದು ಹಾಕಿಕೊಡುತ್ತಿದ್ದೀರಿ. ಈ ಇಬ್ಬಂದಿಯ ತತ್ವದಿಂದ ನಮ್ಮನ್ನು ಇಬ್ಬಂದಿಯಾಗಿ ಮಾಡುತ್ತಿದ್ದೀರಿ. ಆದ್ದರಿಂದ ದಯವಿಟ್ಟು ಸರ್ಕಾರದ ಮ್ಯಾನೇಜಿಂಗ್ ಡೈರೆಕ್ಟರನ್ನು ವಾಪಸ್ಸು ತೆಗೆಯಬೇಕು. ಈಗ ಮೈಸೂರು ರಾಜ್ಯದ ಮಾರ್ಕೆಟಿಂಗ್ ಸಂಘದಲ್ಲಿ ಇಲಾಖೆಯವರನ್ನು ಹಾಕಿದ್ದಾರೆ, ಅದು ಹಾಕಲಿ, ಸಂತೋಷ. ಸರ್ಕಾರದ ಷೇರುಗಳಿವೆ, ಅದರ ಬಂದೋಬಸ್ತು ನೀವು ನೋಡಿಕೊಳ್ಳಬೇಕು.

ಇನ್ನು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ. ಅಲ್ಲಿ ಕೆಲವರು ಹೇಳುತ್ತಾರೆ—ಗೊಬ್ಬರ ಮಾರುತ್ತಾರೆ, ಲುಕ್ಸಾನು ಆಗುತ್ತದೆ, ಕಳ್ಳತನವಾಗುತ್ತದೆ ಎಂದು. ಅಲ್ಲಿ ಗೊಬ್ಬರ ಕೊಟ್ಟು ಮಾರು

(ಶ್ರೀ ಜಿ. ರಾಮೇಗೌಡ)

ವುದನ್ನು ನಿಲ್ಲಿಸಬೇಕು. ಅಲ್ಲಿ ಆಹಾರಧಾನ್ಯಗಳನ್ನೇ ಕೊಂಡು ತಂದು ಮಾರಾಟ ಮಾಡಬೇಕು. ಅದು ಅದರ ಮುಖ್ಯ ಕರ್ತವ್ಯ. ಅದನ್ನು ಮಾಡದೆ, ಅದು ಇವತ್ತು ಒಂದು ಕಮಿಶನ್ ಏಜೆಂಟಾಗಿ ಕೆಲಸಮಾಡುತ್ತಿದೆ. ಅದರ ಬೈಲಾವನ್ನು ಬದಲಾವಣೆ ಮಾಡಬೇಕು. ಇವತ್ತಿನ ದಿವಸ ಪದಾರ್ಥಗಳು ಬೆಳೆಯುವವರ—ತಿನ್ನುವವರ ಮಧ್ಯೆ ಇರತಕ್ಕ ದಳ್ಳಾಳಿಗಳ ಹಾವಳಿಯಿಂದ ಈ ರೀತಿ ಯಾಗುವುದನ್ನು ಖಂಡಿತವಾಗಿಯೂ ತಪ್ಪಿಸಬೇಕು. ಆಹಾರಪದಾರ್ಥಗಳ ಬೆಲೆ ವಿಪರೀತ ಏರಲೂ ಇದೂ ಒಂದು ಕಾರಣ. ಆ ಸಂಘದಲ್ಲೂ, ಡೈರೆಕ್ಟರನ್ನು ಇಟ್ಟಿದ್ದಾರೆ. ಅವರನ್ನು ಇಟ್ಟರೆ ಇವತ್ತು ಏನೂ ಅಭಿವೃದ್ಧಿಯಾಗಲಾರದು. ದಯವಿಟ್ಟು ತಾವು ಇವರುಗಳನ್ನು ತೆಗೆಯಲು ಮನಸ್ಸು ಕೊಡಬೇಕು. ಸಹಕಾರಿ ಸಂಸ್ಥೆಗಳಿಗೆ ಹಣ ಸಾಲದೆ ಇರುತ್ತದೆ. ಮತ್ತು ಈ ಪಂಚಾಯಿತಿಯವರು, ಮುನಿಸಿಪಾಲಿಟಿಯವರು, ಮತ್ತು ಇತರ ಕಾರ್ಪೊರೇಶನಿನವರಿಗೆ ಇರತಕ್ಕಂತ ಹಣವನ್ನು ಈಗಿನ ಆಕ್ಟ್ ಪ್ರಕಾರ ಅವರು ಶೆಡ್ಯೂಲ್ಡ್ ಬ್ಯಾಂಕಿನಲ್ಲೇ ಹಣವನ್ನು ಇಡುತ್ತಿದ್ದಾರೆ. ಇದನ್ನು ಜಿಲ್ಲಾ ಬ್ಯಾಂಕಿನಲ್ಲಿ ಅಥವಾ ಬ್ರಾಂಚಿಗೆ ಕೊಡಬೇಕೆಂದು ಕಳೆದ 6 ವರ್ಷಗಳಿಂದಲೂ ಕೇಳುತ್ತಿದ್ದೇವೆ. ಅದನ್ನು ಜಿಲ್ಲಾಧಿಕಾರಿಗಳನ್ನು ಕೇಳಿ ಕೊಡಬಹುದು. ನನಗನಿಸುತ್ತದೆ, ಇದಕ್ಕೆ ಹಣಕಾಸಿನ ಮಂತ್ರಿಯವರು ಅಡ್ಡಿ ಬರುತ್ತಾರೆ, ಯಾವುದೋ ಅನುಕೂಲಕ್ಕೋಸ್ಕರ ಒಳಗಿಂದೊಳಗೆ ಕ್ಯಾಬಿನೆಟಿನಲ್ಲಿ ಇದಕ್ಕೆ ಒಪ್ಪುತ್ತಾ ಇಲ್ಲವೆಂದು ತಿಳಿದುಬಂದಿದೆ. ಖಂಡಿತವಾಗಿ ಇದು ಸರಿಯಲ್ಲ. ನಿಜವಾಗಿ ನಿಮಗೆ ಸಹಕಾರ ತತ್ವಗಳಲ್ಲಿ ನಂಬಿಕೆ ಇದ್ದರೆ, ಸಹಕಾರ ತತ್ವಗಳನ್ನು ಉದ್ಧಾರ ಮಾಡಬೇಕೆಂಬ ಆಶೆ ಇದ್ದರೆ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಇಟ್ಟಿರುವ ಹಣವನ್ನು ಸಹಕಾರ ಬ್ಯಾಂಕ್‌ಗಳಿಗೆ ಟ್ರಾನ್ಸ್‌ಫರ್ ಮಾಡಬೇಕು; ಮತ್ತು ಈಗಿರುವ ಎನ್‌ಡೋ ಮೆಂಟ್‌ನ ಎಲ್ಲಾ ಹಣವನ್ನು ಸಹ ನಮ್ಮ ಸಹಕಾರ ಬ್ಯಾಂಕ್‌ಗಳಿಗೆ ಟ್ರಾನ್ಸ್‌ಫರ್ ಮಾಡಬೇಕು. ಈಗ ಎಲ್ಲೆಲ್ಲಿ ಸರ್ಕಾರಿ ಅಧಿಕಾರಿಗಳು ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿದ್ದಾರೋ ಆ ಸಂಘದ ಫಿಕ್ಸೆಡ್ ಡಿಫಾಜಿಟ್ ಹಣವನ್ನು ವೈಯಕ್ತಿಕ ಲಾಭಕ್ಕಾಗಿ ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಇಟ್ಟಿ ದ್ದೀರಿ. ಈ ಬಗ್ಗೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಮತ್ತು ಸ್ಟೇಟ್ ಬ್ಯಾಂಕ್‌ನಲ್ಲಿ ಡೆಫಾಜಿಟ್ ಇಟ್ಟಿದ್ದೀರಿ. ಆ ಹಣವನ್ನು ಜಾಗ್ರತೆ ಕೋ-ಆಪರೇಟಿವ್ ಟ್ರಾನ್ಸ್ ಫರ್ ಮಾಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಆದರೆ ನೀವು ಟ್ರಾನ್ಸ್‌ಫರ್ ಮಾಡುತ್ತಿಲ್ಲ. ಸರ್ಕಾರದಲ್ಲಿ ವೆಸ್ಟೆಡ್ ಇನ್ಟರೆಸ್ಟ್ ಇದೆ. ಸರ್ಕಾರದ ಅಧಿಕಾರಿಗಳಲ್ಲಿ ವೆಸ್ಟೆಡ್ ಇನ್ಟರೆಸ್ಟ್ ಇದೆ. ನಮ್ಮದೇನು ವೆಸ್ಟೆಡ್ ಇನ್ಟರೆಸ್ಟ್ ಇಲ್ಲ. ಈ ಹಣವನ್ನು ಷೆಡ್ಯೂಲ್ ಬ್ಯಾಂಕ್‌ನಲ್ಲಿ ಇಟ್ಟಿದ್ದೀರೆಂದು ಗೊತ್ತಾಗಿದೆ. ಅದನ್ನು ಏತಕ್ಕೆ ಕೋ-ಆಪರೇಟಿವ್ ಬ್ಯಾಂಕ್‌ಗೆ ಟ್ರಾನ್ಸ್‌ಫರ್ ಮಾಡಬಾರದೆಂದು ಕೇಳುತ್ತೇನೆ. ಮೊನ್ನೆ ಸಹಕಾರ ಮಂತ್ರಿಗಳು ಉತ್ತರ ಕೊಡುತ್ತಾ, ಏನಾದರೂ ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗವಾಗಿದೆಯೆಂದು ತಿಳಿದುಬಂದರೆ, ಸಂಬಂಧಪಟ್ಟವರ ಮೇಲೆ ದಾವ ಹಾಕುತ್ತೇವೆ, ಅವರನ್ನು ಸಿವಿಲ್ ಕೋರ್ಟಿಗೆ ಎಳೆಸಿ, ಅವರ ಜೀವ ತೆಗೆದು ನಿಮಗೆ ಸಂತೋಷ ಪಡಿಸುತ್ತೇನೆಂದು ಹೇಳಿದರು. ಅದನ್ನು ಯಾವ ರೀತಿ ಮಾಡುತ್ತಾರೆಂಬುದನ್ನು ಕಾದು ನೋಡ ಬೇಕೆಂದಿದ್ದೇನೆ. ನಮ್ಮ ಹಣ ಅಂದರೆ ಜನರ ಹಣವನ್ನು ಷೆಡ್ಯೂಲ್ ಬ್ಯಾಂಕ್‌ನಲ್ಲಿ ಇಟ್ಟು ಅವರನ್ನು ಸಾಹುಕಾರರನ್ನಾಗಿ ಮಾಡುತ್ತಿದ್ದೀರಿ. ಅದು ಸರಿಯಲ್ಲ ಆ ಹಣವನ್ನು ಒಂದು ವಾರದೊಳಗೆ ಕೋ-ಆಪರೇಟಿವ್ ಬ್ಯಾಂಕ್‌ಗೆ ಟ್ರಾನ್ಸ್‌ಫರ್ ಮಾಡಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಮಾನ್ಯ ಸಭಾಪತಿಗಳೇ, ಈ ದಿವಸ ಸಭೆಯ ಮುಂದೆ ನಮ್ಮ ಮಾನ್ಯ ಸಹಕಾರ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈಗ ನಮ್ಮ ದೇಶದಲ್ಲಿ ಪಂಚಾಯಿತಿ ರಾಜ್ಯ ಚೆನ್ನಾಗಿ ಅಭಿವೃದ್ಧಿಯಾಗಬೇಕು, ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಅವುಗಳ ಆಡಳಿತ ಸುಗಮವಾಗಿ ನಡೆಯಬೇಕು, ದೇಶದಲ್ಲಿ ಪ್ರಜಾಪ್ರಭುತ್ವ ಸುಭದ್ರವಾಗಿ ನಡೆಯಬೇಕಾದರೆ ಪಂಚಾಯಿತಿಯ ಆಡಳಿತ ತಳಹದಿ, ಅದು ಚೆನ್ನಾಗಿರಬೇಕೆನ್ನುವ ಆಧಾರದಮೇಲೆ 1960ನೆ ಇಸವಿಯಲ್ಲಿ ಹೊಸ ಪಂಚಾಯಿತಿ ಕಾನೂನನ್ನು ಜಾರಿಗೆ ತಂದಾಯಿತು. ಈಗ್ಗೆ 7 ವರ್ಷಗಳಿಂದಲೂ ಹೊಸ ಕಾನೂನಿನಂತೆ ಪಂಚಾ ಯಿತಿಗಳು ಕೆಲಸ ಮಾಡುತ್ತಾ ಬಂದಿವೆ. ಆದರೂ ಸಹ ಪಂಚಾಯಿತಿಗಳಿಗೆ ಅಧಿಕಾರ ಕೊಟ್ಟರ ತಕ್ಕಂಥದ್ದು ಮತ್ತು ಪಂಚಾಯಿತಿಗಳು ಎಷ್ಟರಮಟ್ಟಿಗೆ ಅಧಿಕಾರಗಳನ್ನು ಉಪಯೋಗಿಸಿಕೊಳ್ಳ ಬೇಕೆನ್ನುವ ವಿಷಯ ಇನ್ನೂ ಕಾಗದದ ಮೇಲೆಯೇ ಉಳಿದಿವೆ. ಕಾರ್ಯತ: ಪಂಚಾಯಿತಿಗಳು ಅಧಿಕಾರಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗಿಲ್ಲ. ಪಂಚಾಯಿತಿಗಳ ಕೆಲಸಗಳು ಆರು ವರ್ಷಗಳಿಂದಲೂ ಸುಗಮವಾಗಿ ನಡೆದುಕೊಂಡು ಬಂದಿಲ್ಲ. ಅದಕ್ಕೆ ಕಾರಣವೆಂದರೆ,

ಪಂಚಾಯಿತಿ ಅಧ್ಯಕ್ಷರುಗಳಿಗೂ, ಪಂಚಾಯಿತಿಗೆ ಸೇರಿದ ಖಾಸಗೀ ಸಂಸ್ಥೆಗಳಿಗೂ ಮತ್ತು ಪಂಚಾಯಿತಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಹೊಂದಾಣಿಕೆಗಳು ಸಮರ್ಪಕವಾಗಿ ಇಲ್ಲದಿರುವುದರಿಂದ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಪಂಚಾಯಿತಿಗಳಲ್ಲಿ ಲೆಕ್ಕವಿಡುವುದು ಸಮರ್ಪಕವಾಗಿಲ್ಲ. ಬಹುಕಾಲದಿಂದಲೂ ಪಂಚಾಯಿತಿಗಳಲ್ಲಿ ಲೆಕ್ಕಪತ್ರಗಳನ್ನು ಇಡುವ ಸಂಪ್ರದಾಯವಿಲ್ಲ. ಅನೇಕ ವೇಳೆ ಒಬ್ಬನ ಹೆಸರಿನಲ್ಲಿ ಸುಮಾರು 25-30 ಮನೆಗಳು ಇರುತ್ತವೆ, ಅವುಗಳಲ್ಲಿ ಬೇರೆಯವರು ವಾಸ ಮಾಡುತ್ತಿರುತ್ತಾರೆ. ಪಂಚಾಯಿತಿಗಳು ಮನೆಗಳ ಬಗ್ಗೆ ಹೊಸ ಪಟ್ಟಿಯನ್ನು ತಯಾರು ಮಾಡಿಲ್ಲ. ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿಲ್ಲ. ಇಡುವುದಕ್ಕೆ ಅವಕಾಶವಾಗಿಲ್ಲ. ಇತ್ತೀಚೆಗೆ ಪಂಚಾಯಿತಿಗಳಿಗೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿದ್ದೀರಿ, ಅವರಿಗೆ ಸರಿಯಾದ ತರಬೇತಿ ಕೊಟ್ಟಿರುವುದಿಲ್ಲ, ಅವರಿಗೆ ಸರಿಯಾದ ಅನುಭವವಿರುವುದಿಲ್ಲ. ಇದರಿಂದ ಕೆಲಸ ತೆಗೆದುಕೊಳ್ಳುವವರು ಒಬ್ಬರಾದರೆ, ಸಂಬಳ ಕೊಡುವವರು ಬೇರೆಯವರು. ಈ ರೀತಿಯಿರುವುದರಿಂದ ಅವರು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಪಂಚಾಯಿತಿ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವುದಕ್ಕೆ ಅವಕಾಶವಾಗುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದವರು ಈ ವಿಷಯದಲ್ಲಿ ಯೋಚನೆ ಮಾಡಿ ಯಾವುದಾದರು ಒಂದು ನಿಯಮವಿಟ್ಟು ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಹೊಸದಾಗಿ ಕಾನೂನು ರಚನೆಯಾದಾಗಿನಿಂದ ಇವತ್ತಿನವರೆಗೂ ಸರಿಯಾಗಿ ಪಂಚಾಯಿತಿಯವರು ಕಂದಾಯ ವಸೂಲು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಅಸೆಸ್‌ಮೆಂಟ್ ರಿಜಿಸ್ಟರ್ ಇಲ್ಲದಿರುವುದು. ಸರಿಯಾಗಿ ಕಂದಾಯ ವಸೂಲು ಮಾಡದಿದ್ದರೆ ಪಂಚಾಯಿತಿಗಳಲ್ಲಿ ಹಣವಿರುವುದಿಲ್ಲ. ಹಣವಿಲ್ಲದಿದ್ದರೆ ಯಾವ ಕಾಮಗಾರಿ ಕೆಲಸಗಳನ್ನು ಮಾಡಿಸುವುದಕ್ಕಾಗುವುದಿಲ್ಲ. ನಾವು 20 ವರ್ಷಗಳು ಮುಂದೆ ಇದ್ದೇವೆಂದು ಹೇಳುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿದರೆ ನಾವು 20 ವರ್ಷಗಳು ಹಿಂದೆ ಇದ್ದೇವೆ, 20 ವರ್ಷ ಮುಂದೆ ಬಂದಿಲ್ಲವೆನ್ನುವುದು ಗೊತ್ತಾಗುತ್ತದೆ ಪಂಚಾಯಿತಿಯ ಆಡಳಿತ ವ್ಯವಸ್ಥೆ ಸರಿಯಾಗಿಲ್ಲ. ಒಂದು ತಾಲ್ಲೂಕಿನಲ್ಲಿರುವ 50-60 ಪಂಚಾಯಿತಿಗಳಿಗೆ ಒಬ್ಬ ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರ್ ಇರುತ್ತಾರೆ. ಅವರು 50-60 ಪಂಚಾಯಿತಿಗಳನ್ನು ತನಿಖೆ ಮಾಡುವುದಕ್ಕಾಗಲಿ, ಪರಿಶೀಲನೆ ಮಾಡುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಪಂಚಾಯಿತಿಗಳು ಸರಿಯಾಗಿ ನಡೆಯಬೇಕಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯಿತಿಗಳಿಂದ ಅಭಿವೃದ್ಧಿ ಕೆಲಸಗಳಾಗಬೇಕಾದರೆ, 10 ಅಥವಾ 15 ಪಂಚಾಯಿತಿಗಳಿಗೆ ಒಬ್ಬ ಎಕ್ಸ್‌ಟೆನ್‌ಷನ್ ಆಫೀಸರ್‌ನ್ನು ನೇಮಕ ಮಾಡಬೇಕು. ಆಗ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. 15 ಪಂಚಾಯಿತಿಗಳಿಗೆ ಒಬ್ಬ ಎಕ್ಸ್‌ಟೆನ್‌ಷನ್ ಆಫೀಸರ್ ಇದ್ದರೆ, ಅವರು ಪ್ರತಿ ತಿಂಗಳು ಪಂಚಾಯಿತಿಗಳನ್ನು ಪರಿಶೀಲನೆ ಮಾಡುವುದಕ್ಕೆ, ತನಿಖೆ ಮಾಡುವುದಕ್ಕೆ ಅವಕಾಶವಿರುತ್ತದೆ. ಸಾಕಷ್ಟು ಸಮಯವಿರುತ್ತದೆ. ಮತ್ತು ಅವರು ಪಂಚಾಯಿತಿಗಳು ಸರಿಯಾದ ರೀತಿಯಲ್ಲಿ ನಡೆಮಕೊಂಡು ಹೋಗುವುದಕ್ಕೆ ಒಳ್ಳೆಯ ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಾದರೆ ಮಾತ್ರ ಪಂಚಾಯಿತಿಗಳಲ್ಲಿ ಹೆಚ್ಚಿನ ಕೆಲಸಕಾರ್ಯಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರಕೊಟ್ಟಿದ್ದೇವೆ, ಅವರು ಏನು ಬೇಕಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಿಸಬಹುದೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಸರ್ಕಾರದವರು ಅಧಿಕಾರ ಕೊಟ್ಟಿರುವುದು ನಾಮಕಾವಸ್ಥೆಗೆಂದು ಕಾಣುತ್ತದೆ. ಇವತ್ತು ನಿಜವಾಗಿ ಪಂಚಾಯಿತಿಗಳಿಂದ ಅಭಿವೃದ್ಧಿಯ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ನಿಜವಾಗಿ ಹೇಳಬೇಕಾದರೆ, ಪಂಚಾಯಿತಿಯ ಅಧ್ಯಕ್ಷರುಗಳು ನಡೆಸುವ ಅನೇಕ ಕಾರ್ಯಗಳಲ್ಲಿ ಅಧಿಕಾರಿಗಳು ಇನ್ಸರ್‌ಫಿಯರ್ ಆಗಿ, ಯಾವ ಕೆಲಸಗಳೂ ಸರಿಯಾಗಿ ಆಗದೆ ಬಹಳಮಟ್ಟಿಗೆ ನಿಂತುಹೋಗಿವೆ. ಈ ಪ್ರಕಾರ ಕೆಲಸಗಳಲ್ಲಿ ಕುಂದುಂಟಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಪಂಚಾಯಿತಿಗಳು ಯಶಸ್ವಿಯಾಗಿ ನಡೆಯಬೇಕಾದರೆ, ಗ್ರಾಮಾಂತರಗಳಲ್ಲಿ ಅಭಿವೃದ್ಧಿಕಾರ್ಯಗಳು ಯಶಸ್ವಿಯಾಗಿ ನಡೆಯಬೇಕಾದರೆ ಪಂಚಾಯಿತಿ ಇನ್ಸ್‌ಪೆಕ್ಟರ್ ಮೂಲಕ ಸಹಾಯ ಒದಗಿಸುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅನೇಕ ಸಂದರ್ಭಗಳಲ್ಲಿ 20 ರೂಪಾಯಿಗಳ ಒಂದು ಕೆಲಸವಾಗಬೇಕಾದರೆ ಒಂದು ಎಸ್ಟಿಮೇಟ್ ತಯಾರು ಮಾಡಿ, ಅದನ್ನು ಚೀಫ್-ಎಕ್ಸಿಕ್ಯೂಟಿವ್ ಆಫೀಸರ್‌ಗೆ ಮಂಜೂರಾತಿಗಾಗಿ ಕಳಿಸಬೇಕು. ಈ ರೀತಿ ಸಣ್ಣ ಸಣ್ಣ ಕೆಲಸಕಾರ್ಯಗಳಿಗೆಲ್ಲಾ ಎಸ್ಟಿಮೇಟ್ ಮಾಡಿ ಮಂಜೂರಾತಿಗೆ ಕಳಿಸಬೇಕೆಂದರೆ ನಿಜವಾಗಿ ನಾವು ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. 50—60 ಪಂಚಾಯಿತಿಗಳಿಂದ ಮಂಜೂರಾತಿಗಾಗಿ ಎಸ್ಟಿಮೇಟ್‌ಗಳನ್ನು ಮಾಡಿ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಕಳಿಸಿದರೆ, ಅವರು ಅದನ್ನು ಸ್ಕ್ರೂಟಿನಿ ಮಾಡಿ ಮತ್ತೆ ಪಂಚಾಯಿತಿಗಳಿಗೆ ಕಳಿಸಬೇಕಾದರೆ ಮೂರು

(ಶ್ರೀ ಬಿ. ಎಚ್. ರಾಮೇಗೌಡ)

ನಾಲ್ಕು ತಿಂಗಳಾಗುತ್ತದೆ. ಇದರಿಂದ ಯಾವ ಕೆಲಸವೂ ಸುಸೂತ್ರವಾಗಿ ನಡೆಯುವುದಕ್ಕೆ ಅವಕಾಶವಾಗುತ್ತಿಲ್ಲ. ಎನ್.ಇ.ಎಸ್. ಸ್ಕೀಮು'ಗೆ ಈಗ ನಮ್ಮ ದೇಶದಲ್ಲಿ ಜಾರಿಯಲ್ಲಿದೆ. ಆ ಇಲಾಖೆಯವರು ಅನೇಕ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ನಾವು ಈ ಇಲಾಖೆಯಿಂದ ಎಷ್ಟು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಕೆಲಸಗಳು ನಡೆದಿಲ್ಲ. ಕೇವಲ ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕೆ ಈ ಒಂದು ಎನ್.ಇ.ಎಸ್. ನ್ನು ಸ್ಥಾಪನೆ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯಿಂದ ಯಾವ ಅಭಿವೃದ್ಧಿ ಕೆಲಸಗಳೂ ಆಗಿಲ್ಲ. ಸರ್ಕಾರದವರು ಈ ಇಲಾಖೆಯ ಸಿಬ್ಬಂದಿಗಾಗಿ ಹಣ ಖರ್ಚು ಮಾಡುತ್ತಿರುವುದು ವ್ಯರ್ಥವೆಂದು ಕಾಣುತ್ತದೆ. ಇವರ ಕೆಲಸ ಬರೀ ಬಾವಿ ತೋಡಿಸುವುದು ಅಷ್ಟೇ ಎಂದು ಕಾಣುತ್ತದೆ. ಈ ರಾಷ್ಟ್ರೀಯ ವಿಸ್ತರಣ ಯೋಜನೆ ಜಾರಿಗೆ ಬಂದಾಗಿನಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅನುಕೂಲವಾಗುವಂಥ ಯಾವ ಕೆಲಸಗಳೂ ನಡೆಯುವುದಕ್ಕೆ ಅವಕಾಶವಾಗಿಲ್ಲ.

4-30 P.M.

ಈ ದೃಷ್ಟಿಯಿಂದ ಈಗಾಗಲೆ ಸರಕಾರ ಡೆಪ್ಯುಟಿ ಬಿ.ಡಿ.ಓ. ವಿ.ಎಲ್.ಡಬ್ಲ್ಯು. ಗಳನ್ನು ತೆಗೆದು ಬೇರೆಕೆಲಸಗಳಿಗೆ ಹಾಕಬೇಕೆಂದು ಹೇಳುತ್ತಿರುವುದು ಸ್ವಾಗತಾರ್ಹವಾಗಿದೆ. ಇದರ ಜೊತೆಗೆ ಬಿ.ಡಿ.ಓ. ಗಳನ್ನು ಕೂಡ ವಜಾಮಾಡುವುದು ಬಹಳ ಸೂಕ್ತವಾದುದು ಎಂದು ತಿಳಿದಿದ್ದೇನೆ. ಅವರುಗಳಿಗೆ ಕೆಲಸವಿಲ್ಲ. ಹಿಂದೆ ಅವರು ಮಾಡುವ ಕೆಲಸವನ್ನು ಒಬ್ಬ ತಾಸೀಲ್ದಾರರು ತಾಲ್ಲೂಕುಗಳಲ್ಲಿ ರೆವೆನ್ಯೂ ಕೆಲಸದ ಜೊತೆಗೆ ಮಾಡುತ್ತಿದ್ದರು, ಅಭಿವೃದ್ಧಿಕಾರ್ಯಗಳನ್ನೂ ಮಾಡುತ್ತಿದ್ದರು. ಅವರಿಗೆ ಅಧಿಕಾರವಿದ್ದಾಗ ಗ್ರಾಮಾಂತರಗಳಲ್ಲಿ ಎಷ್ಟೋ ಅಭಿವೃದ್ಧಿಕಾರ್ಯಗಳು ನಡೆಯುತ್ತಿದ್ದುವು. ಅದಕ್ಕಿಂತ ಹೆಚ್ಚಾಗಿ ಒಂದು ಕಾಸಿನಷ್ಟು ಕೆಲಸವೂ ಕಳೆದ 20 ವರ್ಷಗಳಿಂದ ಆಗಿಲ್ಲ, ಇದು ವಿಷಾದ ಪಡುವ ವಿಚಾರ. ಈಗಲೂ ಕೂಡ ನಿಜವಾಗಿಯೂ ಹಣ ಉಳಿಸಬೇಕಾದರೆ ತಾಸೀಲ್ದಾರರಿಗೆ ಡೆವಲಪ್‌ಮೆಂಟ್ ಆಫೀಸರ ಕೆಲಸವನ್ನೂ ಕೂಡ ಕೊಡಬೇಕು, ಅವರಿಗೆ ರಾಷ್ಟ್ರೀಯ ವಿಸ್ತರಣಾ ಇಲಾಖೆಯ ಸ್ವಲ್ಪ ಸಿಬ್ಬಂದಿಯನ್ನು ಕೊಟ್ಟರೆ ಈಗ ನಡೆಯುತ್ತಿರುವುದಕ್ಕಿಂತ ಹೆಚ್ಚು ಅಭಿವೃದ್ಧಿ ಕಾರ್ಯ ನಡೆಯುವುದಕ್ಕೆ ಅವಕಾಶವಾಗುವುದು. ಇದರಿಂದ ಯಾವ ತೊಂದರೆಯೂ ಇಲ್ಲ, ಯಾವ ಲೋಪವೂ ಆಗುವುದಿಲ್ಲ. ಅಲ್ಲದೆ ಪಂಚಾಯಿತಿಗಳಲ್ಲಿ ಖಾಯಮಾದ ಲೆಕ್ಕವಿಡುವ ವ್ಯವಸ್ಥೆ ಇಲ್ಲ. ಈಗ ಲ್ಯಾಂಡ್ ರೆವೆನ್ಯೂನಲ್ಲಿ ಇಂಡೆಕ್ಸ್ ಆಫ್ ಲ್ಯಾಂಡ್ ಕೆಲಸ ಮತ್ತು ರಿಕಾರ್ಡ್ ಆಫ್ ರೈಟ್ಸ್ ಲೆಕ್ಕ ಇದೆ. ಇದರಹಾಗೆ ಪಂಚಾಯಿತಿಗಳಲ್ಲಿ ಇಂಡೆಕ್ಸ್ ಆಫ್ ಹೌಸಸ್ ರಿಕಾರ್ಡನ್ನು, ರಿಕಾರ್ಡ್ ಆಫ್ ಹೌಸಸ್ ಇಡುವುದಕ್ಕೆ ಅವಕಾಶವಿದೆ. ಈಗಿರುವಂತೆ ಯಾರಿಗಾದರೂ ಟ್ರೈನಿಂಗ್ ಕೊಟ್ಟು ಪಂಚಾಯಿತಿ ಖಾತೆಯಲ್ಲಿ ಬದಲಾವಣೆ ಮಾಡಿ ಅವಕಾಶ ಮಾಡಬಹುದು. ಅನೇಕ ಪ್ರದೇಶಗಳಲ್ಲಿ ಮನೆ ಮತ್ತು ನಿವೇಶನ ಮಾರುವವರಿಗೆ ಕೂಡ ಅದರ ಪರಿಚಯ ಸರಿಯಾಗಿರುವುದಿಲ್ಲ. ಅದಕ್ಕಾಗಿ ಇಂಡೆಕ್ಸ್ ಆಫ್ ಹೌಸಸ್ ದಾಖಲೆ ಲೆಕ್ಕ ಖಾಯಮಾಗಿ ಇಡಬೇಕು. ಇದಕ್ಕೆ ಎರಡು ಪುಸ್ತಕ ಇಡಬೇಕು, ಒಂದು ಚೀಫ್ ಎಗ್ಜಿಕ್ಯುಟಿವ್ ಆಫೀಸರವರಲ್ಲಿ ಮತ್ತೊಂದು ಪಂಚಾಯಿತಿಗಳಲ್ಲಿಡಬೇಕು. ಇದರ ಜೊತೆಗೆ ಜಮೀನು ವಗೈರೆ ಕ್ರಯ, ಆಧಾರ ಆದಲ್ಲಿ ಸಬ್‌ರಿಜಿಸ್ಟ್ರಾರರ ಆಫೀಸಿನಲ್ಲಿ ದಾಖಲೆಯನ್ನು ಮ್ಯುಟೇಷನ್ ಇದೆಲ್ಲಾ ಇರುವಂತೆ ಚೀಫ್ ಎಗ್ಜಿಕ್ಯುಟಿವ್ ಆಫೀಸರ್‌ರವರ ಆಫೀಸಿನಲ್ಲಿ ಇಂಡೆಕ್ಸ್ ಆಫ್ ಹೌಸಸ್ ರಿಜಿಸ್ಟರ್ ಮೈಂಟೈನ್ ಮಾಡುವಂತೆ ವ್ಯವಸ್ಥೆ ಮಾಡುವುದು ಸೂಕ್ತ. ಇದು ಬಹಳ ಮುಖ್ಯವಾದ ಕೆಲಸ. ನಮ್ಮ ಪಂಚಾಯಿತಿಯಲ್ಲಿ ಇಂಥ ಒಂದು ಪ್ರೊಫಾರ್ಮ ಮಾಡಿ ನಡೆಸುತ್ತಿದ್ದೇವೆ, ಮಂತ್ರಿಗಳು ಅಪೇಕ್ಷೆ ಪಟ್ಟರೆ ಅದನ್ನು ಕೊಡುತ್ತೇನೆ.

ಇನ್ನು ಸಹಕಾರ ಸಂಘಗಳ ವಿಷಯದಲ್ಲಿ ಮಾನ್ಯ ರಾಜಯ್ಯಶೆಟ್ಟರು ಕೆಲವು ವಿಚಾರ ಹೇಳಿದರು. ಅಲ್ಲಿ ಕಾಂಗ್ರೆಸ್ಸಿನವರಿಗೆ ಹೆಚ್ಚು ಸೌಲಭ್ಯ ದೊರೆತಿದೆ, ಇತರರಿಗೆ ಸಿಕ್ಕುವುದಿಲ್ಲ ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ವಿಷಯ. ನಾನು 5 ವರ್ಷ ತುಮಕೂರು ಸಹಕಾರ ಕೇಂದ್ರ ಜಿಲ್ಲಾ ಬ್ಯಾಂಕಿನ ಅಧ್ಯಕ್ಷನಾಗಿ ನೋಡಿದ್ದೇನೆ, ಅಲ್ಲಿ ಕಾಂಗ್ರೆಸ್ಸೇತರರಿಗೆ ಹೆಚ್ಚು ಸೌಲಭ್ಯ ಉಂಟಾಗಿದೆ. ಇದನ್ನು ತಮ್ಮ ಮೂಲಕ ಸಭೆಗೆ ತಿಳಿಸಲು ಇಚ್ಛೆಪಡುತ್ತೇನೆ. ಜಿಲ್ಲಾ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಪ್ರೆಸಿಡೆಂಟ್ ಆಗಿ ಮತ್ತು ಡೈರೆಕ್ಟರಾಗಿ ಕೆಲಸ ಮಾಡಿದ್ದೇನೆ. ಮಾರ್ಕೆಟಿಂಗ್ ಸೊಸೈಟಿಯಲ್ಲಿ ಹೆಚ್ಚು ಹಣ ದುರುಪಯೋಗಮಾಡಿದ್ದಾರೆಂದು ಕೂಡ ಹೇಳಿದರು. ಅದೂ ಕೂಡ ನಿಜವಲ್ಲ. ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ಜಿಲ್ಲಾ ಕೇಂದ್ರ ಬ್ಯಾಂಕಿನ ಡೈರೆಕ್ಟರಾಗಬೇಕಾದರೆ ಚುನಾವಣೆ ನಡೆಯುವುದು ಮಾರ್ಕೆಟಿಂಗ್ ಸೊಸೈಟಿಗಳ

ಪರವಾಗಿ ಇಬ್ಬರನ್ನು ಚುನಾವಣೆ ಮಾಡಲು ಅವಕಾಶವಿದೆ. ಅಷ್ಟು ಹೊರತು ಅಲ್ಲಿರುವ ಪ್ರತಿಯೊಬ್ಬರಾಗಲೀ ಅಥವಾ ಅಧ್ಯಕ್ಷರಾಗಲೀ ಡೈರೆಕ್ಟರಾಗಬೇಕೆಂಬ ನಿಯಮವಿಲ್ಲ. ಇನ್ನು ಕೆಲವಾರು ಸಾಲಗಳನ್ನು ಸಿಕ್ಕಾಪಟ್ಟೆ ಕೊಟ್ಟಿದ್ದಾರೆ, 13—14 ಲಕ್ಷ ಬಾಕಿ ಇದೆ, ಅನೇಕ ಕಡೆ ದಾಸ್ತಾನಿಲ್ಲ, ಹಣ ಕೊಟ್ಟಿದ್ದಾರೆ ಎಂದು ಹೇಳಿರುವುದು ಕೂಡ ಸರಿಯಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ರುಜುವಾತು ಕೊಡುತ್ತೇನೆ, ತಪ್ಪು ಮುಚ್ಚಿಕೊಳ್ಳುವುದಕ್ಕೆ ಹೀಗೆ ಹೇಳಬಾರದು.

ಶ್ರೀ ಬಿ. ಎನ್. ರಾಮೇಗೌಡ.—ಅದು ಸರಿಯಲ್ಲ. ಅನೇಕ ಸಂದರ್ಭಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ತುಮಕೂರು, ಚಿಕ್ಕನಾಯಕನಹಳ್ಳಿ, ತಿಪಟೂರು—ಈ ತಾಲ್ಲೂಕುಗಳಲ್ಲಿ ತೆಂಗಿನ ಕಾಯನ್ನು ದಾಸ್ತಾನುಮಾಡುವುದಕ್ಕೆ ಅವಕಾಶವಿದೆ, ಲಕ್ಷಾಂತರ ತೆಂಗಿನಕಾಯಿಗಳನ್ನು ದಾಸ್ತಾನಿಟ್ಟು ಸಾಲ ತೆಗೆದುಕೊಳ್ಳುವ ಪದ್ಧತಿ ಇದೆ. ಹೀಗೆ ದಾಸ್ತಾನುಮಾಡಲು ಸರಕಾರಿ ಮಳಿಗೆಯಿಲ್ಲ, ರಿಸರ್ವ್ ಬ್ಯಾಂಕಿನ ಆದೇಶದ ಮೇಲೆ ಓನರ್ಸ್ ಗೋಡೌನುಗಳಲ್ಲಿ ದಾಸ್ತಾನಿಟ್ಟು ಸಾಲಕೊಡುತ್ತಿದೆ. ಎಲ್ಲೂ ದಾಸ್ತಾನಿಲ್ಲದೆ ಸಾಲ ಕೊಟ್ಟಿರುವ ಉದಾಹರಣೆಯಿಲ್ಲ ಎಂದು ತಿಳಿಸಲು ಇಚ್ಛೆಪಡುತ್ತೇನೆ. ಇಂದು ದೇಶಾದ್ಯಂತ ಅನೇಕ ದೂರುಗಳು ಬರುತ್ತಿವೆ, ಅವನ್ನು ಸಾಧ್ಯವಾದ ಮಟ್ಟಿಗೆ ಸಂಬಂಧಪಟ್ಟ ಇಲಾಖೆಯವರು ಮತ್ತು ಪೋಲೀಸಿನವರು ಪರಿಶೀಲಿಸಿ ತೀರ್ಮಾನ ಮಾಡುವುದಕ್ಕೆ ಅವಕಾಶಮಾಡಬೇಕು. ಆ ರೀತಿ ಮಾಡದಿದ್ದರೆ ಜಾಗ್ರತೆ ಅದಕ್ಕೆ ಕ್ರಮ ಕೈಕೊಳ್ಳದಿದ್ದರೆ ಮಿಸ್ ಅಪ್ರೋಪ್ರಿಯೇಷನ್ ಇನ್ನೂ ಜಾಸ್ತಿಯಾಗಿ ಹೆಚ್ಚು ಟೀಕೆಗಳಿಗೆ ಅವಕಾಶವಾಗುವುದು. ಇದಕ್ಕೆ ಅವಕಾಶವಿಲ್ಲದಂತೆ ಪೋಲೀಸು ಇಲಾಖೆ ಮತ್ತು ಸಹಕಾರಿ ಇಲಾಖೆ ಎರಡೂ ಸೇರಿ ಯೋಚನೆ ಮಾಡಿ ತಕ್ಕ ಕ್ರಮ ಕೈಕೊಂಡು ಮುಂದೆ ಇಂಥ ಸಂದರ್ಭಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು ಎಂದು ಮನವಿಮಾಡಿಕೊಂಡು ಇಂದು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಮಾನ್ಯ ಸಭಾಪತಿಗಳೇ, ದೊಡ್ಡ ಪಟ್ಟಣಗಳಲ್ಲಿರುವ ತೊಂದರೆಗಳನ್ನು ಹೇಳಲು ನಾನು ಇಷ್ಟಪಡುತ್ತೇನೆ. ಅವು ಇನ್ನೂವರೆಗೆ ಹಿಂದೆ ಇದ್ದಂತೆಯೇ ಇವೆ, ಕಾಂಗ್ರೆಸ್ ಆಡಳಿತದಲ್ಲಿ ಯಾವ ಸುಧಾರಣೆಯೂ ಆಗಿಲ್ಲ, ಆ ಕಡೆ ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳಬೇಕಾಗಿದೆ. ಎರಡು ತಿಂಗಳಹಿಂದೆ ಹುಬ್ಬಳ್ಳಿಯಲ್ಲಿ ಒಂದು ಘಟನೆ ನಡೆಯಿತು, ಒಬ್ಬ ಹೆಣ್ಣುಮಗಳು ಗಟಾರದಲ್ಲಿ ಬಿದ್ದು ಸತ್ತಳು, ಅದರ ಬಗ್ಗೆ ಪೋಲೀಸರನ್ನು ಕೇಳಿದಾಗ ಮಳೆ ಬಹಳ ಬಂದು ಗಟಾರ ತುಂಬಿದಾಗ ಕಾಲುಜಾರಿ ಬಿದ್ದು ಸತ್ತಳು ಎಂದು ಹೇಳಿದರು. ಕಾರ್ಪೊರೇಷನ್ ಅಧಿಕಾರಿಗಳನ್ನು ಕೇಳಿದರೆ ತಮ್ಮಲ್ಲಿ ಹಣವಿಲ್ಲ, ಆದ್ದರಿಂದ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರು. ಹೀಗೆ ಪರಿಸ್ಥಿತಿ ಇರುವಾಗ ಗಟಾರಗಳ ಬಗ್ಗೆ, ಒಳಚರಂಡಿ ಯೋಜನೆ ಬಗ್ಗೆ, ತಕ್ಕ ಕಾರ್ಯಕ್ರಮ ಕೈಕೊಂಡಿಲ್ಲದಿರುವುದು, ಅವ್ಯವಸ್ಥೆ ಇರುವುದು ಬಹಳ ವಿಷಾದಕರವಾದ ಸಂಗತಿ. ಇದನ್ನು ಒಂದಲ್ಲ, ಅನೇಕ ರೀತಿಯಲ್ಲಿ ನೋಡಬಹುದು. ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡಲು ಯಾವ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆಂದು ನೋಡಿದರೆ ಪರಿಸ್ಥಿತಿ ವಿಚಿತ್ರವಾಗಿದೆ. ಮೇಲಿಂದಮೇಲೆ ಎರಡು ಮೂರು ವರ್ಷಗಳ ಕೆಳಗೆ ಕಾಲರಾ ಬೇನೆ ಬಂದು ಅನೇಕರು ಸತ್ತರು. ಗದಗು ಮುಂತಾದ ದೊಡ್ಡ ಪಟ್ಟಣಗಳಲ್ಲಿ ಕಾಲರ ಜಾಸ್ತಿಯಾಗಿದೆ, ಇದನ್ನು ಸುಧಾರಿಸಬೇಕು, ಇದಕ್ಕೆ ಲಕ್ಷ್ಯ ಕೊಡಬೇಕು, ಉತ್ತಮವಾದ ವಾಸದ ಮನೆಗಳನ್ನು ಸರಕಾರ ಕಟ್ಟಿಸಿ ಒದಗಿಸಬೇಕು. ಪಟ್ಟಣಗಳಲ್ಲಿ ಕೆಲವರು ಬಡವರಿಗೆ ಮನೆ ಕಟ್ಟಿಸಿಕೊಡಲು ಕೆಲವು ಹೌಸಿಂಗ್ ಸೊಸೈಟಿಗಳು ಮುಂದೆ ಬಂದಿವೆ. ಆದರೆ ಅವಕ್ಕೆ ಪ್ರೋತ್ಸಾಹ ದೊರೆತಿಲ್ಲ. ಸೊಸೈಟಿಗಳವರು ಎಷ್ಟೋ ಕಡೆ ತಮ್ಮ ನಿರ್ಣಯ ಮಾಡಿ ಹಣವನ್ನು ಕೆಲವು ಬ್ಯಾಂಕುಗಳಲ್ಲಿಟ್ಟು ರಿಜಿಸ್ಟ್ರೇಷನ್ನಿಗೆ ಕಳಿಸಿದಾಗ ಯಾವುದೋ ಒಂದು ಟೆಕ್ನಿಕಲ್ ತೊಂದರೆ ಒಡ್ಡಿದ್ದಾರೆ. ಹೀಗಾಗಿರುವುದು ವಿಷಾದಕರ. ಒಂದು ಸೊಸೈಟಿ ರಿಜಿಸ್ಟ್ರ ರಾಯಿತು, ಅದಕ್ಕೆ ಭೂಮಿ ಒದಗಿಸಲು ಇನ್ನೂವರೆಗೆ ಸಾಧ್ಯವಾಗಿಲ್ಲ, ಭೂಮಿ ಬೆಲೆ ಅತ್ಯಂತ ಹೆಚ್ಚಾಗಿರುವುದರಿಂದ ಅದನ್ನು ಕೊಡುವವರೆಗೆ ಯಾವ ಕೆಲಸವೂ ಆಗುವುದಿಲ್ಲವೆಂದು ಕಾರ್ಪೊರೇಷನ್ ಹೇಳಿದೆ. ಕಾರ್ಪೊರೇಷನ್ನಿನವರಿಗೆ ಭೂಮಿಯನ್ನು ಕೊಳ್ಳಲು ಸಾಧ್ಯ ಇಲ್ಲ. ಸರ್ಕಾರದವರಿಗೆ ಹಣ ಕೊಡುವುದಕ್ಕೂ ಸಾಧ್ಯ ಇಲ್ಲ. ಎಷ್ಟೋ ಸಾರಿ ಹೀಗಾಗಿ ರಿಜಿಸ್ಟರ್ ಆದಂಥ ಸೊಸೈಟಿಗಳು ಮನೆಗಳನ್ನು ಕಟ್ಟದೆ ಹರಿಜನರು ಕೆಲಸ ಮಾಡದೇ ಇರುವ ಪರಿಸ್ಥಿತಿ ಬಂದಿದೆ. ಈ ಸೊಸೈಟಿಗಳು ಸುಮ್ಮನೆ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಇದು ವಿಷಾದಕರವಾದ ಸಂಗತಿ. ದೊಡ್ಡ ಪಟ್ಟಣಗಳಲ್ಲಿ ವಸತಿ ಸೌಕರ್ಯಗಳನ್ನು ಏರ್ಪಡಿಸುವುದು ಯಾರಾದರೂ ಒಬ್ಬರು ನಿಂತುಕೊಂಡು ಮಾಡುವ ಕೆಲಸ ಅಲ್ಲ. 10-20 ಜನ ನಿಂತು ಮಾಡುವಂಥ ಕೆಲಸವಲ್ಲ. ಇದಕ್ಕೇ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿ

(ಶ್ರೀ ಎಸ್. ಎಸ್. ಶೆಟ್ಟರ್)

ನವರು ಮತ್ತು ನಗರಾಡಳಿತ ಶಾಖೆಯವರು ಇಬ್ಬರೂ ಸೇರಿ ರಚನೆ ಮಾಡಿದರೆ ಮಾತ್ರ ಈ ಕೆಲಸ ವನ್ನು ಬಗೆಹರಿಸಲು ಸಾಧ್ಯ. ಸರ್ಕಾರಿ ಭೂಮಿ ಇದ್ದರೆ ಸಿಕ್ಕುತ್ತದೆ. ಬೇರೆ ಖಾಸಗಿಯವರದ್ದು ಇದ್ದರೆ ಆಗ ಅದರಲ್ಲಿ ಪ್ರಗತಿಯನ್ನು ಮಾಡಲು ಸಾಧ್ಯ ಇಲ್ಲ. ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡುವುದಕ್ಕೆ ಒಂದು ಕಾನೂನು ಮಾಡಿದರು. ಆದರೆ ಅದನ್ನು ಹೈಕೋರ್ಟ್‌ನವರು ರದ್ದು ಮಾಡಿ ದರು. ಈಗ ಇದಕ್ಕೆ ಸೂಕ್ತ ಬದಲಾವಣೆ ಮಾಡಿ ಜನರಿಗೆ ಹಿಂಸೆ ಆಗದಂತೆ ಅವರಿಗೆ ಉತ್ತಮ ಮನೆ ಗಳನ್ನು ಕಟ್ಟಿಕೊಳ್ಳುವುದಕ್ಕೆ ಮುಂದೆ ಬಂದು ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡಬೇಕು. ಕರ ಭಾರ ಅತ್ಯಂತ ಹೆಚ್ಚಾಗಿದೆ. ನೀರು ತೊಟ್ಟಿಗೆ ಮತ್ತು ಕಸದ ತೊಟ್ಟಿಗೆ ಎಂದು ಹುಬ್ಬಳ್ಳಿ ಕಾರ್ಪೊ ರೇಷನ್ನಿನವರು ಕರವನ್ನು ವಸೂಲು ಮಾಡುತ್ತಿದ್ದಾರೆ. ಇದು ಅತ್ಯಂತ ಭಾರವಾಗಿದೆ. ಇದಕ್ಕಾಗಿ ಪ್ರತಿ ಮನೆಗೂ 4 ಪರ್ಸೆಂಟು ಕರವನ್ನು ಹಾಕುತ್ತಾರೆ. ನೀರಿನ ಸೌಕರ್ಯ ಏನೂ ಇರುವುದಿಲ್ಲ. ಇದ ರಿಂದಾಗಿ ಸಣ್ಣ ಸಣ್ಣ ಮನೆಗಳಿಗೂ 8-10 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅಲ್ಲಿ ಸಾರ್ವ ಜನಿಕ ನಲ್ಲಿಗಳು ಇಲ್ಲ. ಬಹಳ ಜನ ನೀರು ಇಲ್ಲದೆ ಮಿಳಮಿಳನೆ ಒದ್ದಾಡುವ ಪ್ರಸಂಗ ಬಂದಿದೆ. ನಲ್ಲಿಗಳನ್ನು ಕತ್ತರಿಸಿ ಬಿಟ್ಟಿದ್ದಾರೆ. ಬೆಳಗಾಂ, ಗದಗ್ ಅನೇಕ ದೊಡ್ಡ ಪಟ್ಟಣಗಳಲ್ಲಿ ನೀರಿನ ತಾಪ ತ್ರಯ ಬಹಳವಾಗಿದೆ. ಅದರ ಕಡೆಗೆ ಹೆಚ್ಚು ಗಮನ ಕೊಟ್ಟಿಲ್ಲ. ರೋಗರುಜಿನಗಳು ಹೆಚ್ಚಾಗು ತ್ತಿದೆ. ಜನರು ಅನಾಹುತಕ್ಕೆ ತುತ್ತಾಗುತ್ತಿದ್ದಾರೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯ ಸುತ್ತೇನೆ.

ಇನ್ನು ಕಾರ್ಪೊರೇಷನ್ನಿನಲ್ಲಿ ನಡೆಯತಕ್ಕಂಥ ಆಡಳಿತದ ಬಗ್ಗೆ ಹೇಳಬೇಕಾದರೆ ಅಲ್ಲಿ ಇನ್ನೂ ಚುನಾವಣೆ ಆಗಿಲ್ಲ. ಸರ್ಕಾರದವರು ಅಲ್ಲಿಯ ಆಡಳಿತಕ್ಕಾಗಿ ಕೆಲವರನ್ನು ನೇಮಿಸಿದ್ದಾರೆ. ಹಾಗೆ ನೇಮಿಸಿದಂಥ ಸದಸ್ಯರು ಇವೊತ್ತು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಈ ಮಾತನ್ನು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ಸರ್ಕಾರದವರು ಚುನಾವಣೆಗಳನ್ನು ನಡೆಸಬೇಕಾಗಿದೆ. ಎಲೆಕ್ಷನ್ ಮುಂದೂಡಿರುವುದನ್ನೂ ಕೂಡ ರದ್ದುಪಡಿಸಬೇಕು. ಅದು ಅವರ ಕೈಯಲ್ಲಿ ಇದ್ದರೂ ಕೂಡ ಸಾಕಾದಷ್ಟು ಲಕ್ಷ್ಯ ಕೊಟ್ಟು ಪೂರೈಸಿಲ್ಲ. ಇವೊತ್ತು ಕಾರ್ಪೊರೇಷನ್ ನಲ್ಲಿ ಮಾತ್ರವಲ್ಲದೆ ಗ್ರಾಮ ಪಂಚಾಯಿತಿಗಳಿಗೆ ಆಗಲಿ ಚುನಾವಣೆಗಳು ನಡೆಯದೇ ಇರುವುದು ಬಹಳ ವಿಚಿತ್ರವಾಗಿದೆ. ಹುಬ್ಬಳ್ಳಿಯ ಎ.ಪಿ.ಎಂ.ಸಿ. ಮತ್ತು ಕುಂದಗೋಳ್ ಎ.ಪಿ.ಎಂ.ಸಿ.ಯ ಸೊಸೈಟಿಯಲ್ಲಿ 16 ವರ್ಷಗಳಿಂದಲೂ ಚುನಾವಣೆ ಆಗಿಲ್ಲ. ಇದನ್ನು ಪರಿಗಣಿಸಿದರೆ ಜನಗಳು ಎಷ್ಟು ಸಹನೆಯಿಂದ ನಡೆದುಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಈ ಚುನಾವಣೆ ನಡೆಸುವುದಕ್ಕೆ ಯಾವುದೋ ಒಂದು ತಾಂತ್ರಿಕ ದೋಷ ಇದೆಯೆಂದು ಹೇಳುತ್ತಾ ಇದ್ದಾರೆ. ಅದನ್ನು ಪ್ರತಿಭಟಿಸದೇ ಹೋದರೆ ಮುಂದೆ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಆಗಲಿ ಅಥವಾ ಗ್ರಾಮ ಪಂಚಾ ಯಿತಿಯಲ್ಲಿ ಆಗಲಿ ಅಥವಾ ಪಟ್ಟಣಗಳಲ್ಲಿ ಆಗಲಿ ಯಾವುದೇ ರೀತಿಯ ಹೊಸ ರೀತಿಯ ಸದಸ್ಯರುಗಳು ಬರಲಿಕ್ಕೆ ಸಾಧ್ಯ ಇಲ್ಲ. ಆದುದರಿಂದ ಬೇಗನೆ ಚುನಾವಣೆ ನಡೆಯಬೇಕು ಎಂದು ಒತ್ತಾಯ ಮಾಡು ತ್ತೇನೆ.

ಇನ್ನು ಸಹಕಾರ ಚಳುವಳಿ ಬಗ್ಗೆ ಹೇಳಬೇಕಾಗಿದೆ. ನಾನು ಒಂದೇ ಒಂದು ಮಾತನ್ನು ಹೇಳು ವುದಾದರೆ ಇದು ಅಷ್ಟು ಯಶಸ್ವಿಯಾಗಿ ನಡೆಯುತ್ತಾ ಇಲ್ಲ. ಸರ್ಕಾರ ಇದರ ಒಂದು ವಾತಾವರಣ ನಿರ್ಮಾಣ ಮಾಡದೇ ಇದನ್ನು ಕೇವಲ ಒಂದು ಸರ್ಕಾರಿ ಡಿಪಾರ್ಟ್‌ಮೆಂಟ್ ಎಂದು ತಿಳಿದುಕೊಂಡು ಆ ರೀತಿ ಕೆಲಸ ಮಾಡುವುದಕ್ಕೆ ಹೊರಟರೆ ಅದರಿಂದ ಅನುಕೂಲವಾಗುವುದಿಲ್ಲ. ಇದಕ್ಕೆ ಜನತೆಯ ಸಹಕಾರ ಮತ್ತು ಸರಿಯಾದ ಮನೋಭಾವ ಮುಖ್ಯ. ಹುಲ್ಕೋಟಿಯಲ್ಲಿ ಒಂದು ಕ್ಯಾಟಲ್‌ಫೀಡ್ ಪ್ರೊಸೆಸಿಂಗ್ ಸೊಸೈಟಿ ಇದೆ. ಇದಕ್ಕೆ ಸರ್ಕಾರದ ಯಾವುದೇ ಸಹಾಯ ಇಲ್ಲದೆ 6 ಲಕ್ಷ ರೂಪಾ ಯಿಯ ಬಂಡವಾಳವನ್ನು ತಾನಾಗೇ ಮಾಡಿಕೊಂಡಿದೆ. ಇದು ತುಂಬಾ ಅಭಿನಂದನೀಯವಾಗಿದೆ. ಅಂಥಾದ್ದಕ್ಕೆ ಸರ್ಕಾರ ಇವೊತ್ತು ಪ್ರೋತ್ಸಾಹ ಕೊಟ್ಟರೆ ಅದು ಇನ್ನೂ ಮುಂದಕ್ಕೆ ಬರುತ್ತದೆ. ಆದರೆ ಇವೊತ್ತು ಈ ರಾಜಕೀಯದ ಒಂದು ವಾತಾವರಣದಿಂದ ಹಾಳಾಗುತ್ತಿದೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಪ್ರತಿಯೊಂದು ಸಹಕಾರ ಚಳುವಳಿ ನಡೆಯಬೇಕಾದರೆ ಮೂಲವಾಗಿ ಸಹಕಾರ ವಾತಾವರಣ ಬೇಕು. ಇಂದು ಪ್ರತಿಯೊಂದೂ ಸರ್ಕಾರ ಮಾಡುವ ಸಂಸ್ಥೆಯಲ್ಲಿ ಒಂದು ಹೋರಾಟ, ಸ್ಪರ್ಧೆ, ರಾಜಕೀಯ ಕಲಹ ಇರುವುದು ಮಿಸ್ ಅಪ್ರೊಪ್ರಿಯೇಷನ್ನಿಗೆ ಕಾರಣವಾಗಿದೆ. ಇದರ ಪರಿ ಣಾಮವಾಗಿ ಅದನ್ನು ಮುಚ್ಚಲಿಕ್ಕೆ ಕಾರಣವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೀಗಾಗಿ ಇದಕ್ಕೆ ಬೇಕಾದಂಥ ಒಂದು ವಾತಾವರಣ ಇಲ್ಲದೆ ಈ ಸ್ಕೀಮು ವಿಫಲವಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಸಾನಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ನಾನು ಪಂಚಾಯಿತ್ ರಾಜ್ ಮತ್ತು ಸಹಕಾರಿ ಮತ್ತು ಮುನಿಸಿಪಾಲಿಟಿ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಪ್ರಜಾರಾಜ್ಯ ಆದನಂತರ ಸಹಕಾರಿ ಚಳುವಳಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕಿದೆ ಎನ್ನುವುದನ್ನು ನಾವೆಲ್ಲರೂ ಗಣನೆಗೆ ತೆಗೆದುಕೊಳ್ಳಬೇಕು. ಈಗ ಸಹಕಾರಿ ಚಳುವಳಿಯಿಂದಲೇ ಭಾರತ ದೇಶ ಪ್ರಗತಿಯಾಗುತ್ತಿದೆ ಎನ್ನುವ ಮನೋಭಾವನೆಯನ್ನು ಎಲ್ಲರೂ ಮನದಟ್ಟು ಮಾಡಿಕೊಳ್ಳಬೇಕು ಸಹಕಾರಿ ಚಳುವಳಿಯು ಹಳ್ಳಿಗಳಲ್ಲೂ, ಪಟ್ಟಣಗಳಲ್ಲೂ ಸಾಕಷ್ಟು ಬೆಳೆಯಬೇಕು. ಕಳೆದ ಕೆಲವು ವರ್ಷಗಳಿಂದ ಸಹಕಾರ ಚಳುವಳಿಯ ಪ್ರಗತಿಯನ್ನು ನೋಡಿದರೆ ಸಹಕಾರ ಚಳುವಳಿ ಬಹಳ ಉಚ್ಚ ಮಟ್ಟದಲ್ಲಿ ಮುಂದುವರಿದಿದೆಯೆಂದು ಹೇಳಬಹುದು. 1961ನೇ ಇಸವಿಯೊಳಗೆ ನಮ್ಮ ಸ್ಟೇಟಿನಲ್ಲಿ 14,871 ಸೊಸೈಟಿಗಳು ಇದ್ದುದು ಈವೊತ್ತು 18,783 ಸಂಖ್ಯೆಯಷ್ಟು ಇದೆ. ಸದಸ್ಯರ ಸಂಖ್ಯೆ 1967 ರಲ್ಲಿ 24 ಲಕ್ಷದಷ್ಟು ಇದ್ದುದು ಈವೊತ್ತು 36 ಲಕ್ಷದಷ್ಟು ಸಂಖ್ಯೆಗೆ ಏರಿದೆ. ನಮ್ಮ ರಾಜ್ಯದಲ್ಲಿ ಪ್ರತಿ 5 ಜನಕ್ಕೆ ಒಬ್ಬರು ಸಹಕಾರ ಸಂಘದ ಸದಸ್ಯರಾಗಿದ್ದಾರೆ. ಅದುದರಿಂದ ಈವೊತ್ತು ಯಾವುದೇ ಮಟ್ಟದಲ್ಲಾದರೂ ಆಗಲಿ ಅಥವಾ ಇಂಡಸ್ಟ್ರೀ ಮಟ್ಟದಲ್ಲಾದರೂ ಆಗಲಿ ಅಥವಾ ಬೇರೆ ಬೇರೆ ಯಾವುದೇ ಪ್ರೊಸೆಸಿಂಗ್ ಯೂನಿಟ್ಸ್ ಮಟ್ಟದಲ್ಲಾಗಲಿ ಸಹಕಾರ ಸೊಸೈಟಿಗಳು ಬೆಳೆದಿವೆ. ಮುಂಬೈ ಪ್ರಾಂತದಲ್ಲಿ ಇದು ಹೆಚ್ಚಾಗಿದೆ. ಕೊಲ್ಹಾಪುರದಲ್ಲೂ ಒಂದು ಯೂನಿಟ್ ಇದೆ. ಅಲ್ಲಲ್ಲಿ ಒಂದು ದೊಡ್ಡ ಸೊಸೈಟಿ ಬಹಳ ಉತ್ತಮವಾಗಿ ನಡೆಯುತ್ತಿದೆ. ಅದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಅವರಿಗೆ 3 ಸಾವಿರ ರೂಪಾಯಿ ಪಗಾರ ಕೊಡುತ್ತಿದ್ದಾರೆ. ಮತ್ತು ಅವರಿಗೆ 30 ಸಾವಿರ ರೂಪಾಯಿ ಬೆಲೆ ಬಾಳುವ ಮೋಟಾರನ್ನು ಕೊಟ್ಟಿದ್ದಾರೆ. ಒಬ್ಬರು ಸೆಕ್ರೆಟರಿ ಇದ್ದಾರೆ. 3 ಲಕ್ಷ ಟನ್‌ವರೆಗೆ ಸಲ್ಫೇಟ್ ಮಾಡುತ್ತಿದ್ದಾರೆ. ಸಹಕಾರ ಅಲ್ಲಿ ಒಳ್ಳೆಯ ಮಾದರಿ ಸಂಸ್ಥೆಯಾಗಿದೆ. ಅದೇ ಮಾದರಿಯಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡಿದರೆ ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರಗತಿ ಆಗುತ್ತದೆ ಎಂದು ನನಗೆ ಅನಿಸುತ್ತದೆ. ವರ್ಕಿಂಗ್ ಕ್ಯಾಪಿಟಲ್ ಬೆಳೆಯುತ್ತಿದೆ. 1961ರಲ್ಲಿ ವರ್ಕಿಂಗ್ ಕ್ಯಾಪಿಟಲ್ 101 ಕೋಟಿ ರೂಪಾಯಿಯಷ್ಟು ಇದ್ದರೆ ಈಗ 199 ಕೋಟಿ ರೂಪಾಯಿಯಷ್ಟು ಆಗಿದೆ.

ಲೋನ್ ಅಡ್ವಾನ್ಸ್ ಮಾಡಿದ್ದು 1961 ರಲ್ಲಿ 83 ಕೋಟಿ ಇದ್ದದ್ದು ಈಗ 143 ಕೋಟಿ ಅಷ್ಟಾಗಿದೆ. ಲೋನ್ ರಿಕವರೀಸ್ ಸಹಿತ ಆಗ 67 ಕೋಟಿ ಇದ್ದರೆ ಈಗ 124 ಕೋಟಿ ಅಷ್ಟಾಗಿದೆ. ಪ್ರಾಫಿಟ್ ಆದದ್ದು ಸಹಿತ ಈಗ 1 ಕೋಟಿ 63 ಲಕ್ಷದಿಂದ 2 ಕೋಟಿ 69 ಲಕ್ಷದವರೆಗೂ ಮುಟ್ಟಿದೆ ಎಂದರೆ ನಿಜವಾಗಿಯೂ ಪ್ರಗತಿ ಪಥದಲ್ಲಿ ಇದ್ದೇವೆ ಎಂದು ನನಗೆ ಅನಿಸುತ್ತದೆ. ಎಷ್ಟೋ ಜನ ಸದಸ್ಯರು ಸಹಕಾರ ಚಳುವಳಿ ಸರಿಯಾಗಿ ನಡೆದಿಲ್ಲ ಆದ್ದರಿಂದ ಕೆಲಸ ಸರಿಯಾಗಿ ಆಗುವುದಿಲ್ಲ ಎಂಬ ಮಾತನ್ನು ಹೇಳುತ್ತಾರೆ. ಇದು ಪೂರಾ ಸುಳ್ಳು ಎಂದು ಹೇಳುತ್ತೇನೆ. ಇದರಲ್ಲ ಕೆಲವು ಸುಧಾರಣೆಗಳನ್ನು ಮಾಡಬೇಕಾಗಿದೆ, ಅವನ್ನು ಮಾಡಿದರೆ ನಿಜವಾಗಿಯೂ ಕಲ್ಯಾಣವಾಗುತ್ತದೆ ಎಂದು ನನಗೆ ಅನಿಸುತ್ತದೆ. ಈಗ ಹಳ್ಳಿಯಲ್ಲಿ ಗ್ರಾಮ ಸೇವಾ ಸಹಕಾರ ಸಂಘ ಇದೆ. ಈ ಸಂಘಗಳಲ್ಲಿ ರೈತರಿಗೆ ಕೊಡುವಂತಹ ಸಾಲ, ಗೊಬ್ಬರ, ಬೀಜ ಇವುಗಳನ್ನಷ್ಟೇ ಅಲ್ಲಿ ಒದಗಿಸುವಂತಹುದು ಇರಬೇಕು, ಕನ್ಸ್ಯೂಮರ್ಸ್ ಗುಡ್ಸ್‌ಗೆ ಬೇರೆ ಒಂದು ಸೊಸೈಟಿ ಮಾಡಬೇಕೆಂದು ನನಗೆ ಅನಿಸುತ್ತದೆ. 5 ಸಾವಿರ ಜನಸಂಖ್ಯೆ ಇರತಕ್ಕ ಒಂದು ಹಳ್ಳಿ ಅಥವಾ ಒಂದು ಗುಂಪಿಗೆ ಎಲ್ಲಾ ತರಹದ ಸೌಕರ್ಯ ಇರುವಂತಹ ಒಂದು ಕನ್‌ಸ್ಯೂಮರ್ ಸೊಸೈಟಿಯ ಅಗತ್ಯ ಇದೆ. ಅದರಂತೆ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕ್‌ನ ಸೌಕರ್ಯ ಕೂಡ ರೈತರಿಗೆ ಬೇಕಾಗುತ್ತದೆ. ಭೂಮಿ ಕೊಡಿಸುವುದು, ಬಾವಿ ತೋಡಿಸುವುದು ಮತ್ತು ಐ.ಪಿ. ಸೆಟ್ಟುಗಳನ್ನು ಕೊಂಡುಕೊಳ್ಳಲು ಅದರ ಮೂಲಕ ಇನ್ನು ಮುಂದೆ ಸಾಲ ಕೊಡಬೇಕೆಂದು ಹೇಳುತ್ತೀರಿ. ಈಗ ಎಷ್ಟೋ ಜನರಿಗೆ ಅನಿಸುತ್ತದೆ, ಸಣ್ಣ ಸಾಲಕ್ಕೆ ಬೆಂಗಳೂರಿಗೆ ಹೋಗಬೇಕಲ್ಲಾ ಎಂದು. ಇಂತಹ ಒಂದು ಅಡಚಣೆ ಇವೆ. ಈ ಅಡಚಣೆಯನ್ನು ನಿವಾರಣೆ ಮಾಡಿ ತೀವ್ರ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕ್‌ನಲ್ಲಿ ಸಾಲ ಒದಗಿಸಬೇಕು. ಬೆಂಗಳೂರಿಗೆ ಬರುವುದಕ್ಕೆ ಬದಲಾಗಿ ಪ್ರತಿಯೊಂದು ಜಿಲ್ಲಾ ಬ್ಯಾಂಕ್‌ನಲ್ಲೂ ಕೂಡ ಇಂತಿಷ್ಟು ಮಟ್ಟದ ಸಾಲ ಕೊಡುವಂತಹ ಮತ್ತು ವಸೂಲು ಮಾಡುವಂತಹ ಎಲ್ಲಾ ತರಹದ ಜವಾಬ್ದಾರಿಯನ್ನೂ ವಹಿಸಬೇಕು. ಆ ತರಹ ಒಂದು ಅಧಿಕಾರ ಅವರಿಗೆ ಇರಬೇಕು, ಅಲ್ಲಿ ರೈತರಿಗೆ ಬೇಕಾಗುವಂತಹ ಸಾಲ ಅವನು ಅರ್ಜಿ ಕೊಟ್ಟ ಕೇವಲ ಒಂದು ತಿಂಗಳಿನಲ್ಲಿ ಸಿಕ್ಕಬೇಕು. ಈ ವ್ಯವಸ್ಥೆ ಇರಬೇಕೆಂದು ಅನಿಸುತ್ತದೆ.

ಈಗ ಡೈರಿ ಸ್ಕೀಂ ಎಲ್ಲಾ ಕಡೆಯಲ್ಲೂ ಆಗುತ್ತಾ ಇವೆ. ಬೆಳಗಾಂನಲ್ಲಿ ಒಂದು ಇದೆ, ಹುಬ್ಬಳ್ಳಿಯಲ್ಲಿ ಒಂದು ಇದೆ. ಬೆಂಗಳೂರಿನಲ್ಲೂ ಡೈರಿ ಸ್ಕೀಂ ಇದೆ. ಈ ಸ್ಕೀಂ ಇರುವಲ್ಲೆಲ್ಲಾ ಅದರ ಸುತ್ತುಮುತ್ತಲ ಪ್ರದೇಶದಲ್ಲಿ ಡೈರಿ ಸೊಸೈಟಿಗಳನ್ನು ಮಾಡಬೇಕು, ಗ್ರಾಮಸೇವಾ ಸಹಕಾರ ಸಂಘಕ್ಕೆ ಹೇಗೆ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಸಹಾಯ ಒದಗಿಸುತ್ತೀರೋ ಅದೇ ಪ್ರಕಾರ ಡೈರಿ ಸೊಸೈಟಿಗಳಿಗೂ ಸಹಿತ ಸಾಲವನ್ನು ಒದಗಿಸಿ ಸಬ್ಸಿಡಿ ಕೊಡುವುದು ಅಗತ್ಯ, ಅತ್ಯವಶ್ಯಕವಾಗಿದೆ. ಇದಕ್ಕೆ ಅತ್ಯಂತ ಮಹತ್ವದ ಪ್ರಾಧಾನ್ಯತೆಯನ್ನು ಕೊಡಬೇಕೆಂದು ತಿಳಿದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಐ.ಎ.ಪಿ. ಪ್ರೋಗ್ರಾಂ ಅಂತ ಮಾಡುತ್ತಾ ಇದ್ದೀರಿ, ಕೆಲವು ಜಿಲ್ಲೆಗಳಲ್ಲಿ ಅದು ಬರುತ್ತಾ ಇದೆ. ಬೆಳಗಾಂ ಜಿಲ್ಲೆಯಲ್ಲಿ ಐ.ಎ.ಪಿ. ಪ್ರೋಗ್ರಾಂ ಇದೆ, ಅಲ್ಲಿ ಡೆಪ್ಯೂಟಿ ಡೈರೆಕ್ಟರು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರರು, ಡೆಪ್ಯೂಟಿ ರಿಜಿಸ್ಟ್ರಾರರು ಮತ್ತು ಬ್ಯಾಂಕಿನವರು ಮಾಡಬೇಕಾದಂತಹ ಸೌಕರ್ಯಗಳೇನಿವೆ, ಸಾಲ ಕೊಡುವುದು, ಬೀಜ, ಗೊಬ್ಬರದ ಅನುಕೂಲತೆ ಇವುಗಳನ್ನು ಒಂದೆರಡು ತಿಂಗಳಿಗೆ ಮೊದಲಿಗೆ ಮಾಡಿ ಇಡಬೇಕು ಎಂದರೆ ರೈತರಿಗೆ ಅವರು ಒಂದು ಮುದತ್ತಿನಿಂದ ಸಾಲವನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ನಮ್ಮ ಪ್ರಾಂತ್ಯದಲ್ಲಿ ಈಗ ಶುಗರ್ ಫ್ಯಾಕ್ಟರಿಯನ್ನು ಕೋ-ಆಪರೇಟಿವ್ ಬೇಸಿಸ್ ಮೇಲೆ ಶುರು ಮಾಡಬೇಕೆಂದು ಹೇಳುತ್ತಾರೆ. ಅದನ್ನು ಕೋ-ಆಪರೇಟೀವ್ ಸೊಸೈಟಿ ಮುಖಾಂತರ ಮಾಡುವುದಕ್ಕೆ ಅಡ್ಡಿ ಇಲ್ಲ, ಪ್ರಗತಿಯಾಗುತ್ತದೆ. ನಮ್ಮ ರೈತರ ಒಂದು ಉಚ್ಚಮಟ್ಟದ ಕೋ-ಆಪರೇಟೀವ್ ಶುಗರ್ ಫ್ಯಾಕ್ಟರಿ ಕೆಲಸ ಮಾಡುತ್ತಾ ಇದೆ. ಸಂಕೇಶ್ವರದಲ್ಲಿ ಆಗಲಿ, ಕಂಪಲಿಯಲ್ಲಾಗಲಿ, ಪಾಂಡವಪುರದಲ್ಲಾಗಲಿ ಅವುಗಳೆಲ್ಲಾ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾ ಇದೆ. ಅವಕ್ಕೆ ಬೇಕಾಗುವಂತಹ ಸಾಲವನ್ನು ನೀವು ಏನು ಕೊಡ ಬೇಕೋ ಅಥವಾ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕೋ—ಅವರು ಯಾವಾಗ ಕೊಡು ತ್ತಾರೆಯೋ ಗೊತ್ತಿಲ್ಲ—ಅದನ್ನು ತೆಗೆದುಕೊಂಡು ಆ ಫ್ಯಾಕ್ಟರಿಗಳನ್ನು ಮುಂದುವರಿಸಬೇಕು. ಅಪೆಕ್ಸ್ ಬ್ಯಾಂಕಿನಿಂದಾಗಲಿ ಅಥವಾ ಬೇರೆ ಯಾವುದಾದರೂ ಕೋ-ಆಪರೇಟೀವ್ ಬ್ಯಾಂಕಿನಿಂದಾಗಲಿ ಅದಕ್ಕೆ ಬೇಕಾಗುವಷ್ಟು ಬಂಡವಾಳವನ್ನು ಅಲ್ಲಿ ಒದಗಿಸುವಂತಹ ಏರ್ಪಾಡು ಮಾಡಿದರೆ ಸಾಕಾದಷ್ಟು ಪ್ರಗತಿಯಲ್ಲಿ ನಮ್ಮಲ್ಲಿ ಸಕ್ಕರೆ ತಯಾರಾಗುತ್ತದೆ, ಈ ಪ್ರಾಂತ್ಯ ಬೇರೆ ಪ್ರಾಂತ್ಯಗಳಿಗೂ ಸಹಿತ ಸಕ್ಕರೆಯನ್ನು ಕೊಡುವಷ್ಟು ಶಕ್ತಿ ಬರುತ್ತದೆ, ಅಂತಹ ಏರ್ಪಾಡು, ಅನುಕೂಲ ಆಗಬೇಕೆಂದು ಹೇಳುತ್ತೇನೆ. ಎರಡನೆಯ ವಿಷಯ ಎಂದರೆ ಈಗ ಪಂಚಾಯಿತ್ತಿಗಳು ಏನಿವೆ ಇವು ಮೂರು ತರಹ ದಿಂದ ಕೆಲಸ ಮಾಡುತ್ತಾ ಇವೆ. ಒಂದು ಜಿಲ್ಲಾ ಪರಿಷತ್ತು, ಒಂದು ಟಿ.ಡಿ. ಬೋರ್ಡು ಮತ್ತು ಮೂರನೆಯದು ಪಂಚಾಯಿತ್ತಿ. ಈ ಮೂರು ಸಂಸ್ಥೆಗಳ ಮುಖೇನ ಕೆಲಸ ನಡೆಯುತ್ತಾ ಇದೆ. ಇದರ ಮೂಲಕವೇ ಪ್ರತಿಯೊಂದು ಕಾರ್ಯವೂ ಪ್ರಗತಿಪರವಾಗಿ ಆಗಬೇಕು. ಈಗ ಉತ್ತರ ಕರ್ನಾಟಕದಲ್ಲಿ ಪಂಚಾಯಿತ್ತಿ ಸೆಕ್ರೆಟರಿಗಳನ್ನು ನೇಮಕ ಮಾಡಿದ್ದೀರಿ, ಅವರು 6ನೇ ಎತ್ತೆ ಕಲಿತಿ ದ್ದಾರೋ, ಮುಲ್ಕಿ ಪರೀಕ್ಷೆ ಪಾಸ್ ಮಾಡಿದ್ದಾರೋ ಇಲ್ಲವೊ ಗೊತ್ತಿಲ್ಲ, ಅಂತಹವರಿಂದ ಈಗ ಏನೂ ಅನುಕೂಲವಾಗಿಲ್ಲ, ಕನ್ನಡ ರಾಜ್ಯ ಎಂದು ಹೇಳುತ್ತೇವೆ ಎಲ್ಲವನ್ನೂ ಕೂಡ ಇಂಗ್ಲೀಷ್‌ನಲ್ಲೇ ಬರೆ ಯುತ್ತಾರೆ, ಆ ಕಾಗದ ಪತ್ರಗಳಲ್ಲಿ ಸೂಚನೆ ಮಾಡಿರುವುದು ಸಹಿತ ಅವರಿಗೆ ಗೊತ್ತಾಗುವುದಿಲ್ಲ, ಆದ್ದರಿಂದ ಕನಿಷ್ಟ ಪಕ್ಷ ಎಸ್. ಎಸ್. ಎಲ್. ಸಿ. ಪಾಸ್ ಆದಂಥವರ ಒಬ್ಬರನ್ನು ಅಲ್ಲಿನ ಸೆಕ್ರೆಟರಿ ಮತ್ತು ಒಬ್ಬ ಕಾರಕೂನರನ್ನು ಇಡಬೇಕು. ಅದಕ್ಕೆ ಅವಕಾಶ ಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನು ಒಂದೇ ಒಂದು ಮಾತು. ಹರಿಜನರ ಸೊಸೈಟಿಗಳಿಗೆ ಫಂಡ್ ಇದೆ, ಆದರೆ ಸಾಲ ಅವುಗಳಿಂದ ಸಿಕ್ಕಿಲ್ಲ. ಆ ಕೆಲಸ ತೀವ್ರ ಆಗುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ಈ ಬೇಡಿಕೆಗಳನ್ನು ನಾನು ವಿರೋಧಿಸಬೇಕಾದ ಕಾರಣವಾದರೂ ಇಷ್ಟೆಯೇ. ರೂರಲ್ ಡೆವಲಪ್‌ಮೆಂಟ್ ಅಂತ ಇದೆ, ಈಗಿನ ಆಡಳಿತದ ವೈಖರಿಯಿಂದ ಹಳ್ಳಿಗಳು ಉನ್ನತಿಗಿಂತ ದಿನೇ ದಿನೇ ಅಧೋಗತಿಗೆ ಇಳಿಯುತ್ತಾ ಇದೆ. ಎರಡನೆಯದು ಈ ಕೋ-ಆಪರೇಷನ್‌ನಲ್ಲಿ ಸರಕಾರ ಬಿಟ್ಟುಬಿಟ್ಟರೆ ಮಿಕ್ಕ ಎಲ್ಲಾ ವ್ಯವಹಾರಗಳೂ ಅಲ್ಲಿ ನಡೆಯುತ್ತವೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತು ದೇಶದ ಉತ್ಪನ್ನವನ್ನು ಹೆಚ್ಚು ಮಾಡಿ, ದೇಶದ ಸುಖಸಂಪತ್ತನ್ನು ಹೆಚ್ಚಿಸುವುದಕ್ಕೆ ಬದಲಾಗಿ ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಎನ್. ಇ. ಎಸ್. ಸ್ಕೀಂಗಳು ದೇಶಕ್ಕೆ ಹೊರೆಯಾಗಿವೆ, ಆದ್ದರಿಂದ ಎಷ್ಟು ಜಾಗ್ರತೆ ಈ ಸ್ಕೀಂಗಳನ್ನು ದೂರ ಇಡುತ್ತೇವೆಯೋ ಅಷ್ಟೂ ದೇಶಕ್ಕೆ ಹಿತ, ಅದಕ್ಕೆ ಆಗತಕ್ಕ ಖರ್ಚನ್ನು ಬೇರೆ ಯಾವುದಾದರೂ ಲೋಕೋಪಯೋಗಿ ಕೆಲಸಕ್ಕೆ ಉಪಯೋಗ ಮಾಡಿದರೆ ದೇಶಕ್ಕೆ ಕಲ್ಯಾಣವಾಗುತ್ತದೆ ಎಂದು ಹೇಳಿ ಈ ಮುನಿಸಿಪಲ್ ಅಡ್ಮಿನ್‌ಸ್ಟ್ರೇಷನ್ ಮತ್ತು ಅದಕ್ಕೆ

ಸಂಬಂಧಪಟ್ಟ ಮಿಸಲೇನಿಯಸ್ ಬೇಡಿಕೆ ಏನಿದೆಯೋ ಅದರ ಬಗ್ಗೆ ಡೆಮಾಕ್ರೆಸಿ ಹೆಸರಿನಲ್ಲಿ—ಡೆಮಾಕ್ರೆಸಿಗೆ ಮೂಲವಾದಂತಹ ಲೋಕಲ್ ಬಾಡೀಸನ್ನು ಕೊಲೆ ಮಾಡುತ್ತಾ ಇರತಕ್ಕದ್ದು ಬಹಳ ಅನ್ಯಾಯ ಮತ್ತು ಅಕ್ರಮ ಎಂದು ಹೇಳಿ ಈ ಬೇಡಿಕೆಯನ್ನು ನಾನು ವಿರೋಧಿಸಬೇಕಾಗಿದೆ. ನನ್ನ ಮಿತ್ರರು ಬೇರೆ ಬೇರೆ ಬೇಡಿಕೆಗಳ ಮೇಲೆ ಮಾತನಾಡಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಆದಮೇಲೆ ಬೆಂಗಳೂರಿನ ನಾಗರೀಕರು ಅನಾಥರಾಗಿರುವುದರಿಂದ ಬೆಂಗಳೂರು ನಗರದ ಸೌಲಭ್ಯದ ವಿಚಾರದಲ್ಲಿ ಮಾತ್ರ ಕೆಲವು ಮಾತುಗಳನ್ನು ಆಡಿ ನನ್ನ ಮಾತನ್ನು ಪೂರೈಸುತ್ತೇನೆ. ಮೊದಲನೆಯದಾಗಿ, ಈಗ್ಗೆ 6 ತಿಂಗಳ ಕೆಳಗೆ ಬೆಂಗಳೂರು ನಗರದ ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡುವುದಕ್ಕೆ ಒಂದು ಆಜ್ಞೆಯನ್ನು ಹೊರಡಿಸಲಾಯಿತು. ಆದರೆ ನಾನು ಇದರ ವಿಚಾರವಾಗಿ ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಮಗೆ 14 ಕಾರಣಗಳ ಮೇಲೆ, ಹಾಗೂ ನಾಗರೀಕರ ಬೇಡಿಕೆಗಳ ಬಗ್ಗೆ ಸರ್ಕಾರದವರು ಮಾಡಿರತಕ್ಕ ಅನ್ಯಾಯದ ಬಗ್ಗೆ.........

5-00 P.M.

Mr. SPEAKER.—Is the matter pending in the High Court ?

Sri T. R. SHAMANNA.—I am a party to it. I know my limitations.

Mr. SPEAKER.—That is right. Let not the member bring in any matter which will land me and the member in trouble.

Sri T. R. SHAMANNA.—I am fully aware of it, Sir. ಆದರೆ ನಾನೇನು ಈ ದಿವಸ ಬೆಂಗಳೂರು ನಾಗರೀಕರ ಬಗ್ಗೆ ಅವರಿಗೆ ಸಂಬಂಧಪಟ್ಟ ಹಾಗೆ ಯಾವ ಆ 14 ವಿಷಯಗಳ ಬಗ್ಗೆ ನಾನು ಕಟ್‌ಮೋಷನ್‌ಗಳನ್ನು ಸೂಚನೆ ಮಾಡಿದ್ದೇನೆಯೋ ಅವುಗಳನ್ನು ಪರಿಶೀಲನೆ ಮಾಡಿ ಸರ್ಕಾರದವರು ಬಗೆಹರಿಸದೆ ಹೋದರೆ ಇವರು ನಾಗರೀಕರಿಗೆ ಬಹಳ ದ್ರೋಹ ಮಾಡಿದಂತೆ ಆಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೊದಲನೆಯದಾಗಿ ಈಗಿರತಕ್ಕ ಬೆಂಗಳೂರಿನ ನೀರಿನ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕಾಗಿ ಕಳೆದ 30 ತಿಂಗಳುಗಳಿಂದಲೂ ಬೆಂಗಳೂರಿನ ನಾಗರೀಕರು ಕೇಳುತ್ತಿದ್ದರೂ ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ಆ ನಾಗರೀಕರ ಕಷ್ಟ ಹೇಳುವುದಕ್ಕಾಗುವುದಿಲ್ಲ. ಆ ನಾಗರೀಕರು ಸರ್ಕಾರಕ್ಕೆ ಮನವಿಗಳನ್ನು ಕೊಡುವುದರ ಮೂಲಕ ಹಾಗೂ ಪ್ರದರ್ಶನ, ಬೆಂಗಳೂರ್ ಬಂದುಗಳನ್ನು ಮಾಡುವುದರ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದವರ ಮುಂದಿಟ್ಟರೂ ಅವರು ಆ ಬೇಡಿಕೆಗಳನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳದೆ ತಮ್ಮ ಕಿವುಡುತನವನ್ನೂ, ಕಲ್ಲೆದೆಯನ್ನೂ ಸೂಚಿಸುತ್ತಿರುವುದು ಬಹಳ ಆಶ್ಚರ್ಯವಾಗಿದೆ. ಇವರು ಆ ವರ್‌ಲ್ಡ್ ಬ್ಯಾಂಕಿನಿಂದ ಹಣವನ್ನು ಸಾಲಪಡೆಯುವುದಕ್ಕೆ ಪ್ರಯತ್ನ ನಡೆಸುತ್ತಿದ್ದೇವೆ ಎಂದು ನೆಪವನ್ನು ಹೇಳಿಕೊಂಡು ಪ್ಲಾನಿಂಗ್‌ಸಮಿತಿ ಸದಸ್ಯರೊಬ್ಬರು ಇದನ್ನು ಮುಂದೂಡುತ್ತಿದ್ದಾರೆ. ಆದರೆ ಆ ಸದಸ್ಯರೊಬ್ಬರು ಈ ಬೆಂಗಳೂರು ನಗರದಲ್ಲಿ ಒಂದು ಸೈಟನ್ನು ಪಡೆಯಲು ಇಲ್ಲಿಗೆ ಹತ್ತಾರಾವರ್ತಿ ಬಂದು ......

Mr. SPEAKER.—Under the pretext of dealing with the World Bank loan, it is not proper to drag in the name of some big personage who is not present here to defend himself.

ಶ್ರೀ ಟಿ. ಆರ್. ಶಾಮಣ್ಣ.—ಆ ಒಂದು ಕಾರಣದಿಂದ ಅವರು ಸಾಲ ಕೊಡುವುದನ್ನು ಒಂದು ಕನ್ನಡಿಯೊಳಗಣ ಗಂಟಿನಂತೆ ತೋರಿಸುತ್ತಿದ್ದಾರೆ. ಆ ವರ್‌ಲ್ಡ್ ಬ್ಯಾಂಕಿನಿಂದ ಹಣ ಬರುವುದಿಲ್ಲವೆಂದು ಎಲ್ಲರೂ ನಿರಾಶರಾಗಿದ್ದಾರೆ. ಆ ಸಾಲವನ್ನು ತೆಗೆದುಕೊಳ್ಳುವುದರಿಂದ ಬೆಂಗಳೂರು ನಾಗರೀಕರಿಗೇನೂ ಒಳ್ಳೆಯದಾಗುವುದಿಲ್ಲ, ಅಲ್ಲಿ ಸಾಲವೂ ಸಿಕ್ಕುವುದಿಲ್ಲ. ಹೀಗಿದ್ದರೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕಾವೇರಿ ನದಿಯ ನೀರನ್ನು ನಾವು ಆ ಭಗೀರಥನಂತೆ ಪ್ರಯತ್ನ ಮಾಡಿ ತಂದೇ ತರುತ್ತೇವೆಂದು ಪ್ರಚಾರ ಮಾಡುತ್ತಾ ಇದುವರೆಗಾಗಲೇ 2-3 ಕೋಟಿ ರೂಪಾಯಿಗಳನ್ನು ದಂಡಮಾಡಿದ್ದಾರೆ. ಹೀಗಾಗಿ ಹಿಂದೆ ಈ ನೀರಿನ ಸಮಸ್ಯೆ ಯಾವ ಸ್ಥಿತಿಯಲ್ಲಿತ್ತೋ ಇಂದೂ ಅದೇ ಸ್ಥಿತಿಯಲ್ಲಿದೆ. ಆ ನೀರಿನ ಬಗ್ಗೆ ಬರತಕ್ಕ ಬಿಲ್ಲುಗಳಾದರೋ ಎದ್ವಾತದ್ವ ಬರುತ್ತಿವೆ. ಇಷ್ಟಾದರೂ ಈ ಅತಿ ಜರೂರಾದ ಸಮಸ್ಯೆಯನ್ನು ಪರಿಹರಿಸದಿರುವುದು ಸರ್ಕಾರದವರ ಮೊಂಡತನ. ಈ ದಿವಸವೇನೋ ಇದಕ್ಕೆ ಸಂಬಂಧಪಟ್ಟ ಮಾನ್ಯ ಪಾಟೀಲ್‌ರವರು ಮಂತ್ರಿಗಳಾಗಿರಬಹುದು. ಆದರೆ

(ಶ್ರೀ ಟಿ. ಆರ್. ಶಾಮಣ್ಣ)

ಅವರೀಗ ಇದೇ ಬೆಂಗಳೂರು ನಗರದಲ್ಲಿ ಖಾಯಂ ಆಗಿ ಮನೆಯನ್ನು ಕಟ್ಟಿಕೊಂಡಿರುವುದರಿಂದ ಅವರು ಇಂದಲ್ಲ, ನಾಳೆ ನಮ್ಮ ಹಾಗೆಯೇ ಒಬ್ಬ ನಾಗರೀಕರಾಗಿ ಇಲ್ಲಿ ಉಳಿಯುತ್ತಾರೆಂಬುದನ್ನು ಅವರು ಮರೆಯಬಾರದು. ಈ ದಿವಸ ಆ ನಾಗರೀಕರಿಗೆ ಬರುತ್ತಿರುವ ಎಡ್ವಾನ್ಸ್‌ತದ್ವ ಬಿಲ್ಲುಗಳ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ ಅವರು ನಾಳೆ ಈ ನಾಗರೀಕರ ಸೇಡಿಗೆ ಗುರಿಯಾಗುತ್ತಾರೆ, ಅವರು ಹೊಣೆಗಾರರೂ ಕೂಡ ಆಗುತ್ತಾರೆ. ಆದುದರಿಂದ ಅವರು ಇದನ್ನು ಆದಷ್ಟು ಬೇಗ ಪರಿಹರಿಸಬೇಕೆಂದು ನಾನು ಅದನ್ನು ಒತ್ತಾಯ ಮಾಡುತ್ತೇನೆ.

ಇನ್ನು ನಾನೀಗ ಅಲ್ಲಿ ನೇಮಕವಾಗಿರತಕ್ಕ ಕಾರ್ಪೊರೇಷನ್ ಅಡ್ಮಿನಿಷ್ಟ್ರೇಟರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಅದು ಸೂಪರ್‌ಸೀಡ್ ಆಗುವುದಕ್ಕೆ ಮುನ್ನ ಅಲ್ಲಿ ಒಂದು ಕೋಟಿ 18 ಲಕ್ಷ ರೂಪಾಯಿಗಳನ್ನು ರಿಜರ್ವಿನಲ್ಲಿ ಇಡಲಾಗಿತ್ತು. ಈ ದಿವಸ ಅದರಲ್ಲಿ ಕೇವಲ 70—75 ಲಕ್ಷ ರೂಪಾಯಿಗಳು ಮಾತ್ರ ಉಳಿದಿದೆ. ಅಲ್ಲಿ ಈ ದಿವಸ ಸುಮಾರು ದಿನಕ್ಕೆ 60 ಸಾವಿರ ರೂಪಾಯಿಗಳ ಉತ್ಪನ್ನವಿದ್ದರೆ, ಅಲ್ಲಿ ದಿನಕ್ಕೆ 70—80 ಸಾವಿರ ರೂಪಾಯಿಗಳ ಖರ್ಚನ್ನು ಮಾಡಲಾಗುತ್ತಿದೆ.

ಇನ್ನು ಈಗಿರತಕ್ಕ ಅಡ್ಮಿನಿಸ್ಟ್ರೇಟರು ಹಾಲಿ ಇದ್ದ ಮನೆಕಂದಾಯವನ್ನು ರಿವೈಜ್ ಮಾಡುತ್ತೇವೆಂದು ಹೇಳಿ ಎಡ್ವಾನ್ಸ್‌ತವ್ಯಾ ಮಾಡುತ್ತಿದ್ದಾರೆ. ಈ ದಿವಸ ಈ ವಿಚಾರದಲ್ಲಿ ಲಂಚ ಕೊಟ್ಟವರಿಗೊಂದು ನ್ಯಾಯವಿದೆ, ಲಂಚ ಕೊಡದವರಿಗೆ ಒಂದು ನ್ಯಾಯ ಇದೆ, ಹೀಗಾಗಿ ಕಾರ್ಪೊರೇಷನ್ ಮುಂದೆ ಈ ದಿವಸ 18 ಸಾವಿರ ಅಪೀಲ್ ಅಪ್ಲಿಕೇಷನ್‌ಗಳು ಬಿದ್ದಿವೆ. ಈಗ ಅವರು ಆ ಅನ್ಯಾಯವನ್ನೆಲ್ಲಾ ಪರಿಹರಿಸಿದರೆ ಸರಿ ಇಲ್ಲವಾದರೆ ಆ ಜನರ ಕಷ್ಟ ನಷ್ಟಗಳಿಗೆಲ್ಲಾ ಇವರೇ ಕಾರಣರಾಗಬೇಕಾಗುತ್ತದೆ. ಮೊದಲು ಅಲ್ಲಿ ಕಾರ್ಪೊರೇಟರುಗಳಿದ್ದಾಗ ಒಂದು ಕೆಲಸಕ್ಕೆ 15—20 ರೂಪಾಯಿ ಖರ್ಚಾಗುತ್ತಿದ್ದರೆ ಈ ದಿವಸ ಅಲ್ಲಿ ಅಡ್ಮಿನಿಸ್ಟ್ರೇಟರ ಆಡಳಿತದಲ್ಲಿ 200-300 ರೂಪಾಯಿಗಳು ಅದೇ ಕೆಲಸಕ್ಕೆ ಖರ್ಚಾಗುತ್ತಿದೆ. ಅಲ್ಲಿ ಒಂದು ಹಳೆ ಗಾದೆ ಇದೆ. ಹಳೇ ಕಲ್ಲು-ಹೊಸ ಬಿಲ್ಲು ಎಂದು. ಅಂದರೆ ಅಲ್ಲಿದ್ದ ಹಳೇ ಕಲ್ಲುಗಳನ್ನೇ ಹಾಕಿ ಕಂಟ್ರಾಕ್ಟರುಗಳು ಹೊಸ ಬಿಲ್ಲನ್ನು ಮಾಡಿ ಹಣವನ್ನು ಪಡೆಯುತ್ತಿದ್ದಾರೆ. ಹೀಗೆ ಅಲ್ಲಿ ಈ ದಿನ ನಾಗರೀಕರ ಹಣ ಲೂಟಿಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಕೂಡಲೆ ಒಂದು ತನಿಖೆ ನಡೆಯಬೇಕು. ಅಲ್ಲಿ ಖರ್ಚಾಗಿರತಕ್ಕ, ಇಲ್ಲಿಯವರೆಗಿನ ಖರ್ಚುವೆಚ್ಚಗಳ ಬಗ್ಗೆ ಸರಿಯಾದ ದುಡ್ಡುಕಾಸಿನ ಲೆಕ್ಕಪತ್ರಗಳನ್ನು ಸರ್ಕಾರದವರು ಒದಗಿಸದೆ ಹೋದರೆ ಆ ಎಲ್ಲಾ ಖರ್ಚುವೆಚ್ಚಗಳಿಗೂ ಇವರೇ ಹೊಣೆಗಾರರೂ ಮತ್ತು ಜವಾಬ್ದಾರರೂ ಆಗಬೇಕಾಗುತ್ತದೆ.

ಇನ್ನು ಬೆಂಗಳೂರಿನಲ್ಲಿರತಕ್ಕ ಸೊಳ್ಳೆಗಳ ಕಾಟದ ವಿಚಾರಕ್ಕೆ ಬಂದರೆ ನಾವಿದ್ದಾಗ ಅದನ್ನು ನಿವಾರಣೆಮಾಡುವುದಕ್ಕೇನೋ ನಮ್ಮಿಂದ ಸಾಧ್ಯವಾಗಲಿಲ್ಲ. ಆದರೆ ಈಗ ಅದನ್ನು ಸರಿಪಡಿಸಿ ಅನುಕೂಲಮಾಡತಕ್ಕ ಕಾರ್ಯಕ್ರಮವನ್ನು ಅಡ್ಮಿನಿಷ್ಟ್ರೇಟರು ತೆಗೆದುಕೊಳ್ಳಬಹುದಾಗಿತ್ತು. ಹಾಗೆ ಇಲ್ಲಿಯವರೆಗೂ ಇವರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳದಿರುವುದೂ ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಬಿದ್ದಿರುವ ಒಂದು ಕ್ರಿಯಾರೋಪವೆಂದು ಹೇಳಬಹುದು. ಈ ದಿವಸ ನಗರದ ರಸ್ತೆ ರಸ್ತೆಗಳಲ್ಲಿ ಇಟ್ಟಿರತಕ್ಕ ಕಸದ ಬುಟ್ಟಿಗಳಲ್ಲಿ ಎಲ್ಲಬಿದ್ದಿರುವ ಕಸ ಅಲ್ಲೇ ಬಿದ್ದಿರುತ್ತದೆ. ಅದನ್ನು ವಿಚಾರ ಮಾಡತಕ್ಕವರೇ ಇಲ್ಲ. ಬೆಂಗಳೂರು ನಗರದ ಪರಿಸ್ಥಿತಿ ಹೀಗಾದುದು ವಿಷಾದಕರ. ಇತ್ತೀಚೆಗೆ ಬೆಂಗಳೂರು ಕಾರ್ಪೊರೇಷನ್ನಿಗೆ 34 ಹಳ್ಳಿಗಳನ್ನು ಸೇರಿಸಿದ್ದಾರೆ. ಆ ಹಳ್ಳಿಗಳಿಗೆ ತಗಲುವ ವೆಚ್ಚವನ್ನೆಲ್ಲಾ ಟ್ರಸ್ಟ್ ಬೋರ್ಡಿನವರ ಮೂಲಕ ಕೊಡಿಸಿ ಅಲ್ಲಿ ಆಗಬೇಕಾದ ಕೆಲಸಗಳನ್ನು ಮಾಡಿಸುತ್ತೇವೆಂದು ಹೇಳಿದ್ದರು. ಆ ಭರವಸೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈ ದಿವಸ ಆ ಕಾರ್ಪೊರೇಷನ್ನಿನ ಆಡಳಿತ ಕೂಡ ಸರಿಯಾಗಿಲ್ಲ. ಎಲ್ಲಿ ನೋಡಿದರೂ ಅವ್ಯವಸ್ಥೆಯೇ. ಈ ವಿಚಾರದಲ್ಲಿಯೂ ಕೂಡ ಸರ್ಕಾರದವರು ಆ ಹಳ್ಳಿಯ ಜನರಿಗೆ ದ್ರೋಹ ಮಾಡಿದ್ದಾರೆಂದು ಹೇಳಬೇಕಾಗಿದೆ.

ಇನ್ನು ಇಲ್ಲಿ ಸ್ಲಂ ಕ್ಲಿಯರೆನ್ಸ್ ಬಗ್ಗೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 40 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಲಾಗಿತ್ತು. ಆ 40 ಲಕ್ಷ ಖರ್ಚಾದರೂ ಇಲ್ಲಿದ್ದ ಒಂದು ಸ್ಲಂ ಕೂಡ ಕ್ಲಿಯರಾಗಲಿಲ್ಲ. ಹೀಗೆ ಇಲ್ಲಿಗೆ ಮೂರು ವರುಷಗಳ ಕೆಳಗೆ ಆ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ನ್ನು ಕೊಂಡುಕೊಳ್ಳಲಾಯಿತು. ಆದರೆ ಅದನ್ನು ಯಾವ ಉದ್ದೇಶಕ್ಕಾಗಿ ಕೊಳ್ಳಲಾಯಿತೋ ಆ ಉದ್ದೇಶಕ್ಕೆ ಅದನ್ನು ಉಪಯೋಗಿಸದೆ ಇರುವುದರಿಂದ ಅದರ ಬಾಗಿಲು, ಕಿಟಕಿಗಳು ಅಲ್ಲೇ ಬಿದ್ದು ಹಾಳಾಗುತ್ತಿವೆ. ಅಲ್ಲಿ ಅಕ್ರಮವಾಗಿ ಯಾರು ಯಾರೋ ಬಾಡಿಗೆಯನ್ನೂ ಕೊಡದೆ ಉಳಿದುಕೊಂಡಿದ್ದಾರೆ. ಇದರ ಎಲ್ಲಾ ಹೊಣೆಗಾರಿಕೆಯೂ ಸರ್ಕಾರದವರ ಮೇಲೆ ಬಿದ್ದಿರುತ್ತದೆ. ಆ ಬಗ್ಗೆ ನಡೆದಿರತಕ್ಕ ಎಲ್ಲ ತಪ್ಪುಗಳಿಗೂ ಇವರೇ ಹೊಣೆಗಾರರು. ಸರ್ಕಾರದವರು ತಾವೇನು ತಪ್ಪು

ಮಾಡಿದ್ದೇವೆ ರುಜುವಾತು ಮಾಡಿ ಎಂದು ಕೇಳಬಹುದು. ಆದರೆ ಫಸ್ಟ್ ಸ್ಟೇಜಿನಲ್ಲಿ ಇಲ್ಲಿಯ ಸ್ಲಂಗಳನ್ನು ಕ್ಲಿಯರ್ ಮಾಡದೆ ಇದ್ದದ್ದೂ, ಟ್ರಸ್ಟ್ ಬೋರ್ಡಿನ ಮೂಲಕ ಆ ಹಳ್ಳಿಯ ಜನರಿಗೆ ಚರಂಡಿ ಇತ್ಯಾದಿ ಅನುಕೂಲಗಳನ್ನು ಮಾಡಿಸಿಕೊಡುವುದಾಗಿ ಕೊಟ್ಟಿದ್ದ ಭರವಸೆ ಇವೆಲ್ಲಕ್ಕೂ ಇವರೇ ಹೊಣೆಗಾರರು. ಈ ಎಲ್ಲಾ ಪ್ರಶ್ನೆಗಳಿಗೂ ಸರ್ಕಾರದವರು ಸರಿಯಾದ ಉತ್ತರವನ್ನು ಕೊಡದಿದ್ದರೆ ಅವರು ನಿಜವಾಗಿಯೂ ತಲೆತಗ್ಗಿಸಬೇಕಾಗುವುದು. ಇನ್ನು ಮಲ್ಲೇಶ್ವರ ಮತ್ತು ರಾಜಾಜಿನಗರದಲ್ಲಿ ಮಾರ್ಕೆಟ್ ಕಟ್ಟಡಗಳನ್ನು ಕಟ್ಟಿಸಿ ಇಲ್ಲಿಯವರೆಗೂ ಅವುಗಳನ್ನು ಅಲಾಟ್ ಮಾಡದೆ ವಿಳಂಬ ಮಾಡಿದ್ದಾರೆ. ಅದಕ್ಕೆ ಆ ಕಮಿಷನರೇ ಕಾರಣ. ಹಾಗೆ ತಪ್ಪುಮಾಡತಕ್ಕವರು ಯಾರು ಎಂಬುದನ್ನು ನಿರ್ಧರಿಸಿ ಆ ವಿನಾಕಾರಣ ಲುಕ್ಸಾನಾಗಿರತಕ್ಕ ಹಣವನ್ನು ಅವರ ಸಂಬಳದಿಂದ ಭರ್ತಿ ಮಾಡುವಂತೆ ಏಕೆ ಮಾಡಬಾರದು, ಆ ಖರ್ಚನ್ನು ಏಕೆ ಅವರ ತಲೆ ಮೇಲೆ ಹಾಕಬಾರದು ? ಮತ್ತು ಈಗ ಕಾರ್ಪೊರೇಷನ್ನಿನಲ್ಲಿ ಯದ್ವಾ ತದ್ವಾ ಆಫೀಸರುಗಳನ್ನು ತುಂಬಿದ್ದಾರೆ. ಇವರುಗಳಿಗೆ ಕುಳಿತುಕೊಳ್ಳುವುದಕ್ಕೇ ಜಾಗವಿಲ್ಲ. ಇದರ ಬಗ್ಗೆ ಸರಕಾರ ಗಮನ ಕೊಟ್ಟು ಈ ಹೆಚ್ಚು ಸಿಬ್ಬಂದಿಯ ಅವಶ್ಯಕತೆ ಬಗ್ಗೆ ತನಿಖೆ ನಡೆಸಬೇಕು. ಕಾರ್ಪೊರೇಷನ್ನಿಗೆ ಬರಬೇಕಾದ ವರಮಾನಗಳ ಬಗ್ಗೆ ಈ ಹಿಂದೆ ಕೂಡ ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಮಸೂದೆ ಬಂದಿದ್ದಾಗ ಮಾತನಾಡಿದ್ದೇನೆ. ಕಾರ್ಪೊರೇಷನ್ನಿಗೆ ಸರಕಾರ ಕೊಡಬೇಕಾದ ನ್ಯಾಯವಾದ ಪಾಲನ್ನೂ ಕಾರ್ಪೊರೇಷನ್ನಿಗೆ ಕೊಡುತ್ತಿಲ್ಲ. ಮೋಟಾರು ವೆಹಿಕಲ್ಸ್ ಟ್ಯಾಕ್ಸಿನಿಂದ ಸುಮಾರು ಒಂದೂಮುಕ್ಕಾಲು ಕೋಟಿಯಷ್ಟು ವರಮಾನ ಬಂದರೂ ಬೆಂಗಳೂರಿನಲ್ಲಿ ಸರಕಾರ ಕೇವಲ ಐದು ಲಕ್ಷಗಳಷ್ಟು ಹಣವನ್ನು ಮಾತ್ರ ಕಾರ್ಪೊರೇಷನ್ನಿಗೆ ಕೊಡುತ್ತಿದೆ. 70-80 ಲಕ್ಷದ ಖರ್ಚಿನ ರಸ್ತೆ ರಿಪೇರಿ ಇತ್ಯಾದಿ ಕೆಲಸ ಕೆಲಸಗಳನ್ನು ಹೇಗೆ ಮಾಡಲು ಸಾಧ್ಯ ಎನ್ನುವುದನ್ನು ಸರಕಾರ ಯೋಚಿಸಿಲ್ಲ. ಬಾಯಲ್ಲಿ ಏನೋ ವೇದಾಂತ ಹೇಳುತ್ತಾರೆ. ಕಾರ್ಯತಃ ಏನನ್ನೂ ಮಾಡುತ್ತಿಲ್ಲ. ಇದು ಬಹಳ ವಿಷಾದಕರ. ಅಲ್ಲದೆ ಡಿ. ಎ. ವಿಚಾರದಲ್ಲಿ ಕೂಡ ಎಕ್ಸೆಪ್ಟ್ ಕಾರ್ಪೊರೇಷನ್ ಆಫ್ ದಿ ಸಿಟಿ ಆಫ್ ಬೆಂಗಳೂರು ಎಂದು ಸರಕಾರ ತನ್ನ ನೋಟಿಫಿಕೇಷನ್ನಿನಲ್ಲಿ ನಿರ್ದಿಷ್ಟವಾಗಿ ಹೇಳಿದೆ. ಹೀಗಾದರೆ ಕಾರ್ಪೊರೇಷನ್ನಿನಲ್ಲಿರುವ ನೌಕರರುಗಳನ್ನು ಕೇಳುವವರು ಯಾರೂ ಇಲ್ಲವೇ ? ಅವರೇನು ಪಾಪ ಮಾಡಿದರು ಡಿ. ಎ. ಮಾತ್ರ ಪಡೆಯದೇ ಇರುವುದಕ್ಕೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಸರಕಾರವೇನೋ ಕಾರ್ಪೊರೇಷನ್ನನ್ನು ಸೂಪರ್ ಸೀಡ್ ಮಾಡಿತು. ಅದೇನೋ ಸರಿ ಎಂದು ಹೇಳುವುದಿಲ್ಲ. ಇದರ ಉದ್ದೇಶ ಇಷ್ಟು. ಹೇಗಾದರೂ ಒಂದು ರೀತಿ ಮಾಡಿ ಕಾರ್ಪೊರೇಷನ್ನಿನ ಆಡಳಿತವನ್ನು ಸರಕಾರದ ಕೈಯೊಳಗೆ ಇಟ್ಟುಕೊಂಡರೆ ಅನುಕೂಲ ಮತ್ತು ಬೆಂಗಳೂರು ನಗರದ ಆಡಳಿತ ತಮ್ಮ ಕೈಯ್ಯಲ್ಲಿರಬೇಕೆಂದು ಮಾತ್ರ ಇದರಲ್ಲಿರುವ ಉದ್ದೇಶವೇ ವಿನಾ ಬೇರೇನೂ ಇಲ್ಲ. ಬೆಂಗಳೂರು ನಾಗರಿಕರಿಗೆ ಸರಿಯಾದ ಸೌಕರ್ಯಗಳು ಸರಕಾರದಿಂದ ದೊರೆಯದ ಪಕ್ಷದಲ್ಲಿ ಅದಕ್ಕೆಲ್ಲಾ ಸರಕಾರದವರೇ ಹೊಣೆಗಾರರು ಆಗುತ್ತಾರೆ ಮತ್ತು ಹೆಚ್ಚು ಕಾಲ ನಾಗರಿಕರು ಇದನ್ನು ಸಹಿಸುವುದಿಲ್ಲ. ಮುಂದೆ ಇದಕ್ಕೆ ಬೇಕಾದ ಕಾರ್ಯಕ್ರಮವನ್ನೂ ನಾಗರಿಕರು ಹಾಕಿಕೊಳ್ಳಲು ತಯಾರಾಗಿದ್ದಾರೆ ಮತ್ತು ತಕ್ಕ ಕ್ರಮವನ್ನು ತೆಗೆದುಕೊಂಡೇ ತೀರುತ್ತಾರೆ. ಮುಖ್ಯವಾದ ನೀರಿನ ಸಮಸ್ಯೆಯನ್ನು ಬಗೆಹರಿಸದೇ ಹೋದರೆ ಈ ನಗರದ ಎಲ್ಲ ಜನರ ಕಷ್ಟನಷ್ಟಗಳಿಗೂ ಸರಕಾರವೇ ಹೊಣೆಯಾಗುತ್ತದೆ. ಆ ಹೊಣೆಗಾರಿಕೆಯ ಎಲ್ಲ ಜವಾಬುದಾರಿಯೂ ಸರಕಾರದ ಮೇಲೇ ಬೀಳುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಇದಕ್ಕೆಲ್ಲಾ ಕಾರಣರಾಗುತ್ತಾರೆ ಎಂದು ಇಷ್ಟು ಹೇಳಿ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ (ಹರಿಹರ).---ಸನ್ಮಾನ್ಯ ಅಧ್ಯಕ್ಷರೇ, ಐದು ನಿಮಿಷಗಳ ಕಾಲದಲ್ಲೇ ನನ್ನ ಮಾತುಗಳನ್ನು ಪೂರೈಸುತ್ತೇನೆ. ಈ ದಿವಸ ನಮ್ಮ ರಾಜ್ಯದಲ್ಲಿ ಎಲ್ಲಿ ಹೋಗಿ ನೋಡಿದರೂ ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ನಂಬಿದ್ದೇನೆ. ನಾವು ನೀವು ಹಾಗೂ ಎಲ್ಲರೂ ಒಪ್ಪಿಕೊಂಡಿದ್ದೇವೆ. ಸಹಕಾರ ಬರುವುದರಿಂದಲೇ ನಮ್ಮ ದೇಶದ ಆರ್ಥಿಕ ಅಭಿವೃದ್ಧಿ ನೈತಿಕ ಅಭಿವೃದ್ಧಿಯಾಗುತ್ತದೆ ಎಲ್ಲರಿಗೂ, ಒಳ್ಳೆಯದಾಗುತ್ತದೆ ಎನ್ನತಕ್ಕ ಆಸೆಯನ್ನು ನಾವೆಲ್ಲರೂ ಇಟ್ಟುಕೊಂಡಿದ್ದೆವು. ಆದರೆ ನಮ್ಮ ದುರ್ದೈವದಿಂದಲೋ ಏನೋ ಈ ದಿವಸ ಏನಾಗಿದೆ ಎಂದರೆ ಸಹಕಾರ ಎನ್ನತಕ್ಕ ಒಂದು ಸಂಘದಲ್ಲಿ ಯಾವುದೋ ಒಂದು ಸಣ್ಣ ಗೆದ್ದಲು ಹುಳ ಮಣ್ಣು ತಂದು ದೊಡ್ಡ ಹುತ್ತವಾಗಿ ಮಾಡುತ್ತದೆ. ಇದರೊಳಗೆ ಹಾವುಗಳು ಬಂದು ಸೇರಿಕೊಳ್ಳುವಂತೆ ನಮ್ಮ ಸಹಕಾರ ಇಲಾಖೆಯೊಳಗೆ ಹಾವುಗಳಂತಹ ಕೆಲವು ಪುಡಾರಿಗಳು ಬಂದು ಸೇರಿಕೊಂಡು ಸಹಕಾರ ಕ್ಷೇತ್ರದಲ್ಲಿ ಹೂವನ್ನು ಮಾರುವುದಕ್ಕೆ ಬದಲಾಗಿ ಹುಲ್ಲನ್ನು ಮಾರುತ್ತಾರೆ ಎನ್ನುವಂತೆ ಸಹಕಾರ ಕ್ಷೇತ್ರವನ್ನು ಗಬ್ಬುಮಾಡಿಬಿಟ್ಟಿದ್ದಾರೆ. ಈ ದಿವಸ ನಮ್ಮ ಸಹಕಾರ ಕ್ಷೇತ್ರಗಳಲ್ಲಿ ಆಗುತ್ತಿರುವ ಅನ್ಯಾಯಗಳ ಪರಂಪರೆಗಳನ್ನು ನೋಡಿದರೆ ಜನಜೀವನಕ್ಕೆ ಆಗತಕ್ಕ ತೊಂದರೆಗಳನ್ನು ಅವರ ನೈತಿಕ ಪತನವನ್ನು ನೋಡಿದರೆ ಈ ದೇಶದಲ್ಲಿರುವ ಸಹಕಾರ ಸಂಘಗಳು ಇನ್ನು ಮುಂದೆ

(ಶ್ರೀ ಹೆಚ್. ಸಿದ್ದವೀರಪ್ಪ)

ಉಳಿಯಲಿಕ್ಕಿಲ್ಲವೇನೂ ಎನ್ನುವ ಭೀತಿ ನಮ್ಮೆಲ್ಲರಿಗೂ ಬರುತ್ತಿದೆ. ಆದರೆ ನಮ್ಮ ಮಾನ್ಯ ಸಹಕಾರ ಮಂತ್ರಿಗಳಾಗಿರುವ ಶ್ರೀಮಾನ್ ನಾಡಗೌಡರು ನನ್ನ ಸ್ನೇಹಿತರಾಗಿರುವುದರಿಂದ ಅವರ ಬಗ್ಗೆ ನನಗೆ ಅಭಿಮಾನ ಇದೆ. ಆದರೆ ಅವರು 'ಹೀಸ್ ಮಾಸ್ಟರ್ಸ್ ವಾಯ್ಸ್' ಎಂದು ಆಗಿ ಬಿಟ್ಟರೆ ಬಹಳ ಕಷ್ಟ ವಾಗುತ್ತದೆ. ಸಹಕಾರ ಸಂಘಗಳಲ್ಲಿ ಕೆಲವರು ಇದ್ದಾರೆ. ಅವರುಗಳು ಸಹಕಾರ ಸಂಘಗಳಲ್ಲಿ ಮಾಡಬಾರದ ಅನ್ಯಾಯಗಳನ್ನು ಮಾಡುತ್ತಿದ್ದಾರೆ. ಅವರ ಬಗ್ಗೆ ಏನನ್ನೂ ಮಾಡುತ್ತಿಲ್ಲ. ಅಧಿಕಾರಿಗಳು ಇಲ್ಲಿ ತಲೆಎತ್ತಿ ಕೆಲಸಮಾಡುವಂತಿಲ್ಲ. ಅವರು ಬಹಳ ದೊಡ್ಡ ಮನಷ್ಯರಾಗಿರಬಹುದು ದೊಡ್ಡ ಹೆಸರು ತೆಗೆದುಕೊಂಡಿರಬಹುದು. ಅವರು ಅಲ್ಲಿದ್ದಾರೆಂದು ಅವರನ್ನು ತೆಗೆಯಲು ಆಗದೇ ಇರುವುದರಿಂದ ಇಲ್ಲಿನ ರೈತಾಪಿ ಜನಕ್ಕೆ ಇಲ್ಲದ ಕಷ್ಟಗಳು ತೊಂದರೆಗಳು ಆಗುತ್ತಿವೆ. ನಿಮಗೂ ಇದನ್ನು ಸರಿಮಾಡಬೇಕಾದರೆ ಕಷ್ಟಗಳು ಇರಬಹುದು, ತೊಂದರೆಗಳು ಬರಬಹುದು. ಆದರೆ ಯಾವ ರೀತಿಯ ಭಯ ಭೀತಿ ಇಲ್ಲದೆ ನಿರ್ಭಯವಾಗಿ ಇಲ್ಲಿ ಕೆಲಸಮಾಡಬೇಕಾಗಿದೆ. ನನ್ನ ಸ್ವಭಾವ ಅಧಿಕಾರಿಗಳನ್ನು ಬಯ್ಯಬೇಕೆಂದು ಇಲ್ಲ. ಅವರ ಸ್ಥಿತಿಯೆಲ್ಲಾ ನನಗೂ ಗೊತ್ತಿದೆ. ಈಗಿರತಕ್ಕ ನಿಯಮದಂತೆ ರಿಜಿಸ್ಟ್ರಾರ್‌ರವರು ಸೊಸೈಟಿಗಳಲ್ಲಿ ಚೆನ್ನಾಗಿ ಕೆಲಸಮಾಡಿ ಒಳ್ಳೆಯ ಹೆಸರನ್ನು ಪಡೆ ಬೇಕೆಂದು ಇದ್ದಾರೆ. ಆದರೆ ತಾವು ಅಧಿಕಾರಿಗಳು ಕೆಲಸ ಮಾಡುವಾಗ ಅವರ ಮೇಲೆ ಹಸ್ತಕ್ಷೇಪ ಮಾಡಲು ಹೋಗಬೇಡಿ ಎಂದು ಮಾತ್ರ ಇಲ್ಲಿ ಹೇಳುತ್ತೇನೆ. ನಮ್ಮ ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ಒಬ್ಬರು ಚೇರ್ಮನ್ನರಿದ್ದಾರೆ. ಇವರು ಇಲ್ಲದ ಗೊಂದಲಗಳನ್ನುಂಟು ಮಾಡುತ್ತಿದ್ದಾರೆ. ಕೋತಿ ಮೊಸರನ್ನ ತಿಂದು ಆ ನಂತರ ಮೇಕೆ ಬಾಯಿಗೆ ಒರಸಿ ಹೋಗು ವಂತಹ ನೀತಿಯನ್ನು ಇಲ್ಲಿ ಅನುಸರಿಸಬೇಡಿ ಎಂದು ಹೇಳುತ್ತೇನೆ. ಈ ಸಮಸ್ಯೆ ಬಗೆ ಹರಿಸುವುದ ರಲ್ಲಿ ತಮಗೆ ಗುರು ಶಿಷ್ಯರ ಸಂಬಂಧವಿದೆ ಎನ್ನುವುದು ನನಗೂ ಗೊತ್ತು. ಆದರೆ ಗುರುಗಳು ಏನಾದರೂ ತಪ್ಪು ಮಾಡಿದರೆ ನಮಗೆ ಬಹಳ ಕಷ್ಟ ಬರುತ್ತದೆ. ಐ.ಎ.ಎಸ್. ಅಧಿಕಾರಿಗಳಾಗಿರು ವವರು ಈ ಇಲಾಖೆಯ ಹೆಡ್ ಆಗಿರುವುದರಿಂದ ಅವರು ಕಟ್ಟುನಿಟ್ಟಾಗಿ ಹಾಗೂ ಧೃಡವಾಗಿ ಕೆಲಸ ಮಾಡಲು ನೀವು ಅವಕಾಶ ಮಾಡಿಕೊಡಿ. ಅದಕ್ಕಾಗಿಯೇ ನಾನು ಒಂದಲ್ಲ ಹಲವು ಸಾರಿ ಇಲ್ಲಿನ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಆಡಳಿತದ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಆದರೆ ನಿಮಗೆ ನಮ್ಮ ಸಹಕಾರ ಬೇಕಾಗಿಲ್ಲ. ಅನೇಕ ರೀತಿಯಾಗಿ ಇಲ್ಲಿರುವ ಅಧಿಕಾರಿಗಳಿಂದ ಅವ್ಯವಸ್ಥೆಗಳಾಗಿ ಈಗ ನಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ಟು ಕಮಿಟಿ ಯಲ್ಲಿ ನಿಮ್ಮ ಗಮನಕ್ಕೆ ತರಬೇಕಾಗಿರುವುದು ನಿಮ್ಮವರೇ ಆದ ಒಬ್ಬರು ಇದರ ಚೇರ್ಮನ್ನರಾಗಿ ದ್ದಾರೆ. ಅದರಿಂದ ಇಲ್ಲದ ಅಡ್ಡಿ ಆತಂಕಗಳಾಗಿ ರೈತಾಪಿ ಜನರಿಗೆ ಬಹಳ ಕಷ್ಟಗಳಾಗುತ್ತಿವೆ. ಇದರ ಬಗ್ಗೆ ಇಲ್ಲಿ ಬಹಳ ಸಲ ಹೇಳಿದ್ದೇನೆ, ಈ ದಿವಸ ಸರಕಾರಕ್ಕೆ ನಾನು ಇಲ್ಲಿ ಎಚ್ಚರಿಕೆ ಕೊಡು ತ್ತೇನೆ. ನೀವು ಆದಷ್ಟು ಜಾಗ್ರತೆಯಾಗಿ ಇದರ ವಿಚಾರದಲ್ಲಿ ಚುನಾವಣೆಗಳನ್ನು ನಡೆಸಿ ರೈತರಿಗೆ ಅನುಕೂಲಗಳನ್ನು ಮಾಡದೇ ಹೋದರೆ ಮುಂದೆ ನಾನೇ ಇಲ್ಲಿರುವ ರೈತರುಗಳನ್ನು ಕೂಡಿಕೊಂಡು ದೊಡ್ಡ ಚಳುವಳಿಮಾಡಲೇ ಬೇಕಾಗುತ್ತದೆ. ಕಾನೂನಿನಲ್ಲಿ ಏನಾದರೂ ಅಡಚಣೆಯಿದ್ದರೆ ಅದನ್ನು ಪರಿಹರಿಸಿ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಇದ ರಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ರೈತರಿಗೆ ನಷ್ಟವಾಗುತ್ತಿದೆ. ಇದರ ಬಗ್ಗೆ ಗವರ್ನಮೆಂಟು ಆರ್ಡರು ಇರುವುದು ನೋಡುವುದಕ್ಕೆ ನಿಮಗೆ ಕಣ್ಣಿಲ್ಲವೇ. ಗವರ್ನಮೆಂಟು ಆರ್ಡರಿನಂತೆ ಆದೇಶ ಕೊಟ್ಟರೆ ಅದರಿಂದೇನೂ ತಲೆಕಳಗಾಗುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟಿಂಗ್ ಈ ಕಮಿಟಿಯಲ್ಲಿ ನಾವೇ ಸೇರಿಕೊಂಡು ಎಂಟು ಜನ ಚುನಾಯಿತ ರೈತರುಗಳಿದ್ದೇವೆ. ಕಾನೂನು ಪ್ರಕಾರ ಹಾಗೂ ಕೊಂಡಜ್ಜಿ ಬಸಪ್ಪನವರ ರಿಪೋರ್ಟಿನಂತೆ ಇಲ್ಲಿ ಎಲೆಕ್ಷನ್ ಆಗಲೇ ಬೇಕು. ಆದರೆ ಇಲ್ಲಿ ಚುನಾವಣೆ ನಡೆದರೆ ರೈತರಪರವಾಗಿರುವ ಎಂಟು ಜನರ ಪೈಕಿ ಒಬ್ಬರು ಅಧ್ಯಕ್ಷರಾಗಿ ಬರುತ್ತಾರೆ. ಆದರೆ ಇವರು ಚುನಾವಣೆಯಾದರೆ ಇವರೇ ಆರಿಸಿ ಬರುತ್ತಾರೆ ಎಂದು ತಿಳಿದು ಇಲ್ಲಿನ ಚೇರ್ಮನ್ನರಾಗಿರುವವರು ನೋಟಿಫಿಕೇಷನ್ ಪ್ರಕಾರ ಎಲೆಕ್ಷನ್ನು ಮಾಡಬೇಕೆಂದಿದ್ದರೂ ಅದರ ಗೋಜಿಗೇ ಹೋಗದೆ ಸುಮ್ಮನೆ ಮುಂದೂಡುತ್ತಾ ಬರುತ್ತಿದ್ದಾರೆ. ಇಂತಹ ಕೆಲಸಗಳನ್ನು ಮಾಡಲು ನಿಮಗೇನಾದರೂ ಮಾನ ಇದೆಯೇ ? ಮರ್ಯಾದೆ ಇದೆಯೇ ಕಾನೂನಿನಂತೆ ರಾಜ್ಯಾಂಗದ ರಕ್ಷಣೆ ಇದೆಯೇ ಅದಕ್ಕಾಗಿ ನಾನು ಈಗಲೂ ಹೇಳುತ್ತೇನೆ. ತಾವೇನೋ ಚುನಾವಣೆಗಳನ್ನು ಮಾಡುವುದಕ್ಕೆ ಇಲ್ಲಿ ಸ್ಟೇ ಆರ್ಡರು ಇದೆ ಎಂದು ಹೇಳಬಹುದು. ಆದರೆ ಅಸ್ಟೇ ಆರ್ಡರಿಗೂ ಇಲ್ಲಿನ ಚುನಾವಣೆಗೂ ಏನೂ ಸಂಬಂಧವಿಲ್ಲ. ಬೇಕಾದರೆ ನಿಮ್ಮ ಅಡ್ವಕೇಟ್ ಜನರಲ್ ಸಾಹೇಬರನ್ನು ಬೇಕಾದರೆ ಕೇಳಿ ಅವರೂ ಕೂಡ ಈಗ ಇರುವಸ್ಟೇ ಆರ್ಡರಿಗೂ ಏನೂ ಸಂಬಂಧವಿಲ್ಲ ಎನ್ನುವ ಅಭಿಪ್ರಾಯವನ್ನು ಕೊಡುತ್ತಾರೆ. ಅವರ ಅಭಿಪ್ರಾಯಕ್ಕೆ ನಾನು ತಲೆಬಾಗುತ್ತೇನೆ. ಸುಮ್ಮನೆ ಒಂದು ಕುಂಟು ನೆಪ ಮಾಡಿಕೊಂಡು

ಈ ಮಾರ್ಕೆಟಿಂಗು ಕಮಿಟಿಯಲ್ಲಿ ಚುನಾವಣೆಯಾಗದಂತೆ ಮಾಡುತ್ತಿದ್ದೀರಿ. ನಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಇಲ್ಲಿರುವ ಕಮಿಟಿ ಆನ್ ಪಿಟಿಷನ್ಸ್ ಕಡೆಗೆ ಒಂದು ಅರ್ಜಿ ಕೊಟ್ಟು ಇದನ್ನು ಒತ್ತಾಯಮಾಡಬೇಕೆಂದು ಇದ್ದರೂ ಆ ಲಟಿಷನ್ಸ್ ಕಮಿಟಿ ಇನ್ನೂ ಸೇರಲಿಲ್ಲ ಮತ್ತು ಇಲ್ಲಿಗೆ ಈ ಪಿಟಿಷನ್ನುಗಳು ವಿಚಾರಣೆಗೂ ಇನ್ನೂ ಬರಲಿಲ್ಲ. ಈ ರೀತಿ ಮಾಡಬಾರದು. ಚುನಾವಣೆಗಳಾದರೆ ರೆವ್ಯೂ ಮಾಡಲಿಕ್ಕೂ ಅವಕಾಶವಿದೆ. ಆದರೆ ಇದರೊಳಗೆ ರಾಜಕೀಯವನ್ನು ಬೆರೆಸುವುದಕ್ಕೆ ಹೋಗಬೇಡಿ. ಇದರಿಂದ ಸಹಕಾರ ಸಂಘಗಳು ಕೆಟ್ಟು ಹೋಗುತ್ತವೆ. ಮಾನ್ಯ ಸದಸ್ಯರುಗಳು ಇಲ್ಲಿ ಕೆಲವರು ಹೇಳಿದಂತೆ ಬೊಂಬಾಯಿ ಕಡೆಯಲ್ಲಿರುವ ಕೆಲವು ಸೊಸೈಟಿಗಳನ್ನು ನೋಡಿಕೊಂಡು ಬಂದಿದ್ದೇನೆ. ಅವು ಚೆನ್ನಾಗಿ ಕೆಲಸಮಾಡಿಕೊಂಡು ಬರುತ್ತಿವೆ. ಉದಾಹರಣೆಯಾಗಿ ಇಲ್ಲೆ ಐಮಂಗಲದ ಖಾದಿ ಸೆಂಟರಿನ ಬಗ್ಗೆ ಹೇಳುತ್ತೇನೆ. ಇಲ್ಲಿ ಕೇವಲ 20 ಸಾವಿರ ರೂಪಾಯಿಗಳಷ್ಟು ಬಂಡವಾಳ ಇಟ್ಟುಕೊಂಡರೆ ಇದಕ್ಕೆ ಕೇಂದ್ರದವರು ಎರಡು ಲಕ್ಷ ರೂಪಾಯಿಗಳಷ್ಟು ಸಹಾಯ ಕೊಡುತ್ತೇವೆ ಎಂದು ಹೇಳಿದುದರಿಂದ ಮೊದಲು ಇಲ್ಲಿ ಸೊಸೈಟಿ ಆರಂಭವಾಗಿ ಕೆಲಸ ಮಾಡಿತು. ಹಿಂದೆ ಮಹಾತ್ಮ ಗಾಂಧಿಯವರು ಬದನವಾಳಿನಲ್ಲಿ ಖಾದಿ ಸೆಂಟರನ್ನು ತೆಗೆದದ್ದು ಎಲ್ಲರಿಗೂ ಗೊತ್ತಿರಬಹುದು. ಇದರ ಜೊತೆಗೆ ಐಮಂಗಲದ ಖಾದಿ ಸೆಂಟರು ಸಹಕಾರ ಸಂಘ ಎಂದು ಮಾಡಿ ಅದೂ ಕೊಡ ಚೆನ್ನಾಗಿ ಕೆಲಸ ಮಾಡಿತ್ತು. ಆದರೆ ಇಲ್ಲಿ ಸಿಕ್ಕಾಪಟ್ಟೆ ದುಡ್ಡು ಕೊಟ್ಟು ಎಷ್ಟೋ ಹಣ ಹಾಳಾಗಿ ಹೋಯಿತು. ಇನ್ನೂ ಎಷ್ಟೋ ಸಾಲಗಳು ಹಾಗೇ ಇವೆ, ಇದರಲ್ಲಿ ಅನ್‌ಲಿಮಿಟೆಡ್ ಲಯಬಲಿಟಿ ತರಹ ಷೇರು ಹೋಲ್ಡರುಗಳಿಗೆ ಎಂದು ಮಾಡಿದ್ದರೆ ಅನುಕೂಲವಾಗುತ್ತದೆ. ಕಾನೂನು ಕೂಡ ಇದರಂತೆ ಇರಬೇಕು- ನನಗೂ ಗೊತ್ತಿದೆ ನಮ್ಮ ಅಪ್ಪ ಒಂದು ಕಡೆ ಷೇರು ತೆಗೆದುಕೊಂಡಿದ್ದರು. ಅವರು ಹೋದಮೇಲೆ ನನಗೆ 340 ರೂಪಾಯಿಗಳನ್ನು ಕೊಡಬೇಕೆಂದು ನೋಟೀಸು ಬಂತು. ಆಗ ನಾನು ಕೊಡಬೇಕಾಯಿತು. ಈ ರೀತಿ ಕಾನೂನನ್ನು ಬದಲಾಯಿಸಿ ಅನ್‌ಲಿಮಿಟೆಡ್ ಲಯಬಿಲಿಟಿಗಳಿಗೆ ಅವಕಾಶವಿರಬೇಕು. ಹಾಗಿಲ್ಲದೆ ಹತ್ತು ರೂಪಾಯಿಗಳಿಗೆ ಒಂದು ಷೇರು ಕೊಟ್ಟು ಅವರಿಗೆ ಹತ್ತು ಸಾವಿರದವರೆಗೆ ಅಥವಾ ಹತ್ತು ಲಕ್ಷದವರೆಗೆ ಸಾಲ ಕೊಟ್ಟರೆ ಅದು ಯಾವ ಆಧಾರವೂ ಇಲ್ಲದೇ ಇದ್ದರೆ ಹೇಗೆ ತಾನೇ ವಾಪಸು ಬರುತ್ತದೆ ? ಆದುದರಿಂದ ಈಗಿರುವ ಕಾನೂನಿನಂತೆ ಸರಿಯಾಗಿಲ್ಲದಿದ್ದರೆ ಅದನ್ನು ಸರಿಪಡಿಸಿ. ಇಂತಹ ಕೆಲಸಗಳನ್ನು ಮಾತ್ರ ಮಾಡಲು ಹೋಗಬೇಡಿ ಎಂದು ಇಲ್ಲಿ ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಈಗ ಆಗಿರುವ ಅವ್ಯವಸ್ಥೆಗಳನ್ನು ದಾವಣಗೆರೆಯಲ್ಲಿರುವ ರೆಗ್ಯುಲೇಟೆಡ್ ಮಾರ್ಕೆಟಿಂಗು ಕಮಿಟಿಯಲ್ಲಿ ಸರಿಪಡಿಸಿ. ಆಗ ನಿಮ್ಮ ಸರಕಾರದ ಮೇಲೂ ಒಳ್ಳೆಯ ಭಾವನೆ ಮಾಡುತ್ತದೆ. ಇದೇ ರೀತಿ ನೀವು ಸಹಕಾರ ಸಂಘಗಳಲ್ಲಿ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟದೇ ಹೋದರೆ ರೈತರು ತುಂಬಾ ಕಷ್ಟಕ್ಕೆ ಸಿಗುತ್ತಾರೆ. ಆದುದರಿಂದ ನಾನು ಹೇಳುವುದು ಇಷ್ಟೇ. ನಿಮಗೂ ಈ ದೇಶದ ಜನರ ಹಿತರಕ್ಷಣೆ ಮಾಡಬೇಕು, ಎಲ್ಲರೂ ಸರಿಹೋಗಬೇಕು ಎನ್ನುವಂತಿದ್ದರೆ ಕಾನೂನಿನಂತೆ ಜನಗಳಿಗೆ ಅನುಕೂಲವಾಗುವ ಹಾಗೆ ಕೆಲಸಗಳನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ಸಹಕಾರ ಮಂತ್ರಿಗಳ ಗ್ರಾಮಾಭಿವೃದ್ಧಿ, ಸಾಮುದಾಯಿಕ ಹಾಗೂ ಇತರ ಬಾಬುಗಳ ಬಡ್ಜೆಟ್ಟನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಇಡಬಯಸುತ್ತೇನೆ.

ಈಗ ಸಹಕಾರ ರಂಗ ನಿಜವಾಗಿಯೂ ನಮ್ಮ ದೇಶಕ್ಕೆ ಬಹಳ ಅಗತ್ಯವಾದುದು ಮತ್ತು ಇಂತಹ ಕೆಲಸಗಳಾಗಬೇಕಾದರೆ ಅದು ಪರಸ್ಪರ ಸಹಕಾರದಿಂದಲೇ ಆಗತಕ್ಕದ್ದು. ಆದುದರಿಂದ ಈ ದಿವಸ ಸಹಕಾರಕ್ಕೆ ಬಹಳ ಮಹತ್ವವಿದೆ. ಮೊದಲಿಗೆ ನಾನು ಭೂಮಿ ಅಭಿವೃದ್ಧಿ ಬ್ಯಾಂಕಿನ ಬಗ್ಗೆ ನಾಲ್ಕು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ.

ಇನ್ನು ಭೂ ಅಭಿವೃದ್ಧಿ ಬ್ಯಾಂಕ್ ನಮ್ಮ ಸರ್ಕಾರದ ವತಿಯಲ್ಲಿ ಏನು ಬಂತೋ ಅದು ನಿಜವಾಗಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಿದರೆ ಏನೂ ತಪ್ಪಾಗಲಿಕ್ಕಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ಈಗ ಅದು ಒಂದು ಸಹಕಾರಿ ಕಟ್ಟಳೆಯೊಳಗೆ ಬರುತ್ತಾ ಇದೆ. ಹಿಂದೆ ಇಲ್ಲಿ ಸಾಲಗಳನ್ನು ಸಂಘಗಳ ಮೂಲಕ ಬ್ಲಾಕ್ ಡೆವಲಪ್‌ಮೆಂಟ್ ಆಫೀಸಿನಿಂದ ಕೊಡುತ್ತಿದ್ದರು. ಈಗ ನಮ್ಮ ಸಹಕಾರ ತತ್ವಗಳು ಬಂದಾಗ್ಗೆ ಏನಾಗಿದೆ ಅನೇಕ ಇಲಾಖೆಗಳಲ್ಲಿ ಏನೂ ಕೆಲಸವಾಗುತ್ತಾ ಇಲ್ಲ. ಅದರ ಬಗ್ಗೆ ನಮ್ಮಲ್ಲಿ ಅನೇಕ ನಿದರ್ಶನಗಳಿವೆ. ನಮ್ಮಲ್ಲಿ ಈಗ ತಾಲ್ಲೂಕು ಮಟ್ಟದಲ್ಲಿ ಜೀಪುಗಳು ಇರುತ್ತವೆ. ಇವರ ಕಡೆಯಿಂದ ಆಗುವುದಿಲ್ಲವೆಂಬ ಅಭಿಪ್ರಾಯವೇನಿತ್ತೋ ಅದನ್ನು ಸಹಕಾರ ತತ್ವದಿಂದ ಅವರ ಅಭಿಪ್ರಾಯದಲ್ಲಿ ಸರಿಯಾಗಿಲ್ಲವೆಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ಇದರಲ್ಲಿ ಸಹಕಾರ ತತ್ವಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಿಜವಾಗಿ ಸಹಕಾರ ಸಂಘದ ಬಗ್ಗೆ ರೈತರು ಮುತುವರ್ಜಿ ವಹಿಸಿದರೆ ಸಹಕಾರೀ ಕಾರ್ಯಕರ್ತರಿಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕೆಂಬ

(ಶ್ರೀ ಇ. ಪುಂಡಲೀಕಪ್ಪ)

ಮನಸ್ಸು ಬರುತ್ತದೆ. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದ ಅಡ್ವೈಜ್ ಬೇಕಾಗುತ್ತದೆ. ಏಕೆಂದರೆ ಅವರು ತಮ್ಮ ಇಷ್ಟದ ಪ್ರಕಾರ ನಡೆಸಿಕೊಂಡು ಬಂದಿದ್ದಾರೆ. ಇದರೊಳಗೆ ಕೆಲವು ತಿದ್ದುಪಡಿಗಳು ಆಗಬೇಕಾಗಿವೆ. ಆ ತಿದ್ದುಪಡಿಗಳನ್ನು ತಮ್ಮ ಮುಂದೆ ಇಡುತ್ತಾರೆ. ಈಗಾಗಲೇ ನಮ್ಮ ಮುಖ್ಯ ಮಂತ್ರಿಗಳು ರೈತರಿಗೆ ಸುಮಾರು ಒಂದೂ ಒಂದೂವರೆ ತಿಂಗಳೊಳಗಾಗಿ ಆ ಬ್ಯಾಂಕಿನಿಂದ ಸಾಲ ಸಿಗುವ ಏರ್ಪಾಡನ್ನು ಮಾಡುತ್ತೇವೆಂದು ಹೇಳಿದರು. ಆ ರೀತಿಯಾಗಿ ಈ ವ ನೆಯೊಳಗೂ ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ತೀವ್ರಗತಿಯಿಂದ ರೈತರಿಗೆ ಸಾಲ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ ಅನೇಕ ಜನರು ಈ ಸಾಲವನ್ನು ಬ್ಯಾಂಕಿನಿಂದ ಪಡೆಯುವುದಕ್ಕೆ ಎಷ್ಟೋ ವರ್ಷಗಳು ಆಗುತ್ತವೆಂದು ನಮ್ಮ ಸ್ನೇಹಿತರು ಟೀಕೆ ಮಾಡುವುದೂ ಉಂಟು. ಹಿಂದೆ ಅರ್ಜಿಗಳನ್ನು ಹಾಕುವಾಗ ಕೇವಲ 8 ಆಣೆಗಳನ್ನು ಕೊಟ್ಟು ಒಂದು ಅರ್ಜಿ ಫಾರಂ ತೆಗೆದುಕೊಂಡು ಬಂದರೆ ಆ ಅರ್ಜಿಯನ್ನು ಕೊಟ್ಟರೆ ಸಾಲ ಸಿಗುತ್ತದೆಂಬ ಭಾವನೆ ಇತ್ತು. ನಿಜವಾಗಿ ಈಗ ಈ ವಿಚಾರ ಬ್ಯಾಂಕಿಗೆ ಬಂದಮೇಲೆ ಏನಾಗಿದೆಯೆಂದರೆ, ಅವರಿಗೆ ಭೂಮಿ ಇದೆಯೇ, ಸಾಲವನ್ನು ವಾಪಸ್ಸು ಕೊಡುವುದಕ್ಕೆ ಶಕ್ತಿ ಇದೆಯೇ, ನಮ್ಮ ಗಂಟು ಎಲ್ಲಿ ಹೋಗಬಾರದು ಎಂಬ ದೃಷ್ಟಿಯಿಂದ ಚೌಕಾಸಿ ಮಾಡುವ ಕಾರಣವಿದೆ. ಈ ರೀತಿಯಾಗಿ ಚೌಕಾಸಿ ಮಾಡುವುದರೊಳಗೆ ಕೆಲವು ಅಡ್ಡಿ ಆತಂಕಗಳಿವೆ. ಅದಕ್ಕಾಗಿ ಕಾಲಾವಕಾಶ ಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಆ ವಿಚಾರಗಳನ್ನು ಪರಿಶೀಲನೆ ಮಾಡಿ ಸರಿಪಡಿಸುತ್ತೇವೆಂದು ಹೇಳಿದ್ದಾರೆ. ಅದನ್ನು ತೀವ್ರವಾಗಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನೊಂದು ಕಾರಣ ಹೇಳಿದರು, ಇದೇ ಬ್ಯಾಂಕಿಗೆ ಐ. ಪಿ. ಸೆಟ್ಟುಗಳನ್ನು ಕೊಡುವುದಕ್ಕೆ ಅವಕಾಶ ಕೊಡುತ್ತೇವೆಂದು ಆ ಕೆಲಸವನ್ನು ಕೆಲವು ಸಂದರ್ಭಗಳಲ್ಲಿ ಸಹಕಾರ ಸಂಘಗಳ ಮುಖಾಂತರ ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ. ಅದೇ ಪ್ರಕಾರ ಮಾಡಬೇಕೆಂದು ಈ ವ್ಯವಸಾಯ ಬ್ಯಾಂಕಿನಿಂದ ಜಮೀನುಗಳ ಸಲುವಾಗಿ ಇತ್ತೀಚೆಗೆ ವಿಶೇಷವಾಗಿ ತಕಾವಿ ಸಾಲಗಳನ್ನು ಕೊಡುತ್ತಿದ್ದಾರೆ. ಅದನ್ನು ಈಗ ಸ್ವಲ್ಪ ಕಡಿಮೆ ಮಾಡಬೇಕೆಂದು ಸರ್ಕಾರದ ಅಭಿಪ್ರಾಯದಲ್ಲಿದೆ. ಬಾವಿ ಸಲುವಾಗಿ ಮಾತ್ರ ಹೆಚ್ಚು ಕೊಡಬೇಕು, ಭೂಮಿ ಸಲುವಾಗಿ ಕಡಿಮೆ ಸಾಲವನ್ನು ಕೊಡಬೇಕೆಂದು ಮಾಡುತ್ತಾ ಇದ್ದಾರೆ. ಅದು ಒಳ್ಳೆಯದು. ಹಾಗೆಯೇ ಮಾಡಬೇಕು. ನಮ್ಮ ಬಯಲು ಸೀಮೆಯೊಳಗೆ ನೀರಾವರಿ ಇಲ್ಲದಂಥ ಪ್ರದೇಶದೊಳಗೆ ಒಳ್ಳೆಯ ಭೂಮಿಯೇ ಕರ್ಕಶವಾಗಿದೆ. ಹಿಂದೆ ಟ್ರಾಕ್ಟರುಗಳನ್ನು ಜಿಲ್ಲೆಗೆ 2—3ರಂತೆ ತೆಗೆದುಕೊಳ್ಳಲು ರೊಕ್ಕವನ್ನು ಕೈಗೆ ಕೊಡುತ್ತಿದ್ದರು. ಈಗ ತಕಾವಿ ಸಾಲವನ್ನು ಕೊಟ್ಟು ಟ್ರಾಕ್ಟರುಗಳ ಮುಖಾಂತರ ರೈತರಿಗೆ ವ್ಯವಸಾಯ ಸೌಕರ್ಯ ಮಾಡಿಕೊಡಬೇಕೆಂದು ಇದ್ದಾರೆ. ಈ ಕೆಲಸವನ್ನು ಬ್ಯಾಂಕಿನ ಮುಖಾಂತರ ಮಾಡಿಕೊಡಬೇಕು. ಈಗ ಬಾವಿ ಸಲುವಾಗಿ ಐದು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಮೊದಲನೆಯ ಕಂತು ಎಂದು ಬ್ಯಾಂಕಿನಿಂದ ಶೇಕಡ ಅರ್ಧದಷ್ಟು ಕೊಡುತ್ತಾರೆ. ನಾವು ಶೇಕಡ 20ರಷ್ಟು ಕೊಡುತ್ತೇವೆ. ಶೇಕಡಾ 20ರಷ್ಟನ್ನು ಜನ ಕೊಡುತ್ತಾರೆ. ಆಗ ಜನರಿಗೆ ಹಿಡಿತ ಉಂಟಾಗುತ್ತದೆ. ಅರ್ಧ ಮಂಜೂರಾಗಿದೆ ಅಂದರೆ ಇನ್ನರ್ಧ ಕೊಡಿ ಎಂದು ಕೇಳುತ್ತಾರೆ. ನಮ್ಮ ಸ್ಥಳದ ರೈತ ದುಡ್ಡು ಇಷ್ಟೇ ಕೊಡುವುದು ಅಂದರೆ ಅಕ್ಕಪಕ್ಕದಲ್ಲಿರುವವರಿಗೆ ಒಂದು ರೀತಿಯ ಗೊಂದಲ ನಡೆದು ಒಂದು ರೀತಿಯ ಮನೋಭಾವನೆ ಉಂಟಾಗುತ್ತದೆ. ಈ ದೃಷ್ಟಿಯಿಂದ ಕೆಲವು ಕಡೆಗಳಲ್ಲಿ ಶೇಕಡ 25, 30, 40ರಷ್ಟು ಜನ ಕೊಡುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ಕೇವಲ 10 ರಷ್ಟು ಮಾತ್ರ ಕೊಡುತ್ತಾರೆ. ಇದು ಸರಿಯಲ್ಲ. ಈಗ ಇದ್ದ ಪ್ರಕಾರ ಇರಬೇಕು. ಒಂದು ಬಾವಿ ತೆಗೆಯಲು 3 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಬಯಲು ಸೀಮೆಯೊಳಗೆ ಪಾಯ ಹಾಕುತ್ತಾರೆಂದರೆ ಅದರ ಅಂದಾಜು ಐದು ಸಾವಿರ ರೂಪಾಯಿಗಳು ಆಗಿರುತ್ತದೆ. ಅದರೊಳಗೆ ಅರ್ಧ ರೊಕ್ಕವನ್ನು ತೆಗೆದುಕೊಂಡು ಹೋಗಿರುತ್ತಾರೆ. ಕೇವಲ ಅದರಲ್ಲಿ ಶೇಕಡ 40ರಷ್ಟರೊಳಗೆ ಅಥವಾ ಇನ್ನೂ ಕಮ್ಮಿಯಲ್ಲಿಯೇ ಬಾವಿ ಮಾಡಿಕೊಳ್ಳುತ್ತಾನೆ. ಕೊನೆಗೆ ಅದರ ಬಗ್ಗೆ ಸರ್ಟಿಫಿಕೇಟ್ ಕೊಡಬೇಕಾದರೆ ಬಿ. ಡಿ. ಓ. ಹತ್ತಿರ ಹೋಗುತ್ತಾನೆ. ಆದರೆ ನಮ್ಮ ನಗರದೊಳಗೆ ಏನಾಗಿದೆಯೆಂದರೆ, ಸಾಲ ತೆಗೆದುಕೊಂಡದ್ದರಲ್ಲಿ ಶೇಕಡ 50ರಷ್ಟರೊಳಗೇ ಕೆಲವರು ಬಾವಿ ಮಾಡಿಕೊಂಡಿದ್ದಾರೆ ತೋಟಗಳನ್ನು ಮಾಡಿಕೊಂಡಿದ್ದಾರೆ. ಕಲ್ಲಿನ ಕಟ್ಟಡವೇನೋ ಮಾಡಿಕೊಂಡಿಲ್ಲ. ಕೆಲವು ಕಡೆಗಳಲ್ಲಿ 15-20 ಅಡಿಗಳಲ್ಲಿಯೇ ನೀರು ಬರುತ್ತದೆಂದು ಹೇಳುತ್ತಾನೆ. ಕಲ್ಲಿನ ಕಟ್ಟಡದ ಲೆಕ್ಕಗಳನ್ನು ಕೊಡುವುದಿಲ್ಲ. ನೀರು ಸಾಕಷ್ಟು ಬರುವುದಿಲ್ಲವೆಂದು ಮೇಲ್ಗಡೆ ತೋಟಮಾಡುತ್ತೇವೆಂದು ಹೇಳಿ ಕಟ್ಟಡವನ್ನು ಷುರು ಮಾಡುತ್ತಾನೆ. ಯಾವನೇ ಆಗಲಿ ನಮ್ಮ ಸ್ಥಳದ ಬ್ಯಾಂಕಿನಿಂದ ರೊಕ್ಕ ತೆಗೆದುಕೊಂಡು ಹೋದರೂ ಕಲ್ಲಿನ ಕಟ್ಟಡವಂತೂ ಕಟ್ಟಿರುವುದಿಲ್ಲ. ತನ್ನ ಒಂದು ಏನೋ ಉಪಯೋಗಕ್ಕಾಗಿ ಅದನ್ನು ಬಳಸಿಕೊಳ್ಳುತ್ತಾನೆ. ಮುಖ್ಯೋದ್ದೇಶ ತೋಟ ಮಾಡುತ್ತೇನೆಂದು ಹೇಳುವುದು,

ಇಲ್ಲವೇ ಪೀಕ್ ಹಾಕುವುದಕ್ಕೆ ಎಂದು ಹೇಳುವುದು. ಆದ್ದರಿಂದ ಇವನ್ನೆಲ್ಲಾ ನೋಡಿಕೊಂಡು ಅವನಿಗೆ ಫೈನಲ್ಲಾಗಿ ಸರ್ಟಿಫಿಕೇಟನ್ನು ಕೊಡಬೇಕು.

ಇನ್ನು ಸರ್ವೆಸಾಧಾರಣವಾಗಿ ನಮ್ಮ ರಾಜ್ಯದಲ್ಲಿ ಅನೇಕ ಸಂಘ ಸೊಸೈಟಿಗಳಿವೆ. ಅವು ಕೆಲವುಕಡೆ ಬಹಳ ನಿರ್ಜೀವವಾಗಿದೆ. ಅಂತಹುಗಳ ಬಗ್ಗೆ ಕೂಡಲೇ ಜೀವಕೊಡಲು ಅದರ ಬಗ್ಗೆ ನಿಗಾ ಕೊಡಬೇಕು. ಒಂದು ವೇಳೆ ಅವು ಚೆನ್ನಾಗಿ ಕೆಲಸಮಾಡದಿದ್ದರೆ ಅಲ್ಲಿ ಬದಲೀ ಸೊಸೈಟಿಗಳನ್ನು ಸ್ಥಾಪನೆ ಮಾಡಿ ತ್ವರಿತವಾಗಿ ಅವು ಕೆಲಸ ಮಾಡುವಂತೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹೈದರಾಬಾದ್ ಕರ್ಣಾಟಕದೊಳಗೆ ಗ್ರೇನ್ ಬ್ಯಾಂಕ್ ಎಂದು ಒಂದಿದೆ. ಅದು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ, ಅದರ ತತ್ವವೇನೋ ಚಲೋ ಇರುತ್ತದೆ. ರೊಕ್ಕದ ಮಾತಲ್ಲ. ಜೋಳ ಕೊಡುವುದು, ತೆಗೆದುಕೊಳ್ಳುವುದು, ಮಾರುವುದು ಎಲ್ಲಾ ಇದ್ದುವು. ಅವೂ ಸಹ ಈಗ ನಿಂತಿವೆ. ಅಲ್ಲಿನ ಕೆಲಸವೇನೂ ಉಪಯೋಗವಿಲ್ಲ. ಆದ್ದರಿಂದ ಕೂಡಲೇ ಅದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಸೂಚನೆ ಕೊಡುತ್ತೇನೆ.

ಇನ್ನು ನೇಕಾರಿ ಸಹಕಾರ ಸಂಘದ ವಿಷಯ. ಹಿಂದೆ ಇಲ್ಲ ರಿಬೇಟ್ ಕೊಡುತ್ತಿದ್ದರು. ಅದನ್ನು ಈಗ ನಿಲ್ಲಿಸಿದ್ದಾರೆ. ಆದ್ದರಿಂದ ರಿಬೇಟ್ ರೂಪದಲ್ಲಿಯಾಗಲೀ ಅಥವಾ ಮತ್ತೆ ಯಾವ ರೂಪದಲ್ಲಿಯಾಗಲೀ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು.

5-30 P.M.

ಇನ್ನು ಸಹಕಾರ ಶಿಕ್ಷಣದ ಬಗ್ಗೆ ಹೇಳಬೇಕಾಗಿದ್ದರೆ, ನಮ್ಮ ಜನಗಳು ಡೈರೆಕ್ಟರ್ ಆಗುತ್ತಾರೆ. ಆದರೆ ಅವರಿಗೆ ಶಿಕ್ಷಣ ಸಾಲದು. ಇದರ ಸಲುವಾಗಿ ಸ್ಟೇಟ್ ಕೋ-ಆಪರೇಟಿವ್ ಸೊಸೈಟಿಗಳ ಯೂನಿಯನ್ ಮುಖಾಂತರ ಈ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ಜನಗಳಿಗೆ ಸಹಕಾರ ಶಿಕ್ಷಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ನನಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ, ನಾನು ಬೆಂಗಳೂರು ಮುನಿಸಿಪಾಲಟಿ ಅಥವಾ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಷನ್ ಮತ್ತು ಅದರ ಜೊತೆಯಲ್ಲಿ ಬೆಂಗಳೂರಿಗೆ ಸೇರಿಕೊಂಡಿರುವ, ಸುತ್ತ ಮುತ್ತ ಇರತಕ್ಕ ಕೆಲವು ಹಳ್ಳಿಗಳ ಜನಗಳ ಜೀವನದ ವಿಷಯದಲ್ಲಿ ನಾಲ್ಕು ಮಾತುಗಳನ್ನು ಆಡಬೇಕೆಂದು ನಾನು ನಿಂತಿದ್ದೇನೆ. ಮುನಿಸಿಪಾಲಟಿ ಅಥವಾ ಕಾರ್ಪೊರೇಷನ್ ಕಡೆಯಿಂದ ಸಾಕಷ್ಟು ಡಿಮಾಂಡನ್ನು ಮಾಡಿದ್ದಾರೆ. ಇಷ್ಟು ಡಿಮ್ಯಾಂಡನ್ನು ಮತ್ತೆ ಎಲ್ಲಿಯೂ ಮಾಡುತ್ತಿಲ್ಲ. ಇವರು ಬೆಂಗಳೂರಿನ ನಾಗರೀಕರ ಮೇಲೆ ಹಾಕಿರತಕ್ಕ ತೆರಿಗೆ ಎಲ್ಲಿಯತನಕ ಇದೆ ಎಂದರೆ ಏನಿದ್ದರೂ ಕೆಳಗೆ ನೋಡುವ ಹಾಗೆಯೇ ಇಲ್ಲ. ಬಹಳ ಮೇಲ್ಮಟ್ಟದಲ್ಲಿ ಹಾಕಿದ್ದಾರೆ. ಎಂದರೆ ಬಹಳ ಯದ್ವಾತದ್ವಾ ಹಾಕಿದ್ದಾರೆ. ಒಂದೊಂದು ಮನೆಗೆ 1,200 ರೂಪಾಯಿಗಳು 1,300 ರೂಪಾಯಿಗಳವರೆಗೆ ಮನೆ ಗಂದಾಯವನ್ನು ಹಾಕಿದ್ದಾರೆ. ಕೆಲವು ಮನೆಗಳಿಗೆ ರೆಂಟ್ ಬೇಸಿಸ್ ಮೇಲೆ ಕಂದಾಯವನ್ನು ಹಾಕಿದ್ದಾರೆ ಆಮೇಲೆ ಅದೇ ರೀತಿ ವಾಟರ್ ಟ್ಯಾಕ್ಸ್ ಅನ್ನು ಸಹ ಬಹಳ ಜಾಸ್ತಿ ಹಾಕಿದ್ದಾರೆ. ನಾಲ್ಕು ಜನ ಇರುವ ಒಂದು ಮನೆಗೆ 500 ರೂಪಾಯಿ ನೀರಿನ ತೆರಿಗೆಯನ್ನು ಹಾಕಿದ್ದಾರೆ. 50 ರೂಪಾಯಿ ನೀರಿನ ತೆರಿಗೆ ಬರುವವರು ಬಹಳ ಕಡಿಮೆ ಜನರಿದ್ದಾರೆ ಆದರೆ ನಾಗರೀಕರಿಗೆ ಎಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ ಎಂದರೆ ಯಾವುದೂ ಇಲ್ಲ. ಜನಗಳು ಯಾವುದೇ ಒಂದು ಸೌಕರ್ಯವನ್ನು ಕೇಳಿದರೂ ಕೂಡ It is under consideration ಎಂದು ಉತ್ತರ ಬರುತ್ತದೆ. ಈ ರೀತಿ ಯಾವುದೇ ಒಂದು ವಿಚಾರವನ್ನು ಕೇಳಿದರೂ ಕೂಡ ಅದನ್ನು ವಿಚಾರ ಮಾಡುತ್ತೇವೆ, It is under consideration ಎಂದು ಹೇಳುವುದು ಜನತೆಯ ದುರ್ದೈವ. ಇದನ್ನು ನಿಲ್ಲಿಸಬೇಕು.

ಇನ್ನು ಬೆಂಗಳೂರಿನ ಸುತ್ತ ಮುತ್ತ ಇರತಕ್ಕ ಕೆಲವು ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿದ್ದಾರೆ. ಆ ಹಳ್ಳಿಗಳಲ್ಲಿರತಕ್ಕ ಮನೆಗಳಿಗೆ ಸಾಕಷ್ಟು ಮನೆಗಂದಾಯವನ್ನು ಹಾಕಿದ್ದಾರೆ. ಆದರೆ ಅವರಿಗೆ ಕಾರ್ಪೊರೇಷನ್‌ನವರು ಕೊಟ್ಟಿರತಕ್ಕ ಸವಲತ್ತನ್ನು ನೋಡಿದರೆ ಯಾವುದೂ ಇಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಸಿದ್ದರಾಮನ ಹಳ್ಳಿಯನ್ನು ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿದ್ದಾರೆ. ಆ ಹಳ್ಳಿಯಲ್ಲಿ ಜನಗಳಿಂದ ಮನೆಗಂದಾಯವನ್ನ ತಗೆದುಕೊಳ್ಳುತ್ತಾರೆ. ಆದರೆ ಅವರಿಗೆ ಕಾರ್ಪೊರೇಷನ್ನಿನವರು ಏನು ಸೌಲಭ್ಯವನ್ನು, ಸವಲತ್ತನ್ನು

(ಶ್ರೀ ವಿ. ಎನ್. ಪಾಟೀಲ್)

ಕೊಟ್ಟಿದ್ದಾರೆಂದರೆ 100ಕ್ಕೆ 5ರಷ್ಟು ಸವಲತ್ತನ್ನು ಕೂಡ ಅವರಿಗೆ ಕೊಡುತ್ತಿಲ್ಲ. ಅವರಿಗೆ ಸವಲತ್ತನ್ನು ಕೊಡುವುದು ಕನ್‌ಸಿಡರೇಷನ್ನಿನಲ್ಲಿ ಇದೆ ಎಂದು ಹೇಳುತ್ತಾರೆ. ಈ ರೀತಿ ಹೇಳುವುದಕ್ಕೆ ಇವರಿಗೆ ನಾಚಿಕೆಯಾಗುವುದಿಲ್ಲವೇ ? ಇವರಿಗೆ ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇದೆಯೇ ? ಮಾತೆತ್ತಿದರೆ ಬಾಯಲ್ಲಿ ನಾವು ದೇಶದಲ್ಲಿ ಸೋಷಿಯಲಿಜಂ ತರುತ್ತೇನೆಂದು ಹೇಳುತ್ತಾರೆ. ಆದರೆ ಕೃತಿಯಲ್ಲಿ ಯಾವುದನ್ನೂ ಮಾಡುವುದಿಲ್ಲ. ಈಗ ಬೆಂಗಳೂರು ಸಿಟಿಯಲ್ಲಿರತಕ್ಕ ನಾಗರೀಕರಿಗೆ ಏನು ಸೌಲಭ್ಯಗಳು ಸಿಕ್ಕುತ್ತವೆಯೋ ಅದರಲ್ಲಿ 1 ಪರ್ಸೆಂಟ್ ಸೌಲಭ್ಯವನ್ನು ಕಾರ್ಪೋರೇಷನ್ನಿಗೆ ಸೇರಿರ ತಕ್ಕ ಬೆಂಗಳೂರು ಸುತ್ತ ಮುತ್ತ ಇರತಕ್ಕ ಹಳ್ಳಿಗಳಿಗೆ ಕೊಟ್ಟಿಲ್ಲ. ಅವರಿಗೆ ವಿದ್ಯುಚ್ಛಕ್ತಿ, ದೀಪ ಮತ್ತು ಕುಡಿಯುವ ನೀರು ಆಸ್ಪತ್ರೆ ಇತ್ಯಾದಿ ಯಾವುದೇ ವಿಧವಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿಲ್ಲ. ನೀವು ಮಾಡತಕ್ಕ ಕೆಲಸದಲ್ಲಿ ಯಾವ ಪ್ರಾಮಾಣಿಕತೆಯೂ ಕಂಡುಬರುತ್ತಿಲ್ಲ. ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕ ಯಾವ ನಿದರ್ಶನವನ್ನೂ ಕೂಡ ನೀವು ಇದುವರೆಗೆ ತಂದು ಕೊಟ್ಟಿಲ್ಲ. ನೀವು ಮಾಡತಕ್ಕ ಕರ್ತವ್ಯವನ್ನು ಮಾಡದೆ ಮರೆಯುವುದಕ್ಕೆ ನಿಮಗೆ "ದುರ ಅಹಂಕಾರ" ಬಂದಿದೆಯೆ ? ಇದಕ್ಕೆ ನಮ್ಮ ಹೈದರಾಬಾದಿನ ಮಾತಿನಲ್ಲಿ ಹೇಳುವುದಾದರೆ ನೀವು ತಾಕತ್ ಕಾ ನಶ ಶರಾಬ್ ಕೆ ನಶೆ ಸೇಭಿ ಜಹರಲಾ ಹೋತಾ ಹೈ ನಿಮಗೇನಾದರೂ ಇಂಟಾಕ್ಸಿಕೇಷನ್ ಏನಾದರೂ ಬಂದಿದೆಯೇ ? Do not be proud of power Intoxication power will be more harmful than the intoxication of alchohol. The man in power must feel that he is serve the Country. He must be a son of the soil. ತಮ್ಮ ಪಾಲನ ಕರ್ತವ್ಯವನ್ನು ಸರಿಯಾಗಿ, ಪೂರ್ತಿಯಾಗಿ ಮಾಡುವುದಕ್ಕೆ ಆಗದೇ ಇದ್ದ ಪಕ್ಷದಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅನ್ನು ಏತಕ್ಕೆ ತೆಗೆದುಕೊಂಡಿರಿ ! ಬೆಂಗಳೂರು ಕಾರ್ಪೋರೇಷನ್ ಅನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿದ್ದು ತಪ್ಪು ಎಂದು ಉಚ್ಚನ್ಯಾಯಾಲಯದವರು ತೀರ್ಪನ್ನು ಕೊಟ್ಟಮೇಲೂ ಕೂಡ ನೀವೇ ಅದರ ಆಡಳಿತವನ್ನು ತೆಗೆದುಕೊಂಡು ಮತ್ತೆ ಯಾವುದೋ ನೆಪವನ್ನು ಹಾಕಿ ಬೆಂಗಳೂರು ಕಾರ್ಪೋರೇಷನ್ ಅನ್ನ ಸೂಪರ್‌ಸಿಡ್ ಮಾಡಿದ್ದೀರಿ, ಮನಸಿಗೆ ಬಂದ ಹಾಗೆ ಕುಡಿಯುವ ನೀರಿನ ತೆರಿಗೆ, ಮನೆ ಕಂದಾಯ ಇತ್ಯಾದಿಗಳನ್ನು ಬೆಂಗಳೂರಿನ ನಾಗರೀಕರಿಗೆ ಹಾಕಿದ್ದೀರಿ, ಇದು ನ್ಯಾಯವೇ ? ಎನ್.ಜಿ.ಓ. ಗಳಿಗೆ ಮನೆ ತೆರಿಗೆ ಹಾಗೂ ನೀರಿನ ತೆರಿಗೆ ಮಾತ್ರ ಹಾಕುತ್ತೀರಿ ಅವರಿಗೆ ಪಗಾರ ಸರಿಯಾಗಿ ಕೊಡುವುದಿಲ್ಲ. ಇದು ಸರಿಯೇ ?

ಇನ್ನು citizen's forum (ಪೌರ ಸಮಿತಿ) ಕಾರ್ಪೋರೇಷನ್ನಿನ ಆಡಳಿತವನ್ನ ನಡೆಸುತ್ತಿದ್ದಾಗ ಎನ್. ಜಿ. ಓ. ಗಳ ಮತ್ತು ಬಡವರ ವಾಹನವಾದ ಸೈಕಲ್ ತೆರಿಗೆಯನ್ನು ವಜಾ ಮಾಡಬೇಕೆಂದು ರೆಸ್ಯುಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಆದರೆ ಅದನ್ನು ಜಾರಿಗೆ ತರುವುದರಲ್ಲಿ ಈ ಕಾಂಗ್ರೆಸ್ ಸರ್ಕಾರದ ದುರಅಹಂಕಾರದಿಂದ ವರ್ತಿಸಿದೆ, ಅದನ್ನು ಜಾರಿಗೆ ಕೊಡುವುದನ್ನ ಮರೆತುಬಿಟ್ಟಿದ್ದಾರೆ.

ಇನ್ನು ಕೊ-ಆಪರೇಟಿವ್ ಸೊಸೈಟಿಗಳಲ್ಲಿ ಹೇಳುವುದು ಏನು ? ಹಳ್ಳಿಯ ಜನಗಳಿಗೆ, ರೈತರಿಗೆ ಸಾಲವನ್ನ ಕೊಡುತ್ತಿದ್ದಾರೆ. ಸೊಸೈಟಿಗಳಲ್ಲಿ ಹಣವನ್ನ ಕೊಟ್ಟದ್ದಕ್ಕೆ ಅಂಕೆ ಸಂಖ್ಯೆಗಳನ್ನೇನೋ ತೋರಿಸುತ್ತಾರೆ. ಆದರೆ ಅದು ನಿಜವಾಗಿ ರೈತರ ಕೈ ಸೇರುವುದಿಲ್ಲ. ಯಾರೋ ಮಧ್ಯಸ್ಥಗಾರರು ತಿಂದುಹಾಕುತ್ತಾರೆ. ಇವೊತ್ತು ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕುಗಳು ಹಳ್ಳಿಗಳಲ್ಲಿ ಸಾಲ ಕೊಟ್ಟಿರುವುದನ್ನ ಶ್ರೀಮಂತರೇ ಪಡೆದುಕೊಂಡಿದ್ದಾರೆ. ಅವರು ಆ ಹಣವನ್ನು 100ಕ್ಕೆ 15–20 ರಷ್ಟರಂತೆ ಜನಗಳಿಗೆ ಬಡ್ಡಿಗೆ ಕೊಡುತ್ತಾರೆ. ಹಳ್ಳಿಗಳಲ್ಲಿ ರೈತರು ಬೀಜ ಮತ್ತು ಗೊಬ್ಬರ ಕೊಂಡು ಕೊಳ್ಳಲು ಒಬ್ಬರು ಶ್ರೀಮಂತರು 100 ರೂಪಾಯಿಗಳನ್ನ ಸಾಲ ಕೊಟ್ಟರೆ ಅವರಿಗೆ ಮುಂದಿನ ವರ್ಷ 200 ರೂಪಾಯಿಗಳನ್ನ ಕೊಡಬೇಕಾಗುತ್ತದೆ. ಇಷ್ಟೊಂದು ಹೆಚ್ಚಿನ ದರದಲ್ಲಿ ರೈತರಿಂದ ಬಡ್ಡಿಯನ್ನ ವಸೂಲು ಮಾಡುತ್ತಾ ಅವರಿಗೆ ಮೋಸ ಮಾಡುತ್ತಿದ್ದಾರೆ. ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿಯಿಂದ ರೈತರಿಗೆ ಏನು ಸಾಲವನ್ನು ಕೊಡುತ್ತಾರೆಯೋ ಅದು ವಕ್ಕಲಗರಿಗೆ (ರೈತರಿಗೆ) ಸಿಕ್ಕುತ್ತಿಲ್ಲ. ಅದು ಯಾರಿಗೆ ಸಿಕ್ಕುತ್ತದೆ ಎಂದರೆ ಹಳ್ಳಿಗಳಲ್ಲಿರತಕ್ಕ ಮನಿಲೆಂಡರುಗಳಿಗೆ ಸಿಕ್ಕುತ್ತಿದೆ ಇನ್ನೊಂದು ವಿಷಯವನ್ನ ಹೇಳುತ್ತೇನೆ. ಅದೇನೆಂದರೆ ಈಗ ಯಾವುದಾದರೂ ಒಂದು ಸೊಸೈಟಿಯಲ್ಲಿ ಒಬ್ಬ ರೈತ ಒಂದು ಸಾವಿರ ರೂಪಾಯಿ ಸಾಲ ತಂದಿರುತ್ತಾನೆ. ಅದಕ್ಕೆ ಆ ಸೊಸೈಟಿಗೆ ತನ್ನ ಜಮೀನನ್ನು ಮಾರ್ಟಗೇಜ್ ಮಾಡಿರುತ್ತಾನೆ. ಆ ಹಣವನ್ನು ರೈತ ಕೊಡುವುದಕ್ಕೆ ಆಗವೆ ಸ್ವತ್ತು ಹರಾಜಿಗೆ ಬರುತ್ತದೆ. ಅಂಥಾ ಸಂದರ್ಭದಲ್ಲಿ ಹರಾಜಿಗೆ ಬಂದಿರುವ ಭೂಮಿಯನ್ನು ಉಳಿಸುವ ಸಲುವಾಗಿ ಯಾರಾದರೂ ಒಬ್ಬ ಬ್ಯಾಂಕರು ಅಥವಾ ಒಬ್ಬ ಶ್ರೀಮಂತರು ರೈತನಿಗೆ ಒಂದು ಸಾವಿರ ರೂಪಾಯಿಗಳನ್ನ ಸಾಲ ಕೊಡುತ್ತಾನೆ. ಆ ಹಣವನ್ನು ಯಾವ ಸೊಸೈಟಿಗೆ ರೈತ

ಕಟ್ಟಬೇಕೋ ಅದನ್ನು ಕಟ್ಟುವುದಕ್ಕೆ ಒಳಗೆ ಹೋದಮೇಲೆ ಅದರ ಬಾಗಿಲಿನಲ್ಲಿಯೇ ಸಾಲ ಕೊಟ್ಟ ಬ್ಯಾಂಕರು ಕುಳಿತುಕೊಂಡಿರುತ್ತಾನೆ. ರೈತ ಸೊಸೈಟಿಗೆ ಸಾಲ ಕಟ್ಟಿದಕೂಡಲೇ ಮತ್ತೆ ಸಾಲ ಬೇಕು ಎಂದರೆ ಅವರು ಅವನಿಗೆ 1,500 ರೂಪಾಯಿಗಳೋ ಅಥವಾ 2 ಸಾವಿರ ರೂಪಾಯಿಗಳನ್ನೋ ಕೊಡುತ್ತಾರೆ. ಆಗ ರೈತ ಸಾಲ ಕೊಟ್ಟ ಬ್ಯಾಂಕರನಿಗೆ ಅಸಲಿನ ಜೊತೆಗೆ 100 ರೂಪಾಯಿಗಳನ್ನು ಕೊಡಬೇಕಾಗುತ್ತದೆ ಈ ರೀತಿಯಾಗಿ ಶ್ರೀಮಂತರು ರೈತನ ಹೆಸರಿನಲ್ಲಿ ರೈತನ ಸೊಸೈಟಿಗಳಿಂದ ಅನುಕೂಲ ಪಡೆಯುತ್ತಿದ್ದಾನೆ. ಈ ಸೊಸೈಟಿಗಳಿಂದ ಶ್ರೀಮಂತರು ಒಂದಲ್ಲ ಒಂದು ರೀತಿಯಲ್ಲ ಅನುಕೂಲವನ್ನು ಪಡೆಯುತ್ತಾರೆ. ರೈತನಿಗೆ ಭೂಮಿಯೂ ಇಲ್ಲದೇ ಮನೆಯೂ ಇಲ್ಲದೇ ತೊಂದರೆ ಪಡುತ್ತಿರುತ್ತಾನೆ. ಅಂಥಾ ರೈತರ ವಿಷಯದಲ್ಲಿ ಸರ್ಕಾರದವರಿಗೆ ಪ್ರೀತಿ ಇರಬೇಕು, ಅವರಿಗೆ ಸಹಾಯ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೆಂಕನಾಯಕ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಮತ್ತು ಪಂಚಾಯತಿ ರಾಜ್ಯ ಖಾತೆಯ ಮಂತ್ರಿಗಳಿಂದ ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಮಹತ್ವದ ವಿಷಯಗಳನ್ನು ಸಹಕಾರ ಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ. ಹಳ್ಳಿಗಾಡಿನಲ್ಲಿ ವ್ಯವಸಾಯಕ್ಕೆ ಬೇಕಾದ ಬೀಜ ಗೊಬ್ಬರ ಕ್ರಿಮಿನಾಶಕ ಔಷಧ ಸಕಾಲದಲ್ಲಿ ರೈತರಿಗೆ ಒದಗಿಸಿಕೊಡಬೇಕು. ವ್ಯವಸಾಯಗಾರನಿಗೆ ಆಹಾರ ಧಾನ್ಯಗಳನ್ನು ಸೊಸೈಟಿ ಮುಖಾಂತರ ಒದಗಿಸುವ ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಕೆಲವು ಹಳ್ಳಿಗಳಲ್ಲಿ ಸೊಸೈಟಿಗಳು ಡಿಫಾಲ್ಟರ್ ಆಗಿರುವುದರಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ. ಸೊಸೈಟಿಗಳು ಸರಿಯಾಗಿ ಕೆಲಸ ಮಾಡಲು ವ್ಯವಸ್ಥೆ ಪಡಿಸಲು ಕ್ರಮ ಕೈಕೊಳ್ಳಬೇಕು ಎಂದು ತಮಗೆ ಪ್ರಾರ್ಥಿಸುತ್ತೇನೆ. ನಮ್ಮ ಹರಪನಹಳ್ಳಿ ತಾಲ್ಲೂಕಿನಲ್ಲಿ 49 ಪಂಚಾಯತಿಗಳು ಇವೆ. ನಾಲ್ಕು ಪಂಚಾಯತಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಬಹಳ ಕಷ್ಟವಾಗಿದೆ. ಹರಪನಹಳ್ಳಿ ಚಿಗಟೇರಿ ಉಚ್ಚಂಗಿದುರ್ಗ ಈ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. 15 ವರ್ಷಗಳ ಹಿಂದೆ ಈ ಗುಡ್ಡಗಾಡು ಪ್ರದೇಶಕ್ಕೆ ಕೆಲವು ಆಫೀಸರ್ಸ್ ಬಂದು ಪ್ಲಾನ್ ಎಸ್ಟಿಮೇಟು ತಯಾರ್ಮಾಡಿ ಹೋಗಿದ್ದಾರೆ. ಇದುವರೆಗೆ ಯಾವ ವ್ಯವಸ್ಥೆಯಾಗಿಲ್ಲ. ಕುಡಿಯುವ ನೀರಿನ ಬಗ್ಗೆ ಅಲ್ಲಿ ಬಹಳ ಕಷ್ಟವಾಗಿದೆ. ಆದುದರಿಂದ ಅಲ್ಲಿ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಕುಡಿಯುವ ನೀರು ಇಲ್ಲದೆ ಕಷ್ಟವಾಗಿರುವುದರಿಂದ ಒಂದು ಗಾದೆ ಮಾತು ಹೊರಟಿದೆ. ಉಚ್ಚಂಗಿದುರ್ಗದವರಿಗೆ ಹೆಣ್ಣು ಕೊಡಬಾರದು ಎಂದು ಗಾದೆ ಹೇಳುತ್ತಾರೆ. ಅಲ್ಲಿ ಎರಡು ಎರಡೂವರೆ ಮೈಲು ದೂರ ಹೋಗಿ ನೀರು ತರಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ಸಹಾಯ ಮಾಡಿ ತಾಲ್ಲೂಕ್ ಬೋರ್ಡಿಗೆ ಸವಲತ್ತು ಕೊಟ್ಟು ನೀರಿನ ವ್ಯವಸ್ಥೆ ಬರುವ ಯುಗಾದಿಯೊಳಗಾಗಿ ಅಂದರೆ ಏಪ್ರಿಲ್ ತಿಂಗಳೊಳಗಾಗಿ ಮಾಡಿಕೊಡಬೇಕು. ಆ ಊರಿನಲ್ಲ ಯುಗಾದಿ ಹಬ್ಬಕ್ಕೆ ಒಂದು ಜಾತ್ರೆಯಾಗುತ್ತದೆ. ಅಗ್ಗೆ ಅಲ್ಲಿ ನೀರು ಮಾರಾಟ ಮಾಡುತ್ತಾರೆ. ಉಚ್ಚಂಗಿ ಅಮ್ಮನ ಜಾತ್ರೆಯಲ್ಲಿ ನೀರು ಸಿಕ್ಕುವುದಿಲ್ಲ, ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಆದುದರಿಂದ ಮೂರು ನಾಲ್ಕು ತಿಂಗಳಲ್ಲಿ ಯುಗಾದಿ ಹಬ್ಬದೊಳಗಾಗಿ ನೀರು ಸರಬರಾಜು ವ್ಯವಸ್ಥೆ ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕೆಲವು ಸ್ನೇಹಿತರು ಈಗಾಗಲೇ ಹೇಳಿದ್ದಾರೆ, ಹರಪನಹಳ್ಳಿ ತಾಲ್ಲೂಕಿನಲ್ಲ ಅದೇ ರೀತಿಯಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರೈಮರಿ ಸ್ಕೂಲ್ಸ್ ಸರಿಯಾಗಿ ಇರುವುದಿಲ್ಲ. ಕೆಲವು ಬಡ ಹಳ್ಳಿಗಳಿಗೆ ಪಂಚಾಯತಿ ಮತ್ತು ತಾಲ್ಲೂಕ್ ಬೋರ್ಡ್ ಸಹಾಯ ಮಾಡುತ್ತವೆ. ನಮ್ಮ ತಾಲ್ಲೂಕಿನಲ್ಲಿ ಅರವತ್ತು ಗ್ರಾಮಗಳಲ್ಲಿ ಜನರು ಬಡತನದ ಮೂಲಕ ಕಾಂಟ್ರಿಬ್ಯೂಷನ್ ಕೊಡುವ ಶಕ್ತಿ ಇರುವುದಿಲ್ಲ. ಇಂಥ ಊರುಗಳಿಗೆ ಹೆಚ್ಚಿನ ಸಹಾಯ ಮಾಡಬೇಕು. ಸ್ಕೂಲಿನಲ್ಲಿ ಉಪಾಧ್ಯಾಯರಿಗೆ ಕೂಡುವುದಕ್ಕೆ ಸ್ಥಳ ಇರುವುದಿಲ್ಲ. ಈ ರೀತಿ ಸ್ಥಳ ಇಲ್ಲದೇ ಹೋದರೆ ಹರಿಜನರು ಲಂಬಾಣಿಗಳು ಕೊರವರು ಇವರಿಗೆ ಸ್ಥಳವೇ ಇಲ್ಲ. ಮಳೆಗಾಲದಲ್ಲಿ ಇಂಥ ಸಾಲೆಗಳು ನಡೆಯುವುದಿಲ್ಲ ದಯಮಾಡಿ ಎಲ್ಲೆಲ್ಲಿ ಯಾವುದೇ ತಾಲ್ಲೂಕಿನಲ್ಲಿರಲಿ ಅಲ್ಲಿಯ ಅನನುಕೂಲತೆಗಳನ್ನು ದೂರ ಮಾಡಿ ವ್ಯವಸ್ಥೆ ಮಾಡುವ ಕೆಲಸ ಮಾಡಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಸಚಿವರಿಗೆ ಪ್ರಾರ್ಥಿಸುತ್ತೇನೆ.

ಕೆಲವು ಪಂಚಾಯತಿಗಳಲ್ಲಿ ಯಾವ ಕೆಲಸವೂ ಆಗಿಲ್ಲ. 15 ವರ್ಷಗಳಿಂದ ಪಂಚಾಯತಿಗಳು ಇದ್ದರೂ ಕೂಡ ಒಂದು ಕೆಲಸ ಮಾಡಿಲ್ಲ. ಕೇವಲ ಗುಮಾಸ್ತರನ್ನು ಇಟ್ಟುಕೊಂಡು ಸಂಬಳ ಕೊಡುವುದು ಇಷ್ಟೇ ಆಗಿದೆ. ಯಾವ ವ್ಯವಸ್ಥೆ ಮಾಡದೆ ಸುಮ್ಮನೆ ಪಂಚಾಯತಿಗಳು ಇವೆ. ಇದಕ್ಕೆ ಸಂಬಂಧಪಟ್ಟ ಸಚಿವರು ಕ್ರಮ ತೆಗೆದುಕೊಂಡು ಅವು ಸರಿಯಾಗಿ ಕೆಲಸ ನಡೆಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಶ್ರೀ ವೆಂಕನಾಯಕ)

ಕೊನೆಯದಾಗಿ ನಮ್ಮ ತಾಲ್ಲೂಕಿನಲ್ಲಿ ಪಂಚಾಯತಿಗಳಿಗೆ ತಾಲ್ಲೂಕ್ ಬೋರ್ಡ್‌ಗಳಿಗೆ ಹೆಚ್ಚಿನ ಸಹಾಯ ಮಾಡಬೇಕು ಮತ್ತು ಅವು ಯಶಸ್ವಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಿಸಿ ಕೊಡಬೇಕೆಂದು ವಿನಯದಿಂದ ತಮ್ಮಲ್ಲಿ ಕೇಳಿಕೊಂಡು ನನ್ನ ಮಾತು ಮುಗಿಸುವ ಮೊದಲು ತಮಗೆ ವಂದಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರಸಿ).—ಸನ್ಮಾನ್ಯ ಸಭಾಧ್ಯಕ್ಷರೇ, 1967-68 ನೇ ಸಾಲಿನ ಬಜೆಟ್ ಬೇಡಿಕೆಗಳ 21ನೇ ದಿನ ಇಂದು ಗ್ರಾಮಾಭಿವೃದ್ಧಿ ಸಹಕಾರ ಎನ್. ಇ. ಎಸ್., ಸಿ. ಡಿ. ಬಾಬುಗಳ ಇರುವ ಬೇಡಿಕೆಗಳ ಮೇಲೆ ಬಗ್ಗೆ ಚರ್ಚೆ, ವಿಮರ್ಶೆ, ಟೀಕೆ ಇವುಗಳನ್ನು ಮಾಡಿ ನಾವು ಸಲಹೆಗಳನ್ನು ನೀಡುತ್ತಿದ್ದೇವೆ. ಉಳುವವನಿಗೆ ಭೂಮಿ ಕೊಡದೇ ಇರುವ ಈ ಸರಕಾರ, ದುಡಿಯುವವರಿಗೆ ಕೆಲಸ ಕೊಡದೇ ಇರುವ ಈ ಸರ್ಕಾರ ಅಲ್ಲವೇ? ರಾಜ್ಯದಲ್ಲಿ ಗ್ರಾಮಾಭಿವೃದ್ಧಿಯನ್ನು ಈ ಸರ್ಕಾರ ಮಾಡಿದೆಯೇ? ಅನ್ನ ಬಟ್ಟೆಯಿಲ್ಲದೆ ಹರಿಜನರ ಅಭಿವೃದ್ಧಿ ಮಾಡಿದೆಯೇ? ಕೆಲಸವಿಲ್ಲದ ಕೂಲಿಕಾರರ ಅಭಿವೃದ್ಧಿ ಮಾಡಿದೆಯೇ? ತಿಳಿಸಲಿ ಈ ದಿವಸ ನತದೃಷ್ಟ ರೈತನ ಉದ್ಧಾರವಾಗಿದೆಯೇ? ಅವರ ಅಭಿವೃದ್ಧಿಗಾಗಿ ನೀತಿ ನಿಯಮ ರಚಿಸಿದೆಯೇ? ಎಂದು ಪ್ರಶ್ನೆ ಹಾಕಿದರೆ ಇವರು ಉತ್ತರ ಕೊಡುವರೇ? "ಎಲ್ಲರೂ ತನಗಾಗಿ, ತನಗಾಗಿ ಎಲ್ಲರೂ" ಎಂಬ ಸಹಕಾರದ ಪಾಠ ಹೇಳುತ್ತಾರೆ. ಸಹಕಾರದಿಂದ ಸುಖ ಬಾಳ್ವೆ ಬರುತ್ತದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಸಪ್ತಾಹ ಮಾಡುತ್ತಿದ್ದಾರೆ. ಆದರೆ ಇದೆಲ್ಲಾ ಯಾರಿಗೆ? ಕೆಲವು ಪುಢಾರಿಗಳ ಉದ್ಧಾರಕ್ಕಾಗಿ ಮಾತ್ರ ಸಹಕಾರಿ ಸಂಘಗಳಿವೆ. ಮೈಸೂರು ರಾಜ್ಯದಲ್ಲಿರುವ ಎರಡೂವರೆ ಕೋಟಿ ಜನಸಂಖ್ಯೆಗೆ 18,783 ಸಹಕಾರ ಸಂಘಗಳಿವೆ. 36 ಲಕ್ಷ ಸದಸ್ಯತ್ವ ಈ ಸಹಕಾರ ಸಂಘದಲ್ಲಿ ಇದ್ದಾರೆ. ಇದರಲ್ಲಿ ಬಡವರು ಎಷ್ಟು ಹರಿಜನರು ನಿರ್ಗತಿಕರಾದ ಕೂಲಿಕಾರರು ಎಷ್ಟು ಜನ ಸದಸ್ಯರು ಇದ್ದಾರೆ? ಎಷ್ಟು ಜನ ಬಡವರಿಗೆ ಸದಸ್ಯತನವನ್ನು ಈ ಸಂಘಗಳಲ್ಲಿ ಕೊಟ್ಟಿದ್ದೀರಿ? ನಿಮ್ಮ ಪುಢಾರಿಗಳು ತಾಲ್ಲೂಕ ಬೋರ್ಡ ಸದಸ್ಯರೂ ಅಧ್ಯಕ್ಷರೂ ಯಾರು ಯಾರು ಬೇಕೋ ಅವರು ಇದ್ದಾರೆ ವಿನಃ ಹರಿಜನರಿಲ್ಲ. ಈ 18 ಸಾವಿರ ಸಹಕಾರ ಸಂಘಗಳಲ್ಲಿ ರೈತ ಕೂಲಿಕಾರರು ಬಡವರು, 1 ಪರ್ಸೆಂಟ್ ಕೂಡ ಇಲ್ಲ. ಈ ಮೂಲಕ ಬಡವನ ಉದ್ಧಾರ ಮಾಡಿದ್ದೀರಾ? ಸಮಾಜವಾದ ಸಮಾಜ ರಚನೆ ಮಾಡುತ್ತೇವೆಂದು ಹೇಳತಕ್ಕಂಥ ಈ ಕಾಂಗ್ರೆಸ್ ಸರಕಾರ, ತಮ್ಮ ಚುನಾವಣೆಯ ಪ್ರಣಾಲಿಕೆಯಲ್ಲಿ ಹೇಳಿರತಕ್ಕ ಸರಕಾರ, ಗಾಂಧಿ ಭಕ್ತರಾದಂಥ ಇವರು ಬಡವರಿಗೆ ಅವಕಾಶ ಕಲ್ಪಿಸಿಕೊಡದಂಥ ನೀತಿ ಅನುಸರಿಸಿದ್ದಾರೆ. ಆದುದರಿಂದ ನಾವು ಈ ಕಾಂಗ್ರೆಸ್ ಸರಕಾರಕ್ಕೆ ಮಾನ್ಯತೆ ಕೊಡಬಹುದೇ ನೀವೇ ಹೇಳಿ? ಇದು ಬಂಡವಾಳಶಾಹೀ ಸರಕಾರ ಅಲ್ಲವೆ? ಯಾವ ಸಹಕಾರ ಸಂಘಗಳಿಗೆ ಹೋದರೂ ಬಡವರಿಗೆ ಯಾವ ಅನುಕೂಲವಿಲ್ಲ. ಅವನಿಗೆ ಬೇಕಾದಂಥ ಅನುಕೂಲತೆ ಸಾಲ ಸಿಗುತ್ತಿಲ್ಲ. ಅಲ್ಲಿ ಪ್ರತಿ ಕೂಲಗಳೇ ಹೆಚ್ಚು. ನಿರ್ಗತಿಕರನ್ನು ದೂರ ತಳ್ಳುತ್ತಾರೆ. ಸಹಾಯ ದೊರಕಿಸಿಕೊಳ್ಳುವುದಕ್ಕೆ ಪುಢಾರಿಗಳು ಮುಂದೆ ಬರುತ್ತಾರೆ ಪುಢಾರಿಗಳ ರಕ್ಷಣೆಯಿಂದ ಸರಕಾರ ಇದೆ ಎಂಬ ಅಭಿಪ್ರಾಯ ನಮಗಿದೆ. ಬಡವರನ್ನು ಎಕ್ಸಪ್ಲಾಯಿಟ್ ಮಾಡತಕ್ಕ ನೀತಿ ಈ ಸಹಕಾರ ಸಂಘಗಳಲ್ಲಿದೆ. ನೀವು ನಿಜವಾಗಿಯೂ ಹರಿಜನರ ಉಧ್ಧಾರ ಮಾಡುತ್ತಿದ್ದಿರಾ? ಬಡವರ ಉದ್ಧಾರ ಮಾಡುತ್ತೀರಾ? ಕೂಲಿಕಾರನ ಉದ್ಧಾರ ಮಾಡುತ್ತೀರಾ? ರೈತ ಕಾರ್ಮಿಕರ ಉದ್ಧಾರ ಮಾಡುತ್ತೀರಾ? ಈ ತತ್ವ ಒಪ್ಪುವುದಾದರೆ ತಾವು ಈ ಕೂಡಲೇ ಪ್ರತಿಯೊಂದು ಸಹಕಾರ ಸಂಘಗಳಲ್ಲಿ ಶೇಕಡ 10 ಹರಿಜನ ಗಿರಿಜನ ಕೂಲಿಕಾರರು ಇರಬೇಕು ಎಂದು ಸಹಕಾರ ಸಂಘಗಳ ಆಕ್ಟ ಮತ್ತು ರೂಲ್ಸನಲ್ಲಿ ತಿದ್ದುಪಡಿ ಮಾಡಬೇಕು. ಸಹಕಾರ ಸಂಘಗಳಲ್ಲಿ ಬಡವರಿಗೆ ಪ್ರಾತಿನಿಧ್ಯ ದೊರಕಿಸಿಕೊಡಬೇಕು. ಸಹಕಾರ ಸಂಘಗಳಲ್ಲಿ ನಾಮಕರಣ ಪದ್ಧತಿ ಜಾರಿಗೆ ತಂದು ಹರಿಜನರಿಗೆ ರಕ್ಷಣೆ ಕೊಡಿ. ಭಾರತೀಯರಲ್ಲಿ ಐದು ಜನಗಳಿಗೆ ಒಬ್ಬ ಹರಿಜನ ಇದ್ದಾನೆ. ಮಹಾತ್ಮಾ ಗಾಂಧೀಜಿಯವರು ಹೇಳಿದರು ಹರಿಜನರ ಉದ್ಧಾರ ರಾಷ್ಟ್ರದ ಉದ್ಧಾರ ಎಂದು ಹೇಳಿದ್ದಾರೆ. ಹರಿಜನರ ಉದ್ಧಾರವಾಗದಿದ್ದರೆ ಅಸ್ಪೃಶ್ಯತೆ ಅಳಿಯದಿದ್ದರೆ ಗಳಿಸಿದ ಸ್ವಾತಂತ್ರ್ಯ ಉಳಿಯುವುದಿಲ್ಲ. ಇದು ಬಂಡವಾಳಶಾಹಿ ಸರಕಾರವಾಗಿದೆ. ಈ ನಿಮ್ಮ ನೀತಿಯನ್ನು ನಾನು ಖಂಡಿಸಲೇಬೇಕಾಗಿದೆ. ನಿಮ್ಮ ರಚನಾತ್ಮಕ ಕಾರ್ಯಕ್ರಮ ವಿಲ್ಲ. ಈ ಬಗ್ಗೆ ಈ ಸಭೆಯಲ್ಲಿ ಅನೇಕ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಸಹಕಾರ ಸಂಘಗಳ ಮೇಲೆ ನಿಮ್ಮ ಬಂಡವಾಳ ಎಷ್ಟು? 34 ಲಕ್ಷ ರೂಪಾಯಿ. ಇಷ್ಟು ಕೊಟ್ಟರೂ ಪ್ರಗತಿ ಇಲ್ಲ. 34 ಲಕ್ಷ ರೂಪಾಯಿಗಳನ್ನು ವಿವಿಧಸಹಕಾರ ಸಂಘಗಳಿಗೆ ಷೇರುಬಂಡವಾಳವಾಗಿ ಸದಸ್ಯರಿಗೆ ಕೊಟ್ಟಿರತಕ್ಕ ಸಾಲ 143.13 ಲಕ್ಷ ರೂಪಾಯಿಗಳು. ಇದು ಯಾರಿಗೆ ಸೇರಿದೆ? ಇದರಲ್ಲಿ ಒಂದು ಲಕ್ಷ ರೂಪಾಯಿ ಯಾದರೂ ಹರಿಜನರಿಗೆ ಸೇರಿದೆಯೆ? ಬೇಡ ಬಡವರಿಗೆ ಸೇರಿದೆಯೇ, ಕೂಲಿಕಾರರಿಗೆ

ಸೇರಿದೆಯೇ ? ಈ ಬಗ್ಗೆ ಒಂದು ಪಟ್ಟಿಯನ್ನು ತರಿಸಿದರೆ ಸಮಾಧಾನವಾದೀತು. ಸಮಾಜವಾದಿಗಳು ಎಂದು ಕೇವಲ ಮಾತಿನಲ್ಲಿ ಮಾತ್ರ ಹೇಳಿಕೊಳ್ಳುವ ಈ ಕಾಂಗ್ರೆಸ್ಸಿಗರು ಬಡವನ ಉದ್ಧಾರ ಮಾಡಲಾರರು ಸಿರ್ಸಿಯಲ್ಲಿರುವ ತೋಟಗಾರಿಕೆ ಸೊಸೈಟಿಯಲ್ಲಿ ದೊಡ್ಡ ಅನಾಹುತವಾಯಿತು. ತೋಟಗಾರರ ಸಂಘ ಗೊತ್ತಾದ ಜನರ, ಗೊತ್ತಾದ ಗುಂಪಿನವರಿಗಾಗಿ ಈ ಮಾನ್ಯ ಸಭೆಯ ಸದಸ್ಯರೊಬ್ಬರ ನಾಯಕತ್ವ ದಲ್ಲಿ, ಅವರ ಆಪ್ತಬಂಧುವಿನ ಅಧ್ಯಕ್ಷತೆಯಲ್ಲಿ ರಚನೆಯಾಗಿದೆ. ಮೊನ್ನೆ ನಾನು ಒಂದು ಪ್ರಶ್ನೆ ಕೇಳಿವೆ, ಆ ಸಹಕಾರ ಸಂಘವಲ್ಲಿ ಕೆಲವು ಅನ್ಯಾಯಗಳು ನಡೆಯುತ್ತಿವೆ, ಮತ್ತು ನಡೆದಿದೆ. ಪೋಲಿಸಿನವರು ಹಿಡಿದಂಥ ಕಳ್ಳಲಾರಿಯನ್ನು ಬಿಡಿಸಿ ಬಿಟ್ಟರು ಅದು ವಿಚಾರಣೆಯಾಗಿಲ್ಲ. ರಿಸರ್ವ್ ಬ್ಯಾಂಕಿನವರು ತೋಟಗಾರರ ಸಂಘವನ್ನು ಸರ್‌ಪ್ರೈಜ್ ಇನ್‌ಸ್ಪೆಕ್ಷನ್ ಮಾಡಿದಾಗ ಒಂದು ಲಕ್ಷ ರೂಪಾಯಿ ಸಾಮಾನುಗಳು ನಾಪತ್ತೆಯಾಗಿವೆ ಎಂದು ತಿಳಿದುಬಂದಿವೆ ಅದು ಏನಾಯಿತು ಇದು ಸಹಕಾರ ಬಾಳ್ವೆಯೇ ? ಇದು ಸುಖದ ಬಾಳ್ವೆಯೇ ? ಕೇವಲ ಗೊತ್ತಾದ ಜನಾಂಗದ ಮಹನೀಯರ ಉದ್ಧಾರಕ್ಕಾಗಿ ಸುಖಬಾಳ್ವೆಗಾಗಿ ಈ ಸಹಕಾರ ಸಂಘವಿದೆ. ಅದರಲ್ಲಿರತಕ್ಕ ಸದಸ್ಯರ ಪರಸ್ಪರ ಬಂಧುತ್ವದ ಪಟ್ಟಿಯನ್ನು ತೆಗೆಯಿರಿ. ಅದರಲ್ಲಿರುವವರು ತೋಟಗಾರರಾದರೂ ಒಂದೇ ಕೋಮಿನವರು, ಮತ್ತು ಒಂದೇ ಜನಾಂಗದವರು ಅಲ್ಲ, ಕೂಲಿಕಾರರೂ ಅಲ್ಲ. ಅವರಿಗೆ ಅಲ್ಲಿ, ತೋಟ ಕೂಲಿಗಾರರಿಲ್ಲ. ಯಾವ ಅವಕಾಶವನ್ನೂ ಕಲ್ಪಿಸಿಲ್ಲ. ಬಂಡವಾಳಶಾಹಿಗಳ ಸಹಕಾರಸಂಘ ಇದು ಆಗಿದೆ.

ಹೊನ್ನಾವರ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸದಸ್ಯರಲ್ಲದವರಿಗೆ 60 ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಅದನ್ನು ವಸೂಲ್ಮಾಡುವುದಕ್ಕೆ ಸಾಧ್ಯವಿಲ್ಲದೆ ಸಂಘದ ಆಡಳಿತವರ್ಗ ಪರದಾಡುತ್ತಿದ್ದಾರೆ. ಇದನ್ನು ಸರ್ಕಾರದವರೂ, ನಮ್ಮ ರಿಜಿಸ್ಟ್ರಾರ್ ಅವರೂ ವಿಚಾರಿಸಬೇಕು. ಈ ರೀತಿ ಅನೀತಿ ಉಂಟಾಗಲಿಕ್ಕೆ ಕಾರಣವೇನು ? ಪುಡಾರಿಗಳ ಗುಂಪಿನ ಇನ್‌ಫ್ಲುಯೆನ್ಸ್ ಅಲ್ಲವೇ ? ಈರೀತಿ ಪುಡಾರಿಗಳ ಪ್ರವೇಶ ಅಕ್ರಮ ಅನ್ಯಾಯ.

ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕು ಬೋರ್ಡುಗಳೂ ಗ್ರಾಮ ಪಂಚಾಯಿತಿಗಳೂ ಇವೆ. ಇಲ್ಲಿ ಸೇಕಡ 80 ಅರಣ್ಯಭೂಮಿ ಇದೆ. ಆದರೆ ಈ ಪ್ರದೇಶದಲ್ಲಿ ಕಾಡು ಹೆಚ್ಚಾಗಿದ್ದು ರೈತರಿಂದ ಕಂದಾಯದ ರೂಪದಲ್ಲಿ ಹಣ ಹೆಚ್ಚಾಗಿ ಬಾರದೆ ಇರುವುದರಿಂದ ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ಕೊಡತಕ್ಕ ಭಾಗ ಬಹಳ ಕಡಮೆ ಇದೆ. ಇಲ್ಲಿರುವ ಕಾಡುಗಳಿಂದ ಸುಮಾರು ಆರು ಕೋಟಿ ರೂಪಾಯಿ ಉತ್ಪತ್ತಿ ಇರುವುದರಿಂದ ಇದರಲ್ಲಿ ಸೇಕಡ 15 ಭಾಗವನ್ನು ತಾಲ್ಲೂಕು ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟು ಇವು ಸಮರ್ಪಕವಾಗಿ ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಮಾನ್ಯ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ 1959ರಲ್ಲಿ ಕೋ ಆಪರೇಟಿವ್ ಫಾರ್ಮಿಂಗ್ ವರ್ಕಿಂಗ್ ಬೋರ್ಡ್ ಒಂದು ರಚಿತವಾಯಿತು. ರಾಷ್ಟ್ರದಲ್ಲಿ 3,200 ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದರು, ಅವುಗಳಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು 300 ಸೊಸೈಟಿಗಳನ್ನು ಸ್ಥಾಪನೆ ಮಾಡಿದ್ದಾರೆ. ಈ ಯೋಜನೆಗಾಗಿ ಬಡವರಿಗೆ ನಿರ್ಗತಿಕರಿಗೆ ಮತ್ತು ಕೂಲಿಗಾರರಿಗೆ ಜಮೀನನ್ನು ಒದಗಿಸಿ ಎಂದರೆ ಜಮೀನಿಲ್ಲ ಎಂದು ಹೇಳುತ್ತಾರೆ. ಪುಢಾರಿಗಳಿಗೆ ಸುಗಂಧ ದ್ರವ್ಯಗಳನ್ನು ಬೆಳೆಸುವುದಕ್ಕಾಗಿ 1,500 ಎಕರೆ, ಮೂರು ಸಾವಿರ ಎಕರೆ ವರೆಗೆ ಮಂಜೂರು ಕೊಡುತ್ತಾರೆ. ಬಡವರಿಗೆ, ಸಹಕಾರ ಸಂಘಗಳಿಗೆ ಜಮೀನು ಕೊಡಿ ಎಂದರೆ ಜಮೀನು ಇಲ್ಲ ಎಂದು ಹೇಳುತ್ತಾರೆ. ಇದು ಈ ಸರ್ಕಾರದನೀತಿ ಜೊತೆಗೆ ನೀವು ಕೊಟ್ಟಿರತಕ್ಕ ಎಲ್ಲಾ ಕೂಡೊಕ್ಕಲು ಸಂಘಕ್ಕೆ ಕೊಟ್ಟಿರುವ ಸಾಲ ಎಷ್ಟು ಎಂದರೆ 45.90 ಲಕ್ಷ ರೂಪಾಯಿ ? ನಿಮ್ಮ ಪ್ಯಾಟರ್ನ ಪ್ರಕಾರ ನೀವು ಕೊಡತಕ್ಕ ಸಾಲ 50 ಎಕರೆ ಜಮೀನು ಪಡೆದವರ್ರಿ 11,200 ರೂಪಾಯಿಗಳು ಕೊಟ್ಟಿದ್ದೀರಿ. ಆದರೆ ಅದರ ಬೆಲೆ ಲಕ್ಷೋಪಲಕ್ಷ ರೂಪಾಯಿಗಳು ಕೊಡಬಹುದು. ಅವರಿಗೆ ಉತ್ತೇಜನ ಕೊಡುತ್ತಿಲ್ಲ. ಉತ್ತೇಜನವನ್ನು ಕೊಟ್ಟರೆ ವಿವಿಧ ರೀತಿಯಲ್ಲಿ ಆಹಾರ ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಜಮೀನನ್ನು ಕೊಡುವಾಗ ಉಳುವವನಿಗೇ ಭೂಮಿಯನ್ನು ಒದಗಿಸುವುದಕ್ಕೆ ಅವಕಾಶ ಮಾಡಬೇಕು. ನಾಲ್ಕನೆ ಯೋಜನೆಯಲ್ಲಿ ಹೆಚ್ಚು ಅವಕಾಶ ಮಾಡಬೇಕು. ಈ ಬಗ್ಗೆ ಸರ್ಕಾರ ಎರಡು ಆರ್ಡರ್‌ಗಳನ್ನು ಮಾಡಿದೆ. ಎ. ಅಂಡ್ ಎಫ್. ಡಿ. 108—ಸಿ. ಸಿ. ಎಫ್. 60 ತಾರೀಖು 14-6-1962 ಮತ್ತು ನಂ. ಎ. ಅಂಡ್ ಎಫ್. 308—ಸಿ. ಸಿ. ಎಸ್. 52 ತಾರೀಖು 5-12-1962, ಈ ಎರಡು ಆರ್ಡರುಗಳ ಪ್ರಕಾರ ಫಾರ್ಮಿಂಗ್ ಸೊಸೈಟಿಗಳಿಗೆ ಸಹಾಯ ವಿಶೇಷಪರೀತ್ಯಾ ಸೌಲಭ್ಯಗಳನ್ನು ಒದಗಿಸಬೇಕೆಂದು ಇದೆ. ಇವು ಕೇವಲ ಕಾಗದದ ಮೇಲೆ ಇವೆಯೇ ಹೊರತು ಇದರಿಂದ ಯಾರ ಉದ್ಧಾರವು

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ಆಗುವುದಿಲ್ಲ. ವಿವಿಧ ಇಲಾಖೆ ಈ ಆರ್ಡರ್ ಪ್ರಕಾರ ಸಹಾಯ ಒದಗಿಸಿದೆ ರಾಷ್ಟ್ರದ ಕೂಲಿಗಾರರಿಗೆ ದ್ರೋಹ ಮಾಡಿದಂತೆ ಆಗಿದೆ ಬಡವರ ಉದ್ಧಾರಕ್ಕೆ ಧಕ್ಕೆಯಾಗಿದೆ. ಸರ್ಕಾರದವರು ದಯವಿಟ್ಟು ಇವುಗಳನ್ನು ಕಾರ್ಯರೂಪಕ್ಕೆ ತರುವುದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರು ವೇಳೆ ಮೀರಿತು ಎಂದು ಕೋಪ ಮಾಡಿಕೊಳ್ಳುತ್ತಿರುವುದರಿಂದ ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸಿ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇ ಗೌಡ (ಮದ್ದೂರು).—ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತ ಅದರ ಬಗ್ಗೆ ಕೆಲವು ಅಂಶಗಳನ್ನು ಈ ಸಭೆಯ ಮುಂದೆ ಇಡಲು ಪ್ರಯತ್ನಿಸುತ್ತೇನೆ. ಕಾಲಾವಕಾಶ ಕಡಮೆ ಇದೆ. ಅನೇಕ ಸ್ನೇಹಿತರುಗಳು ಅವರವರ ಅನುಭವದಮೇಲೆ ಅವರವರ ಧಾಟಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಪೈಕಿ ಸಹಕಾರ ಸಂಘದ ಇಲಾಖೆಯ ಬಗ್ಗೆ ಇರತಕ್ಕ ಲೋಪ ದೋಷಗಳನ್ನು ಹೋಗಲಾಡಿಸುವ ಬಗ್ಗೆ ಶ್ರೀಯುತ ಜಿ. ರಾಮೇಗೌಡರು ಬಹಳ ಉಪಯುಕ್ತವಾದ ಸಲಹೆಗಳನ್ನು ಸತ್ಯವನ್ನು ಮರೆ ಮಾಚದೆ ಈ ಸಭೆಯ ಮುಂದೆ ಇಟ್ಟಿದ್ದಾರೆ. ಏನು ದೋಷಗಳಿವೆ ಅವುಗಳನ್ನು ಹೋಗಲಾಡಿಸುವುದಕ್ಕೆ ಸೂಕ್ತ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ನಾನು ಅವುಗಳನ್ನು ಸಮರ್ಥಿಸುತ್ತೇನೆ.

ಸಹಕಾರ ಸಂಘಗಳನ್ನು ನಡೆಸತಕ್ಕವರು ಸರ್ಕಾರದವರೂ ಅಲ್ಲ, ಅಧಿಕಾರಿಗಳೂ ಅಲ್ಲ. ಜನಗಳು ಅವನ್ನು ನಡೆಸುತ್ತಿದ್ದಾರೆ. ಸ್ವಯಂಪ್ರೇರಿತರಾಗಿ, ಸ್ವಯಂ ಅಧಿಕಾರವನ್ನು ಒಳಗೊಂಡ ಸಂಘವಾಗಿದ್ದು, ಒಳ್ಳೆಯ ಹೆಸರು ಬರಲಿ, ಕೆಟ್ಟ ಹೆಸರು ಬರಲಿ ಅದು ಸಂಘದ ಅಧಿಕಾರವರ್ಗಕ್ಕೆ ಮತ್ತು ಸದಸ್ಯರುಗಳಿಗೆ ಸೇರಿದ್ದೇ ಹೊರತು ಇದರಲ್ಲಿ ಸರ್ಕಾರಿ ಅಧಿಕಾರಿಗಳ ಪಾತ್ರ ಹೆಚ್ಚಾಗಿಲ್ಲ. ಆದ್ದರಿಂದ ಸರ್ಕಾರವನ್ನು ಟೀಕೆ ಮಾಡತಕ್ಕದು ಅನಗತ್ಯ ಎಂದು ನನಗನ್ನಿಸುತ್ತದೆ. ಅನೇಕ ಮಿತ್ರರು ಆ ಕಡೆಯವರು ಟೀಕೆ ಮಾಡಿದ್ದಾರೆ. ಸಂಘಗಳಲ್ಲಿ ಹಣದ ದುರುಪಯೋಗವಾಗಿರುವುದು ಸತ್ಯ. ಸಂಘಗಳಲ್ಲಿ ಅನೇಕ ರೀತಿಯ ದುರಾಡಳಿತ ನಡೆಯುತ್ತಿರುವುದೂ ಸತ್ಯ. ಆದರೆ ನಾಲ್ಕೈದು ವರ್ಷಗಳ ಹಿಂದೆ ಏನು ನಡೆಯುತ್ತಿತ್ತು ಅದನ್ನು ಗಮನಕ್ಕೆ ತೆಗೆದುಕೊಂಡರೆ ಈಗ ಬಹಳ ಕಡಮೆ ಯಾಗಿದೆ. ಅದರಲ್ಲಿಯೂ ತಪ್ಪು ಮಾಡತಕ್ಕ ಸಹಕಾರ ಸಂಘಗಳು ಯಾವುವು ಎಂದು ನೋಡಿದರೆ, ಎಲ್ಲಿ ವಿದ್ಯಾವಂತರು, ಪದವೀಧರರಿದ್ದಾರೆ ಅವರು ಮಾಡುವಷ್ಟು ಅನ್ಯಾಯ, ರೈತರೂ, ಏನೂ ಗೊತ್ತಿಲ್ಲದೇ ಇರುವವರೂ ನಡೆಸುತ್ತಿರುವ ಸಹಕಾರ ಸಂಘಗಳಲ್ಲಿ ಕಾಣುತ್ತಿಲ್ಲ. ಅದರ ಪೈಕಿ ಇರತಕ್ಕವರಲ್ಲಿ ಆಕಡೆ ಇರುವವರು ಸ್ನೇಹಿತರು ಜಾಸ್ತಿ, ನಮ್ಮ ಸ್ನೇಹಿತರು ಬಹಳ ಕಡಮೆ. ಮಂಡ್ಯ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಮಾನ್ಯ ಮಿತ್ರರಿಗೆ ಬೇಕಾದರೆ ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅವು ಬಹಳ ಪ್ರಾಮಾಣಿಕವಾಗಿ ದಕ್ಷತೆಯಿಂದ ಆಡಳಿತ ನಡೆಸುತ್ತಿವೆ. ನಮ್ಮಲ್ಲಿ ನಾವು ವಿಮರ್ಶೆ ಮಾಡಿಕೊಂಡು ನಾವು ಮಾಡತಕ್ಕ ತಪ್ಪನ್ನು ಬಿಟ್ಟರೆ ಸಹಕಾರ ಸಂಘಗಳ ಆಡಳಿತ ಚೆನ್ನಾಗಿ ನಡೆಯುತ್ತದೆ.

ಸಹಕಾರ ಸಂಘಗಳಲ್ಲಿ ಆಗತಕ್ಕ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸರ್ಕಾರದವರು ಏನು ನೀತಿಯನ್ನು ಅನುಸರಿಸುತ್ತಿದ್ದಾರೆ ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು. ತಾಲ್ಲೂಕು ಬೋರ್ಡುಗಳಲ್ಲಿ ಹಣವನ್ನು ಅಪರೇಟ್ ಮಾಡತಕ್ಕ ಅಧಿಕಾರ ಅಲ್ಲಿರುವ ಮುಖ್ಯಾಧಿಕಾರಿಯ ಕೈಯಲ್ಲಿದೆ. ಮುನಿಸಿಪಾಲಿಟಿಗಳಲ್ಲಿ ಚೀಫ್ ಆಫೀಸರ್ ಕೈಯಲ್ಲಿದೆ ಪಂಚಾಯಿತಿಗಳಲ್ಲಿ ಸೆಕ್ರೆಟರಿ, ಛೇರ್‌ಮನ್ ಇಬ್ಬರಿಗೂ ಸೇರಿದ ಹಾಗೆ ಅಧಿಕಾರವಿದೆ. ಸೊಸೈಟಿಗಳಲ್ಲಿ ಕೂಡ ವೇತನ ಕಾರ್ಯದರ್ಶಿಗಳನ್ನು ಎಲ್ಲ ಕಡೆಗಳಲ್ಲಿಯೂ ಕೂಡ ಕಡ್ಡಾಯವಾಗಿ ನೇಮಕ ಮಾಡಿದರೆ ಏನು ಹಣ ದುರುಪಯೋಗವಾಗುತ್ತಇದೆ, ಎಂದು ಹೇಳುತ್ತಾರೆ ಅದು ಶೇಕಡ 99 ಭಾಗ ಕಡಿಮೆಯಾಗುತ್ತದೆ.

6-00 P.M.

ಆದರೆ ಅವರು ಹೇಳಬಹುದು, ಎಲ್ಲಾ ಸೊಸೈಟಿಗಳಲ್ಲಿ ವೇತನ ಕಾರ್ಯದರ್ಶಿಗಳನ್ನು ನೇಮಿಸಬೇಕಾದರೆ ವೆಚ್ಚಕ್ಕೆ ಬೇಕಾಗುವಷ್ಟು ಆದಾಯ ಅವರು ಮಾಡುತ್ತಾ ಇಲ್ಲವೆಂದು. ಪ್ರತಿಯೊಂದು ಕಡೆ ಪಂಚಾಯ್ತಿ ಸೆಕ್ರೆಟರಿ ಇದ್ದಾರೆ, ವಿಲೇಜ್ ಅಕೌಂಟೆಂಟ್ ಇದ್ದಾರೆ, ಗ್ರಾಮಸೇವಕರಿದ್ದಾರೆ, ಸೊಸೈಟಿ ಸೆಕ್ರೆಟರಿ ಇದ್ದಾರೆ. ಸಣ್ಣ ಸಣ್ಣ ಪಂಚಾಯ್ತಿಗಳಿಗೆ ನಾಲ್ಕು ಜನ ಬೇರೆ ಬೇರೆ ಬಾಬುಗಳಿಗೆ ಬೇಕಾಗಿಲ್ಲ. ಒಬ್ಬೊಬ್ಬರೇ ಸಾಕು. ಒಬ ನೌಕರನೇ ಸಹಕಾರಸಂಘ ಗ್ರಾಮಪಂಚಾಯ್ತಿ ಮತ್ತು

ವಿಲೇಜ್ ಆಕೌಂಟೆಂಟ್‌ಆಗಿ ಕೆಲಸಮಾಡಬಹುದು. ಅದರಿಂದ ವೆಚ್ಚ ಕಡಿಮೆಯಾಗುತ್ತದೆ. ಒಂದೊಂದಕ್ಕೆ ಸಮನ್ವಯ ಏರ್ಪಡುತ್ತೆ. ಒಬ್ಬ ನೌಕರ ಇದ್ದರೆ, ಅದರಿಂದ ಬಹಳ ಪ್ರಯೋಜನ ವಾಗುತ್ತದೆ. ಅದರಲ್ಲೂ ಅನೇಕ ಸೊಸೈಟಿಗಳಲ್ಲಿ ವೇತನ ಕಾರ್ಯದರ್ಶಿಯವರನ್ನು ನೇಮಕ ಮಾಡುವುದಕ್ಕೆ ಒಪ್ಪಿಲ್ಲ. ಎರಡನೆಯದಾಗಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಏನು ಕೆಲಸ ಮಾಡಿದ್ದಾರೆ, ನಮ್ಮ ಮುಂದೆ ಇವುಗಳಿಗೆ ಸಂಬಂಧಿಸಿದಂತೆ ಇರತಕ್ಕವರದಿ ಸುಳ್ಳು. ರೈತರು ಅವರವರ ಜಮೀನಿನಲ್ಲಿಅವರೇ ವ್ಯವಸಾಯ ಮಾಡುತ್ತಾರೆ. ಬುದ್ಧಿವಂತರಾದವರು ಯಾವ್ಯಾವುದೋ ಕಾರಣ ಹೇಳಿ ಲೆಕ್ಕಸರಿಪಡಿಸಿಕೊಂಡು ಅನ್ಯಾಯವಾಗಿ ಸಹಾಯವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ರೀತಿ ಮಾಡಿದರೆ ನಿಜವಾಗಿಯೂ ಸರ್ಕಾರ ಉಳಿಯುವುದಿಲ್ಲವೆಂದು ಹೇಳಬೇಕಾಗಿದೆ. ನಮ್ಮಜಿಲ್ಲೆ ಯಲ್ಲಿ 13 ಜಾಯಿಂಟ್‌ಫಾರ್ಮಿಂಗ್ ಸೊಸೈಟಿಗಳಿವೆ. ಅದರಲ್ಲಿ 12 ಸೊಸೈಟಿಗಳು ಸಾಲ ತೆಗೆದು ಕೊಂಡಿದ್ದಾರೆ. 10 ಸೊಸೈಟಿಗಳು ವಾಪಸ್ಸು ಕೊಟ್ಟಿಲ್ಲ ಕೊಡುವುದೂ ಕಾಣೆ ನಾನು ತಾಲ್ಲೂಕು ಬೋರ್ಡು ಅಧ್ಯಕ್ಷನಾಗಿರುವುದರಿಂದ ಇದನ್ನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ನಮ್ಮಜಿಲ್ಲೆಯ ಡಿ. ಸಿ. ಸಿ. ಬ್ಯಾಂಕ್ ಅಧ್ಯಕ್ಷರಿಗೂ ರಿಜಿಸ್ಟ್ರಾರಿಗೂ ಕಾಗದ ಬರೆದಿರುತ್ತಾರೆ. ಇನ್ನು ಮುಂದೆ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳನ್ನು ರಿಜಿಸ್ಟ್ರೇಷನ್ ಮಾಡುವುದಕ್ಕೆ ಅವಕಾಶ ಕೊಡಬೇಡಿ, ಎಂದು ಕಡ್ಡಾಯವಾಗಿ ಹೇಳುತ್ತಿದ್ದೇನೆ. ಇನ್ನು ವೀವರ್ಸ್ ಸೊಸೈಟಿಗಳ ವಿಚಾರವಾಗಿ ಹೇಳುತ್ತೇನೆ. ಎಲ್ಲಾ ಸೊಸೈಟಿಗಳೂ ಡಿಫಾಲ್ಟರ್ಸ್ ಆಗಿದ್ದಾರೆ. ನೀವು ಎಷ್ಟು ಲಕ್ಷರೂಪಾಯಿ ಸಹಾಯ ಮಾಡಿದರೂ ಸದರಿ ಸಂಘಗಳು ಸಮರ್ಪಕವಾಗಿ ಕೆಲ್ಸ ಮಾಡುವುದಕ್ಕಾಗುವುದಿಲ್ಲ. ಆದರೆ ಉದ್ಯೋಗ ಒದಗಿಸಬೇಕಾಗಿದೆ. ಅದಕ್ಕಾಗಿ ಬೇರೆ ರೀತಿಯಲ್ಲಿ ಸಹಾಯ ಕೊಡಿ, ಪವರ್ ಲೂಮ್ಸ್ ಕೊಡಿ. ವೇತನ ಕಾರ್ಯದರ್ಶಿಗಳನ್ನು ಸದರಿ ಸಂಘಗಳಿಗೆ ನೇಮಿಸಿ ಹಣಸಹಾಯಮಾಡಿದಲ್ಲಿ ಇನ್ನು ಈ ಜನಗಳಿಗೆ ಅನುಕೂಲವಾಗುತ್ತದೆ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯನ್ನು ತೆಗೆದ ಹೊರತು ನಮ್ಮ ರೈತರಿಗೆ ಕಷ್ಟ ತಪ್ಪುವುದಿಲ್ಲ. ಗೊಬ್ಬರ ಹಂಚಿಕೆಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯವರು ಒಂದು ಮಾಡುವುದು, ವ್ಯವಸಾಯ ಇಲಾಖೆಯವರು ಒಂದುತರಹ ಅಲಾಟ್ ಮಾಡುವುದು. ಅಗ್ರಿಕಲ್ಚರಲ್ ಡೈರೆಕ್ಟರ್‌ರವರು ಒಂದು ರೀತಿ ಮಾಡುತ್ತಾರೆ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಮತ್ತೊಂದು ರೀತಿ ಮಾಡುತ್ತಾರೆ. ನನಗೆ ಇವತ್ತು ಅದರ ಕಾರ್ಯದಕ್ಷತೆ ಬಗ್ಗೆ ಹೇಳುವುದಕ್ಕೆ ನಾಚಿಕೆಯಾಗುತ್ತದೆ. ನಮ್ಮಜಿಲ್ಲೆಯಲ್ಲಿ ಇವತ್ತು ಫರ್ಟಿಲೈಸರ್ಸ್ ಇಲ್ಲಸ್ವಾಮಿ. ಈ ರೀತಿ ಇದ್ದರೆ, ಸಾಂದ್ರ ಬೇಸಾಯ ಯಾವ ರೀತಿಯಲ್ಲಿ ಅಭಿವೃದ್ಧಿ ಆಗುತ್ತದೆ? ಆದ್ದರಿಂದ ಸ್ಟೇಟ್ ಮಾರ್ಕೆಟಿಂಗ್ ಇಲಾಖೆಯ ಬದಲು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಹಂಚಿಕೆಯಾದರೆ ಬಹಳ ಒಳ್ಳೆಯದು. ಇನ್ನು ನೀರಾವರಿ ಬಾವಿಗಳಿಗೆ, ಪಂಪು ಸೆಟ್ಟುಗಳಿಗೆ ಕೇಂದ್ರ ಜಮೀನು ಅಭಿವೃದ್ಧಿ ಬ್ಯಾಂಕುಗಳ ಮೂಲಕ ಕೊಡುತ್ತಿರುವುದೇನೂ ಒಳ್ಳೆಯದೆ. ಆದರೆ ರಾಜ್ಯಾದ್ಯಂತ ಒಂದೇ ಬ್ಯಾಂಕಿನ ಮೂಲಕ ಕೊಡುವುದು ಅಸಾಧ್ಯ. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕುಗಳಿವೆ ಮತ್ತು ಬ್ರ್ಯಾಂಚ್‌ಗಳಿವೆ. ಅದರ ಮೂಲಕ ಕೊಟ್ಟಿಲ್ಲ, ಒಬ್ಬ ರೈತನು ಸಾಲಕ್ಕಾಗಿ ರೈತರುಗಳಿಗೆ ಕಡಿಮೆವೆಚ್ಚದಲ್ಲಿ, ಕಡಿಮೆ ಕಾಲದಲ್ಲಿ ಹೆಚ್ಚು ಪ್ರಯೋಜನವಾಗುತ್ತದೆ. ಬೆಂಗಳೂರಿಗೆ ಅನೇಕಸಾರಿ ಬರಬೇಕಾಗುತ್ತದೆ. ಸಿಗುವ ಸಾಲದ ಹಣದಲ್ಲಿ 200-300 ರೂಪಾಯಿ ತಿರುಗಾಡುವುದಕ್ಕೆ ಖರ್ಚಾಗುತ್ತಿದೆ ಆದ್ದರಿಂದ ರೈತ ತನ್ನ ಕೆಲಸವನ್ನು ಬಿಟ್ಟು ಇಲ್ಲಿಗೆ ಬಂದು ಅಲೆಯತಕ್ಕ ಕೆಲಸ ತಪ್ಪಿಸಬೇಕಾಗಿದೆ. ಆದ್ದರಿಂದ ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ರೈತರಿಗೆ ಸಾಲ ದೊರೆಯುವಂತೆ ಆಗಬೇಕು.

ಆಡಿಟರ್‌ಗಳ ವಿಚಾರ. ಜೂನ್ ಅಂತ್ಯಕ್ಕೆ ಮಿಸ್‌ಅಪ್ರೋಪ್ರಿಯೇಶನ್ ಆದರೂ, ಆಡಿಟ್ ರಿಪೋರ್ಟು ನೋಡಿದರೆ, ಏನೂ ಇಲ್ಲ. ಸ್ಟಾಕ್ ಇದೆ ಎಂಬುದಾಗಿ ಸ್ಟಾಕ್‌ಪರಿಶೀಲನೆ ಮಾಡದೆ ಕೊಡುವುದಿಲ್ಲವೆಂದು ಹೇಳುತ್ತಾರೆ. ಆಡಿಟರುಗಳು ಕಳ್ಳರಿಗೆ ಷರೀಕಾಗುತ್ತಾರೆ ಈ ರೀತಿ ಆಡಳಿತ ನಡೆದರೆ ನಮ್ಮ ಸುಧಾರಣೆ ಹೇಗೆ ಆಗುತ್ತದೆ. ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಹೆಚ್ಚಿಗೆ ದುಡ್ಡು ಕೊಟ್ಟರೆ ಹೆಚ್ಚಿಗೆ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ. ನಮ್ಮ ದೇಶವೇ ಅಭಿವೃದ್ಧಿ ಯಾಗಬೇಕಾದರೆ, ಅದು ನಮ್ಮ ತಾಲ್ಲೂಕು ಬೋರ್ಡುಗಳ ಮೂಲಕ. ಎಲ್ಲಾ ತಾಲೂಕುಗಳಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳು ನಡೆಯಬೇಕಾದರೆ, ಪ್ರಯೋಜನವಾಗಬೇಕಾದರೆ ಅದು ತಾಲ್ಲೂಕು ಅಭಿವೃದ್ಧಿಸಮಿತಿಗಳ ಮೂಲಕ. ಪಂಚಾಯಿತಿ ಸಹಕಾರ ಸಂಘ, ತಾಲೂಕು ಬೋರ್ಡು ನಿಷ್ಠೆಯಿಂದ ಕೆಲಸಮಾಡಿದರೆ ಹಳಿಗಳ ರೈತರ ಅಭಿವೃದ್ಧಿ ಇನ್ನೂ ಹೆಚ್ಚಾಗಿ ಅದರಿಂದ ದೇಶಕ್ಕೆ ಹೆಚ್ಚು ಪ್ರಯೋಜನವಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಮುಂಜಾವದಿಂದ ಈಗ ಆರು ಗಂಟೆಯವರೆಗೆ ಈ ಮನೆಯ ಮಾನ್ಯ ಸದಸ್ಯರುಗಳು ಬಹಳ ಗೌರವದಿಂದ ಸರ್ಕಾರಕ್ಕೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಸರ್ಕಾರ ಇವತ್ತು ಯಾವ ಮಾನ್ಯ ಸದಸ್ಯರುಗಳು

(ಶ್ರೀ ಪಿ. ಎಂ. ನಾಡಗೌಡ)

ಇದರೊಳಗೆ ಬಹಳ ಹುಮ್ಮಸ್ಸಿನಿಂದಲೂ, ಅಭಿಮಾನದಿಂದಲೂ ಮಾರ್ಗದರ್ಶನ ಮಾಡಿದ್ದಾರೋ, ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಈ ಸಹಕಾರದ ವಿಷಯ, ಅಭಿವೃದ್ಧಿಯ ವಿಷಯ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಷಯಗಳ ಬಗ್ಗೆ ಎಷ್ಟು ಸವಿಸ್ತಾರವಾಗಿ ಚರ್ಚೆಯಾಗ ಬೇಕಾಗಿತ್ತೋ, ಅದನ್ನು ಇವತ್ತು ಮಾನ್ಯ ಸದಸ್ಯರು ಮಾಡಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಬಹಳ ಅಮೂಲ್ಯವಾದ ಮತ್ತು ಶಾಸಕತೆಯ ರೀತಿಯಿಂದ ಖಾತೆಗಳನ್ನು ನಡೆಸಲಿಕ್ಕೆ ಮಾರ್ಗ ದರ್ಶನವನ್ನು ಮಾಡಿದ್ದಾರೆ. ಸರ್ಕಾರ ಇವತ್ತಿನ ದಿವಸ ಏನು ಮಾನ್ಯ ಸದ್ಯರುಗಳು ಹೇಳು ತ್ತಿದ್ದಾರೆ, ಅದನ್ನು ನಿರ್ದಾಕ್ಷಿಣ್ಯವಾಗಿ, ಯಾವುದೇ ಒಂದು ದಯದಾಕ್ಷಿಣ್ಯವಿಲ್ಲದೆ, ವಿಚಾರ ಮಾಡಿ, ಪರಿಪಾಲನೆ ಮಾಡಬೇಕೆಂಬುದನ್ನು ನಾವು ಇವತ್ತಿನ ದಿವಸ ತಿಳಿದುಕೊಂಡಿದ್ದೇವೆ. ಈ ಒಂದು ಸಹಕಾರಿ ಆಂದೋಳನ, ಅಥವಾ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಇವುಗಳು ಒಂದು 10–15 ವರ್ಷಗಳಿಂದ ನಡೆದುಬಂದು, ಏರುಪೇರುಗಳನ್ನು ದಾಟಿ, ಬಂದು, ಇವತ್ತಿನ ದಿವಸ ಒಂದು ನಿರ್ದಿಷ್ಟವಾದ ಸ್ಥಿತಿಗತಿಗೆ ಬಂದು ಮುಟ್ಟಿದೆ. ಆ ದೆಶೆಯಿಂದ ತಾವು ಸಹಕಾರಿ ಕ್ಷೇತ್ರದಲ್ಲಿ ಯಾವ ರೀತಿಯಿಂದ ಮಾರ್ಗದರ್ಶನ ಮಾಡುತ್ತಿದ್ದೀರಿ, ಅದರ ಗಣನೆ ಸರ್ಕಾರ ಮಾಡಿ, ಸಹಕಾರ ಮಾಡುತ್ತ ದೆಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಸಹಕಾರಿ ಕ್ಷೇತ್ರದೊಳಗೆ 18 ಸಾವಿರ ಸಂಸ್ಥೆಗಳು ಇವೆಯೆಂದು ತಮಗೆಲ್ಲರಿಗೂ ಗೊತ್ತು. ಈ 18 ಸಾವಿರದೊಳಗೆ, ಇವತ್ತಿನ ದಿವಸ ಎಲ್ಲಾ ಸಂಸ್ಥೆಗಳೂ ಚೆನ್ನಾಗಿದ್ದಾವೆ, ಅಥವಾ ಎಲ್ಲಾ ಸಂಸ್ಥೆಗಳು ಕೆಟ್ಟಿದ್ದಾವೆಂದು ತಾವು ಯಾರೂ ಭಾವನೆ ಮಾಡಬಾರದು. ಅದರಲ್ಲಿ ಸ್ವಲ್ಪಮಟ್ಟಿಗೆ ಕೆಟ್ಟ ಸಂಸ್ಥೆಗಳು ಇದ್ದೀತು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಚಲೋ ಸಂಸ್ಥೆಗಳು ಇರುವುದನ್ನು ಮಾನ್ಯ ಸದಸ್ಯರು ಹೇಳಿದ್ದರೆ ಒಳ್ಳೆಯದಾಗಿತ್ತು ಎಂದು ನನಗನಿಸುತ್ತದೆ.

ತಾವೆಲ್ಲರೂ ವಿವಿಧ ಕ್ಷೇತ್ರದಿಂದ ಹೊಸ ಮೈಸೂರು ರಾಜ್ಯದಲ್ಲಿ ಮಾನ್ಯ ಪ್ರತಿನಿಧಿಗಳಾಗಿ ಬಂದಿದ್ದೀರಿ. ಬರುವಾಗ ನಮ್ಮ ನಮ್ಮ ಕ್ಷೇತ್ರದಲ್ಲಿ ಒಂದೆರಡು ಸಂಸ್ಥೆಗಳಲ್ಲಿ ಅಗ್ರಗಣ್ಯರಾಗಿ ಮತ್ತು ಶಕ್ತರೀತಿಯಿಂದ ಜನತೆಯ ಆಸೆ ಆಕಾಂಕ್ಷೆ ಇಟ್ಟುಕೊಂಡಿದ್ದರೆ ಅವುಗಳನ್ನು ಹೇಳಬೇಕಾಗಿತ್ತು ಎಂದು ನನ್ನ ಒಂದು ಹಿರಿಯ ಆಸೆ. ಏಕೆಂದರೆ ಇವೊತ್ತಿನ ಮಹಾ ಸಭೆಯಲ್ಲಿ ಆಗಲಿ ಅಥವಾ ಹೊರಗೆ ಎಲ್ಲೆಲ್ಲಿ ಮಹಾ ಸಮ್ಮೇಳನ ಸಭೆಗಳು ಆಗುತ್ತದೋ ಅಲ್ಲಿ ಸಹಕಾರೀ ಕ್ಷೇತ್ರದಲ್ಲಿ ಬರೇ ಕೆಟ್ಟಿದೆ ಎಂದು, ಇದರಲ್ಲಿ ದುರುಪಯೋಗ ನಡೆದಿದೆ ಎಂದು, ಇದರಲ್ಲಿ ಎಷ್ಟೋ ನ್ಯೂನತೆಗಳು ಇವೆ ಎನ್ನುವ ಮಾತನ್ನು ಸಹಜವಾಗಿ ಹೇಳುತ್ತಿದ್ದೇವೆ. ನನ್ನ ನಮ್ರವಾದ ವಿನಂತಿ ಏನೆಂದರೆ, ಈ ಪ್ರಶ್ನೆಯನ್ನು ವಿಹಂಗಮ ನೋಟದಿಂದ ನೋಡಬೇಕು ಮತ್ತು ತುಲನಾತ್ಮಕ ದೃಷ್ಟಿಯಿಂದ ನೋಡ ಬೇಕು ಎಂದು ನಾನು ಕಳಕಳಿಯಿಂದು ಹೇಳುತ್ತೇನೆ. ಇದು ಒಂದು ಜನತೆಯ ಅಂದೋಳನ ಎಂದು ಹೇಳುತ್ತಿದ್ದೇವೆ. ಯಾರು ತಮ್ಮ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ದುಡಿಯುತ್ತಿದ್ದೀರಿ, ಈ ಒಂದು ಅಂದೋಳನದಿಂದ ಮಾನವ ಕೋಟಿ ಪ್ರಗತಿ, ಮಾನವ ಕೋಟಿಯ ಆಶೆ ಮತ್ತು ಆಕಾಂಕ್ಷೆ ಗಳಿಗೆ ಪ್ರತಿಫಲ ಸಿಗಬೇಕಾದುದು ಸಹಜ. ಅದರ ಸಲುವಾಗಿ ತಾವುಗಳು ಮಾರ್ಗದರ್ಶನ ಮಾಡಿ ಸರ್ಕಾರದವರು ತಮಗೆ ಯಾವರೀತಿಯಿಂದ ನೆರವು ಮತ್ತು ಸಲಹೆಗಳನ್ನು ಕೊಡಬೇಕು ಎಂದು ಹೇಳಿದರೆ ಸರ್ಕಾರದವರು ಆ ಮಾತನ್ನು ಒಪ್ಪುತ್ತಾರೆ ಎನ್ನುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಇವೊತ್ತಿನ ದಿವಸ ಮಾನ್ಯ ಸದಸ್ಯರು ಸಹಕಾರಿ ಕ್ಷೇತ್ರದಲ್ಲಿ ಬೇಕಾದಷ್ಟು ಉಪಯುಕ್ತವಾದ ಸಲಹೆಗಳನ್ನೂ ಮತ್ತು ಅತ್ಯುತ್ತಮವಾದ ಸಲಹೆಗಳನ್ನೂ ಮಾಡಿದ್ದಾರೆ. ಎಲ್ಲಾ ಸಲಹೆಗಳನ್ನೂ ಸರ್ಕಾರ ಒಪ್ಪಿಕೊಳ್ಳುತ್ತದೆ. ಸರ್ಕಾರ ಒಪ್ಪಿಕೊಂಡು ಯಾವ ರೀತಿಯಿಂದ ಸಹಕಾರಿ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡಬೇಕು ಎನ್ನುವ ಮಾತನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈಗ ಸಹಕಾರಿ ಕ್ಷೇತ್ರದಲ್ಲಿ ಮುಖ್ಯವಾಗಿ ನಾಲ್ಕಾರು ಪ್ರಶ್ನೆಗಳು ಎದ್ದಿವೆ. ಅವುಗಳನ್ನು ನಾವು ಇವೊತ್ತಿನ ದಿವಸ ಬಿಡಿಸಬೇಕಾಗಿದೆ. ಒಂದು ಪ್ರಾಮುಖ್ಯವಾದ ಪ್ರಶ್ನೆ ಎಂದರೆ, ಸರಕಾರ ಮತ್ತು ಸಹಕಾರೀ ಕ್ಷೇತ್ರ ಅಥವಾ ಸಹಕಾರೀ ಸಂಸ್ಥೆಯೊಳಗೆ ಯಾವ ಒಂದು ಸಂಬಂಧ ಇರಬೇಕು ಎನ್ನುವುದಕ್ಕೆ ನಿರ್ದಿಷ್ಟವಾದ, ನಿರ್ದಾಕ್ಷಿಣ್ಯವಾದ ಮಾರ್ಗದರ್ಶನ ತಾವು ಮಾಡಿವರೆ ಸರ್ಕಾರ ಆ ರೀತಿಯಿಂದ ಮಾಡುವುದಕ್ಕೆ ಒಪ್ಪಿಕೊಳ್ಳುತ್ತದೆ ಎನ್ನುವುದನ್ನು ಮಾತ್ರ ತಮ್ಮ ಮುಂದೆ ಮನಬಿಚ್ಚಿ ಇಡುತ್ತೇನೆ. ಇವೊತ್ತು ಒಂದು ಕಡೆ ಅಧಿಕಾರೇತರ ಚಳುವಳಿಯಂತೆ ತಿಳಿದುಕೊಂಡು ಆಂತರಿಕವಾಗಿ ಸರ್ಕಾರ ಯಾವ ರೀತಿಯಿಂದಲೂ ಅದರಲ್ಲಿ ಕೈ ಹಾಕಬಾರದು ಎಂದು ಮಾರ್ಗದರ್ಶನ ಮಾಡಿದರೆ ಆ ರೀತಿ ಚಳುವಳಿ ಅಂದೋಳನ ಮಾರ್ಪಾಡು ಮಾಡುವುದಕ್ಕೆ ಸಹಾಯ ಮಾಡುತ್ತೇವೆ. ಇನ್ನೊಂದು ಕಡೆ ಮಾನ್ಯ ಸದಸ್ಯರು ಈ ಸಹಕಾರೀ ಕ್ಷೇತ್ರದೊಳಗೆ ಸರ್ಕಾರಿ ಅಧಿಕಾರಿಗಳು ಇರಬೇಕು, ಅವರು ಮಾರ್ಗದರ್ಶನ ಮಾಡಬೇಕು ಅಥವಾ ವಯಾಮೀಡಿಯ ಇರಬೇಕು ಎಂದು ಆ ರೀತಿಯಿಂದ ಮಾರ್ಗ

ದರ್ಶನ ಮಾಡಿದರೆ ಹೊಸ ಕಾಯಿದೆ ಪ್ರಕಾರ ಅಧಿಕಾರೇತರರಿಗೆ ಅವಕಾಶ ಇರಬೇಕು. ಅವರು ಸ್ವಯಂಪ್ರೇರಿತರಾಗಿ ಈ ಆಂದೋಲನದ ಕ್ಷೇತ್ರದಲ್ಲಿ ಕೆಲಸ ನಡೆಯತಕ್ಕ ಯಾವ ಯಾವ ಸಂಸ್ಥೆಗಳು ಇವೆ, ಅವುಗಳಿಗೆ ಸರ್ಕಾರದ ನೆರವುಕೊಡಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ. ಅದಕ್ಕೆ ಬಹಳ ಮಾನ್ಯ ಸದಸ್ಯರು, ಅಧಿಕಾರಿಗಳು ಬಹಳ ಹಸ್ತಕ್ಷೇಪ ಮಾಡಬಾರದು, ಸರ್ಕಾರವೂ ಹಸ್ತಕ್ಷೇಪ ಮಾಡಬಾರದು ಎಂದು ಏನು ಹೇಳುತ್ತಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಳ್ಳುವುದರಲ್ಲಿ ತಯಾರು ಇದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೆ ಅನುಗುಣವಾಗಿ ಸರ್ಕಾರ ಒಂದು ಕಾರ್ಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ಎಲ್ಲಿ ಯಾವ ಸಹಕಾರೀ ಸಂಸ್ಥೆಯೊಳಗೆ ಸರ್ಕಾರದವರು ನಾಮಿನೇಟ್ ಮಾಡುತ್ತಿದ್ದಾರೋ ಅದನ್ನು ತೆಗೆದು ಹಾಕಿ ಈಗ ಒಂದೊಂದು ಸಂಸ್ಥೆಯಲ್ಲಿ ಇಬ್ಬರು, ಮೂವರು ಅಧಿಕಾರಿಗಳನ್ನು ಇಟ್ಟಿದ್ದೇವೆಯೇ ಹೊರತು ಉಳಿದ ಎಲ್ಲಾ ನಾಮಿನೇಷನ್‌ಗಳನ್ನು ತೆಗೆದುಹಾಕಿರುವುದು ತಾವು ನೋಡಿದ್ದೀರಿ.

ಇನ್ನು ಎರಡನೆಯ ವಿಚಾರ ಏನೆಂದರೆ, ನಮ್ಮಲ್ಲಿ 18 ಸಾವಿರ ಸಂಸ್ಥೆಗಳು ಏನು ಇವೆ ಅವುಗಳಿಗೆ ಸಹಾಯ ಮಾಡಿ ಆ ಸಂಸ್ಥೆಗಳನ್ನು ನಾವು ಮಾರ್ಪಡಿಸಬೇಕು ಎನ್ನುವ ಮಾತು ಸರ್ಕಾರದ ಮುಂದೆ ಇದೆ. ಅದಕ್ಕೆ ತಾವು ಸೂಚನೆಗಳನ್ನು ಮಾಡಿದ್ದೀರಿ. ಈ 18 ಸಾವಿರ ಸಂಸ್ಥೆಗಳಲ್ಲಿ ಶಕ್ತವಾದ ಸಂಸ್ಥೆಗಳು ಎಷ್ಟು? ಅವುಗಳಲ್ಲಿ ಸುಭದ್ರವಾದ ರೀತಿಯಲ್ಲಿ ಕೆಲಸ ಮಾಡುವ ಸಂಸ್ಥೆಗಳು ಎಷ್ಟು? ಡಿಫಂಕ್ಟ್ ಸಂಸ್ಥೆಗಳು ಎಷ್ಟು? ಎನ್ನುವ ಅಂಕಿ ಅಂಶಗಳನ್ನು ತೆಗೆದುಕೊಂಡು ಇವೊತ್ತಿನ ದಿವಸ ರಿವೈಟಲೈಸ್, ರೀಆರ್ಗನೈಸ್ ಮತ್ತು ಅಮಾಲ್ಗಮೇಟ್ ಮಾಡುವ ವಿಚಾರವೂ ಸರ್ಕಾರದ ಮುಂದೆ ಬಂದಿದೆ. ತಮ್ಮ ಸೂಚನೆ ಯಾವ ರೀತಿ ಬರುತ್ತದೋ ಆ ಸೂಚನೆಯನ್ನು ಒಪ್ಪಿಕೊಳ್ಳುತ್ತೇವೆ. ಅದಕ್ಕನುಗುಣವಾಗಿ ಸರ್ಕಾರ ಕಾರ್ಯಕ್ರಮ ತೆಗೆದು ಕೊಳ್ಳುತ್ತದೆ ಎಂದು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಇನ್ನೊಂದು ಮಾತು ಏನೆಂದರೆ, 18 ಸಾವಿರ ಸಹಕಾರೀ ಸಂಸ್ಥೆಗಳು ಅಖಂಡ ಮೈಸೂರು ರಾಜ್ಯದಲ್ಲಿದೆ. ಇದ್ದರೂ ಕೂಡ ಈಗ ಜನತೆಯ ಪ್ರತಿನಿಧಿಗಳಾದ ತಾವು ಅಲ್ಲಲ್ಲಿ ಸಹಕಾರೀ ಸಂಸ್ಥೆಗಳನ್ನು ತೆಗೆಯಿರಿ ಎಂದು ಏನು ಒಂದು ಒತ್ತಾಯ ಮಾಡುತ್ತಿದ್ದಾರೋ ಅದನ್ನು ಯಾವರೀತಿಯಿಂದ ತಡೆಗಟ್ಟಬಹುದು ಎನ್ನುವ ಪೆಡಂಭೂತವಾದ ಪ್ರಶ್ನೆ ಸರ್ಕಾರದ ಮುಂದೆ ಇದೆ. ಅದಕ್ಕೆ ತಮ್ಮಿಂದ ಯಾವರೀತಿ ಸಲಹೆ ಬರುತ್ತದೋ ಆರೀತಿ ಮುಂದೆ ಮಾಡಬೇಕು ಎಂದು ಇದ್ದೇವೆ.

ಇನ್ನು 1, 2, 3 ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಭಾವಯುತರೀತಿಯಿಂದ ಕೆಲಸ ಕಾರ್ಯಗಳನ್ನು ತೆಗೆದುಕೊಂಡದ್ದು ನೋಡಿದರೆ ಯಾವ ಸಂಸ್ಥೆಗಳು ಶಕ್ತವಾಗಿವೆ, ಯಾವ ಸಂಸ್ಥೆಗಳು ವಯಬಲ್ ಯೂನಿಟ್ಸ್ ಆಗಿವೆ ಎಂದು ನೋಡಿಕೊಂಡು, ಯಾವ ಯಾವ ಸಂಸ್ಥೆಗಳು ತತ್ತರಿಸುತ್ತಿವೆ ಎನ್ನುವುದನ್ನೂ ನೋಡಿಕೊಂಡು ಅವುಗಳನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ತಕ್ಕಮಟ್ಟಿಗೆ ಕಾರ್ಯಕ್ರಮ ತೆಗೆದುಕೊಂಡದ್ದು ತಮಗೆಲ್ಲಾ ಗೊತ್ತಿದೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಪದ್ಧತಿಯನ್ನು ಬಿಟ್ಟು ಹೆಚ್ಚು ಹೆಚ್ಚು ಕ್ಷೇತ್ರಗಳಿಗೆ ಸಹಕಾರ ಪದ್ಧತಿ ಹೋಗುತ್ತಿದೆ ಎನ್ನುವುದು ಗೊತ್ತಿದೆ. ಅದರಲ್ಲಿ ಮೈಸೂರು ರಾಜ್ಯದಲ್ಲಿ ಈ ಸಹಕಾರ ಸಂಘಗಳು ಗೌರವದಿಂದಲೂ, ವೈವಿಧ್ಯತೆ ಮತ್ತು ಉಪಯುಕ್ತತೆ ಮತ್ತು ಸಂಖ್ಯೆಯಿಂದಲೂ ನೋಡಿದರೆ ನಾವು ಅಖಂಡ ಹಿಂದೂಸ್ಥಾನದಲ್ಲಿ ಯಾವ ರಾಜ್ಯಕ್ಕೂ ಹಿಂದುಳಿದಿಲ್ಲ ಎಂದು ಹೇಳಬಹುದು. ಮೊನ್ನೆ ಪಶ್ಚಿಮ ಬಂಗಾಳ ಸಹಕಾರ ಮಂತ್ರಿಗಳು, ಕಾಂಗ್ರೆಸ್ಸಿನ ಮಂತ್ರಿಗಳಲ್ಲ—ಶ್ರೀಮಾನ್ ಕುಂದೂರ್ ಅವರು ಇಲ್ಲಿಗೆ ಬರುವುದಕ್ಕೆ ಒಂದು ಪತ್ರವನ್ನು ಬರೆದಿದ್ದರು. ಮೈಸೂರಿನಲ್ಲಿ ಸಹಕಾರ ಅಂದೋಲನ, ಒಂದು ಸಹಕಾರೀ ಚಟುವಟಿಕೆ ಮತ್ತು ಸಹಕಾರೀ ಆಗುಹೋಗುಗಳು ಅವು ಚೆನ್ನಾಗಿ ನಡೆದಿವೆ ಎಂದು ಕೇಂದ್ರದಲ್ಲಿ ಮತ್ತು ಇಲ್ಲಿ ಕೇಳಿದ್ದೇವೆ ಅದನ್ನು ನೋಡಲಿಕ್ಕೆ ಬರುತ್ತೇವೆ ಎಂದು ಅವರು ಹೇಳಿದರು. ಇವೊತ್ತಿನ ದಿವಸ ಚರ್ಚೆ ಒಳ್ಳೆಯ ವಿಶಿಷ್ಟರೀತಿಯಿಂದ ಮತ್ತು ಸಹಕಾರ ಮತಿಯಿಂದ ನಡೆದಿದೆ. ಈ ಒಂದು ಸಹಕಾರೀ ಕ್ಷೇತ್ರದ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಇವೊತ್ತಿನ ದಿವಸ ಮೈಸೂರು ರಾಜ್ಯದ ಜನರಿಗೆ ನೆಮ್ಮದಿ ಸಿಕ್ಕುವ ಕ್ಷೇತ್ರ ಎಂದು ತಿಳಿದುಕೊಂಡಿದ್ದೀರಿ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಬಹಳ ಶ್ಲಾಘನೀಯವಾದ ರೀತಿಯಲ್ಲಿ ದುರುಪಯೋಗ ನಡೆದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸಹಕಾರೀ ಕ್ಷೇತ್ರದ ವಿಚಾರದಲ್ಲಿ ಕೊಟ್ಟ ಪಂಡಿತರ ರಿಪೋರ್ಟ್ ಏನು ಮಾಡಿದಿರಿ?

Sri S. D. KOTHAVALE.—May I suggest that the House would like to hear the Minister's Reply without being interrupted. If any of the

(SRI S. D. KOTHAVALE)

Hon'ble Members wants to ask any clarifications, let those clarifications be asked at the end. Otherwise, everything becomes disconnected and therefore we are deprived of the continuity of the reply.

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀ ಕೊತವಾಲೆಯವರು ನಮಗೆ ಅವಕಾಶ ಕೊಡುತ್ತೇವೆ ಎಂದು ಭರವಸೆ ಕೊಟ್ಟರೆ ಆಗಬಹುದು.

ಶ್ರೀ ಪಿ. ಎಂ. ನಾಡಗೌಡ.—ಶ್ರೀ ಕುಂದೂರು ಅವರು ನಮ್ಮ ರಾಜ್ಯಕ್ಕೆ ಬಂದು ನೋಡಿ ಕೊಂಡು ಹೋಗುವಾಗ ತಮ್ಮ ಒಂದು ತೃಪ್ತಿಯನ್ನು ವ್ಯಕ್ತಪಡಿಸಿದರು. ಆ ರೀತಿ ಅವರು ತೃಪ್ತಿ ವ್ಯಕ್ತಪಡಿಸಿರುವುದು ನಮಗೂ ಒಂದು ಗೌರವ ನಿಮಗೂ ಒಂದು ಗೌರವ. ಈ ಸರ್ಕಾರವಿರುವುದು ಎಲ್ಲರಿಗೂ. ಈ ಸರ್ಕಾರಕ್ಕೆ ಏನಾದರೂ ಗೌರವ ಬಂದರೆ ಅದು ಇಡೀ ಮೈಸೂರು ರಾಜ್ಯಕ್ಕೆ ಬಂದಂತೆ. ನಾನು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳದೆ ಜಾಗ್ರತೆ ಮುಗಿಸುತ್ತೇನೆ. ಅಂಕಿಸಂಖ್ಯೆ ಗಳ ಬಗ್ಗೆ ಮಾನ್ಯ ಶ್ರೀ ಶಿವಪ್ಪನವರು, ಮಾನ್ಯ ಶ್ರೀ ಪಾಟೀಲರು ಮತ್ತು ಇತರ ಸದಸ್ಯರುಗಳು ಕೆಲವರು ಹೇಳಿದರು. ಆ ಬಗ್ಗೆ ನಾನೂ ಸಹ ಕೆಲವು ಅಂಕಿಸಂಖ್ಯೆಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು 18,783 ಸಹಕಾರ ಸಂಸ್ಥೆಗಳಿಗೆ. ಅವುಗಳಲ್ಲಿರುವ ಮೆಂಬರುಗಳ ಸಂಖ್ಯೆ 36.1 ಇದೆ. ವರ್ಕಿಂಗ್ ಕ್ಯಾಪಿಟಲ್ 191.39 ಇದೆ. ಸಹಕಾರ ಸಂಘಗಳ ಉಪಯೋಗವನ್ನು 100ಕ್ಕೆ 55 ಜನರು ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ 100ಕ್ಕೆ 98 ಜನರು ಈ ಸಹಕಾರ ಸಂಘಗಳಿಂದ ಉಪಯೋಗ ಪಡೆಯುತ್ತಿದ್ದಾರೆ. ಈ ಅಂಕಿ ಅಂಶಗಳು ಮೂರನೆ ಪಂಚವಾರ್ಷಿಕ ಯೋಜನೆಯಿಂದ ಗೊತ್ತಾಗಿವೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ 100ಕ್ಕೆ 100ರಷ್ಟು ಗ್ರಾಮೀಣ ಪ್ರದೇಶದ ಜನರು ಸಹಕಾರ ಸಂಘದ ಉಪಯೋಗ ಪಡೆಯುವುದಕ್ಕೆ ಅನುಕೂಲವಾಗು ವಂಥ ಒಂದು ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಇದಕ್ಕೆ ಮಾನ್ಯ ಸದಸ್ಯರುಗಳ ಸಹಕಾರವೂ ಬೇಕು.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಹಣದ ದುರುಪಯೋಗವಾಗಿರುವ ಸೊಸೈಟಿಗಳ ಬಗ್ಗೆ ಹೇಳಿ.

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಸಹ ಹೇಳುತ್ತೇನೆ. ಷಾರ್ಟ್ ಟರ್ಮ್ ಮತ್ತು ಮೀಡಿಯಮ್ ಟರ್ಮ್ ಸಾಲಗಳನ್ನು ಈ ರೀತಿ ಕೊಟ್ಟಿದ್ದೇವೆ :—

1961—62	...	15.17 ಕೋಟಿ.
1962—63	...	12.34 ಕೋಟಿ.
1963—64	...	15.18 ಕೋಟಿ.
1964—65	...	17.80 ಕೋಟಿ.
1965—66	...	20.95 ಕೋಟಿ.
1966—67	...	23 ಕೋಟಿಗೂ ಮಿಕ್ಕಿದೆ.

ಒಂದು ವಿಶಿಷ್ಟವಾದ ಮಾತನ್ನು ಹೇಳಬೇಕೆಂದರೆ, ಜನಸಾಮಾನ್ಯರಿಗೆ ಮತ್ತು ರೈತರಿಗೆ ಸಹಕಾರ ಸಂಘಗಳ ಮೂಲಕ ಅನುಕೂಲ ಮಾಡಿಕೊಡಬೇಕೆನ್ನುವುದು ಸರ್ಕಾರದ ಗುರಿಯಾಗಿದೆ. ಮಹಾರಾಷ್ಟ್ರ ಸರ್ಕಾರ ಒಂದು ಬಿಟ್ಟರೆ ಮತ್ತಾವ ಸರ್ಕಾರಗಳೂ ಇಷ್ಟೊಂದು ಅನುಕೂಲಗಳನ್ನು ಸಹಕಾರ ಸಂಘಗಳ ಮೂಲಕ ರೈತರಿಗೆ, ಜನಸಾಮಾನ್ಯರಿಗೆ ಮಾಡಿಕೊಟ್ಟಿಲ್ಲ. ಬಹಳಷ್ಟು ಸವಲತ್ತುಗಳನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿದ್ದಾರೆ.

Sri M. S. KRISHNAN.—These figures are well known, Sir. They are furnished in the Departmental statistics. There are so many defects pointed out. We want a reply for that.

Mr. SPEAKER.—When the member become a Minister, then he may reply in his own way. It is not for him now to say what reply he should give.

ಶ್ರೀ ಪಿ. ಎಂ. ನಾಡಗೌಡ.—ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 50ಕೋಟಿ ರೂಪಾಯಿಗಳವರೆಗೆ ಷಾರ್ಟ್ ಟರ್ಮ್ ಮತ್ತು ಮೀಡಿಯಮ್ ಟರ್ಮ್ ಲೋನ್‌ಗಳನ್ನು ಕೊಡುವುದಕ್ಕೆ

ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಮೊನ್ನೆ ರಿಜರ್ವ್ ಬ್ಯಾಂಕ್‌ನವರು ಬಂದು ನಮ್ಮ ರಾಜ್ಯದಲ್ಲಿರುವ ಸಹಕಾರ ಸಂಘಗಳ ಯೋಗಕ್ಷೇಮವನ್ನು ಕೇಳಿಕೊಂಡು, ಅವರು ಗೌರವದಿಂದ ಒಂದು ಮಾತನ್ನು ಹೇಳಿದರು, ಏನೆಂದರೆ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್‌ಗಳು, ಇಂಡಸ್ಟ್ರಿಯಲ್ ಬ್ಯಾಂಕ್‌ಗಳು, ಮತ್ತು ಇತರ ಮಾದರಿಯ ಸಹಕಾರ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿವೆ, ನಿಮ್ಮ ಮೈಸೂರು ರಾಜ್ಯಕ್ಕೆ ಇನ್ನೂ ಹೆಚ್ಚಿನ ಹಣ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಹಣದ ದುರುಪಯೋಗವಾಗಿರುವ ಸೊಸೈಟಿಗಳ ವಿಚಾರವನ್ನು ಹೇಳಿ.

ಶ್ರೀ ಎಸ್. ವಿ. ಅಗ್ನಿಹೋತ್ರಿ,—ಮಾನ್ಯ ಸದಸ್ಯರಿಗೆ ಪೋಲೀಸ್ ಇಲಾಖೆಯ ಬಗ್ಗೆ ಮಾತ್ರ ಅನುಭವವಿದೆ, ಕೋ-ಆಪರೇಟಿವ್ ಇಲಾಖೆಯ ಬಗ್ಗೆ ಸಾಕಷ್ಟು ಅನುಭವವಿಲ್ಲವೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಸೊಸೈಟಿಗಳಲ್ಲಿ ಹಣದ ದುರುಪಯೋಗವಾದರೆ ಪೋಲೀಸರು ಬಂದು ಅರೆಸ್ಟ್ ಮಾಡುತ್ತಾರೆ.

ಒಬ್ಬರು ಮಾನ್ಯ ಸದಸ್ಯರು.—ಸಹಕಾರ ಕ್ಷೇತ್ರ ಎಲ್ಲರಿಗೂ ತೆರೆದ ಬಾಗಿಲಾಗಿದೆ. ಶ್ರೀಮನ್ ವಾಟಾಳ್ ನಾಗರಾಜ್ ಅವರಿಗೆ ಇಷ್ಟವಿದ್ದರೆ ಯಾವುದಾದರೂ ಒಂದು ಸಹಕಾರ ಸಂಘದ ಆಡಳಿತವನ್ನು ವಹಿಸಿಕೊಂಡು ಸರಿಯಾಗಿ ನಡೆಸಿ ತೋರಿಸಲಿ.

SRI H. N. NANJE GOWDA.—The Hon'ble Member Sri Agni Hotri has said something which is an insinuation on a particular Member Sir. I take strong objection.

MR. SPEAKER.—Again hon'ble member Sri H. N. Nanje Gowda is committing the same mistake. Now we have practically come to the end of the Debate. If the Members have a little patience and hear the Minister we can go through the business smoothly. If it is said that the Minister must reply in a particular manner, how can the Minister find out what is in the members mind ? In a big House like this, Members must hear what others say. They must not disturb the proceedings to any extent ; The Minister must be heard.

6-30 P.M.

ಶ್ರೀ ಪಿ. ಎಂ. ನಾಡಗೌಡ.—ಇನ್ನು ಪ್ರಾಮುಖ್ಯವಾದ ವಿಷಯಕ್ಕೆ ಹೋಗುತ್ತಿದ್ದೇನೆ, ಅದನ್ನು ಕೇಳಬೇಕು. ದೀರ್ಘಾವಧಿ ಸಾಲ ನಾಲ್ಕನೆಯ ಯೋಜನೆಯಲ್ಲಿ ಹೆಚ್ಚು ಕೊಡಲು ಅವಕಾಶ ಮಾಡಿ 30 ಕೋಟಿ ರೂಪಾಯಿಗಳನ್ನು ಅದಕ್ಕೆ ಒದಗಿಸಲಾಗಿದೆ. ಇದರ ಪ್ರಭಾವದಿಂದ ನೀರಾವರಿ ಬಾವಿಗಳಿಗೆ ಅವಕಾಶ ಕೊಡಲಾಗಿದೆ. ಮಾನ್ಯ ಸದಸ್ಯರು ಉಪಯುಕ್ತ ಸಲಹೆಗಳನ್ನು ಕೊಟ್ಟಿರುವುದನ್ನು ಸರಕಾರ ಕೇಳಿವೆ, ಅದರಂತೆಯೇ ಮಾನ್ಯ ಸದಸ್ಯರೂ ಕೂಡ ನಾನು ಹೇಳುವ ವಿಚಾರವನ್ನು ಸಾವಧಾನದಿಂದ ಲಾಲಿಸಬೇಕು. ಈಗ ರಾಜ್ಯದಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿದೆ, 12,531 ಬಾವಿಗಳನ್ನು ಮಂಜೂರು ಮಾಡಿದೆ; 5.3 ಕೋಟಿ ರೂಪಾಯಿಗಳ ಸಾಲವನ್ನು ಕೊಡಲಾಗಿದೆ ; ವಾಸ್ತವವಾಗಿ ಕೊಟ್ಟಿರುವುದು 3.75 ಕೋಟಿ ರೂಪಾಯಿಗಳು. ಇಷ್ಟು ಮಾಡಿದ್ದರೂ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಬಾವಿಗಳಿಗೆ ಸಹಾಯ ಪಡೆಯಲು ಬೆಂಗಳೂರಿಗೆ ಬರಬೇಕಾಗಿದೆ, ಅದನ್ನು ತಪ್ಪಿಸಬೇಕು ಎಂದು ಹೇಳಿರುವುದನ್ನು ಒಪ್ಪುತ್ತೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧಿಕಾರ ವಿಕೇಂದ್ರೀಕರಣಮಾಡಿ ಮೂರು ಭಾಗ ಮಾಡಿದ್ದೇವೆ, ಮೈಸೂರು, ಬೆಳಗಾಂ, ಮತ್ತು ಗುಲ್ಬರ್ಗಗಳಲ್ಲಿ ಅವಕಾಶ ಮಾಡಬೇಕು, ಸೇಕಡ 25 ಸೊಸೈಟಿಗಳು ಮೈಸೂರಿನಲ್ಲಿವೆ, ನೂರಕ್ಕೆ ನೂರರಷ್ಟು ರಿಕವರಿ ಮಾಡುವವರಿಗೆ ಅವಕಾಶ ಕೊಡಬೇಕು ಎಂದಿದ್ದೇವೆ, ಅದಕ್ಕೆ ಬೇಗ ಅವಕಾಶವಾಗಬಹುದು. ಮಂಜೂರು ಮಾಡುವುದರಲ್ಲಿ, ರೊಕ್ಕ ಕೊಡುವುದರಲ್ಲಿ, ಮತ್ತು ರಿಕಾರ್ಡ್ ಆಫ್ ರೈಟ್ಸ್ ಧಾಖಲೆ ಕೊಡುವುದರಲ್ಲಿ ನ್ಯೂನತೆ ಇರುವುದನ್ನು ಶೀಘ್ರವಾಗಿ ಹೋಗಲಾಡಿಸಬೇಕು, ರೈತರಿಗೆ ನೀರಾವರಿ ಬಾವಿಗಳಿಗೆ ನೇರವಾಗಿ ರೊಕ್ಕ ಸಿಕ್ಕುವಂತೆ ಮಾಡಬೇಕು ಎಂದು ಆಲೋಚಿಸಿದ್ದೇವೆ, ಇದನ್ನು ಶೀಘ್ರವಾಗಿ ಜಾರಿಗೆ ತರುತ್ತೇವೆ ಎಂದು ವಿಶ್ವಾಸ ಪೂರ್ವಕವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರ ಸಲಹೆಗಳೆಲ್ಲಾ ಬಹಳ ಅಮೂಲ್ಯವಾದುವುಗಳಾಗಿವೆ, ಅವಕ್ಕೆ ಗಮನಕೊಡುತ್ತೇವೆ.

(ಶ್ರೀ ಪಿ. ಎಂ. ನಾಡಗೌಡ)

ಇನ್ನು ನಾಲ್ಕನೆಯ ಯೋಜನೆಯಲ್ಲಿ ಟಾರ್ಜೆಟ್ ಇರುವುದನ್ನು ಹೇಳುತ್ತೇನೆ. 5 ವರ್ಷಗಳಲ್ಲಿ ಒಂದು ಲಕ್ಷ ಬಾವಿಗಳನ್ನು ಮಾಡಬೇಕು, ಅದನ್ನು ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕಿಗೆ ವಹಿಸಬೇಕು, ಅದಕ್ಕೆ 30 ಕೋಟಿ ರೂಪಾಯಿಗಳವರೆಗೆ ವೆಚ್ಚಮಾಡಬೇಕು. ಒಂದು ಹೊಸ ವಿಚಾರವೇನೆಂದರೆ, ಈಗ ಎಲ್ಲಾ ಸಹಕಾರದ ಇಲಾಖೆ ರೆವೆನ್ಯೂ ಖಾತೆಯಿಂದ ಅಥವಾ ಇತರ ಖಾತೆಯಿಂದ ಪಂಪುಸೆಟ್ಟು ಕೊಡುವುದನ್ನು ಕ್ರೋಢೀಕರಿಸಿ ಅದನ್ನು ಲ್ಯಾಂಡ್ ಡೆವಲಪ್‌ಮೆಂಟ್ ಖಾತೆಯಿಂದ ಶೀಘ್ರವಾಗಿ ನೀಡಬೇಕು, ಒಂದು ಸಾವಿರ ಡೀಸಲ್ ಮತ್ತು ಎಲೆಕ್ಟ್ರಿಕ್ ಪಂಪುಗಳನ್ನು ಕೊಡಬೇಕು ಎಂದು ಗೊತ್ತುಮಾಡಿದೆ. ಒಂದು ಲಕ್ಷ ಪಂಪುಸೆಟ್ಟುಗಳವರೆಗೆ ಹೆಚ್ಚಿಸಬೇಕು, ಮೈಸೂರು ರಾಜ್ಯವನ್ನು ನಂದನ ವನವನ್ನಾಗಿ ಮಾಡಬೇಕು ಎಂದು ಅನೇಕ ಅವಕಾಶಗಳನ್ನು ಕಲ್ಪಿಸಿದೆ. ಇದಕ್ಕೆ 28 ಕೋಟಿ ರೂಪಾಯಿಗಳ ಖರ್ಚಿದೆ ಅಗ್ರಿಕಲ್ಚರಲ್ ರೀಫೈನಾನ್‌ಸಿಂಗ್ ಕಾರ್ಪೊರೇಷನ್ನಿನಿಂದ ಮೈಸೂರು ರಾಜ್ಯಕ್ಕೆ ಎಷ್ಟೋ ಸೌಲತ್ತು ದೊರಕಿದೆ, ಅದಕ್ಕೆ 3-4 ಯೋಜನೆ ಇದೆ. ಸ್ಪೆಷಲ್ ಸ್ಕೀಮ್ ಅಂದರೆ ತುಂಗಭದ್ರ ಪ್ರಾಜೆಕ್ಟಿರುವ ಕಡೆ ಏಕರೇಜ್ 3 ಲಕ್ಷ ಎಕರೆ ಇದೆ, ಔಟ್‌ಲೇ 5.33 ಕೋಟಿ ರೂಪಾಯಿ, ಇದರ ಪ್ರಾಪ್ತಿ 7ವರ್ಷ ಆಗಿದೆ. ಈಗಾಗಲೆ 18462 ಎಕರೆ ಟಿ. ಬಿ. ಸಿ. ಗೆ. ಬಂದಿದೆ. ಭದ್ರಾ ಏಕರೇಜ್ ಒಂದು ಲಕ್ಷ 10 ಸಾವಿರ ಎಕರೆ, ಔಟಲೇ 2.72 ಕೋಟಿ ರೂಪಾಯಿ, ಇದು 5 ವರ್ಷಗಳ ಯೋಜನೆ, ಇದಕ್ಕೆ 14,528 ಎಕರೆ ನೀರಾವರಿ ಇದೆ. ಇನ್ನು ಅಡಕೆ 2,000 ಎಕರೆ ಇದೆ, ಇದರ ಬಗ್ಗೆ ಒಂದು ಕೋಟಿ ರೂಪಾಯಿ ಯೋಜನೆ ಇದೆ, ಪ್ರಾಪ್ತಿ 9 ವರ್ಷ. ಈಗಾಗಲೆ 6,665 ಎಕರೆ ಆಗಿದೆ. ತುಂಗಾ ಮತ್ತು ಇತರ ಯೋಜನೆಗಳಿವೆ ಮತ್ತು ಸಾಯಿಲ್ ಕನ್‌ಸರ್ವೇಷನ್ ಯೋಜನೆ ಇದೆ, ಇದಕ್ಕೆ ಅಗ್ರಿಕಲ್ಚರಲ್ ರೀಫೈನಾನ್‌ಸಿಂಗ್ ಕಾರ್ಪೊರೇಷನ್ ಸಹಾಯವಾಡಲಿದೆ, ಇದು ಮಂಜೂರಾಗುವುದು. ಎರಡು ಸಂಸ್ಥೆಗಳ ಬಗ್ಗೆ ದೇವರಾಜ ಅರಸಿನವರು ವಿವರ ಹೇಳಿದ್ದಾರೆ, ಫಿಷರ್‌ಮೆನ್ ಫೆಡರೇಷನ್ ಸೊಸೈಟಿ ಮಂಗಳೂರಿನಲ್ಲಿ ಮತ್ತು ಕಾರವಾರದಲ್ಲಿ ಇವೆ, ಅವನ್ನು ಅಗ್ರಿಕಲ್ಚರಲ್ ರೀಫೈನಾನ್‌ಸಿಂಗ್ ಕಾರ್ಪೊರೇಷನ್ ವಹಿಸಿಕೊಂಡು ಸಹಕಾರಿ ಸಂಸ್ಥೆಗಳಾಗಿ ಕೆಲಸಮಾಡಲು ಅವಕಾಶಮಾಡಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳಲ್ಲಿ ಬೋಟನ್ನು ತೆಗೆದುಕೊಂಡು ಉತ್ಸಾಹದಿಂದ ಕೆಲಸ ಮಾಡುವ ಎರಡು ಸೊಸೈಟಿಗಳನ್ನು ಅಗ್ರಿಕಲ್ಚರಲ್ ರೀ ಫೈನಾನ್‌ಸಿಂಗ್ ಕಾರ್ಪೊರೇಷನ್ ನಡೆಸುವುದು. ಇದಕ್ಕೆ 1.25 ಲಕ್ಷ ರೂಪಾಯಿ ಮತ್ತು 25ಲಕ್ಷ ರೂಪಾಯಿ ಯೋಜನೆಗಳಿವೆ, ಹೀಗೆ ಒಟ್ಟು ಎಲ್ಲಾ ಕೂಡಿ 77 ಕೋಟಿ ರೂಪಾಯಿಗಳವರೆಗೆ ಮೈಸೂರು ರಾಜ್ಯಕ್ಕೆ ಯೋಜನೆಗಳನ್ನು ಮಾಡಲಾಗಿದೆ. ಇದೇನೂ ಕಡಮೆ ಅಲ್ಲ. ಇದನ್ನು ಮಾನ್ಯ ಸದಸ್ಯರು ಗಮನಿಸಿ ಸಹಕಾರಿ ಕ್ಷೇತ್ರದಲ್ಲಿ ಯಾವರೀತಿ ಸರಕಾರ ಮಾರ್ಗದರ್ಶನ ಮಾಡಬೇಕು ಎಂಬುದನ್ನು ಹೇಳಬೇಕು. ಇನ್ನುಮುಂದೆ ಸಹಕಾರಿ ಕ್ಷೇತ್ರ ಸಮತೋಲನವಾಗಿ ನಡೆಯಬೇಕು ಎಂಬ ಆಸೆ ಇದೆ. ಇನ್ನು ಮಾರ್ಕೆಟಿಂಗ್ ಇದೆ, ಪ್ರೊಸೆಸಿಂಗ್ ಮತ್ತು ಕನ್‌ಸ್ಯೂಮರುಗಳ ವಿಚಾರದಲ್ಲಿ ಸಲಹೆ ಇದೆ. ಅಗ್ರಿಕಲ್ಚರಲ್ ಸೆಕ್ಟಾರಿನಲ್ಲಿ ಇಂದು ಬೇಸಾಯಕ್ಕೆ 63—64ರಲ್ಲಿ 10.88 ಕೋಟಿ ಒದಗಿಸಿದೆ, 64—65ರಲ್ಲಿ 12.17 ಕೋಟಿ, 65—66ರಲ್ಲಿ 16.30 ಕೋಟಿ ಒದಗಿಸಿದೆ, ಶೇಖರಣೆ ಚೆನ್ನಾಗಿದೆ. ಎಲ್ಲಾ ಸೊಸೈಟಿಗಳಲ್ಲೂ ಕೆಲಸ ಚೆನ್ನಾಗಿದೆ ಎಂದು ನಾವು ಭಾವಿಸಿಲ್ಲ. ಆದರೆ ಥರೋ ಸೊಸೈಟಿಗಳೂ ಕೆಲವು ಇವೆ, ಅವಕ್ಕೆ ಶಾಭಾಸುಗಿರಿ ಕೊಡಬೇಕು. ಚೆನ್ನಾಗಿ ನಡೆಯದಿರುವ ಸಹಕಾರ ಸಂಸ್ಥೆಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ.

ಸಹಕಾರ 'ಹ್ಯಾಂಡ್ ಇನ್ ಗ್ಲೋ' ಆಗಿರಬೇಕು. ಸಹಕಾರ ಕ್ಷೇತ್ರದಲ್ಲಿ ರಾಜಕೀಯಕ್ಕಾಗಲಿ, ವ್ಯಕ್ತಿಗತಲಾಭಕ್ಕಾಗಲಿ ಯಾವ ರೀತಿಯಿಂದಲೂ ಪ್ರೋತ್ಸಾಹ ಕೊಡುವುದಿಲ್ಲ ಎಂಬ ಮಾತನ್ನು ಹೇಳುತ್ತಾ ಇದ್ದೇನೆ. ಸಹಕಾರ ಕ್ಷೇತ್ರದಿಂದ ಇವತ್ತಿನ ದಿವಸ ಆರ್ಥಿಕ ಪ್ರಗತಿಯಾಗಬೇಕು, ಆ ರೀತಿಯಾಗಬೇಕಾದರೆ ಸಮನ್ವಯ ದೃಷ್ಟಿಯಿಂದ ಕಾರ್ಯಾಚರಣೆ ಮಾಡಿದರೆ ಸಹಕಾರ ಸಂಸ್ಥೆಗಳು ಮುಂದಕ್ಕೆ ಬರುತ್ತವೆ ಎಂಬ ಮಾತನ್ನು ಹೇಳುತ್ತಾ ಇದ್ದೇನೆ.

ಪ್ರೋಸೆಸಿಂಗ್ ಸೊಸೈಟಿಗಳ ಪೈಕಿ ನಾಲ್ಕು ಸೊಸೈಟಿಗಳು ಪ್ರೊಡಕ್ಷನ್ ಕೊಡುತ್ತಾ ಇವೆ. ಮೈಸೂರು ರಾಜ್ಯಕ್ಕೆ ಬೇಕಾಗುವಷ್ಟು ಸಕ್ಕರೆಯ ಉತ್ಪನ್ನವನ್ನು ನೂರಕ್ಕೆ 33ರಷ್ಟು ಈ ನಾಲ್ಕು ಸಂಸ್ಥೆಗಳು ಮಾಡುತ್ತಾ ಇವೆ. ಅವು ಆ ರೀತಿ ಉತ್ಪನ್ನವನ್ನು ಮಾಡದೇ ಹೋಗಿದ್ದರೆ ಇವತ್ತಿನ ದಿವಸ ತಾವು ಕಾಫಿ ಕುಡಿಯುವುದಕ್ಕೆ ಸಕ್ಕರೆಯೇ ಸಿಕ್ಕುತ್ತಾ ಇರಲಿಲ್ಲ ಎಂಬ ಮಾತನ್ನು ಹೇಳುತ್ತಾ ಇದ್ದೇನೆ.

ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು 7-8 ಸಹಕಾರ ಸಂಸ್ಥೆಗಳ ಅಧ್ಯಕ್ಷರಾಗಿದ್ದಾರೆ, ಕನ್‌ಸ್ಯೂಮರ್ಸ್ ಸೊಸೈಟಿಗಳು ಬೇಕಾದಷ್ಟು ಇವೆ, ಮತ್ತು ಅದಕ್ಕೆ ತಕ್ಕಂತೆ ಹೋಲ್‌ಸೇಲ್

ಸ್ಟೋರ್ಸ್‌ಗಳೂ ಕೂಡ ಇವೆ. ನಮ್ಮ ರಾಜ್ಯದಲ್ಲಿ ಈ ಸಂಸ್ಥೆಗಳಿಂದ ಪರ್ಚೇಸಸ್ 1965-66ರಲ್ಲಿ 12.15, ಮತ್ತು 66-67ರಲ್ಲಿ 17.25 ಕೋಟಿ ರೂಪಾಯಿ ಆಗಿದೆ, ಸೇಲ್ಸ್ 12.29 1965-66 ಮತ್ತು 18.30 ಕೋಟಿ ರೂಪಾಯಿ 1966-67ರಲ್ಲಿ ಆಗಿದೆ. ಜನತಾ ಬಜಾರ್ ವಿಚಾರ ಹೇಳಿದ್ದಾರೆ. ಇದು ಕೆಲಸ ಮಾಡುತ್ತಾ ಹೋದಂತೆಲ್ಲಾ ಮುಂದೆ ತಮ್ಮಗಳ ಸಲಹೆ ಮತ್ತು ಮಾರ್ಗದರ್ಶನ ತೆಗೆದುಕೊಂಡು ಇದನ್ನು ಬದಲಾವಣೆ ಮಾಡುತ್ತಾ ಹೋಗುತ್ತೇವೆ. ಒಂದು ವಿಷಯವನ್ನು ಮಾನ್ಯ ಸದಸ್ಯರಿಗೆ ಬಹಳ ಗೌರವದಿಂದ ಹೇಳುತ್ತಾ ಇದ್ದೇನೆ. ಒಬ್ಬ ವ್ಯಕ್ತಿ ಜನತಾ ಬಜಾರಿಗೆ ಹೋದರೆ ಹೊರಗಡೆಯಲ್ಲಿ ಶೇಕಡ 15-16 ರಷ್ಟು ಹೆಚ್ಚು ಬೆಲೆ ಇರತಕ್ಕ ಪದಾರ್ಥ ಜನತಾ ಬಜಾರಿನಲ್ಲಿ ಶೇಕಡ 10ರಷ್ಟು ಕಡಮೆ ಬೆಲೆಗೆ ಸಿಕ್ಕುತ್ತಾ ಇದೆ. ಎಲ್ಲಾದರೂ ತಪ್ಪುಗಳಿದ್ದರೆ ಅದನ್ನು ಸರ್ಕಾರದವರ ನಜರಿಗೆ ತಂದರೆ ಶೀಘ್ರವಾಗಿ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಹಿಂದೆ ಮುಂದೆ ನೋಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಹೌಸಿಂಗ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಎನ್.ಇ.ಎಸ್. ಸ್ಕೀಂದೊಳಗೆ ಕೆಲವು ನಡೆದವು, ಈಗ ಹೌಸಿಂಗ್ ಕಾರ್ಪೊರೇಷನ್ ಮಾಡಿ ಇನ್‌ಷ್ಯೂರೆನ್ಸ್ ಕಂಪೆನಿಯಿಂದ 3.18 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹತ್ತು ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟು ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದಾರೆ, ಮಾನ್ಯ ಸದಸ್ಯರ ಅಭಿಪ್ರಾಯವೇನೆಂದರೆ, ಅಧಿಕಾರಿಗಳು ಒಬ್ಬರು ಅದರ ಚೇರ್ಮನರಾಗಿದ್ದಾರೆ. ಅವರು ಹಿಂದುಳಿದ ಸಮಾಜದವರೇ ಆಗಿರಬೇಕೆಂದು ಸೂಚನೆ ಇದೆ, ನನಗೆ ಏನು ಅನ್ನಿಸುತ್ತದೆ ಎಂದರೆ, 7-8 ತಿಂಗಳಿನಲ್ಲಿಯೇ ಒಂದು ಅಭಿಪ್ರಾಯಕ್ಕೆ ಬರುವುದಕ್ಕಿಂತ ಇನ್ನೂ ಸ್ವಲ್ಪ ಕಾಲ ಕಾದು ನೋಡುವುದು ಒಳ್ಳೆಯದು, ಈಗಾಗಲೇ ಅವರು ಒಳ್ಳೆಯ ಚೆನ್ನಾಗಿ ಕೆಲಸ ಮಾಡಿ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿ ಕೊಟ್ಟಿದ್ದಾರೆ, ಕೆಲಸ ಕಾರ್ಯಗಳು ನಡೆದಿವೆ. ಆದ್ದರಿಂದ ಈ ಕೆಲಸ ಕಾರ್ಯಗಳು ಸರ್ಕಾರದ ಮಟ್ಟಿಗೆ ಹೇಳುವುದಾದರೆ ಚೆನ್ನಾಗಿ ಆಗುತ್ತಿವೆ ಎಂದು ತಮ್ಮಲ್ಲಿ ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ.

ಮಾನ್ಯ ಸದಸ್ಯರು ಸಹಕಾರಿ ಕ್ಷೇತ್ರದಲ್ಲಿ ಆಡಿಟ್ ಸರಿಯಾಗಿ ನಡೆದಿಲ್ಲ ಎಂಬ ವಿಷಯದ ಬಗ್ಗೆ ಬಹಳ ತೀಕ್ಷಣವಾಗಿ ಹೇಳಿದ್ದಾರೆ. The respective figures will speak for themselves ಎಂಬ ದೃಷ್ಟಿಯಿಂದ ತಮ್ಮ ಮುಂದೆ ಅಂಕಿಅಂಶಗಳನ್ನು ಹೇಳುತ್ತಾ ಇದ್ದೇನೆ. ಬೆಂಗಳೂರಿನಲ್ಲಿ ಸೌತ್ ಇಂಡಿಯಾ ರಿಜಿಸ್ಟ್ರಾರ್ಸ್ ಕಾನ್‌ಫರೆನ್ಸ್ ಆಯಿತು, ಅಲ್ಲಿಗೆ ಕೇಂದ್ರ ಸರ್ಕಾರದ ಒಬ್ಬ ಪ್ರತಿನಿಧಿ ಬಂದಿದ್ದರು, ಈ ಅಂಕಿಅಂಶಗಳು ಅಲ್ಲಿ ಬಂದಿವೆ. ಆಂಧ್ರ ಪ್ರದೇಶ, ಕೇರಳ, ಮೈಸೂರು ಮತ್ತು ಮದರಾಸು ಈ 4 ಸಂಸ್ಥಾನಗಳ ಪ್ರತಿನಿಧಿಗಳು ಅಲ್ಲಿದ್ದರು, ಆಂಧ್ರ ಪ್ರದೇಶದಲ್ಲಿ ಸೊಸೈಟಿಗಳು

ಒಟ್ಟು ಆಡಿಟ್ ಆಗಬೇಕಾಗಿರುವುವು :	28,486
ಸೊಸೈಟಿಗಳು ಆಡಿಟ್ ಆಗಿರುವುವು :	23,684
ಆಡಿಟ್ ಆಗದೇ ಉಳಿದಿರುವುವು :	4,802
ಕೇರಳದಲ್ಲಿ ಸೊಸೈಟಿಗಳು ಆಡಿಟ್ ಆಗಬೇಕಾಗಿರುವುವು :	8,027

ಶ್ರೀ ಕೆ. ಎಚ್. ಪಾಟೀಲ್.—ನಾವು ಹೇಳಿದ್ದು ಸೊಸೈಟಿಗಳು ಆಡಿಟ್ ಆಗಬೇಕಾಗಿರುವುವು ಅಥವಾ ಆಡಿಟ್ ಆಗಿರುವುದರ ವಿಷಯ ಅಲ್ಲ, ಆಡಿಟ್ ನಡೆದಿರುವ ಕ್ರಮ, ಕ್ವಾಲಿಟಿ ಸರಿಯಾದ ರೀತಿಯಿಂದ ನಡೆದಿಲ್ಲ ಎಂದು.

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರವನ್ನೂ ಕೂಡ ಹೇಳುತ್ತೇನೆ.

ಮೈಸೂರಿನಲ್ಲಿ ಸೊಸೈಟಿಗಳು ಆಡಿಟ್ ಆಗಬೇಕಾಗಿರುವುವು ಒಟ್ಟು	15,973 ಇವೆ,
ಸೊಸೈಟಿಗಳು ಆಡಿಟ್ ಆಗಿರುವುವು :	15,755
ಆಡಿಟ್ ಆಗದೇ ಉಳಿದಿರುವುವು :	218

ಇದರಲ್ಲೇನಾದರೂ ನ್ಯೂನತೆ ಇದ್ದರೆ ತಿಳಿದುಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಕ್ವಾಲಿಟಿ ವಿಷಯ ಹೇಳಿದರು, ನಮ್ಮ ಈ ಕಾರ್ಯಕ್ರಮ ಆಡಿಟರ್ಸ್ ಯಾವ ರೀತಿಯಿಂದ ಹೇಳುತ್ತಾರೋ ಆ ಪ್ರಕಾರ ನಡೆದಿದೆ. ತಾವು ಯಾವ ಹೇಳಿರತಕ್ಕ ವಿಚಾರಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ, ಸಹಕಾರ ಸಂಸ್ಥೆಗಳು ಚೆನ್ನಾಗಿ ನಡೆಯುವ ದೃಷ್ಟಿಯಿಂದ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಾವು ಮಾರ್ಗದರ್ಶನ ಮಾಡಿದ್ದೀರೋ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ ಇದ್ದೇನೆ. ಇನ್ನು ಪಂಡಿತ್ ಸಮಿತಿಯು ಸಹಕಾರ ಸಂಘಗಳ ನೌಕರರ ಸಂಬಳಸಾರಿಗೆ ವಿಚಾರವಾಗಿ ಕೊಟ್ಟಿರತಕ್ಕ ವರದಿಯನ್ನು ಬಹುಮಟ್ಟಿಗೆ ಸರ್ಕಾರ ಒಪ್ಪಿದೆ ಅನ್ನುವಂಥ ಮಾತನ್ನು ನಾನು ತಮಗೀಗ ತಿಳಿಸುತ್ತಿದ್ದೇನೆ. ನಿಮ್ಮೆಲ್ಲರ ಆಸೆಯೂ ಕೂಡ ಅದೇ ಆಗಿದೆ.

(ಶ್ರೀ ಪಿ. ಎಂ. ನಾಡಗೌಡ)

ಇನ್ನು ಇದಾದಮೇಲೆ ಮಾನ್ಯ ಶಿವಪ್ಪನವರು ಎರಡು ಮೂರು ಬಹಳ ಪ್ರಾಮುಖ್ಯವಾದ ವಿಚಾರಗಳನೆತ್ತಿದ್ದಾರೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳನ್ನೂ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನೂ ತೆಗೆಯಿರಿ ಅಂತ ಅವರು ಹೇಳಿದ್ದಾರೆ. ಹಾಗೆ ಮಾಡಿದರ ಈ ಗ್ರಾಮೀಣಾಭಿವೃದ್ಧಿ ಬಹಳ ಕುಂಠಿತವಾಗುತ್ತದೆ. ಈ ದಿವಸ ಆ ಯೋಜನೆಗಳ ಅಂಗವಾಗಿ ಮಾಡತಕ್ಕ ಕೆಲಸಕಾರ್ಯಗಳನ್ನು ನಡೆಸತಕ್ಕ ಇಲಾಖೆ ಮತ್ತೊಂದಿಲ್ಲ: ಆಗ ಗ್ರಾಮೀಣಾಭಿವೃದ್ಧಿ ನಿಂತುಹೋಗುತ್ತದೆ. ಕಳೆದ 15 ವರ್ಷಗಳಿಂದಲೂ ಈ ಯೋಜನೆಗಳಲ್ಲಿ ಕೆಲಸಕಾರ್ಯ ಮಾಡತಕ್ಕ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆ ಜೀಪುಗಳು ಇತ್ಯಾದಿಗಳ ಬಗ್ಗೆ ಅಲ್ಪಸ್ವಲ್ಪ ದೋಷಗಳಿರಬಹುದು. ಅದನ್ನು ಸರಿಪಡಿಸೋಣ. ಅದನ್ನು ಬಿಟ್ಟು ಆ ಯೋಜನೆಗಳನ್ನೇ ತೆಗೆಯಿರಿ ಅನ್ನುವಂಥ ಮಾತು ಹೇಳುವುದು ಸರಿಯಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ. ಈ ದಿವಸ ಸರ್ಕಾರದವರು ಒಂದು ವ್ಯವಹಾರ ದೃಷ್ಟಿಯಿಂದಲೂ ಮತ್ತು ಮಿತವ್ಯಯದ ದೃಷ್ಟಿಯಿಂದಲೂ ಇವುಗಳ ಬಗ್ಗೆ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಬಾಬಿನಲ್ಲಿ ಅನೇಕ ಅಧಿಕಾರಿಗಳನ್ನು ರಿಟ್ರೆಂಚ್ ಮಾಡಲಾಗುವುದು. ಎಕ್ಸ್‌ಟೆನ್‌ಷನ್ ಆಫೀಸರ ಹುದ್ದೆಗಳನ್ನು ರದ್ದು ಮಾಡಲಾಗುತ್ತಿದೆ. ಗ್ರಾಮಸೇವಕರನ್ನು ಅಗ್ರಿಕಲ್ಚರಲ್ ಇಲಾಖೆಗೆ ವರ್ಗಾಯಿಸಲಾಗುತ್ತದೆ. ಅಲ್ಲಿ ಅವರಿಗೆ ಸಾಕಷ್ಟು ಕೆಲಸವಿದೆ. ಅವರು ಹೆಚ್ಚಿಗೆ ಸಿಬ್ಬಂದಿ ಬೇಕೆಂದು ಬೇಡುತ್ತಿದ್ದರು. ಇದರಲ್ಲಿಯೂ ಕೆಲವು ಹುದ್ದೆಗಳನ್ನು ರದ್ದುಮಾಡಿ ಉಳಿದವುಗಳನ್ನು ವಿದ್ಯಾ ಇಲಾಖೆಗೆ ವರ್ಗಾಯಿಸಲಾಗುತ್ತದೆ. ಇನ್ನು ಮುಂದಕ್ಕೆ ಆ ಸ್ಟ್ಯಾಫ್ ಪ್ಯಾಟ್ರನ್ ಬದಲಾವಣೆಯಾಗುತ್ತದೆ. ಇದನ್ನು ಸರ್ಕಾರದವರು ತಮ್ಮೆಲ್ಲರ ಹೇಳಿಕೆಗಳಿಗೆ ಮನ್ನಣೆಕೊಟ್ಟು ಮಾಡಿದ್ದಾರೆ. ಹೀಗೆ ಮಾಡಿ ಈ ಎರಡರಿಂದಲೂ 17 ಲಕ್ಷ ರೂಪಾಯಿಗಳ ಉಳಿತಾಯವನ್ನು ಮಾಡಲಾಗಿದೆ.

ಇನ್ನು ತಾಲ್ಲೂಕ್ ಬೋರ್ಡುಗಳ ಬಗ್ಗೆ ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ಹೇಳಿಕೊಳ್ಳುವುದೇನೆಂದರೆ: ಅವು ಬಹಳ ಚೆನ್ನಾಗಿ ಕೆಲಸಮಾಡಿಕೊಂಡು ಬಂದಿವೆ. ಅಲ್ಲಿರತಕ್ಕ ಆ ಬೋರ್ಡುಗಳ ಅಧ್ಯಕ್ಷರು ಬಹಳ ಅದ್ವಿತೀಯವಾದ ಕೆಲಸಗಳನ್ನು ಮಾಡಿದ್ದಾರೆ. ಆದುದರಿಂದ ಆ ಎಲ್ಲಾ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರುಗಳಿಗೂ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಅವರು ಆ ಕ್ರಾಷ್‌ಪ್ರೋಗ್ರಾಂನಲ್ಲಿ ಹಗಲಿರುಳೂ ದುಡಿದಿದ್ದಾರೆ ಎನ್ನುವ ಮಾತುಗಳನ್ನು ನಾನೀಗ ತಮಗೆ ಹೇಳುತ್ತಿದ್ದೇನೆ. ಆದರೆ ನಾವು ಮೊದಲು ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಮುಗಿಸಿದ ನಂತರ ತಾಲ್ಲೂಕು ಬೋರ್ಡುಗಳ ಚುನಾವಣೆಯನ್ನು ನಡೆಸೋಣವೆಂದು ಒಂದು ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂಬ ತತ್ವವನ್ನು ಸರ್ಕಾರದವರೂ ಒಪ್ಪಿದ್ದಾರೆ. ಆದರೆ ನ್ಯಾಷನಲ್ ಎಮರ್ಜೆನ್ಸಿ ಕಾನೂನಿನ ದೆಸೆಯಿಂದ ಸ್ವಲ್ಪ ತಡವಾಗಿದೆ. ನಾವು ಅಯಾ ಕಾಲಮಾನಕ್ಕನುಸಾರವಾಗಿ ನಡೆಯಬೇಕಾಗಿದೆ.

ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರ ಅಂದರೆ ಇಲ್ಲಿಯವರೆಗೂ ಯಾವ ಯಾವ ಮಾನ್ಯ ಸದಸ್ಯರು ಯಾವ ಯಾವ ಮಾತನ್ನು ಹೇಳಿದ್ದಾರೆ, ಯಾರು ಒಳ್ಳೇ ಮಾತನ್ನು ಹೇಳಿದ್ದಾರೆ, ಯಾರು ಗೌರವವಾದ ಮಾತುಗಳನ್ನು ಹೇಳಿದ್ದಾರೆ ಯಾರು ಒಳ್ಳೆಯ ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ, ಅವುಗಳನ್ನೆಲ್ಲಾ ನಡೆಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಇನ್ನು ನೀರಿನ ಬಾವಿಗಳ ಬಗ್ಗೆ ಬಹಳ ತೀವ್ರವಾಗಿ ಹೇಳಿದ್ದಾರೆ. ಇನ್ನು ಈಗಾಗಲೆ ಸರ್ಕಾರದವರು 3,500 ಬಾವಿಗಳ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನು ಒಂದೆರಡು ವರ್ಷಗಳಲ್ಲೇ ರಾಜ್ಯಾದ್ಯಂತವೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲಾಗುತ್ತದೆ. ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತೇವೆ ಅನ್ನುವಂಥ ಮಾತುಗಳನ್ನು ನಾನು ತಮಗೀಗ ತಿಳಿಸುತ್ತಿದ್ದೇನೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮಿನಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದಕ್ಕೆ 24 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸಲಾಗಿದೆ ಅನ್ನುವಂಥ ಮಾತುಗಳನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಬಾವಿಗಳಲ್ಲಿ ನೀರು ಬೀಳದಿದ್ದರೇನು ಮಾಡುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಅದು ಆ ಹಳ್ಳಿಯವರ ಪುಣ್ಯ. ಅದಕ್ಕೆ ಸರ್ಕಾರದವರೇನು ಮಾಡಬೇಕು ? ನಾವು ಮಾಡತಕ್ಕ ಸಾಧ್ಯವಾದ ಕೆಲಸಗಳನ್ನಾದರೆ ನಾವು ಮಾಡಬಹುದು. ನಾನಿನ್ನು ಮಾನ್ಯ ಸದಸ್ಯರ ವೇಳೆಯನ್ನು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ತಾವೆಲ್ಲರೂ ಈ ಇಲಾಖೆಯ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನಾಡಿದ್ದೀರಿ. ಒಳ್ಳೇ ಮಾರ್ಗದರ್ಶನ ಮಾಡಿ

ಕೊಟ್ಟಿದ್ದೀರಿ. ನನ್ನನ್ನು ತಾವು ಯಾರು ಯಾವಾಗ ಬೇಕಾದರೂ ಕಂಡು ವಿಷಯಗಳನ್ನು ತಿಳಿಸಬಹುದು. ತಮಗೆಲ್ಲರಿಗೂ ಸುಸ್ವಾಗತವಿದೆ. ಒಟ್ಟಿನಲ್ಲಿ ಒಕ್ಕಲುತನದ ಅಭಿವೃದ್ಧಿಗೆ ಸಹಕಾರ ಸಂಸ್ಥೆಗಳು ಅತ್ಯಗತ್ಯ. ಸಹಕಾರ ಕ್ಷೇತ್ರದಲ್ಲಿ ತಾವೆಲ್ಲರೂ ಒಂದು ಮಧುರಬಾಂಧ್ಯವ್ಯದಿಂದ ನಿಜವಾಗಿಯೂ ಕೆಲಸಮಾಡಬೇಕೆಂದು ತಾವುಗಳು ಕೊಟ್ಟಿರತಕ್ಕ ಸೂಚನೆಯ ಪ್ರಕಾರ ಕೆಲಸ ಮಾಡುತ್ತೇವೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಇಷ್ಟು ಅವಕಾಶ ಮಾಡಿ ಕೊಟ್ಟಿದುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. M. PATIL.—Mr. Speaker Sir, Demand No. 39 is the last Demand for this budget year. Coming to the items that are included in this Demand, the items are interesting and it gives me pleasure to study all the points mentioned in these items.

7-00 P.M.

Coming to the Municipal Administration Demand, I am of the opinion that it should not have found a place in the Miscellaneous Demands. However, I am grateful to the framers of the budget for affording an opportunity and also to the Hon'ble Members of this House for having taken the opportunity to point out the defects, deficiencies and the difficulties in the administration of the Municipal Councils. As far as the Mnnicipal administration at the Secretariat level is concerned, I must bring to the kind notice of this august House that it is only a section which is working and not the Department as such. Department means something else than the Secretariat. The whole of the work right from the Municipal Councils to the Secretariat level depends upon the Revenue Officers, *viz.*, the Assistant Commissioners, the Deputy Commissioners, and the Divisional Commissioners and as such we know how quick the work is going on. Delays are there and with all our best efforts we cannot pull up this machinery because that machinery is overburdened. Therefore, the deficiency in this administration is the absence of a directorate. There should be a directorate and it must function as an effective organisation between the Municipal Councils and the Government. For that purpose the rules are to be framed shortly; they are at the finalisation stage. The Cadre and Recruitment Rules of the Municipal Administration Staff are also under finalisation. There are so many deficiencies so far as this administration is concerned. Many Acts are to be amended; not only that some Acts are to be framed to bring about uniformity. I may state that the Government is anxious to frame a Uniform Corporation Bill. Then there is the Urban Development Bill which has been introduced in this august House and I crave the indulgence of the House to take up that Bill for consideration because in these days of urban development it is necessary that such laws should be framed and implemented as quickly and effectively as possible.

Another aspect is Town Planning. Some of the towns have been surveyed and master plan have been framed and they are to be implemented. Once a master plan is accepted by the Council it becomes a document which the future Councils should not alter. There are also certain minor Acts which are required to be amended. One such Act

(SRI B. M. PATIL)

is the Cattle Licensing Act. In crowded localities allowing the cattle to roam about is a nuisance and in the interest of sanitation and the smooth flow of traffic, these cattle should be taken out of the city or the town and for that purpose this Act is necessary. Whether it is milch cattle or any other animal which cause nuisance and which comes in the way of the modern development of urban areas, they should be removed from crowded localities in towns and cities. These are the important laws that are required to be amended.

Coming to the amenities in urban areas, the most important amenity is the supply of protected water. In this State out of 215 towns, 143 towns are supplied with water; in 62 towns investigation is going on and in 30 towns execution is going on. Such is the state of affairs. Government is trying its level best to spare funds for this purpose. The funds that are allotted are too inadequate to provide this amenity to the citizens. The Government is trying to persuade the L.I.C. to give loans to the Municipal Councils on the guarantee of the Government.

Water supply alone will not be enough; it must go hand in hand with underground drainage. I may state that this State is lagging far behind or the progress that has been made so far is not satisfactory in the matter of implementation of underground drainage schemes because water supply is not made available adequately. Only in 15 towns the work of constructing underground drainage is going on and investigation is going on only in 7 towns. In 10 towns investigation is completed and it is ready for sanction, but those sanctions are withheld on account of inadequacy of funds. These are the two important amenities from the point of view of the citizens.

In the case of small towns, even though they are called as towns or urban areas for the purpose of census, they are more or less rural in character. In such cases the Government of India was persuaded to assist the State Government by granting 50 per cent as subsidy. A similar help was requested for underground drainage also. But there is some lacuna in the order of the Government of India, *i.e.*, it is only in respect of certain types of towns and not all towns whether urban or rural in character, having a population of less than 20,000 that this help is sanctioned. These are the handicaps and difficulties in affording facilities to the citizens in urban areas. In certain areas, of course, efforts are being made to satisfy the needs of water supply and underground drainage, but in other cases the Government is finding it difficult to satisfy the needs of the people for paucity of funds.

Coming to the administrative aspect of the municipal councils, some of the municipal councils in the State are functioning very effectively. That is due to the team work that they have organised and also their love for the town which they are representing in the Councils. But in certain areas the work of the municipal councils is

what I may call 'so so' and it cannot be said to be satisfactory. At the same time it cannot be said to be unsatisfactory. In certain areas the muncipal councils are not functioning satisfactorily. Even the provisions of law which are meant for correcting such councils cannot be applied in such cases for want of adequate evidence to prove the case against them. This is the state of affairs so far as town municipalities and city municipalities are concerned.

Coming to the Corporations of Bangalore and Dharwar-Hubli, no doubt, the Dharwar-Hubli Corporation was constituted about 5 years ago, but it is a nominated council. The object of the Government was that both the towns and the people of both the towns must be in a position to work harmoniously. That was the preliminary step that was taken and as such a nominated Council came into existence in the first instance and it is functioning. No doubt, the people of the towns who are aspiring to serve the public through the Council are demanding election. Perhaps that is the only demand which has to be attended to by Government. As regards the other demands such as water supply, construction of gutter and other requirements, it is for the Council to do and not for the Government. The provisions of the Bombay Provincial Corporation Act which are made applicable to that area invest the council with wide powers and the Government has very little to do in that. This is the state of things so far as the Dharwar-Hubli Corporation is concerned.

Coming to the Bangalore Corporation, consequent to the supersession order the Administrator has been appointed. He is assisted by the normal staff, the Commissioner, the Engineer, the Health Officer, etc. Looking to the performance of the officers, I feel that this is one of the good works that the Government has done.

Sri M. S. KRISHNAN.– The supersession order was murder of democracy in Bangalore.

Sri R. M. PATIL.—I am coming to democracy.

ಶ್ರೀ ಟಿ. ಆರ್. ಶಾಮಣ್ಣ.—ಹೈಕೋರ್ಟಿನಲ್ಲಿ ಈ ಪ್ರಶ್ನೆ ಇರುವುದರಿಂದ ಇಲ್ಲಿ ಆ ಪ್ರಶ್ನೆಯನ್ನು ಚರ್ಚೆ ಮಾಡುವುದು ಸಬ್‌ಜುಡೀಸ್ ಆಗುತ್ತದೆಂದು ತಾವು ನಮಗೆ ಮಾತನಾಡುವುದಕ್ಕೆ ಅಡ್ಡಿಮಾಡಿದಿರಿ. ಈಗ ಮಂತ್ರಿಗಳು ಉತ್ತರ ಹೇಳುವಾಗ ಆ ಪ್ರಶ್ನೆಯ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡುತ್ತಿದ್ದೀರಿ. ಆದ್ದರಿಂದ ನಮಗೂ ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು.

Mr. SPEAKER.—I will not allow anybody to enter into the merits of the case. The only debatable point was, he said it was good and you have said it is bad. The matter stops there. Then he began by saying consequent upon the order, the Administrator has been appointed.

Sri T. R. SHAMANNA.—The validity of that is questioned in the High Court.

Sri R. M. PATIL.—I know my responsibility.

Mr. SPEAKER.—I have suggested to Mr. Shamanna and others that whatever is *sub-judice* cannot be brought in here.

Sri R. M. PATIL.—I know that, After the supersession, the corporation authorities were able to collect Rs. 1 crore and odd by way of taxes.

Sri T. R. SHAMANNA.—Because you doubled the tax and not on account of better collection.

Sri R. M. PATIL.—I am coming to that. I am not hiding anything from this House. The budget for the year 1967-68 is to the tune of Rs. 561 lakhs. Out of this, the programme of works before the Council or before the Administrator is to the tune of Rs. 2 crores on various items, remunerative and non-remunerative as well. This is capital outlay. In the case of remunerative projects, they have set apart more than Rs. 12 to Rs. 15 lakhs. And, at the same time they have not ignored the construction of houses for Scavengers and Bangies. who are serving the municipal Corporation. They are going to construct houses for the staff also.

Mr. SPEAKER.—Is it covered by the Budget here ?

Sri R. M. PATIL.—Sir, I am saying this to show that they have not ignored the common man and his needs. Therefore, it is my duty to place all the facts before this House and that is why I complimented and congratulated the framers of the Budget. Otherwise, these are statutory bodies and the Government has very little to do ; Government cannot function directly. I take this opportunity to appraise how the municipal councils in the State are functioning and more so how the municipal Corportion of the Capital is functioning. With that end in view, I have placed all these facts before the House.

Coming to the question of water rate, which my friend Sri T. R. Shamanna was pleased to raise not only on the Floor of this House by way of Questions, Short Notice Questions and also by way of Cut motions, but even on the public platforms, I think, my friend will be satisfied if I state all the facts leading to the assessing of the water rate and if he knows the facts of the case. Therefore, I feel, it is my duty to submit to this House the facts about this ;

According to the statement here, 6,648 million gallons of water was supplied for the year 1966-67, the allowance for bad debts is 665 million gallons, and the balance supplied to consumers is 5,983 million gallons. The expenditure is Rs. 1,47,99,125. If we calculate this, the rate of water will come to Rs. 2,473 whereas it is now fixed as Rs. 1.5 per thousand gallons, thereby there is a loss to the tune of about Rs. 10 lakhs for the first year, namely 1964-65 and Rs. 19 lakhs for the year 1965-66. This is the state of affairs. Instead of understanding the full implications of this problem it is not fair to say that either the Minister or the Chief Minister or the Government of Mysore is responsible for this.

Sri T. R. SHAMANNA.—Are you prepared for the appointment of an Expert Committe for this ?

Sri M. S. KRISHNAN.—Let an Expert Committee be constituted and you can prove it there.

Sri R. M. PATIL.—Sir, I have already assured the House that I will place these facts on the Table of the House.

Sri T. R. SHAMANNA.—Sir, I can prove that the figures furnished by the Minister are all bogus ; I take a challenge.

Mr. SPEAKER.—That cannot be done under the Budget.

Sri M. S. KRISHNAN.—To alleviate the feelings of Bangaloreans the minimun thing that the Minister should agree to is to constitute an Expert Committee.

Mr. SPEAKER.—The House can do nothing unless it is brought before the House in a proper manner. The Hon'ble Minister gives his version. If he wants to attack it, he may do it in a procedural manner. I will not stand in the way.

Sri R. M. PATIL.—Property tax is also one of the points raised by means of a Cut Motion. The enhancement of property tax is done in the normal course. If there is any enhancement which is said to be unreasonable according to the conception of the owner, he is entitled to prefer an appeal. An appeal provision is there and people who have been aggrieved by the order have preferred appeals and such appeals are about 14,000. The cases that have been assessed are something like 1,00,300. It may be true that original assessment was done at a lower level on account of the influences. It is also possible, that the extension of the house or the building must have been done during the intervening period-between the assessment period and the new assessment period. In this connection, one should not forget that on account of reorganisation the rent of the buildings in Bangalore has gone up. That has also been taken into consideration while assessing the building. To day, if some people are aggrieved, this is not the forum to ventilate their grievances nor the public streets nor the public platforms. There is a forum specially provided under the law, and I request my friends to seek that forum.

Sri M. S. KRISHNAN.—The increase is not a small one ; it is a very big increase. Water meters are......

(*Loud protests from the Opposition*)

Mr. SPEAKER.—I had already stated that I will put the Demands to the Vote at 7-30 P.M. Now it is 7-30. The question is :—

> "That the respective sums not exceeding the amounts mentioned in the Demands Nos. 21, 23, 25 and 39 be granted to Government to defray the charges which will come in course of payment during the financial year ending with the 31st day of March 1968."

The motion was adopted.

(MR. SPEAKER)

As directed by the Speaker the motion for Demands for grants adopted by the House are reproduced below

DEMAND NO. 39.—MISCELLANEOUS.

71. Miscellaneous.

"That a sum not exceeding Rs. 4,63,56,200 be granted to the Government to defray the charges which will come in course of payment during the financial year for the period ending 31st day of March 1968, in respect of 'Miscellaneous'."

DEMAND NO. 25.—COMMUNITY DEVELOPMENT, ETC.

37. Community Development Projects, National Extension Service and Local Development Works.

"That a sum not exceeding Rs. 4,73,96,000 be granted to the Government to defray the charges which will come in course of payment during the financial year for the period ending 31st day of March 1968. in respect of 'Community Development Projects, National Extension Service and Local Development Works'."

DEMAND NO. 23.—CO-OPERATION.

34. Co-operation.

"That a sum not exceeding Rs. 2,00,46,000 be granted to the Government to defray the charges which will come in course of payment during the financial year for the period ending 31st day of March 1968, in respect of 'Co-operation'."

DEMAND NO. 21.—RURAL DEVELOPMENT.

32. Rural Development

"That a sum not exceeding Rs. 1,12,48,000 be granted to the Government to defray the charges which will come in course of payment during the financial year for the period ending 31st day of March 1968, in respect, of 'Rural Development'."

Mr. SPEAKER.—The House will now stand adjourned to meet tomorrow at 1-00 P.M.

The House adjourned at Thirty Minutes past Seven of the Clock to meet again at One of the Clock on Friday, the 28th July 1967.